ಅಧ್ಯಾಯ – ೧೪

# ಸಾಹಿತ್ಯ ಮತ್ತು ಸಂಸ್ಕೃತಿ

**ಉ**ಡುಪಿಯು ೧೯೯೭ರಿಂದ ಪ್ರತ್ಯೇಕ ಜಿಲ್ಲೆಯಾಗಿದೆಯಾದರೂ ೧೯೯೭ರವರೆಗೆ ದಕ್ಷಿಣ ಕನ್ನಡ ಜಿಲ್ಲೆಯ ಭಾಗವಾಗಿದ್ದುದರಿಂದ, ಈ ಎರಡೂ ಜಿಲ್ಲೆಗಳಿಗೂ ಅವಿನಾಭಾವ ಸಂಬಂಧವಿದೆ. ಆದ್ದರಿಂದ ಕೆಲವು ಸಾಹಿತ್ಯಕ, ಸಾಂಸ್ಕೃತಿಕ ಇತಿಹಾಸವನ್ನು ವಿವರಿಸುವಾಗ ಒಟ್ಟಾಗಿಯೇ ಪರಿಗಣಿಸುವುದು ಅನಿವಾರ್ಯವಾಗಿದೆ. ಕನ್ನಡದ ಅಗ್ರಗಣ್ಯ ಸಾಹಿತಿಗಳಲ್ಲಿ ಹಲವರು ತುಳುನಾಡಿನವರು. ಕನ್ನಡ ಸಾಹಿತ್ಯದ ಅನೇಕ ಮೊದಲುಗಳನ್ನು ಸಾಧಿಸಿದ ಹಿರಿಮೆಯೂ ಅವರಲ್ಲಿ ಕೆಲವರದಾಗಿದೆ. ಮಹಾಕಾವ್ಯ ರಚನೆಗೆ ಸಂಸ್ಕೃತ ವೃತ್ತ ಅಥವಾ ಷಟ್ಪದಿ ಬಳಸದೆ, ಸರಳ ಭಾಷೆಯಲ್ಲಿ ಸಾಂಗತ್ಯ ರೂಪದಲ್ಲಿ ಭೋಗ–ಯೋಗಗಳೆರಡನ್ನೂ ಅತ್ಯುನ್ನತಿಗೇರಿಸಿದ ರತ್ನಾಕರವರ್ಣಿ, ಹೊಸಗನ್ನಡ ಕಾವ್ಯದ ಮುಂಗೋಳಿಯೆನಿಸಿದ ಮುದ್ದಣ, ಕನ್ನಡದ ಪ್ರಥಮ ಕಾದಂಬರಿಕಾರ ಗುಲ್ವಾಡಿ ವೆಂಕಟರಾಯ, ಮೊದಲ ಆಂಗ್ಲ ಕವಿತಾನುವಾದದ ಹೆಗ್ಗಳಿಕೆಯ ಹಟ್ಟಿಯಂಗಡಿ ನಾರಾಯಣರಾಯ, ನವ್ಯ ಸಾಹಿತ್ಯದ ಪ್ರವರ್ತಕರಲ್ಲಿ ಒಬ್ಬರೆನಿಸಿದ ಗೋಪಾಲಕೃಷ್ಣ ಅಡಿಗ, ಜಿಲ್ಲೆಗೆ ಜ್ಞಾನಪೀಠ ಪ್ರಶಸ್ತಿಯ ಗರಿಮೆಯನ್ನು ತಂದುಕೊಟ್ಟ ಶಿವರಾಮಕಾರಂತ ಮೊದಲಾದವರನ್ನು ಇಲ್ಲಿ ಉಲ್ಲೇಖಿಸಬಹುದು. ಸೇಡಿಯಾಪು ಕೃಷ್ಣಭಟ್ಟರು, ಕಡಂಗೋಡ್ಲು ಶಂಕರಭಟ್ಟರು, ಕಡೆಕಾರು ರಾಜಗೋಪಾಲ ಕೃಷ್ಣರಾವ್, ಎಂ. ಮರಿಯಪ್ಪ ಭಟ್, ಕೊರಡ್ಕಲ್ ಶ್ರೀನಿವಾಸರಾಯ, ಎಂ.ಎನ್. ಕಾಮತ್, ವ್ಯಾಸರಾಯ ಬಲ್ಲಾಳ, ಕು.ಶಿ. ಹರಿದಾಸಭಟ್, ಬಿ. ಎಚ್. ಶ್ರೀಧರ, ನಿರಂಜನ, ಬನ್ನಂಜೆ ರಾಮಾಚಾರ್ಯ, ಗೋವಿಂದಾಚಾರ್ಯ, ಕುಮಾರ ವೆಂಕಣ್ಣ, ಸರಸ್ವತಿಬಾಯಿ ರಾಜವಾಡೆ ಮೊದಲಾದವರೂ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಸಾಹಿತ್ಯ ಕ್ಷಿತಿಜವನ್ನು ಬೆಳಗಿದ್ದಾರೆ. ಪ್ರಸಿದ್ಧ ಲೇಖಕಿ ಪ್ರೇಮಾ ಭಟ್ಟರು ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯವರು.

ಕನ್ನಡದಲ್ಲಿ ಪ್ರಕಟವಾದ ಮೊದಲ ಪತ್ರಿಕೆ 'ಮಂಗಳೂರು ಸಮಾಚಾರ'ವನ್ನು ಹೊರತಂದ ಯಶಸ್ಸು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಬಾಸೆಲ್ ಮಿಷನ್‌ದ್ದಾಗಿದೆ. ಕನ್ನಡದ ಅಚ್ಚುಮೊಳೆ ನಿರ್ಮಿಸಿದ ಖ್ಯಾತಿಯ ಅತ್ತಾವರದ ಅನಂತಾಚಾರಿ. ಎಂ.ವಿ. ಕಾಮತ್, ಯು.ಜಿ. ಲಪಟ್‌ರಾವ್, ಜೋಕಿಂ ಆಳ್ವ, ಕೆ. ಹೈದರ್, ಸದಾನಂದ, ಪಾಂ. ವೆಂ. ಆಚಾರ್ಯ, ಕೆ. ಹೊನ್ನಯ್ಯ ಶೆಟ್ಟಿ , ವಿ.ಎಸ್. ಕುಡುವ, ಕುಡ್ವಿ, ವಾಸುದೇವ ಶೆಣೈ, ಹುರಳಿ ಭೀಮರಾವ್, ಕೊ.ಅ. ಉಡುಪ, ಸಂತೋಷ್‌ಕುಮಾರ್ ಗುಲ್ವಾಡಿ ಮೊದಲಾದವರು ಸಮರ್ಥ ಪತ್ರಿಕೋದ್ಯಮಿಗಳಾಗಿ ಹೆಸರು ಗಳಿಸಿದವರು.

ಉಡುಪಿ ಜಿಲ್ಲೆಯ ಧಾರ್ಮಿಕ ಪರಂಪರೆ ಉಜ್ವಲವಾದದ್ದು. ಆಚಾರ್ಯತ್ರಯರಲ್ಲಿ ಒಬ್ಬರಾದ ದ್ವೈತ ಪಂಥದ ಪ್ರವರ್ತಕರಾದ ಮಧ್ವಾಚಾರ್ಯರು ಇಲ್ಲಿಯೇ ಹುಟ್ಟಿ, ಬೆಳೆದು ಉಡುಪಿಯಲ್ಲಿ ಅಷ್ಟಮಠಗಳನ್ನು ಸ್ಥಾಪಿಸಿದವರು. ಶಂಕರಾಚಾರ್ಯರು ಕೊಲ್ಲೂರಿನಲ್ಲಿ ಶ್ರೀಚಕ್ರ ಸ್ಥಾಪಿಸಿದರೆಂಬುದು ಜನಜನಿತವಾದ ಸಂಗತಿ. ಜಿಲ್ಲೆಯು ಎಲ್ಲ ಧರ್ಮಗಳಿಗೂ ಇಂಬು ನೀಡಿದೆ. ಹಿಂದೂ, ಮುಸ್ಲಿಂ, ಕ್ರೈಸ್ತ, ಜೈನ ಮೊದಲಾದವರು ಸಹಬಾಳ್ವೆ ನಡೆಸಿದ್ದಾರೆ. ಉಡುಪಿ ಜಿಲ್ಲೆಯುದ್ದಕ್ಕೂ ಹರಡಿರುವ ದೇವಾಲಯಗಳು; ಕಾರ್ಕಳದ ಗೊಮ್ಮಟ; ಕಾರ್ಕಳ ಮುಂತಾದ ಸ್ಥಳಗಳಲ್ಲಿನ ಜೈನ ಬಸದಿಗಳು, ಕ್ರಿಶ್ಚಿಯನ್ನರ ಹಲವಾರು ಇಗರ್ಜಿಗಳು, ಮುಸ್ಲಿಂರ ಮಸೀದಿಗಳು ಸರ್ವಧರ್ಮ ಸಮನ್ವಯಕ್ಕೆ ಸಾಕ್ಷಿಯಾಗಿವೆ.

ಜಿಲ್ಲೆಯ ಪ್ರಮುಖ ಕಲೆಯಾದ ಯಕ್ಷಗಾನ ಬಯಲಾಟ ಅಂತಾರಾಷ್ಟ್ರೀಯ ಕಲೆಯಾಗಿ ಆಕರ್ಷಣೆ ಪಡೆದಿದೆ. ಯಕ್ಷಗಾನ, ತಾಳಮದ್ದಳೆಗಳು ಜಿಲ್ಲೆಯ ಜನರ ಸಾಂಸ್ಕೃತಿಕ ಬದುಕಿನ ಒಂದು ಭಾಗವಾಗಿ ಬೆಳೆದುಬಂದಿವೆ. ಪಾಡ್ದನ, ಭೂತಕೋಲ, ಆಟಿಕಳೆಂಜ, ನಾಗಮಂಡಲ ಮುಂತಾದವು ಈ ಮಣ್ಣಿನಲ್ಲಿ ರೂಪು ತಳೆದ ಜನಪದ ಆರಾಧನಾ ಕಲೆಗಳಾಗಿವೆ. ಇತಿಹಾಸ ಸ್ಮರಣಿಕೆಗಳಾದ ಬಸರೂರು, ಬಾರಕೂರು, ಯಾತ್ರಾಸ್ಥಳವಾದ ಕೊಲ್ಲೂರು, ಅಂಬಲಪಾಡಿ, ಹಟ್ಟಿಯಂಗಡಿ, ಆನೆಗುಡ್ಡೆಗಳಲ್ಲದೆ, ವಿಶ್ವವಿಖ್ಯಾತ ಉಡುಪಿ ಕೃಷ್ಣ ದೇವಾಲಯ, ಕಾರ್ಕಳದ ಗೊಮ್ಮಟ, ಚತುರ್ಮುಖ ಬಸದಿ, ಮಾನಸ್ತಂಭ-ಇವೆಲ್ಲಾ ಶಿಲ್ಪಕಲಾ ಸೌಂದರ್ಯವನ್ನು ಬಿತ್ತರಿಸುತ್ತವೆ; ಜಿಲ್ಲೆಯ ಸಾಂಸ್ಕೃತಿಕ ಸಿರಿಯನ್ನು ಪರಿಚಯಿಸುತ್ತವೆ.

ಕುಂಜಾಲು ವೀರಭದ್ರ ನಾಯಕ, ಕುಂಜಾಲು ಶೇಷಗಿರಿ ನಾಯಕ, ಹಿರಿಯಡ್ಕ ಗೋಪಾಲರಾವ್, ಮಲ್ಪೆ ಸಾಮಗ ಸಹೋದರರು, ಕೊಲ್ಯ ದೇಜಪ್ಪಶೆಟ್ಟಿ ಮೊದಲಾದವರು ಯಕ್ಷಗಾನ ಕ್ಷೇತ್ರದಲ್ಲಿ ಪ್ರಸಿದ್ಧರಾಗಿದ್ದಾರೆ. ಪ್ರಸಿದ್ಧ ಶಿಲ್ಪಿಗಳಾದ ರಂಜಾಳ ಗೋಪಾಲಕೃಷ್ಣ ಶೆಣೈ, ದೇವಲಗುಂದ ವಾದಿರಾಜ, ಪಿ.ನಾರಾಯಣಭಟ್ಟ, ಕೆ. ಶಾಮರಾಯ ಆಚಾರ್ಯ, ಅಂತಾರಾಷ್ಟ್ರೀಯ ಖ್ಯಾತಿಯ ಚಿತ್ರಕಲಾವಿದ ಹಾಗೂ ವೆಂಕಟಪ್ಪ ಪ್ರಶಸ್ತಿಯನ್ನು ಪ್ರಥಮವಾಗಿ ಪಡೆದ ಕೆ.ಕೆ. ಹೆಬ್ಬಾರ, ಅಲ್ಲದೆ, ಬಿ. ಪಿ. ಬಾಯಿರಿ, ಜಿ. ಎಸ್. ಶೆಣೈ, ಪೀಟರ್ ಲೂಯಿಸ್, ರಮೇಶ್ ರಾವ್, ಪಿ.ಎನ್. ಆಚಾರ್ಯ, ಮೊದಲಾದ ಅನೇಕ ಶ್ರೇಷ್ಠ ಕಲಾವಿದರನ್ನು ಪಡೆದ ಹೆಮ್ಮೆ ಉಡುಪಿ ಜಿಲ್ಲೆಯದಾಗಿದೆ. ಇಂಥಾ ಉಡುಪಿ ಜಿಲ್ಲೆಯ ಸಾಹಿತ್ಯ ಮತ್ತು ಸಂಸ್ಕೃತಿಯನ್ನು ಈ ಮುಂದೆ ಸ್ಥೂಲವಾಗಿ ಪರಿಚಯಿಸಿದೆ.

**ಶಾಸನ ಸಾಹಿತ್ಯ** : ಕನ್ನಡದ ಅತಿ ಪ್ರಾಚೀನ ತಾಮ್ರಶಾಸನ ದೊರೆತಿರುವುದು ತುಳುನಾಡಿನಲ್ಲಿ. ಇಲ್ಲಿ ದೊರೆತಿರುವ ಕೆಲವೇ ಪ್ರಾಚೀನ ಶಾಸನಗಳಲ್ಲಿ ಹೆಚ್ಚಿನವು ಕನ್ನಡದಲ್ಲಿವೆ. ಅವುಗಳಲ್ಲಿ ಉದ್ಯಾವರದ ವೀರಗಲ್ಲು ಶಾಸನದಲ್ಲಿ (ಎಂಟನೆಯ ಶತಮಾನ) ಒಂದು ಶಾರ್ದೂಲ ವಿಕ್ರೀಡಿತ ಪದ್ಯವಿದ್ದು, ಉಳಿದವೆಲ್ಲ ಗದ್ಯ ರೂಪದಲ್ಲಿವೆ.

ಮಧ್ಯಯುಗದ ಶಾಸನಗಳಲ್ಲಿ ತುಳುನಾಡಿನ ಕನ್ನಡದ ಆಡುಮಾತಿನಲ್ಲಿ ಎದ್ದು ಕಾಣುವ ಅನೇಕ ಪ್ರಾಂತೀಯ ವೈಶಿಷ್ಟ್ಯಗಳನ್ನು ಗುರುತಿಸಬಹುದಾಗಿದೆ. ಇದಕ್ಕೆ ಅತ್ಯುತ್ತಮ ಮಾದರಿ ಗದ್ಯ ಪದ್ಯ ಮಿಶ್ರಿತ ವರಾಂಗ ಶಾಸನವಾಗಿದೆ. ವರಾಂಗ ಶಾಸನದಿಂದ ಮಧ್ಯಯುಗೀನ ಆಳುಪ ಅರಸರಿಗೆ 'ಸಾಹಿತ್ಯ ವರನಾರಿ ಮನೋರಾಮ', 'ಚತುರ್ವಿಧ ಬುಧಜನ', 'ವನಃ ಪಾಳಿ ನಿಜ ರಾಜಹಂಸ', 'ಭಾರತೀ ಕರ್ಣಾವಸಂತ' ಇತ್ಯಾದಿ ಬಿರುದುಗಳಿದ್ದವೆಂದು ತಿಳಿದುಬರುತ್ತದೆ. ಗದ್ಯ ರಚನೆಯಲ್ಲಿ ಅಂದಿನ ಶಾಸನಗಳಲ್ಲಿ ಸಾಮಾನ್ಯವಾಗಿ ಕಾಣಸಿಗುವ ಕೆಲವು ನ್ಯೂನತೆಯನ್ನು ಬಿಟ್ಟರೆ ಉತ್ತಮ ಸಾಹಿತ್ಯ ಮಟ್ಟದ್ದಾಗಿರುವ ಪದ್ಯವು ಚಂಪಕಮಾಲಾ ವೃತ್ತದಲ್ಲಿದ್ದು, ಜೈನಗುರು ಮಲಧಾರಿ ದೇವರನ್ನು ವರ್ಣಿಸುತ್ತದೆ. ಈ ಶಾಸನ ಪದ್ಯಗಳಿಂದ ತುಳುನಾಡಿನ ಮಂಗಳೂರು-ಕಾರ್ಕಳ-ಉಡುಪಿ ಪ್ರಾಂತದಲ್ಲಿ ಮಾತ್ರ ಕನ್ನಡ ಸಾಹಿತ್ಯದ ಬೆಳವಣಿಗೆಗೆ ವಿಶೇಷವಾದ ಪ್ರೋತ್ಸಾಹ ದೊರಕಿರುವ ಅಂಶವು ತಿಳಿದುಬರುತ್ತದೆ.

## ಸಂಸ್ಕೃತ ಸಾಹಿತ್ಯ ಕೃತಿಗಳು

ಉಡುಪಿಯಲ್ಲಿ ಎಂಟನೆಯ ಶತಮಾನದಲ್ಲೇ ಸಂಸ್ಕೃತದಲ್ಲಿ ಕೃತಿ ರಚನಾ ಕಾರ್ಯ ಆರಂಭವಾಗಿದೆ. ಆದರೆ, ಅಲ್ಲಿಂದ ಹದಿಮೂರನೆಯ ಶತಮಾನದವರೆಗೆ ಯಾವ ಕೃತಿಯೂ ದೊರೆತಿಲ್ಲ. ಹದಿಮೂರನೆಯ ಶತಮಾನದಲ್ಲಿ ಶ್ರೀ ಮಧ್ವಾಚಾರ್ಯರು ಅವತರಿಸಿದ ನಂತರ ಇಲ್ಲಿ ಸಂಸ್ಕೃತ ಕೃತಿಗಳು ವಿಪುಲವಾಗಿ ನಿರ್ಮಿತವಾದವು. ಸ್ವತಃ ಮಧ್ವಾಚಾರ್ಯರು ೪೦ ಕೃತಿಗಳನ್ನು ರಚಿಸಿದರು. ಅವರ ಸಮಕಾಲೀನ ತ್ರಿವಿಕ್ರಮ ಪಂಡಿತ ಉಷಾಹರಣ ಎಂಬ ಮಹಾಕಾವ್ಯವನ್ನು ಬರೆದರು. ತ್ರಿವಿಕ್ರಮ ಪಂಡಿತರ ಮಗ ನಾರಾಯಣ ಪಂಡಿತ ಮಧ್ವವಿಜಯ ಮೊದಲಾದ ಕಾವ್ಯಗಳನ್ನು ರಚಿಸಿದರು. ನಂತರ ಬಂದ ಮಾಧ್ವ ವಿದ್ವಾಂಸರು ಮಧ್ವಾಚಾರ್ಯರ ಗ್ರಂಥಗಳಿಗೆ ವ್ಯಾಖ್ಯಾನಗಳನ್ನು ಬರೆದು, ಸ್ತೋತ್ರಗಳನ್ನು ರಚಿಸಿ, ಸ್ವತಂತ್ರ ಕೃತಿಗಳನ್ನು ನಿರ್ಮಿಸಿ ಉಡುಪಿ ಜಿಲ್ಲೆಯ ಸಂಸ್ಕೃತ ಕೃತಿಗಳ ಅನುಸ್ಯೂತ ಪರಂಪರೆಯನ್ನು ಮುಂದುವರಿಸಿದರು. ವೇದಾಂತ ಗ್ರಂಥಗಳನ್ನು ಮಾತ್ರವಲ್ಲ ಮಹಾಕಾವ್ಯ, ಖಂಡಕಾವ್ಯ, ಸ್ತೋತ್ರಕಾವ್ಯ, ರೂಪಕ ಹಾಗೂ ಪ್ರಕೀರ್ಣ ಪುಸ್ತಕಗಳನ್ನು ಉಡುಪಿ ಜಿಲ್ಲೆ ಸಂಸ್ಕೃತ ಸಾಹಿತ್ಯಕ್ಕೆ ಕೊಡುಗೆಯಾಗಿ ನೀಡಿದ್ದಾರೆ. ಜಿಲ್ಲೆಯ ಕೆಲವು ಪ್ರಮುಖ ಸಂಸ್ಕೃತ ಕೃತಿಕಾರರ ಸ್ಥೂಲ ಪರಿಚಯವನ್ನು ಈ ಮುಂದೆ ನೀಡಿದೆ:

**ಹಸ್ತಾಮಲಕಾಚಾರ್ಯ** (೯ನೇ ಶತಮಾನ): ಅದ್ವೈತಮತ ಪ್ರತಿಷ್ಠಾಪಕ ಶ್ರೀಶಂಕರ ಭಗವತ್ಪಾದರ ನಾಲ್ವರು ಮುಖ್ಯ ಶಿಷ್ಯರಲ್ಲಿ ಒಬ್ಬರಾದ ಹಸ್ತಾಮಲಕಾಚಾರ್ಯರು ಉಡುಪಿಯವರು ಎಂದು ಮಾಧವೀಯ ಶಂಕರವಿಜಯದಿಂದ ತಿಳಿದುಬರುತ್ತದೆ. ಅವರು ಹೇಳಿದ ಹನ್ನೆರಡು ಶ್ಲೋಕವುಳ್ಳ ಪ್ರಕರಣವೇ ಉಡುಪಿ ಜಿಲ್ಲೆಯ ಮೊತ್ತ ಮೊದಲ ಸಂಸ್ಕೃತ ಕೃತಿ: ಹಸ್ತಾಮಲಕ ಸ್ತೋತ್ರಂ.

**ತ್ರಿವಿಕ್ರಮ ಪಂಡಿತ** (೧೩ನೇ ಶತಮಾನ): ಅದ್ವೈತ ಮತಾವಲಂಬಿಯಾಗಿದ್ದ ಇವರು ಮಧ್ವಾಚಾರ್ಯರ ಜೊತೆ ಏಳೆಂಟು ದಿನ ವಾದ ಮಾಡಿ ಸೋತು, ಅವರ ಶಿಷ್ಯರಾದವರು. ಇವರು ಮೂಲತಃ ಕಾಸರಗೋಡು ಬಳಿಯ ಕಾವು ಮಠದ ಪೆಜತ್ತಾಯ ವಂಶದ ಸುಬ್ರಹ್ಮಣ್ಯ ಪಂಡಿತರ ಮಗ. ಇವರ ಕೃತಿಗಳು: ಉಷಾಹರಣಂ (ಮಹಾಕಾವ್ಯ), ತತ್ತ್ವ ದೀಪಿಕಾ (ಮೇರು ಕೃತಿ), ವಿಷ್ಣು ಸ್ತುತಿ, ತಿಥಿನಿರ್ಣಯ, ವಾಯುಸ್ತುತಿ, ಮಧ್ವಸ್ತೋತ್ರ.

**ಮಧ್ವಾಚಾರ್ಯ** (೧೨೩೮-೧೩೧೭): ಉಡುಪಿಯ ಸಮೀಪ ಪಾಜಕಕ್ಷೇತ್ರದಲ್ಲಿ ನಡ್ಯಂತಿಲ್ಲಾಯ (ನಡುಮನೆಯವರು) ವಂಶದಲ್ಲಿ ಜನಿಸಿದ ಇವರಿಗೆ ಮೊದಲು ವಾಸುದೇವ ಎಂದು ಹೆಸರಿಡಲಾಗಿತ್ತು. ಅದ್ವೈತ ಭಾಗವತ ಸಂಪ್ರದಾಯದ ಪುರುಷೋತ್ತಮ ತೀರ್ಥರಿಂದ (ಅಚ್ಯುತ ಪ್ರಜ್ಞ ಎಂಬ ಇನ್ನೊಂದು ಹೆಸರು) ಸಂನ್ಯಾಸ ದೀಕ್ಷೆ ಪಡೆದು ಆನಂದತೀರ್ಥರಾದರು. ಮಧ್ವ ಎಂಬುದು ಅವರು ಸ್ವತಃ ಇರಿಸಿಕೊಂಡ ವೈದಿಕನಾಮ. ದ್ವೈತಮತವನ್ನು ಪ್ರಚಾರ ಮಾಡಿ ಮಧ್ವಾಚಾರ್ಯ ಎಂದು ಪ್ರಸಿದ್ಧರಾದರು. ಇವರ ೩೭ ಕೃತಿಗಳು ಪ್ರಸಿದ್ಧವಾಗಿದ್ದುವು. ಇತ್ತೀಚೆಗೆ ಉಪಲಬ್ಧವಾದ ಮೂರು ಕೃತಿಗಳ ಸಹಿತ ಅವರ ಕೃತಿಗಳ ಸಂಖ್ಯೆ ಈಗ ೪೦ ಆಗಿದೆ: ಯಮಕ ಭಾರತಂ (ಚಿತ್ರಕಾವ್ಯ). ದ್ವಾದಶ ಸ್ತೋತ್ರಾಣಿ. ಕೃಷ್ಣಕಂದುಕ ಸ್ತುತಿ, ನರಸಿಂಹ ನಖಸ್ತುತಿ, ತತ್ವ ವಿವೇಕ, ತತ್ವೋದ್ಯೋತ, ತತ್ವ ಸಂಖ್ಯಾನ, ವಿಷ್ಣು ತತ್ವವಿನಿರ್ಣಯ, ಕರ್ಮನಿರ್ಣಯ, ಪ್ರಮಾಣ ಲಕ್ಷಣ, ಕಥಾ ಲಕ್ಷಣ, ಉಪಾಧಿ ಖಂಡನ, ಮಿಥ್ಯಾತ್ವಾನುಮಾನ ಖಂಡನ, ಮಾಯಾವಾದ ಖಂಡನ, ಮಹಾಭಾರತ ತಾತ್ಪರ್ಯನಿರ್ಣಯ, ಭಾಗವತ ತಾತ್ಪರ್ಯ ನಿರ್ಣಯ, ಸದಾಚಾರ ಸ್ಮೃತಿ, ಜಯಂತೀ ನಿರ್ಣಯ, ಯತಿ ಪ್ರಣವ ಕಲ್ಪ, ಕೃಷ್ಣಾಮೃತ ಮಹಾರ್ಣವ, ನ್ಯಾಸ ಪದ್ಧತಿ. ತಿಥಿ ನಿರ್ಣಯ. ತಂತ್ರಸಾರ ಸಂಗ್ರಹ, ಋಗ್‌ಭಾಷ್ಯ (೪೦ ಸೂಕ್ತಗಳಿಗೆ ಮಾತ್ರ), ದಶೋಪನಿಷದ್‌ಭಾಷ್ಯ. ಭಗವದ್ ಗೀತಾಭಾಷ್ಯ. ಗೀತಾ ತಾತ್ಪರ್ಯ ನಿರ್ಣಯ, ಬ್ರಹ್ಮ ಸೂತ್ರಭಾಷ್ಯ, ಅನು ವ್ಯಾಖ್ಯಾನ, ಅಣುಭಾಷ್ಯ, ನ್ಯಾಯ ವಿವರಣ.

**ವಿಷ್ಣು ತೀರ್ಥ** (೧೩ನೇ ಶತಮಾನ): ಪೂರ್ವಾಶ್ರಮದಲ್ಲಿ ಮಧ್ವಾಚಾರ್ಯರ ಸಹೋದರ. ಸೋದೆ ಹಾಗೂ ಸುಬ್ರಹ್ಮಣ್ಯ ಮಠಗಳ ಪ್ರಥಮ ಯತಿ. ಇವರ ಕೃತಿಗಳು: ಸಂನ್ಯಾಸ ಪದ್ಧತಿ, ಶ್ರವಣ ದ್ವಾದಶೀ ನಿರ್ಣಯ, ರಮೇಶ ಸ್ತುತಿ, ರಮಾ ಸ್ತೋತ್ರ , ಮಧ್ವವಿಜಯ ಪ್ರಮೇಯ ಮಾಲಿಕಾ.

**ಕಲ್ಯಾಣೀ ದೇವಿ** (೧೩ನೇ ಶತಮಾನ): ತ್ರಿವಿಕ್ರಮ ಪಂಡಿತರ ತಂಗಿ. ಅವಿವಾಹಿತೆಯೇ ಆಗಿದ್ದ ಸಂಸ್ಕೃತ ಕವಯಿತ್ರಿ. ಕೃತಿಗಳು: ಗೋವಿಂದ ಸ್ತೋತ್ರ, ಮುಕುಂದ ಸ್ತೋತ್ರ, ಅಣುವಾಯುಸ್ತುತಿ, ಪೂರ್ಣಬೋಧ ಸ್ತೋತ್ರ.

**ನಾರಾಯಣ ಪಂಡಿತ** (೧೨೯೦–೧೩೭೦): ತ್ರಿವಿಕ್ರಮ ಪಂಡಿತರ ಮೂರನೆಯ ಮಗ. ಮಧ್ವಾಚಾರ್ಯರ ಜೀವನ ಚರಿತ್ರೆಯನ್ನು ಆಧರಿಸಿ ಸುಮಧ್ವವಿಜಯ ಎಂಬ ಐತಿಹಾಸಿಕ ಕಾವ್ಯವನ್ನು ರಚಿಸಿದ್ದಾರೆ. ಸಂಗ್ರಹ ರಾಮಾಯಣ ಎಂಬುದು ಇವರ ಮೇರುಕೃತಿ. ಇವರ ಇತರ ಕೃತಿಗಳು: ಸುಮಧ್ವವಿಜಯ (ಐತಿಹಾಸಿಕ ಕಾವ್ಯ), ಪಾರಿಜಾತ ಹರಣ (ಖಂಡಕಾವ್ಯ), ಶುಭೋದಯ (ಖಂಡಕಾವ್ಯ), ಮಣಿಮಂಜರಿ (ದುಷ್ಕಾವ್ಯ), ಯೋಗದೀಪಿಕಾ (ಆಚಾರ ಗ್ರಂಥ), ಧ್ಯಾನಮಾಲಾ, ಶಿವಸ್ತುತಿ ಮೊದಲಾದ ೯ ಸ್ತೋತ್ರಗಳು. ತಾನೇ ರಚಿಸಿದ ಮಧ್ವವಿಜಯಕ್ಕೆ 'ಭಾವ ಪ್ರಕಾಶಿಕಾ' ಎಂಬ ಟಿಪ್ಪಣಿ ಸಹಿತ ಎಂಟು ಟೀಕಾ ಗ್ರಂಥಗಳು.

**ರಾಜರಾಜೇಶ್ವರ ತೀರ್ಥ** (೧೫ನೇ ಶತಮಾನ): ಪಲಿಮಾರು ಮಠದ ಆರನೆಯ ಯತಿ. ಕೃತಿಗಳು: ರಾಮಸಂದೇಶ (ಖಂಡ ಕಾವ್ಯ) ಹಾಗೂ ಮಂಗಲಾಷ್ಟಕ.

**ವಾದಿರಾಜ ತೀರ್ಥ** (೧೪೮೦–೧೬೦೦): ಸೋದೆ ಮಠದ ಇಪ್ಪತ್ತನೆಯ ಯತಿಯಾದ ಇವರು ಮಾಧ್ವಯತಿಗಳಲ್ಲಿ ಅತ್ಯಂತ ಪ್ರಸಿದ್ಧರು. ಕುಂಭಾಸಿ ಕ್ಷೇತ್ರ ಬಳಿ ಹೂವಿನಕೆರೆ ಗ್ರಾಮದಲ್ಲಿ ಹುಟ್ಟಿದ ಇವರ ಮೊದಲ ಹೆಸರು 'ಭೂ ವರಾಹ'. ೧೨೦ ವರ್ಷ ಬದುಕಿ ೧೬ನೇ ಶತಮಾನವನ್ನು ಪೂರ್ತಿಯಾಗಿ ಕಂಡವರು. ಸಮಾಜ ಸುಧಾರಕರಾದ ಇವರು ಉಡುಪಿ ಕೃಷ್ಣ ಪೂಜಾಪರ್ಯಾಯದ ಅವಧಿಯನ್ನು ಎರಡು ವರ್ಷದ ಅವಧಿಗೆ ವಿಸ್ತರಿಸಿದರು. ರುಕ್ಮಿಣೀಶ ವಿಜಯ (ಮಹಾಕಾವ್ಯ), ತೀರ್ಥ ಪ್ರಬಂಧ (ಪ್ರವಾಸಕಾವ್ಯ), ಕವಿ ಕದಂಬ ಕಂಠಭೂಷಾ, ಭೂಗೋಳ ವಿವರಣೆ, ಯುಕ್ತಿಮಲ್ಲಿಕಾ(ಮೇರುಕೃತಿ), ನ್ಯಾಯ ರತ್ನಾವಲಿ ಮೊದಲಾದ ೨೦ ಶಾಸ್ತ್ರ ಗ್ರಂಥಗಳು; ಮುಹೂರ್ತ ರಾಜ ಸಹಿತ ಮೂರು ಜ್ಯೋತಿಷ ಗ್ರಂಥಗಳು, ಹದಿನೈದು ವ್ಯಾಖ್ಯಾ ಗ್ರಂಥಗಳು–ಮಹಾಭಾರತ ಲಕ್ಷಾಲಂಕಾರ ಇತ್ಯಾದಿ ಆರು ಪಂಚಕ, ೨೦ ಅಷ್ಟಕ, ಐದು ದಶಕ ಸ್ತೋತ್ರಗಳ ಸಹಿತ ೫೪ ಸ್ತೋತ್ರಗಳು ಇವರ ರಚನೆಗಳಾಗಿವೆ.

**ವಿಬುಧವರ್ಯ ತೀರ್ಥ** (೧೮ನೇ ಶತಮಾನ): ಸೋದೆ ಮಠದ ೨೮ನೇ ಯತಿ. ಸುಭದ್ರಾ ಹರಣ ಎಂಬ ಮಹಾಕಾವ್ಯವನ್ನೂ, ವಿಷ್ಣು ಸಹಸ್ರನಾಮಕ್ಕೆ ವ್ಯಾಖ್ಯೆಯನ್ನೂ ರಚಿಸಿದ್ದಾರೆ.

**ರಘುವರ್ಯ ತೀರ್ಥ** (೧೬೩೦–೧೭೧೨): ಪಲಿಮಾರು ಮಠದ ೧೯ನೇ ಯತಿ. ರಘುನಾಥ ವಿಜಯ ಎಂಬ ನಾನಾ ವೃತ್ತಗಳಿಗೆ ಉದಾಹರಣ ಪದ್ಯಗಳ ಕಾವ್ಯವನ್ನು ಹಾಗೂ ಇತರ ನಾಲ್ಕು ಕೃತಿಗಳನ್ನು ನಿರ್ಮಿಸಿದ್ದಾರೆ.

**ಕಲ್ಯಾಣ ಕೀರ್ತಿ** (೧೫ನೇ ಶತಮಾನ): ಕಾರ್ಕಳದ ಬಳಿಯ ನೆಲ್ಲಿಕಾರು ಎಂಬಲ್ಲಿದ್ದ ಜೈನ ಮುನಿ. ಸಂಸ್ಕೃತ ಹಾಗೂ ಕನ್ನಡ ಉಭಯ ಭಾಷಾ ಕವಿಯಾಗಿದ್ದರು. ಜಿನಯಜ್ಞ ಫಲೋದಯ (೧೪೨೮ರಲ್ಲಿ) ಹಾಗೂ ಯಶೋಧರ ಚರಿತ (೧೪೫೩ರಲ್ಲಿ) ಎಂಬ ಕಾವ್ಯಗಳನ್ನು ರಚಿಸಿದ್ದಾರೆ.

**ರಾಮಚಂದ್ರಾಚಾರ್ಯ** (೧೭ನೇ ಶತಮಾನ) : ಇವರು ರಚಿಸಿದ ಐತಿಹಾಸಿಕ ಕಾವ್ಯ ವಾದಿರಾಜ ಗುರುವರ ಚರಿತಾಮೃತಮ್.

**ಬಿಳಿಯಾರು ಶ್ರೀನಿವಾಸ ಭಟ್ಟ** (ನಿಧನ ೧೯೫೭) : ಉಡುಪಿ ಸಂಸ್ಕೃತ ಕಾಲೇಜಿನಲ್ಲಿ ಸಾಹಿತ್ಯ ಪ್ರಾಧ್ಯಾಪಕ ಆಗಿದ್ದರು. ರಾಮಾನಂದಮ್, ಬಲರಾಮ ಪ್ರತಾಪಃ, ಚೈತ್ರಾಭರಣಮ್ ಹಾಗೂ ಜಯಸಿಂಹ ಚರಿತಮ್ ಎಂಬ ನಾಲ್ಕು ರೂಪಕಗಳನ್ನು ಬರೆದಿದ್ದಾರೆ.

**ಶ್ರೀನಿವಾಸ ಕೆದಿಲಾಯ :** ಹಂಗಾರಕಟ್ಟೆಯ ಬಾಳೆಕುದುರು ಮಠದಲ್ಲಿ ಪಾಠಪ್ರವಚನ ಮಾಡುತ್ತಿದ್ದರು. ಕೃತಿ: ಶ್ರೀಶಂಕರ ವಿಜಯಸಾರಃ (ಐತಿಹಾಸಿಕ ಕಾವ್ಯ).

**ಕಂಚಾರ್ತಿ ಲಕ್ಷ್ಮೀನಾರಾಯಣ ಉಪಾಧ್ಯಾಯ** : ಇವರು ಪುರಿ ಗೋವರ್ಧನ ಪೀಠದ ಜಗದ್ಗುರು ಶ್ರೀಭಾರತೀ ಕೃಷ್ಣತೀರ್ಥರ ಶಿಷ್ಯ. ಮುಂಬಯಿಯಲ್ಲಿ ವಾಸಿಸುತ್ತಿದ್ದರು. ಶಂಕರನಾರಾಯಣ ಶತಕಮ್, ಕಾವೇರಿ ಶತಕಮ್, ಮಾತೃಲಹರೀ ರಚಿಸಿದ್ದಾರೆ.

**ಅಗ್ರಹಾರ ಗೋಪಾಲಕೃಷ್ಣ ಭಟ್ಟ** (ನಿಧನ ೧೯೭೨): ಉಡುಪಿಯ ಎಂ.ಜಿ.ಎಂ. ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿ ನಿವೃತ್ತರಾದರು. ಶ್ರೀಕೃಷ್ಣ ದೌತ್ಯಮ್, ಝಾನ್ಸಿ ಲಕ್ಷ್ಮೀ ಬಾಯೀ (ಖಂಡ ಕಾವ್ಯ), ಕಿಶೋರ ವಿಹಾರ ರಚಿಸಿದ್ದಾರೆ.

**ಉದ್ಯಾವರ ಲಕ್ಷ್ಮೀನಾರಾಯಣಾಚಾರ್ಯ** (೧೯೦೪-೧೯೬೬): ಮಧುರೆಯ ಗುರುಕುಲದಲ್ಲಿ ಕಲಿತು ತಮಿಳುನಾಡಿನ ಪರಮಕುಡಿ, ರಾಜಪಾಳಯ ಮುಂತಾದೆಡೆ ಪ್ರೌಢಶಾಲೆಗಳಲ್ಲಿ ಸಂಸ್ಕೃತ ಅಧ್ಯಾಪಕರಾಗಿದ್ದರು. ಇವರು ರಾಸವಿಲಾಸ (ಖಂಡಕಾವ್ಯ) ರಚಿಸಿದ್ದಾರೆ.

**ಅಲೆವೂರು ಸೀತಾರಾಮಾಚಾರ್ಯ**: ಅಗ್ನಿಹೋತ್ರಿಯಾಗಿದ್ದ ಇವರು ವ್ಯಾಕರಣ ಶಾಸ್ತ್ರದಲ್ಲಿ ಪಾರಂಗತರಾಗಿದ್ದರಲ್ಲದೆ ಉಡುಪಿ ಸಂಸ್ಕೃತ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರು. ದೇಶಭಕ್ತಿ ಗೀತಿಕಾ (ಪದ್ಯ), ಗ್ರಾಮ-ನಗರ ಸಂವಾದಃ, ಭೈಮೀನೈಷಧೀಯಮ್ (ರೂಪಕ), ಚಂದ್ರಹಾಸವಿಲಾಸಃ(ರೂಪಕ), ನವ್ಯ ಸುಂದರೀ (ರೂಪಕ), ಇಂದುಮತೀ ವ್ಯತಿಷಂಗಃ (ರೂಪಕ) ಹಾಗೂ ದಶಾವತಾರ ಸ್ತುತಿ ವ್ಯಾಖ್ಯಾಗಳ ಕರ್ತೃ.

**ಕನರಾಡಿ ವಿಠಲೋಪಾಧ್ಯಾಯ** (೧೯೧೦-೧೯೯೧): ಉಡುಪಿ ಸಂಸ್ಕೃತ ಕಾಲೇಜಿನಲ್ಲಿ ಸಂಸ್ಕೃತ ಪ್ರಾಥಮಿಕ ಶಿಕ್ಷಣ ಪಡೆದು, ಪ್ರಾಥಮಿಕ ಶಾಲಾಧ್ಯಾಪಕ ಆಗಿದ್ದರು. ಕೃತಿಗಳು: ಧ್ರುವಚರಿತಮ್ (೧೫ ಸರ್ಗದ ಮಹಾಕಾವ್ಯ), ಪ್ರಹ್ಲಾದ ಚಂಪೂಃ.

**ಬವಳಾಡಿ ಶ್ರೀಧರ ಹೆಬ್ಬಾರ** (೧೯೧೮-೧೯೯೦): ಕುಮಟ ಹಾಗೂ ಶಿರಸಿಯ ಕಾಲೇಜುಗಳಲ್ಲಿ ಪ್ರಾಂಶುಪಾಲರಾಗಿದ್ದ ಬಿ.ಎಚ್.ಶ್ರೀಧರ ಅವರು ಕನ್ನಡ ಕವಿ ಹಾಗೂ ವಿಮರ್ಶಕರಾಗಿದ್ದರು. ಭಾರತೀಯತಾ ಪ್ರಶಂಸಾ, ಚಾಮುಂಡಾರ್ಥ ಪ್ರದೀಪಿಕಾ, ಸಂಸ್ಕೃತ-ಕನ್ನಡ ಸೌಂದರ್ಯಮ್, ಪ್ರಾರ್ಥನಾ ಸ್ತೋತ್ರಾಣಿ ಹಾಗೂ ಕವಿತಾ ಸಂಗ್ರಹಃ ಎಂಬುವು ಇವರ ರಚನೆಗಳು.

**ಮೊಗೇರಿ ಗೋಪಾಲ ಕೃಷ್ಣ ಅಡಿಗ** (೧೯೧೮-೧೯೯೨): ಪ್ರಸಿದ್ಧ ಕನ್ನಡ ಕವಿಯಾದ ಇವರು ಆಂಗ್ಲ ಭಾಷೆಯ ಪ್ರಾಧ್ಯಾಪಕ. ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿದ್ದರು. ಇವರು ಮಾತೃವಂದನಮ್ (ಕವಿತೆ) ಹಾಗೂ ಅಪೂರ್ವಃ ಸಂನ್ಯಾಸಃ (ಕಥೆ) ರಚಿಸಿದ್ದಾರೆ.

**ಹೈಪಾಜೆ ಶಂಕರಗಣಪತಿ ಪಾಠಕ** (೧೯೩೯-೧೯೯೭): ಕಾರ್ಕಳ ಸಮೀಪದ ದುರ್ಗಗ್ರಾಮದ ಇವರು ಭುವನೇಂದ್ರ ಸಂಸ್ಕೃತ ಕಾಲೇಜಿನಲ್ಲಿ ಸಾಹಿತ್ಯ ಶಿರೋಮಣಿ ಪದವಿ ಪಡೆದು ಮೈಸೂರಿನ ಪ್ರಾಚ್ಯ ಸಂಶೋಧನಾಲಯದಲ್ಲಿ ಪ್ರಸಿದ್ಧ ಸಂಶೋಧಕರಾಗಿದ್ದರು. ಉಪಾಖ್ಯಾನ ಯುಗ್ಮಮ್, ಪರಶುರಾಮ ಸ್ತೋತ್ರಮ್ ಮತ್ತು ಸುಪ್ರಭಾತ ತ್ರಯಮ್ ರಚಿಸಿದ್ದಾರೆ.

**ಮಟಪಾಡಿ ರಾಜಗೋಪಾಲಾಚಾರ್ಯ** (೧೯೨೬-೧೯೯೮): ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದ ಇವರು ಸಾಮವೇದ, ಸಂಗೀತ ಹಾಗೂ ಸಾಹಿತ್ಯದಲ್ಲಿ ನಿಷ್ಣಾತರಾಗಿದ್ದರು. ನಿವೃತ್ತರಾದ ಮೇಲೆ ಪುತ್ತಿಗೆ ಮಠದ "ಸುಗುಣ ಮಾಲಾ" ಪತ್ರಿಕೆಯ ಸಂಪಾದಕರಾಗಿದ್ದರು. ಹನ್ನೆರಡು ಸುಪ್ರಭಾತ ಸ್ತೋತ್ರಗಳು, ದೇವೀ ನವರಾಗ ಮಾಲಿಕಾಸ್ತವ ಸಹಿತ ಐದು ಸ್ತೋತ್ರಗಳು, ನಿಸರ್ಗ ಸಂಧಾನಂ ಸಹಿತ ಐದು ಯಕ್ಷಗಾನ ಪ್ರಸಂಗಗಳು, ತ್ರಿಭಾಷಾ ಸೂಕ್ತಿಕೋಶಃ ಹಾಗೂ ಸಂಸ್ಕೃತ ಕಥಾಮಾಲಾ – ಇವುಗಳ ಕರ್ತೃವಾಗಿದ್ದಾರೆ.

**ಮುಗೇರಿ ಮಂಜುನಾಥ ಭಟ್ಟ** (೧೯೧೬-೧೯೯೯): ತಿರುವನಂತಪುರದಲ್ಲಿ ಅಧ್ಯಯನ ಮಾಡಿ, ಮಂಗಳೂರಿನ ಸಂತ ಎಲೋಶಿಯಸ್ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿದ್ದರು. ನಿವೃತ್ತಿಯ ಬಳಿಕ ಉಡುಪಿಯಲ್ಲಿ ನೆಲೆಸಿದ್ದರು. ವಿರಕ್ತಿ ವೀಥಿಕಾ (ಖಂಡಕಾವ್ಯ), ಭಕ್ತಿ ವೀಥಿಕಾ (ಖಂಡಕಾವ್ಯ) ರಚಿಸಿದ್ದಾರೆ.

**ಬನ್ನಂಜೆ ಗೋವಿಂದಾಚಾರ್ಯ** (ಜನನ ೧೯೩೬): ಪಡುಮುನ್ನೂರು ನಾರಾಯಣಾಚಾರ್ಯರ ಮಗ ಹಾಗೂ ವಿದ್ಯಾಮಾನ್ಯ ತೀರ್ಥರ ಶಿಷ್ಯ. ಉದಯವಾಣಿ ದಿನಪತ್ರಿಕೆಯ ಸಂಪಾದಕೀಯ ವಿಭಾಗದಲ್ಲಿ ಉದ್ಯೋಗಿಯಾಗಿದ್ದ ಇವರು ಪ್ರವಚನಪಟು ಆಗಿದ್ದಾರೆ. ಮಹಿಲಾಷ್ಟಕಂ ಮೊದಲಾದ ಮೂರು ಕವಿತೆಗಳು, ಪುರುಷ ಸೂಕ್ತ ವ್ಯಾಖ್ಯಾನ ಸಹಿತ ನಾಲ್ಕು ವ್ಯಾಖ್ಯಾನಗಳು, ಆನಂದಮಾಲಾ ಟಿಪ್ಪಣಿ ಸೇರಿ ಮೂರು ಟಿಪ್ಪಣಿಗಳು, ವಾಯುಸ್ತುತಿ ಟೀಕೆ ಸೇರಿದಂತೆ ಎರಡು ಟೀಕೆಗಳು, ಗೋಪಾಲಕೃಷ್ಣ ಸುಪ್ರಭಾತಮ್, ಪ್ರಾಣಸೂತ್ರಮ್ (ಯೋಗಶಾಸ್ತ್ರ), ತತ್ತ್ವಚಂದ್ರಿಕಾ (ಮಧ್ವವಿಜಯ ಟೀಕೆ), ದಶೋಪನಿಷದ್ ವ್ಯಾಖ್ಯಾನಮ್‌ಗಳು ಇವರ ಕೃತಿಗಳಾಗಿವೆ.

**ಕೆಮ್ಮೂರು ವಿಷ್ಣುಮೂರ್ತಿ ಭಟ್ಟ:** ಉಡುಪಿ ಸಂಸ್ಕೃತ ಕಾಲೇಜಿನಲ್ಲಿ ವೇದಾಂತವನ್ನು ಕಲಿತು ಉಜಿರೆಯ ಎಸ್.ಡಿ.ಎಂ. ಕಾಲೇಜಿನಲ್ಲಿ ಸಂಸ್ಕೃತ ವಿಭಾಗಾಧ್ಯಕ್ಷ ಆಗಿದ್ದರು. ಕರ್ಮಫಲಮ್ ಹಾಗೂ ದೈವರಾತಮ್ ಎಂಬ ಏಕಾಂಕರೂಪಕಗಳನ್ನು ರಚಿಸಿದ್ದಾರೆ.

**ಸಾಂತ್ಯಾರು ವೆಂಕಟರಾಜ:** ಸಂಸ್ಕೃತವನ್ನು ಕಲಿತು ಪ್ರಸಿದ್ಧ ಕನ್ನಡ ಕವಿಯಾಗಿದ್ದರು. ಕಾವ್ಯ ಮನೋರಮಾ (ನಾನಾ ವೃತ್ತಗಳಲ್ಲಿ ಮುಕ್ತಕಗಳ ಸಂಗ್ರಹ) ಇವರ ಕೃತಿಯಾಗಿದೆ.

**ಗುಂಡ್ಮಿ ಗಣಪಯ್ಯ ಹೊಳ್ಳ:** ಉಡುಪಿ ಜಿಲ್ಲೆಯ ಗುಂಡ್ಮಿ ಎಂಬಲ್ಲಿಯ ಇವರು ಉಡುಪಿ ಸಂಸ್ಕೃತ ಕಾಲೇಜಿನಲ್ಲಿ ಅಧ್ಯಯನ ಮಾಡಿ, ಗೋಕರ್ಣ ಸಂಸ್ಕೃತ ಕಾಲೇಜಿನ ಪ್ರಾಂಶುಪಾಲರಾಗಿದ್ದಾರೆ. ಗಣೇಶ ಗೀತಂ, ನೃಸಿಂಹ ಗೀತಮ್ ಮುಂತಾದ ೧೬ ಗೀತಗಳು, ಶಾರದಾ ಪಂಚಕಂ ಸೇರಿದಂತೆ ಮೂರು ಪಂಚಕಗಳು, ರೂಪಕಾಲಂಕಾರಃ ಇತ್ಯಾದಿ ಐದು ಪ್ರಬಂಧಗಳು, ವೃದ್ಧೋಪದೇಶಃ (ರೂಪಕ) ರಚಿಸಿದ್ದಾರೆ.

**ವಿದ್ವಾನ್ ಕೃಷ್ಣಮೂರ್ತಿ ನಿಟಿಲಾಪುರ** (ಜನನ ೧೯೪೬): ಬಂಟ್ವಾಳ ತಾಲೂಕಿನ ಕಲ್ಲಡ್ಕದ ಬಳಿಯ ನಿಟಿಲಾಪುರದಲ್ಲಿ ಜನಿಸಿ, ಉಡುಪಿಯ ಸಂಸ್ಕೃತ ಕಾಲೇಜಿನಲ್ಲಿ ಜ್ಯೋತಿಷ, ಅಲಂಕಾರಶಾಸ್ತ್ರ ಹಾಗೂ ವೇದಾಂತವನ್ನು ಕಲಿತು, ಮಣಿಪಾಲದ ಉದಯವಾಣಿ ಕನ್ನಡ ದಿನಪತ್ರಿಕೆಯಲ್ಲಿ ಉಪಸಂಪಾದಕನಾಗಿ ನಿವೃತ್ತಿ ಹೊಂದಿದ್ದಾರೆ.ಈಗ ಸಾಲಿಗ್ರಾಮದ ಶ್ರೀ ಗುರುನರಸಿಂಹ ನಿಗಮಾಗಮ ಪಾಠಶಾಲೆಯ ಪ್ರಾಂಶುಪಾಲರಾಗಿದ್ದಾರೆ. ಶ್ರೀ ನಿಟಿಲಾಕ್ಷ ಸದಾಶಿವ ಸುಪ್ರಭಾತ ಸ್ತೋತ್ರ ಸಹಿತ ಎಂಟು ಪದ್ಯ ಕೃತಿಗಳು, ಸಂಸ್ಕೃತೇ ಭೌತಿಕಂ ವಿಜ್ಞಾನಂ ಸೇರಿದಂತೆ ಏಳು ಗದ್ಯಕೃತಿಗಳು, ಸಂಸ್ಕೃತ ವಿಜ್ಞಾನಮ್ (ಡಾ।ರಾಜಾರಾಮಣ್ಣ ಅವರ ಕೃತಿಯ ಅನುವಾದ), ತೌಳವ ಮಂಡಲಸ್ಯ ಸಂಸ್ಕೃತ ಕೃತಿ ಸಮೀಕ್ಷಾ (ಪಿಎಚ್.ಡಿ. ಮಹಾಪ್ರಬಂಧ) ಎಂಬುವು ಇವರ ಗ್ರಂಥಗಳಾಗಿವೆ.

ಇವರಲ್ಲದೆ, ಶಂಕರ ಪಂಡಿತ (೧೩ನೇ ಶತಕ), ವಾಮನ ಪಂಡಿತ (೧೪ನೇ ಶತಕ), ಹೃಷಿಕೇಶ ತೀರ್ಥ (೧೪ನೇ ಶತಕ), ಕಮಲಾಕ್ಷ ತೀರ್ಥ (೧೪ನೇ ಶತಕ), ಅನಂತ ತೀರ್ಥ (೧೪ನೇ ಶತಕ), ವಿಜಯಧ್ವಜ ತೀರ್ಥ, ವೇದಾತ್ಮ ತೀರ್ಥ, ವೇದಾಂಗ ತೀರ್ಥ (೧೪೫೦), ಸುರೋತ್ತಮ ತೀರ್ಥ (೧೬ನೇ ಶತಕ), ಶ್ರೀಧರತೀರ್ಥ(೧೫೫೨–೧೬೯೨), ವಿಶ್ವಪತಿ ತೀರ್ಥ (೧೭ನೇ ಶತಕ), ಬಲ್ಲಾಳ ನಾರಾಯಣಾಚಾರ್ಯ(೧೯ನೇಶತಕ), ಕಾಶಿತಿಮ್ಮಣ್ಣಾಚಾರ್ಯ(೧೯ನೇಶತಕ), ಲಕ್ಷ್ಮೀನಾರಾಯಣಾಚಾರ್ಯ (೧೯ನೇಶತಕ), ಪಡುಮುನ್ನೂರು ನಾರಾಯಣಾಚಾರ್ಯ (೧೮೯೧–೧೯೭೩), ಪಣಿಯಾಡಿ ಲಕ್ಷ್ಮೀನಾರಾಯಣ ಉಪಾಧ್ಯಾಯ, ವಿದ್ಯಾಮಾನ್ಯ ತೀರ್ಥ (೧೯೧೩–೨೦೦೦), ವಿಶ್ವೇಶ ತೀರ್ಥ, ಪಿ.ವಿ. ರಮೇಶ ಅಡಿಗ (೧೯೨೪–೧೯೯೨), ಮೊದಲಾದವರೂ ಕೆಲವೊಂದು ಕೃತಿಗಳನ್ನು ರಚಿಸಿದ್ದಾರೆ. ಉಡುಪಿ ಜಿಲ್ಲೆಯ ಕೆಲವು ವಿದ್ವಾಂಸರು ಬೇರೆಡೆಗಳಿಗೆ ಹೋಗಿ ಸಂಸ್ಕೃತ ಕೃತಿಗಳನ್ನು ಬರೆದಿದ್ದಾರೆ. ಬೇರೆಡೆಯ ಕೆಲವು ಪಂಡಿತರು ಉಡುಪಿಗೆ ಬಂದು ಸಂಸ್ಕೃತ ಕೃತಿಗಳನ್ನು ರಚಿಸಿದ್ದಾರೆ. ಈಗಲೂ ಉಡುಪಿ ಜಿಲ್ಲೆಯಲ್ಲಿ ಸಂಸ್ಕೃತ ಕೃತಿಗಳ ನಿರ್ಮಾಣ ನಡೆಯುತ್ತಿದೆ.

ಉಡುಪಿ ಜಿಲ್ಲೆಯ ಸಂಸ್ಕೃತ ವಾಙ್ಮಯೇತಿಹಾಸದಲ್ಲಿ ಪೂರ್ವಕಾಲ, ಮಧ್ಯಕಾಲ ಮತ್ತು ಆಧುನಿಕ ಕಾಲ ಎಂದು ಗುರುತಿಸಬಹುದಾಗಿದೆ. ಮಹಾಕಾವ್ಯಗಳ ಉತ್ಪತ್ತಿಯನ್ನೇ ಈ ಕಾಲವಿಭಾಗಕ್ಕೆ ಆಧಾರವಾಗಿ ಸ್ವೀಕರಿಸಬಹುದು. ಉಷಾಹರಣದಿಂದ ಸೂಚಿತವಾದ ಪೂರ್ವಕಾಲದಲ್ಲಿ ಹಸ್ತಾಮಲಕಾಚಾರ್ಯ, ಮಧ್ವಾಚಾರ್ಯ, ತ್ರಿವಿಕ್ರಮ ಪಂಡಿತ, ನಾರಾಯಣ ಪಂಡಿತ ಮೊದಲಾದ ಕವಿಗಳು ಹಾಗೂ ಏಕೈಕ ಕವಯಿತ್ರಿಯಾದ ಕಲ್ಯಾಣೀದೇವಿ ಅವರೆಲ್ಲ ಆಗಿಹೋಗಿದ್ದಾರೆ. ಉಷಾಹರಣವಲ್ಲದೆ ಸಂಗ್ರಹ ರಾಮಾಯಣ, ಮಧ್ವವಿಜಯ, ಯಶೋಧರ ಚರಿತೆ ಮುಂತಾದ ಮಹಾಕಾವ್ಯಗಳು, ದ್ವಾದಶ ಸ್ತೋತ್ರ, ವಾಯುಸ್ತುತಿ ಇತ್ಯಾದಿ ಸ್ತೋತ್ರ ಕಾವ್ಯಗಳು, ರಾಮಸಂದೇಶ, ಪಾರಿಜಾತ ಹರಣ ಮೊದಲಾದ ಖಂಡಕಾವ್ಯಗಳು ನಿರ್ಮಿತವಾಗಿವೆ.

ರುಕ್ಮಿಣೀಶ ವಿಜಯದಿಂದ ಅಂಕಿತವಾದ ಮಧ್ಯಕಾಲದಲ್ಲಿ ವಾದಿರಾಜ ತೀರ್ಥ, ರಘುವರ್ಯ ತೀರ್ಥ, ವಿಬುಧವರ್ಯ ತೀರ್ಥ ಇತ್ಯಾದಿ ಕವಿಗಳು ರುಕ್ಮಿಣೀಶ ವಿಜಯ ಅಲ್ಲದೆ ರಘುನಾಥ ವಿಜಯ, ಸುಭದ್ರಾಹರಣ ಮೊದಲಾದ ಕಾವ್ಯಗಳನ್ನು ರಚಿಸಿದ್ದಾರೆ. ಧ್ರುವಚರಿತದಿಂದ ಸೂಚಿತವಾದ ಆಧುನಿಕ ಕಾಲದಲ್ಲಿ ವಿಠಲೋಪಾಧ್ಯಾಯ, ಲಕ್ಷ್ಮೀನಾರಾಯಣಾಚಾರ್ಯ, ಗೋಪಾಲಕೃಷ್ಣಭಟ್ಟ, ರಾಜಗೋಪಾಲಾ ಚಾರ್ಯ, ಮಂಜುನಾಥಭಟ್ಟ, ಗೋವಿಂದಾಚಾರ್ಯ ಮುಂತಾದ ಕವಿಗಳು ಧ್ರುವಚರಿತೆ ಎಂಬ ಮಹಾಕಾವ್ಯವಲ್ಲದೆ ರಾಸವಿಲಾಸ, ವಿರಕ್ತಿವೀಥಿಕಾ, ಭಕ್ತಿ ವೀಥಿಕಾ ಮೊದಲಾದ ಖಂಡಕಾವ್ಯ ಹಾಗೂ ಸ್ತೋತ್ರಕಾವ್ಯಗಳನ್ನು ಬರೆದಿದ್ದಾರೆ, ಬರೆಯುತ್ತಿದ್ದಾರೆ. ಉಡುಪಿ ಜಿಲ್ಲೆಗೆ ಸಂಬಂಧಿಸಿದಂತೆ ಸುಮಾರು ೩೪೨ ಸಂಸ್ಕೃತ ಕೃತಿಗಳಲ್ಲಿ ಹೆಚ್ಚಿನವು ಸ್ತೋತ್ರ, ಟೀಕೆ ಮತ್ತಿತರ ಧಾರ್ಮಿಕ ವಸ್ತು–ವಿಚಾರಗಳನ್ನು ಕುರಿತು ರಚಿತವಾಗಿದ್ದರೂ, ಕಡಿಮೆ ಸಂಖ್ಯೆಯಲ್ಲಿಯಾದರೂ ವಿಜ್ಞಾನ, ಪ್ರವಾಸ, ಇತಿಹಾಸ, ಕತೆ, ಕವನಾದಿಗಳನ್ನು ರಚಿಸಿರುವುದು ಗಮನಾರ್ಹವಾಗಿದೆ. ಕನ್ನಡದ ಪ್ರಸಿದ್ಧ ಕವಿಗಳಾದ ಎಂ.ಗೋಪಾಲಕೃಷ್ಣ ಅಡಿಗ, ಸಾಂತಾರು ವೆಂಕಟರಾಜ ಅವರೂ ಸಂಸ್ಕೃತದಲ್ಲಿ ಗ್ರಂಥಗಳನ್ನು ಪ್ರಕಟಿಸಿದ್ದಾರೆಂಬುದು ವಿಶೇಷ ಉಲ್ಲೇಖನೀಯ ಅಂಶವಾಗಿದೆ. *(ಲೇಖಕರು: ಡಾ.ವಿದ್ವಾನ್ ಕೃಷ್ಣಮೂರ್ತಿ ನಿಟಿಲಾಪುರ)*

## ಪ್ರಾಚೀನ ಕನ್ನಡ ಸಾಹಿತ್ಯ

ಉಡುಪಿ ಜಿಲ್ಲೆಯ ಪ್ರಾಚೀನ ಕನ್ನಡ ಸಾಹಿತ್ಯವೆಂದು ಹೇಳುವಾಗ ೨೦ನೆಯ ಶತಮಾನವನ್ನು ಹೊರತುಪಡಿಸಿ ೧೯ನೆಯ ಶತಮಾನದ ಕೊನೆಯವರೆಗೆ ಜಿಲ್ಲೆಯ ವ್ಯಾಪ್ತಿಯಲ್ಲಿ ಸಾಹಿತ್ಯ ರಚನೆ ಮಾಡಿದ ಕವಿಗಳು ಮತ್ತು ಅವರ ಕೃತಿಗಳನ್ನು ಪರಿಗಣಿಸಬೇಕಾಗುತ್ತದೆ. ಕವಿ ಮುದ್ದಣ (೧೮೭೦–೧೯೦೧) ಹೊಸ ಕಾಲದ ಸಾಹಿತ್ಯದ ಮೊದಲಿಗನೆಂದೂ ಹಳೆಯ ಸಾಹಿತ್ಯದ ಕೊನೆಯವನೆಂದೂ ವಿಮರ್ಶಕರು ಪರಿಗಣಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಮುದ್ದಣನಿಗಿಂತ ಹಿಂದಿನ ಸಾಹಿತ್ಯವನ್ನು ಪ್ರಾಚೀನ ಸಾಹಿತ್ಯವೆಂದು ಅಧ್ಯಯನ ದೃಷ್ಟಿಯಿಂದ ಪರಿಗಣಿಸಲಾಗಿದೆ.

ದಕ್ಷಿಣ ಕನ್ನಡದ ಸಾಹಿತ್ಯ ಕ್ಷೇತ್ರದಲ್ಲಿ ಕಲ್ಯಾಣಕೀರ್ತಿಯನ್ನು ಮೊದಲಿಗರಲೊಬ್ಬನೆಂದು ಪರಿಗಣಿಸಬಹುದು. ಕಲ್ಯಾಣಕೀರ್ತಿ ಕವಿಯ ಸ್ಥಳ ನಲ್ಕಿಕಾಡು. ಕವಿಚರಿತಕಾರರು ಅವನ ಕಾಲವನ್ನು ೧೪೩೯ ಎಂದು ನಿಶ್ಚಯಿಸಿದ್ದು, ಇದನ್ನು ಎಲ್ಲ ವಿದ್ವಾಂಸರು ಒಪ್ಪಿಕೊಂಡಿದ್ದಾರೆ. ಜೈನಕವಿಯಾದ ಈತ ಜ್ಞಾನ ಚಂದ್ರಾಭ್ಯುದಯ, ನಾಗಕುಮಾರ ಚರಿತೆ, ಕಾಮನ ಕಥೆ, ಚಿನ್ಮಯ ಚಿಂತಾಮಣಿ, ಅನುಪ್ರೇಕ್ಷೆ, ಆನಂದ ಕಂದಳಿ ಮತ್ತು ತತ್ತ್ವಭೇದಾಷ್ಟಕ ಎಂಬ ಕನ್ನಡ ಕೃತಿಗಳು ಹಾಗೂ ಜಿನಯಜ್ಞ ಫಲೋದಯ, ಯಶೋಧರ ಚರಿತೆ ಎಂಬ ಸಂಸ್ಕೃತ ಗ್ರಂಥಗಳ ಕರ್ತೃ. ಸಿದ್ಧರಾಶಿ ಎಂಬ ಗ್ರಂಥವನ್ನು ಈತ ಬರೆದಿರುವಂತೆ ತೋರುತ್ತದೆ ಎಂದು ಕವಿಚರಿತೆಕಾರರು ಹೇಳಿದ್ದಾರೆ. ಆದರೆ ಇದು ಬೇರೊಂದು ಗ್ರಂಥವಾಗಿರದೆ, ಅನುಪ್ರೇಕ್ಷೆಯ ಮತ್ತೊಂದು ಹೆಸರಾಗಿದೆ. ಪ್ರಸ್ತುತ ತಿಳಿಯಲಾಗಿರುವಂತೆ ಕಲ್ಯಾಣಕೀರ್ತಿಯ ಕಾಮನ ಕಥೆ ಎಂಬುದು ಕರ್ನಾಟಕದ ಸಾಂಗತ್ಯ ಸಾಹಿತ್ಯ ಪ್ರಕಾರದಲ್ಲಿ ದೊರೆತ ಮೊತ್ತ ಮೊದಲ ಗ್ರಂಥವಾಗಿದೆ. ಈತ ಕಾರ್ಕಳದ ಮಠಾಧೀಶರಾಗಿದ್ದ ಲಲಿತಕೀರ್ತಿಗಳ ಶಿಷ್ಯನೆಂದು ತಿಳಿದುಬರುತ್ತದೆ. ಅಲ್ಲಿಯ ಅರಸನಾದ

ಭೈರರಸರ ವಂಶದ ಪಾಂಡ್ಯರಾಯರ ಅಂದರೆ ಕ್ರಿ.ಶ. ೧೪೩೨ ರಲ್ಲಿ ಗೊಮ್ಮಟನನ್ನು ಅಲ್ಲಿ ಪ್ರತಿಷ್ಠಾಪಿಸಿದ ವೀರಪಾಂಡ್ಯನ ಇಚ್ಛಾನುಸಾರವಾಗಿ ಬರೆದನೆಂದು ಹೇಳುತ್ತಾನೆ. ಈ ಕೃತಿಯು ಜೈನ ಮತಾನುಸಾರವಾಗಿ ಮನ್ಮಥಕಥಾ ನಿರೂಪಣೆಯನ್ನು ಒಳಗೊಂಡಿದೆ. ಪ್ರಸ್ತುತ ತಿಳಿಯಲಾಗಿರುವಂತೆ ಈ ಚಿನ್ಮಯ ಚಿಂತಾಮಣಿ ವಿಶಿಷ್ಟವಾದ ಮಾತ್ರಾವಿನ್ಯಾಸದ ಚೌಪದ ಛಂದಸ್ಸಿನಿಂದ ಕೂಡಿದ್ದು, ಒಟ್ಟು ೧೦೮ ಪದ್ಯಗಳನ್ನೊಳಗೊಂಡಿದೆ. ಇದರಲ್ಲಿ ತತ್ತ್ವ ನಿರೂಪಣೆ ಅಡಕವಾಗಿದೆ.

ಜ್ಞಾನಚಂದ್ರಾಭ್ಯುದಯಕ್ಕೆ ಜ್ಞಾನಚಂದ್ರೋದಯ ಎಂಬ ಹೆಸರೂ ಕಂಡುಬರುತ್ತದೆ. ಇದನ್ನು ಶಕನೃಪನ ರತಿಲೋಕ (೧೩೬೨) ಸಂಖ್ಯೆಯಿಂದ ವಿಧಿತ ಸಿದ್ಧಾರ್ಥಿ ವರ್ಷದಲ್ಲಿ ಎಂದರೆ ೧೪೪೦ರಲ್ಲಿ ಬರೆದಂತೆ ತಿಳಿಯುತ್ತದೆ. ಇದು ಏಳು ಸಂಧಿಗಳುಳ್ಳ ವಿವಿಧ ಷಟ್ಪದಿಗಳನ್ನೊಳಗೊಂಡ ಕಾವ್ಯವಾಗಿದೆ. ೯೦೯ ಪದ್ಯಗಳನ್ನುಳ್ಳ ಈ ಕಾವ್ಯ ಜ್ಞಾನಚಂದ್ರನೆಂಬ ರಾಜ ತಪಸ್ಸು ಮಾಡಿ, ಮುಕ್ತಿಯನ್ನು ಪಡೆದ ಕಥೆಯಾಗಿದೆ. ಮೊದಲ ಸಂಧಿ ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿದೆ. ಜ್ಞಾನಚಂದ್ರಾಭ್ಯುದಯ, ಕಾಮನಕಥೆ ಮತ್ತು ನಾಗಕುಮಾರ ಚರಿತೆ ಈ ಮೂರು ಕೃತಿಗಳು ಜೈನ ಕಥೆಗಳು. ಚಿನ್ಮಯ ಚಿಂತಾಮಣಿ, ಅನುಪ್ರೇಕ್ಷೆ, ಆನಂದ ಕಂದಳಿ ಮತ್ತು ತತ್ತ್ವಭೇದಾಷ್ಟಕ ಇವು ಜಿನಧರ್ಮ ತತ್ತ್ವ ನಿರೂಪಣೆ ಮಾಡುವ ಕೃತಿಗಳಾಗಿವೆ. ನಾಗಕುಮಾರ ಚರಿತೆ ಮುಖ್ಯವಾಗಿ ಭಾಮಿನೀ ಷಟ್ಪದಿಯಲ್ಲಿ ರಚಿತವಾಗಿದ್ದು (೧೪೪೨), ಜೊತೆಗೆ ಕಂದವೃತ್ತಗಳೂ ಬಳಕೆಯಾಗಿವೆ. ಇದಕ್ಕೆ ಫಣಿಕುಮಾರ ಚರಿತೆಯೆಂದೂ ಹೆಸರಿದೆ. ಇದು ಐದು ಸಂಧಿಗಳನ್ನು ಐದು ಪದ್ಯಗಳನ್ನು ಒಳಗೊಂಡಿದೆ. ಕವಿ ಬಾಹುಬಲಿಯಿಂದ ಪ್ರಾರಂಭಿಸಲ್ಪಟ್ಟ 'ನಾಗಕುಮಾರ ಚರಿತೆ' ಕಾವ್ಯವು ಅವನ ಮಗ ವರ್ಧಮಾನನಿಂದ ಪೂರ್ಣಗೊಂಡಿತು.

'ಅನುಪ್ರೇಕ್ಷೆ ಅಥವಾ ಸಿದ್ಧರಾಶಿ'ಯಲ್ಲಿ ೭೫ ಪದ್ಯಗಳಿದ್ದು, ಮತ್ತೊಂದು ರೀತಿಯ ಚೌಪದಿಯಿಂದ ರಚಿತವಾಗಿದೆ. ಇದರಲ್ಲಿ ಕೊಂಡಕುಂದಾಚಾರ್ಯರ ಗಾಹೆಯ ಅರ್ಥವನ್ನು ವರ್ಣಿಸುವುದಾಗಿಯೂ ಕವಿ ಹೇಳಿಕೊಂಡಿದ್ದಾನೆ. ಜಿನಸ್ತುತಿ ೨೭ ಕಂದಪದ್ಯಗಳನ್ನುಳ್ಳ ಚಿಕ್ಕ ಕೃತಿ. ಜಿನಮಹಿಳೆಯ ವರ್ಣನೆಯಿಂದ ಕೂಡಿದೆ. 'ತತ್ತ್ವಭೇದಾಷ್ಟಕ' ಕಾವ್ಯವು, ಮಲ್ಲಿಕಮಾಲಾ ವೃತ್ತಗಳಲ್ಲಿ ಜಿನತತ್ತ್ವವನ್ನು ನಿರೂಪಿಸುವ ಒಂದು ಅಷ್ಟಕ ಗ್ರಂಥ. ಇವನು ಪೂಜ್ಯಪಾದನ ವೈದ್ಯಗ್ರಂಥಕ್ಕೆ ಕನ್ನಡ ಟೀಕೆ ಬರೆದಿದ್ದಾನೆಂದು ತಿಳಿದುಬರುತ್ತದೆ. ಅಲ್ಲದೆ ಕಲ್ಯಾಣಕೀರ್ತಿಯು ಸಂಸ್ಕೃತ ಕೃತಿಗಳನ್ನು ರಚಿಸಿದ್ದಾನೆ.  ಈತನು ವೈದ್ಯಗ್ರಂಥವೊಂದನ್ನು ಬರೆದಿದ್ದನೆಂದು ದೇವಚಂದ್ರನ ರಾಜಾವಳಿ ಕಥೆಯಲ್ಲಿ ಹೇಳಲಾಗಿದೆ.

೧೫ನೆಯ ಶತಮಾನದ ಕೊನೆಗೆ 'ಜೀವಂಧರ ಚರಿತೆ'ಯನ್ನು ಷಟ್ಪದಿಯಲ್ಲಿ ರಚಿಸಿದ ಕೋಟೇಶ್ವರ ಕವಿಯು ಬೈಂದೂರಿನವನೆಂದು ತಿಳಿದುಬರುತ್ತದೆ. ಇದು ದಕ್ಷಿಣ ಕನ್ನಡದ ಮೊದಲ ಷಟ್ಪದಿ ಕಾವ್ಯ. ಜೈನಕವಿ ಚದುರ ಚಂದ್ರಮನು ಕಾರ್ಕಳದ ಹೆಸರನ್ನು ಚಿರಸ್ಥಾಯಿಗೊಳಿಸಿದವನು. ಈತ ಗೊಮ್ಮಟೇಶ್ವರ ಚರಿತ್ರೆಯನ್ನು ಸಾಂಗತ್ಯದಲ್ಲಿ ಬರೆದವನು. ಈ ಕೃತಿಯಲ್ಲಿ ೧೬೪೬ರಲ್ಲಿ ಆದ ಕಾರ್ಕಳದ ಗೊಮ್ಮಟ ಶಿಲ್ಪದ ಕೆತ್ತನೆ, ಸ್ಥಾಪನೆ ಹಾಗೂ ಮೊದಲ ಮಹಾಮಸ್ತಕಾಭಿಷೇಕವನ್ನು ವರ್ಣಿಸಿದ್ದಾನೆ. ಈ ಕಾವ್ಯವು ತನ್ನ ವಸ್ತುವಿಶೇಷತೆಯಿಂದ ಪ್ರಾಮುಖ್ಯತೆ ಪಡೆದಿದೆ. ೧೮ನೆಯ ಶತಮಾನದಲ್ಲಿ ಕೊಲ್ಲೂರಿನ ಸಮೀಪ ಹನ್ನರಮಾಗಣೆಯ ಹತ್ತಿರವಿರುವ ಸುಳಿಗೋಡುನಲ್ಲಿ ಹುಟ್ಟಿದ ಹವ್ಯಕ ಬ್ರಾಹ್ಮಣ ಪರಮದೇವ. ಇವನು 'ತುರಂಗ ಭಾರತ', 'ತತ್ತ್ವಚೌಪದ', 'ನಾರಾಯಣಾಕ್ಷರ ಮಾಲಿಕಾ' ಎಂಬ ಗ್ರಂಥಗಳ ಕರ್ತೃ. 'ತತ್ತ್ವಚೌಪದ' ಇವನ ಪ್ರಥಮ ಕೃತಿಯಾಗಿದ್ದು, ಇದರಲ್ಲಿ ಒಟ್ಟು ೫೪ ಪದ್ಯಗಳಿದ್ದು, ಅದ್ವೈತ ಮತವನ್ನು ಪ್ರತಿಪಾದಿಸಲಾಗಿದೆ. 'ತುರಂಗ ಭಾರತ' ಕೃತಿಯನ್ನು ವಾರ್ಧಕ ಷಟ್ಪದಿಯಲ್ಲಿ ರಚಿಸಿದ್ದಾನೆ. ಇದರಲ್ಲಿ ೯೬ ಸಂಧಿ, ೪೭೨೦ ಪದ್ಯಗಳಿವೆ. ಇದು ಮಹಾಕಾವ್ಯವಾಗಿದ್ದು, ಇದರಲ್ಲಿ ಭಾರತ ಕಥೆಯನ್ನು ಸಂಕ್ಷೇಪವಾಗಿ ಎಲ್ಲರಿಗೂ ತಿಳಿಯುವಂತೆ ಹೇಳುವುದು ತನ್ನ ಉದ್ದೇಶವೆಂದಿದ್ದಾನೆ. ಕಾವ್ಯವು ಕೋಣಿ ಲಕ್ಷ್ಮೀರಮಣದೇವರ ಅಂಕಿತದಲ್ಲಿದೆ. ಇದನ್ನು ಕವಿ ೧೭೭೭ರಲ್ಲಿ ಬರೆದಂತೆ ತಿಳಿಯುತ್ತದೆ. 'ನಾರಾಯಣಾಕ್ಷರ ಮಾಲಿಕಾ' ಕೃತಿ ಉಪಲಬ್ಧವಿಲ್ಲ. ಜೈನಕವಿ ಪದ್ಮನಾಭ (ಸು. ೧೬೮೦) 'ಪದ್ಮಾವತೀ ಚರಿತ್ರೆ' ಎಂಬ ಗ್ರಂಥದ ಕರ್ತೃ. ಕವಿಯು ತುಳುವ

ದೇಶದ ಚೂಲಿಕಾ ಪಟ್ಟಣದ ಅರಸು ತಿರುಮಲ ಸಾಮಂತರಲ್ಲಿ ಕೋಶಾಧ್ಯಕ್ಷನಾಗಿದ್ದುದಾಗಿ ಹೇಳಿಕೊಂಡಿದ್ದಾನೆ. ಪದ್ಮಾವತೀ ಚರಿತ್ರೆ, ಸಾಂಗತ್ಯದಲ್ಲಿದೆ. ಇದರಲ್ಲಿ ೧೨ ಸಂಧಿಗಳೂ ೧೬೦೦ ಪದ್ಯಗಳೂ ಇವೆ. ಇದನ್ನು ಜಿನದತ್ತರಾಯ ಚರಿತೆ, ಅಮ್ಮನವರ ಚರಿತೆ ಎಂದು ಕವಿ ಸಂಬೋಧಿಸಿದ್ದಾನೆ. ೨೩ನೆಯ ತೀರ್ಥಂಕರ ಪಾರ್ಶ್ವನಾಥನ ಧರ್ಮಬೋಧೆಯ ಫಲವಾಗಿ ಶುದ್ಧಜ್ಞಾನದಿಂದ ಮುಡುಪಿದ ಸರ್ಪಯುಗಗಳು ನಾಗಲೋಕದ ಧರಣೇಂದ್ರ ಪದ್ಮಾವತಿಯರೆಂಬ ಯಕ್ಷ–ಯಕ್ಷಿಯರಾಗುತ್ತಾರೆ. ಈ ಪದ್ಮಾವತಿಯ ಮಹಿಮೆಯನ್ನು ಕುರಿತ ಕೃತಿಯೇ ಪದ್ಮಾವತೀ ಚರಿತ್ರೆ. ಕವಿ ಸಾಂಪ್ರದಾಯಿಕವಾದ ಅಷ್ಟಾದಶವರ್ಣನೆಗಳನ್ನು ಅಳವಡಿಸಿಕೊಂಡಿದ್ದಾನೆ. ಪದ್ಮಾವತೀ ಚರಿತ್ರೆ ಜೈನಕಾವ್ಯವಾದರೂ ಭವಾವಳಿಯ ತೊಡರಿಲ್ಲ.

ಆಡುಹಳ್ಳಿ ಅಥವಾ ಅಜಪುರದ ಸುಬ್ರಹ್ಮಣ್ಯ ಕವಿ ಹನುಮದ್ರಾಮಾಯಣವನ್ನು ಕಂದಪದ್ಯದಲ್ಲಿ ರಚಿಸಿದ್ದಾನೆ. ಈ ಶತಮಾನದ ಆದಿಭಾಗದಲ್ಲಿ ಪಂಡಿತ ಮುನ್ನಾರ ಶಿವರಾಮಯ್ಯನವರು ಇದನ್ನು ಪರಿಶೋಧಿಸಿ ಪ್ರಕಟಿಸಿದರು. ಈ ಕವಿಯು ಶ್ರೀ ಕೃಷ್ಣ ಪಾರಿಜಾತ ಮತ್ತು ರುಕ್ಮಿಣೀ ಸ್ವಯಂವರ ಎಂಬ ಎರಡು ಯಕ್ಷಗಾನ ಪ್ರಸಂಗಗಳನ್ನು ಬರೆದವನು. ಇವನು ಕೆಳದಿ ರಾಜನ ಆಸ್ಥಾನ ಕವಿಯಾಗಿದ್ದನೆಂದು ತಿಳಿದುಬರುತ್ತದೆ.

**ದಾಸ ಸಾಹಿತ್ಯ**

ಉಡುಪಿ ಜಿಲ್ಲೆಯು ದಾಸಸಾಹಿತ್ಯಕ್ಕೂ ವಿಶಿಷ್ಟ ಕೊಡುಗೆಯನ್ನಿತ್ತಿದೆ. ಹರಿದಾಸ ಸಾಹಿತ್ಯಕ್ಕೆ ಪ್ರಾರಂಭದ ಹಂತದಲ್ಲಿ ಸ್ಪಷ್ಟ ಸ್ವರೂಪ ತಂದಕೊಟ್ಟ ಪ್ರಮುಖರಲ್ಲಿ ವಾದಿರಾಜರೂ ಒಬ್ಬರು. ಕುಂದಾಪುರ ತಾಲೂಕಿನ ಕುಂಭಾಸಿ ಬಳಿಯಿರುವ ಹೂವಿನಕೆರೆ, ವಾದಿರಾಜರ ಜನ್ಮಸ್ಥಳ. ಶಿವಳ್ಳಿಬ್ರಾಹ್ಮಣ ಮನೆತನದಲ್ಲಿ ಕ್ರಿ. ಶ. ೧೪೮೦ರಂದು ಜನಿಸಿದರು. ಇವರ ಹುಟ್ಟು ಹೆಸರು ವರಾಹ. ಇವರಿಗೆ, ವಾಗೀಶತೀರ್ಥರು ಎಂಟು ವರ್ಷಕ್ಕೆ ಸನ್ಯಾಸ ದೀಕ್ಷೆ ನೀಡಿ ವಾದಿರಾಜರೆಂದು ಕರೆದುದಾಗಿ ತಿಳಿದುಬರುತ್ತದೆ. ವಾಗೀಶತೀರ್ಥರು, ವಿದ್ಯಾನಿಧಿ ತೀರ್ಥರು ಮತ್ತು ವ್ಯಾಸರಾಯರಲ್ಲಿ ವಿದ್ಯಾರ್ಜನೆ ಮಾಡಿ, ಬಳಿಕ ಸೋದೆ ಮಠದಲ್ಲಿ ಇಪ್ಪತ್ತನೆಯ ಪೀಠಾಧಿಪತಿಯಾದರು. ವಾದಿರಾಜರು ಸಂಸ್ಕೃತದಲ್ಲಿ ಸುಮಾರು ೨೦ ಗ್ರಂಥಗಳನ್ನು ರಚಿಸಿರುವರು. ಇವರು ತಾವು ಸಂದರ್ಶಿಸಿದ ತೀರ್ಥಕ್ಷೇತ್ರಗಳ ಬಗ್ಗೆ ಅಲ್ಲಿಯ ದೇವತಾ ಮೂರ್ತಿಗಳನ್ನು ಕುರಿತಂತೆ ವಿವರವಾದ ಮಾಹಿತಿಯನ್ನು ಸಂಗ್ರಹಿಸಿ ತೀರ್ಥಪ್ರಬಂಧವೆಂಬ ಪ್ರಥಮ ಪ್ರವಾಸಿ ಕಥನವನ್ನು ಸಂಸ್ಕೃತ ಭಾಷೆಯಲ್ಲಿ ರಚಿಸಿದ್ದಾರೆ. ವೇದವ್ಯಾಸ ವಿರಚಿತ ಮಹಾಭಾರತದಲ್ಲಿಯ ಒಂದು ಲಕ್ಷ ಕಠಿಣಶಬ್ದಗಳಿಗೆ ವಿವರವಿತ್ತು, ಮಹಾಭಾರತ ಲಕ್ಷಾಲಂಕಾರ ಎಂಬ ಪ್ರೌಢ ವ್ಯಾಖ್ಯಾನ ರಚಿಸಿದರು. ಬೌದ್ಧ ಮತ್ತು ಜೈನ ತತ್ವಗಳ ನಿರಾಕರಣೆಯಿರುವ ಪಾಷಂಡ ಮತಖಂಡನಂ, ಅದ್ವೈತ ತತ್ವ ನಿರಾಕರಣ ಗ್ರಂಥ, ಸ್ವಪ್ನವೃಂದಾವನಾ ವ್ಯಾಖ್ಯಾನ (ಸುಪ್ತ ಹಾಗೂ ಜಾಗೃತ ಚೇತನಗಳ ಸಂವಾದ), ಯುಕ್ತಿ ಮಾಲಿಕಾ ಹಾಗೂ ನ್ಯಾಯರತ್ನಾವಲಿ, ಮಾಘನ ಶಿಶುಪಾಲ ವಧೆಗೆ ಪ್ರತಿಯಾಗಿ ರುಕ್ಮಿಣೀಶ ವಿಜಯವೆಂಬ ನವರಸಭರಿತ ಕಾವ್ಯ ರಚನೆ ಮಾಡಿ ವಿದ್ವಜ್ಜನರ ಮೆಚ್ಚುಗೆ ಗಳಿಸಿದ್ದರು. ಸಂಸ್ಕೃತ–ಕನ್ನಡ ಭಾಷೆಗಳೆರಡರಲ್ಲೂ ಪ್ರಕಾಂಡ ಪಂಡಿತರಾಗಿದ್ದ ವಾದಿರಾಜರು, ತುಳುವಿನಲ್ಲಿ ದಶಾವತಾರ ಸ್ತೋತ್ರ ರಚಿಸಿ ಹಾಡಿದ್ದಾರೆ. ಸರಸ ಭಾರತೀ ವಿಲಾಸ, ದ್ವೈತ ಸಿದ್ಧಾಂತವನ್ನು ಸುಲಲಿತವಾಗಿ ತಿಳಿಸಿಕೊಡುವ ಗ್ರಂಥ. ಸುಮಾರು ಹನ್ನೆರಡು ಮೂಲಕೃತಿಗಳನ್ನು ಬಿಟ್ಟರೆ, ಗುರ್ವರ್ಥದೀಪಿಕಾ, ತಾತ್ಪರ್ಯ ನಿರ್ಣಯ ಟೀಕಾ, ಶ್ರುತ್ಯರ್ಥ ಪ್ರಕಾಶಿಕೆ ಮೊದಲಾದವು ಇತರರ ಮಾಧ್ವತತ್ವಗ್ರಂಥಗಳಿಗೆ ವಾದಿರಾಜರು ಬರೆದಿರುವ ವ್ಯಾಖ್ಯಾನಗಳಾಗಿವೆ. ವೈಜ್ಞಾನಿಕ ವಿಶ್ಲೇಷಣೆಯನ್ನೊಳಗೊಂಡ ಭೂಗೋಳ ವರ್ಣನೆ ಇವರು ರಚಿಸಿದ ಮತ್ತೊಂದು ಪ್ರೌಢಕೃತಿಯೆಂದು ಪರಿಗಣಿತವಾಗಿದೆ.

ವಾದಿರಾಜರು ಕನ್ನಡದಲ್ಲೂ ತಮ್ಮ ಇಷ್ಟದೈವ ಹಯವದನನ ಅಂಕಿತದಲ್ಲಿ ಉಗಾಭೋಗ, ಸುಳಾದಿ ಒಳಗೊಂಡಂತೆ ನೂರಾರು ಕೀರ್ತನೆಗಳನ್ನು (ದೀರ್ಘ ಕೀರ್ತನೆಗಳೂ ಸೇರಿದಂತೆ) ರಚಿಸಿರುವರು. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಪ್ರಕಟಿಸಿರುವ ಸಮಗ್ರ ದಾಸಸಾಹಿತ್ಯದ ಸಂಪುಟಗಳಲ್ಲಿ ವಾದಿರಾಜರ ೩೪೨ ಕೀರ್ತನೆಗಳನ್ನು ನೀಡಲಾಗಿದೆ. ವೈಕುಂಠ ವರ್ಣನೆ, ಸರ್ವೋತ್ತಮಸಾರ, ಲಕ್ಷ್ಮೀ ಶೋಭಾನೆ, ಸ್ವಪ್ನಪದ ಕೇಶವನಾಮ, ಕೀಚಕ ವಧೆ, ಗುಂಡಕ್ರಿಯೆ ಇತ್ಯಾದಿ ಹರಿದಾಸ ಪರಂಪರೆಗೆ ಸೇರಿದ ಕೃತಿಗಳಾಗಿವೆ.

ವಿಶ್ವೇಂದ್ರ ತೀರ್ಥರು ಸೋದೆಮಠದ ವಾದಿರಾಜರ ಪರಂಪರೆಯಲ್ಲಿ ಬಂದವರು. ಕನ್ನಡ ಮತ್ತು ತುಳು ಭಾಷೆಗಳಲ್ಲಿ ಕೀರ್ತನೆಗಳನ್ನು ರಚಿಸಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಸಮಗ್ರ ದಾಸ ಸಾಹಿತ್ಯ ಸಂಪುಟಗಳಲ್ಲಿ ಇವರ ೪೫ ಕೀರ್ತನೆಗಳನ್ನು ಪ್ರಕಟಿಸಲಾಗಿದೆ.

ವರಾಹತಿಮ್ಮಪ್ಪ ಅಂಕಿತದ ದಾಸರ ಹೆಸರು ನೆಕ್ಕಾರು ಕೃಷ್ಣದಾಸ ಎಂಬುದಾಗಿ ಅವರ ಲಕ್ಷ್ಮೀಕಲ್ಯಾಣ ಕೃತಿಯಲ್ಲಿ ಉಕ್ತವಾಗಿದೆ. ಕವಿಚರಿತಕಾರರ ಪ್ರಕಾರ ಇವರ ಒಂದು ಕೀರ್ತನೆಯಲ್ಲಿ ನವಾಬ ಮತ್ತು ಪ್ರಮಥಿ ಸಂವತ್ಸರದ ಪ್ರಸ್ತಾಪ ಇರುವುದರಿಂದ ಇವರ ಕಾಲ ೧೭೫೯ ಅಥವಾ ೧೭೬೩. ಆ ಕೀರ್ತನೆ ಲಭ್ಯವಿರುವುದಿಲ್ಲ. ಗ್ರಂಥಕರ್ತರ ಚರಿತ್ರೆಕೋಶದಲ್ಲಿ ಇವರ ಮೂಲ ಸ್ಥಳ ಉಡುಪಿಯ ಹತ್ತಿರದ ಒಂದು ಊರು ಎಂದು ಉಲ್ಲೇಖಗೊಂಡಿದೆ. ಇವರ ಕೃತಿಗಳು ಲಕ್ಷ್ಮೀಕಲ್ಯಾಣ, ಉಡುಪಿಯ ಶ್ರೀ ಕೃಷ್ಣ ಚರಿತ್ರೆ ಎಂಬ ನಾಲ್ಕು ಸಂಧಿಗಳ ಕಾವ್ಯವೆಂದು ತಿಳಿದುಬರುತ್ತದೆ. ಅವರ ೭೦ ಹಾಡುಗಳನ್ನು ಮೊಗ್ಲಿಂಗ್ ಸಂಪಾದಿತ ದಾಸರ ಪದಗಳು (ಎರಡನೆಯ ಆವೃತ್ತಿ ೧೮೫೨) ಇದರಿಂದ ತೆಗೆದುಕೊಳ್ಳಲಾಗಿದೆಯೆಂದು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ಪ್ರಕಟಿಸಿದ ಸಮಗ್ರ ದಾಸ ಸಾಹಿತ್ಯ ಸಂಪುಟ–೨೪ರಲ್ಲಿ ತಿಳಿಸಲಾಗಿದೆ.

ಉಡುಪಿಯ ಶ್ರೀಕೃಷ್ಣ ಚರಿತ್ರೆಯನ್ನು ಪಾವಂಜೆ ಗುರುರಾಯರು ೧೯೧೭ರಲ್ಲಿ ಪ್ರಕಟ ಮಾಡಿದರು. ನಾಲ್ಕು ಸಂಧಿಗಳಿರುವ ಈ ಕೃತಿಯು ಸಾಂಗತ್ಯದಲ್ಲಿದ್ದು, ಪಾವಂಜೆಯವರು ಇದನ್ನು ದಂಡಾಕಾರ ವೃತ್ತ ಎಂದು ಕರೆದುದಾಗಿ ತಿಳಿದುಬರುತ್ತದೆ. ಈ ಕಾವ್ಯದಲ್ಲಿ ಉಡುಪಿಯ ಶ್ರೀಕೃಷ್ಣನ ವಿವಿಧ ಪೂಜಾ ವಿಶೇಷತೆಗಳನ್ನೂ ವಿವಿಧ ಆರೋಗಣೆಗಳನ್ನೂ ವರ್ಣಿಸಲಾಗಿದೆ.

ಬೆಳ್ಳೆ ದಾಸಪ್ಪಯ್ಯ ೩೧–೮–೧೮೭೭ರಲ್ಲಿ ಜನಿಸಿದರು (೧೮೭೬ ಎಂದೂ ಕೆಲವರು ಹೇಳುತ್ತಾರೆ). ಬೆಳ್ಳೆ ಗ್ರಾಮದವರಾದ ಇವರು ಕುಲದೇವರಾದ ಕುಮಾರಸ್ವಾಮಿಯನ್ನು ಕುರಿತು ಪದ್ಯಗಳನ್ನು ರಚಿಸಿ ಹಾಡುತ್ತಿದ್ದುದ್ದಾಗಿ ತಿಳಿದುಬರುತ್ತದೆ. ದಾಸಪ್ಪಯ್ಯ ಚಿತ್ತೂರು ಪದ್ಮಿನಿಯ ಕತೆಯನ್ನು ಯಕ್ಷಗಾನ ಪ್ರಸಂಗ ರೂಪದಲ್ಲಿ ರಚಿಸಿದ್ದು, ಇದು ೭೮೬ ಪದ್ಯಗಳನ್ನು ಒಳಗೊಂಡಿದೆ. ಇವರ ಹಾಡುಗಳಲ್ಲಿ ಪಾವಂಜೇಶ, ಪಾವಂಜೆಪುರದೀಶದಾಸ ಎಂಬಂತಹ ಅಂಕಿತವಿದೆ. ದಾಸಪ್ಪಯ್ಯ ೧೯೫೬ರಲ್ಲಿ ನಿಧನರಾದರು. ಇವರ ಭಜನಾ ಸಂಗ್ರಹವೊಂದನ್ನು ಅವರ ಮಗ ಭುಜಂಗರಾಯ ೧೯೬೨ರಲ್ಲಿ 'ಭಜನೆಯ ಹಾಡುಗಳು' ಎಂಬ ಹೆಸರಿನಿಂದ ಪ್ರಕಟಿಸಿದ್ದಾರೆ.

ಗೋವಿಂದದಾಸರು ೧೯೦೨ರಲ್ಲಿ ಉಡುಪಿ ತಾಲೂಕು ಕೊಕ್ಕರ್ಣೆ ಸಮೀಪದ ಮೈರ್ಮಾಡಿ ಎಂಬಲ್ಲಿ ಜನಿಸಿದರು. ಇವರು ತಾಳಮದ್ದಳೆಯ ಕೂಟಗಳಲ್ಲಿ ಭಾಗವತರಾಗಿಯೂ, ಅರ್ಥಧಾರಿಯಾಗಿಯೂ ಭಾಗವಹಿಸುತ್ತಿದ್ದರು. ಕನ್ನಡ ಮತ್ತು ತುಳು ಭಾಷೆಗಳಲ್ಲಿ ಇವರ ಹಾಡುಗಳು ಜನಪ್ರಿಯವಾಗಿತ್ತೆಂದೂ, ಮಿತಾಕ್ಷರಿ ಭಾಷೆಯಲ್ಲೂ ಒಂದೆರಡು ಹಾಡುಗಳಿದ್ದುದಾಗಿ ತಿಳಿದುಬರುತ್ತದೆ. ಕೆಲವು ಹಾಡುಗಳನ್ನು ಬೇರೆಯವರಿಂದ ಬರೆಸಿದ್ದಾಗಿಯೂ ೧೯೫೯ರಲ್ಲಿ ನಿಧನರಾದರೆಂದು ತಿಳಿದುಬರುತ್ತದೆ. ಗೋವಿಂದದಾಸರ ಕೀರ್ತನೆಗಳ ಹೆಸರಿನಲ್ಲಿ ಮೂರು ಭಾಗಗಳಲ್ಲಿ ಕೃತಿಗಳು ಪ್ರಕಟವಾಗಿವೆ.

ರಘುವರ್ಯತೀರ್ಥರು ಪಲಿಮಾರು ಮಠದ ೨೦ನೆಯ ಪೀಠಸ್ಥರು. ಕೆಲವು ಸಂಸ್ಕೃತ ಕೃತಿಗಳನ್ನು ರಚಿಸಿದ್ದಾರೆ. ಇವರ ಎರಡು ಹಾಡನ್ನು ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ ಪ್ರಕಟಿಸಿದ ಸಮಗ್ರ ದಾಸ ಸಾಹಿತ್ಯ ಸಂಪುಟದಲ್ಲಿ ಪ್ರಕಟಿಸಲಾಗಿದೆ. ಈವರೆಗೆ ಲಭ್ಯ ದಾಖಲೆಯಂತೆ ದಾಸಸಾಹಿತ್ಯಕ್ಕೆ ಇವು ಉಡುಪಿ ಜಿಲ್ಲೆಯ ಕೊಡುಗೆಯಾಗಿದೆ.

## ಹೊಸಗನ್ನಡ ಸಾಹಿತ್ಯ

ಹೊಸಗನ್ನಡ ಸಾಹಿತ್ಯದ ಮುಂಗೋಳಿ ಎನಿಸಿದ ಲಕ್ಷ್ಮಿನಾರಾಯಣಪ್ಪನು (೧೮೬೯–೧೯೦೧) ಕಾರ್ಕಳ ಸಮೀಪದ ನಂದಳಿಕೆಯಲ್ಲಿ ಹುಟ್ಟಿದರೂ ಅವನ ಕಾರ್ಯಕ್ಷೇತ್ರ ಉಡುಪಿಯೇ ಆಗಿದೆ. ಮುದ್ದಣ

ಎಂಬ ಕಾವ್ಯನಾಮದಿಂದ ಗ್ರಂಥ ರಚನೆ ಮಾಡಿ, ಪ್ರಾಚೀನ ಕನ್ನಡ ಸಾಹಿತ್ಯಕ್ಕೂ ಆಧುನಿಕ ಕನ್ನಡ ಸಾಹಿತ್ಯಕ್ಕೂ ಸೇತುವೆಯನ್ನು ನಿರ್ಮಿಸಿದನು. ಈತನು 'ಅದ್ಭುತ ರಾಮಾಯಣ', 'ಶ್ರೀ ರಾಮಪಟ್ಟಾಭಿಷೇಕ', 'ಶ್ರೀ ರಾಮಾಶ್ವಮೇಧಂ' ಎಂಬ ಕಾವ್ಯಗಳನ್ನು 'ರತ್ನಾವತೀಕಲ್ಯಾಣ', 'ಕುಮಾರ ವಿಜಯ' ಎಂಬ ಯಕ್ಷಗಾನ ಪ್ರಸಂಗಗಳನ್ನು ರಚಿಸಿದ್ದಾನೆ. ರಾಮಾಶ್ವಮೇಧ ಗದ್ಯಕಾವ್ಯದ ಮುದ್ದಣ ಮನೋರಮೆಯರ ಸಂವಾದ ವಿನೂತನವಾಗಿದೆ. ಕನ್ನಡ ಸಾಹಿತ್ಯದಲ್ಲಿ ಇಂಥ ಕಥನ ತಂತ್ರ ಮೊಟ್ಟಮೊದಲನೆಯದಾಗಿದೆ. ಶ್ರೀರಾಮ ಪಟ್ಟಾಭಿಷೇಕಂ ಎಂಬ ಕೃತಿಯು ವಾರ್ಧಕ ಷಟ್ಪದಿಯಲ್ಲಿ ರಚಿತವಾಗಿದ್ದು, ರಾವಣಾದಿಗಳ ಸಂಹಾರ ಮಾಡಿ ಶ್ರೀರಾಮ ಅಯೋಧ್ಯೆಗೆ ಮರಳಿ ಪಟ್ಟಾಭಿಷಿಕ್ತನಾಗುವ ತನಕ ಕಾವ್ಯದ ವಸ್ತು ಹೊಂದಿದೆ. 'ಅದ್ಭುತ ರಾಮಾಯಣ' ಶಾಕ್ತ ಸಂಪ್ರದಾಯದ ಇದೇ ಹೆಸರಿನ ಸಂಸ್ಕೃತ ಕೃತಿಯ ಆಧಾರದಿಂದ ರಚಿತವಾದ ಗದ್ಯ ಗ್ರಂಥ. ಪ್ರಾಚೀನ ಸಾಹಿತ್ಯದ ಒಟ್ಟು ಸ್ವರೂಪವನ್ನು ಹೊಸಕಾಲದ ಹೊಳಪನ್ನು ಮುದ್ದಣನ ಕೃತಿಗಳಲ್ಲಿ ಕಾಣಬಹುದಾಗಿದೆ. ಇವನ ಶ್ರೀ ರಾಮಾಶ್ವಮೇಧ ಗ್ರಂಥದಲ್ಲಿ ಇಂತಹ ಹೊಸಕಾಲದ ಹೊಳಪನ್ನು ಕಾಣಬಹುದಾದ್ದರಿಂದ ಇವನನ್ನು ಹೊಸಗನ್ನಡ ಸಾಹಿತ್ಯದ ಮೊದಲ ಕವಿಯೆಂದು ಪರಿಗಣಿಸಲಾಗಿದೆ.

ಗುಲ್ವಾಡಿ ವೆಂಕಟರಾಯರು (೧೮೪೪–೧೯೧೩) ಕನ್ನಡದ ಮೊದಲ ಕಾದಂಬರಿಕಾರರು. ಕನ್ನಡ ಭಾಷೆಯಲ್ಲಿ ಬಂಗಾಲಿ ಭಾಷೆಯ ಭಾಷಾಂತರಗಳು ಬರುವುದಕ್ಕೆ ಮುಂಚಿತವಾಗಿ ಹುಟ್ಟಿದ ಪ್ರಥಮ ಸ್ವತಂತ್ರ ಸಾಮಾಜಿಕ ಕಾದಂಬರಿ ಇಂದಿರಾಬಾಯಿ ಇಲ್ಲವೇ ಸದ್ಧರ್ಮ ವಿಜಯವು. ಹೀಗಾಗಿ ಕನ್ನಡ ಕಾದಂಬರಿಗಳ ಇತಿಹಾಸದಲ್ಲಿ ಗುಲ್ವಾಡಿ ವೆಂಕಟರಾಯರ ಕೃತಿ ಒಂದು ಮೈಲಿಗಲ್ಲು. ಪೊಲೀಸು ಇಲಾಖೆಯಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದ ವೆಂಕಟರಾಯರು ನಿವೃತ್ತಿಯ ನಂತರ ಮಿತ್ರೋದಯ ಪತ್ರಿಕೆಯನ್ನು ಸ್ವಲ್ಪಕಾಲ ನಡೆಸಿದ್ದರು. ೧೮೯೯ರಲ್ಲಿ ಮುದ್ರಣಗೊಂಡ ಲಾಡು ಪ್ರಿಯಾಚಾರ್ಯ, ವೇಣಮ್ಮ–ನಾಗಮ್ಮರ ಸಂವಾದ (ಲಘು ಬರಹ), ಸೀಮಂತಿನಿ ಮತ್ತು ಭಾಗೀರಥಿ (ಕಾದಂಬರಿಗಳು), ಅವರ ಇನ್ನಿತರ ಕೃತಿಗಳಾಗಿವೆ. ಒಂದು ಶತಮಾನದ ಹಿಂದಿನ ದಕ್ಷಿಣ ಕನ್ನಡದ ಸಾರಸ್ವತ ಸಮಾಜದ ಚಿತ್ರಣವನ್ನು ಕಟ್ಟಿಕೊಡುವ ಇಂದಿರಾಬಾಯಿ ಕಾದಂಬರಿಯು ೨೫೦ ಪುಟಗಳಷ್ಟಿದ್ದು, ಸ್ತ್ರೀ–ಶಿಕ್ಷಣದ ಉಪಯುಕ್ತತೆ, ಸಮುದ್ರಯಾನ, ವಿಧವಾ ವಿವಾಹ ಮುಂತಾದ ಸುಧಾರಣಾ ವಿಚಾರಗಳು ಈ ಕಾದಂಬರಿಯಲ್ಲಿ ಪ್ರತಿಪಾದಿತವಾಗಿವೆ. ಸಾಮಾಜಿಕ ಮಹತ್ವವುಳ್ಳ ಈ ಕಾದಂಬರಿಯನ್ನು ಆ ಕಾಲಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಕಲೆಕ್ಟರರಾಗಿದ್ದ ಕೌಚ್‌ಮನ್ ಇಂಗ್ಲಿಷಿಗೆ ಅನುವಾದಿಸಿದ್ದುದು ಗಮನಾರ್ಹ ಸಂಗತಿ. ಗುಲ್ವಾಡಿ ವೆಂಕಟರಾವ್ ಸ್ಮಾರಕ ಕೇಂದ್ರವೊಂದು ಮಣಿಪಾಲಿನಲ್ಲಿ ರೂಪುಗೊಂಡು, ಪ್ರತಿವರ್ಷ ಶ್ರೇಷ್ಠ ಕಾದಂಬರಿಕಾರ ಪ್ರಶಸ್ತಿ ನೀಡಿದ್ದಿದೆ. ೧೯೯೮–೧೯೯೯ರಲ್ಲಿ ಕನ್ನಡ ಕಾದಂಬರಿ ಶತಮಾನೋತ್ಸವವನ್ನು ಆಚರಿಸಲಾಯಿತು.

ಪ್ರಸಿದ್ಧ ಕಾದಂಬರಿಕಾರ ಐರೋಡಿ ಶಿವರಾಮಯ್ಯನವರು (ಜ. ೧೮೭೬) ಶಿವರಾಮ ಕಾರಂತರಿಗೆ ಉಪಾಧ್ಯಾಯರಾಗಿದ್ದರು. ಆರ್ಯನೀತಿ ಕತೆಗಳು, ನೈಷಧೀಯ ಚರಿತೆ (ಕನ್ನಡ ರೂಪಾಂತರ), ಕನ್ನಡ ಲಘು ವ್ಯಾಕರಣ, ಸದುಪದೇಶ (ನಾರಾಯಣ ಪಂಡಿತನ ಹಿತೋಪದೇಶದ ಆಧಾರದ ಮೇಲೆ ಬರೆದ ಗ್ರಂಥ), ಕಾದಂಬರಿ ಕಥಾಸಾರ (ಬಾಣಭಟ್ಟನ ಕಾದಂಬರಿಯ ಕನ್ನಡ ರೂಪಾಂತರ) ಮುಂತಾದ ಪುಸ್ತಕಗಳನ್ನು ರಚಿಸಿದ್ದಾರೆ. ಚಿಲಿಮಿಲಿ ಇಲಿ, ಅಜ್ಜಿಯ ಅವಸ್ಥೆ, ಚಿಣಿಮಿಣಿ ಚಿಟ್ಟೆ ಮುಂತಾದ ಮಕ್ಕಳ ಸಾಹಿತ್ಯ ಕೃತಿಗಳು, ಹಲವಾರು ಪಠ್ಯ ಪುಸ್ತಕಗಳು ಮತ್ತು ಪುರಾಣ–ಇತಿಹಾಸ–ಧರ್ಮ– ರಾಜನೀತಿಗಳಿಗೆ ಸಂಬಂಧಿಸಿದ ಹಲವಾರು ಬರಹಗಳು ಪ್ರಕಟಗೊಂಡಿವೆ. ವಕೀಲರಾಗಿದ್ದ ಗುಲ್ವಾಡಿ ಅಣ್ಣಾಜಿರಾಯರು (೧೮೭೯) ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಸಾಹಿತ್ಯ ರಚಿಸಿದ್ದಾರೆ. ಅವರ ರೋಹಿಣಿ ಇಲ್ಲವೆ ಸಾರಸ್ವತ ಮಂಡಳ ೧೮೯೯ರಲ್ಲಿ ರಚಿತವಾಗಿ ೧೯೦೬ರಲ್ಲಿ ಮುದ್ರಣವನ್ನು ಕಂಡಿತು. ಪಾತ್ರಗಳು ತಂತಮ್ಮ ಕತೆಗಳನ್ನು ಹೇಳುವ ತಂತ್ರವು ಕನ್ನಡದಲ್ಲಿ ಈ ಕಾದಂಬರಿಯಿಂದ ಆರಂಭಗೊಂಡಿತು. ಇದು ಕನ್ನಡದ ಆರಂಭಕಾಲದ ಸ್ವತಂತ್ರ ಸಾಮಾಜಿಕ ಕಾದಂಬರಿಗಳ ಗುಂಪಿಗೆ ಸೇರುತ್ತದೆ. ದಶಮಗ್ರಹ, ನಗೆಗಡಲು ಅವರ ಇನ್ನಿತರ ಕೃತಿಗಳು ಫೋಕ್ ಸಾಂಗ್ಸ್ ಆಫ್ ಕೆನರಾ, ಮೈಗಾಡ್ ಗಣೇಶ್–ಇವು ಅವರ ಆಂಗ್ಲ ಕೃತಿಗಳು.

ಆಧುನಿಕ ಕನ್ನಡ ಸಾಹಿತ್ಯದ ಆದ್ಯರಲ್ಲಿ ಮುಂಡ್ಕೂರು ನರಸಿಂಹ ಕಾಮತ್ (ಎಂ.ಎನ್.ಕಾಮತ್) (೧೮೮೩–೧೯೪೧) ಒಬ್ಬರಾಗಿದ್ದಾರೆ. ೧೮೯೯ರಲ್ಲಿ ವಿದ್ಯಾರ್ಥಿ ದೆಸೆಯಲ್ಲಿಯೇ ಏಂಜಲ್ ಎಂಬ ಇಂಗ್ಲಿಷ್ ಕೈಬರಹದ ಪತ್ರಿಕೆಯನ್ನು ತಂದರು. ಆನಂದ ಎಂಬ ಪತ್ರಿಕೆಯನ್ನು ಕೆಲವು ವರ್ಷ ನಡೆಸಿದರು. ೧೯೪೦ರಲ್ಲಿ ಬೆಂಗಳೂರಿನಲ್ಲಿ ನಡೆದ ಕನ್ನಡ ಸಣ್ಣ ಕತೆಗಾರರ ಸಮ್ಮೇಳನದ ಅಧ್ಯಕ್ಷತೆಯ ಗೌರವ ಲಭಿಸಿತ್ತು. ೧೯೪೧ರ ಏಪ್ರಿಲ್ ೨೪ರಂದು ನಿಧನರಾದರು. ಅಂದಿನ ಆವೂರ (೧೯೪೧) ಕಾಮತರ ಪ್ರಸಿದ್ಧ ಕಥಾಸಂಕಲನ, ಕುಮಾರ ಭೀಮಸಿಂಹ, ಪ್ರೇಮಪಿಪಾಸೆ, ಕನ್ಯಾಬಲಿ, ಕಮಲಕುಮಾರಿ - ಇವು ಕಾಮತರ ಇತರ ಕಾದಂಬರಿಗಳು. ತುಳುನಾಡ ರಾಣಿ, ಸಂತೆಯ ಕುರುಡನ ಹಾಡು, ಹೊಲೆಯನ ಹಂಬಲ, ಬಂಡಿಯೆದ್ದು, ಕಾಮತರ ಕೆಲವು ಮುಖ್ಯ ಕಾವ್ಯಕೃತಿಗಳು; ಕನ್ನಡ ಸಂಗೀತ ಚಂದ್ರಹಾಸಾಭ್ಯುದಯ (೧೯೧೪), ಅರ್ಜುನನ ಚಾತುರ್ಮಾಸ, ಕಿರ್ಲೋಸ್ಕರ ಅವರ ಮರಾಠಿ ನಾಟಕದ ರೂಪಾಂತರವಾದ ಸಂಗೀತ ಸೌಭದ್ರ, ಮೌರ್ಯಸಿಂಹಾಸನ, ಕ್ಷಾತ್ರತೇಜ, ಚಂದ್ರರಾವ್ ಮೋರೆ, ಪ್ರತಾಪಸಿಂಹ ಮತ್ತಿತರ ಐತಿಹಾಸಿಕ ನಾಟಕಗಳನ್ನು ಇವರು ಬರೆದಿದ್ದಾರೆ. ನದ್ರಿಸುಬ್ಬ, ಶಿಕ್ಷಣ ಪರೀಕ್ಷೆ, ನಮ್ಮ ನಾಟ್ಯಾಭಿನಯ, ಪಂಚಕನ್ಯೆಯರು, ಉದ್ಧಾರಾನಂದ ಇವು ಇಂಗ್ಲಿಷ್ ಏಕಾಂಕಗಳ ರೂಪಾಂತರಗಳು; ರವೀಂದ್ರನಾಥ ಠಾಗೋರ್ ಅವರ ನಾಟಕದ ಭಾಷಾಂತರ 'ಅಂಚೆಮನೆ'; ಅಲ್ಲದೆ, ಹಲವಾರು ಮಕ್ಕಳ ನಾಟಕಗಳು, ಮಕ್ಕಳ ಪದ್ಯಗಳು, ಹಾಸ್ಯಲೇಖನಗಳು ಮೊದಲಾದುವನ್ನೂ ಕಾಮತರು ಪ್ರಕಟಿಸಿದ್ದಾರೆ. ಲೀಲಾಭಟ್‌ರ ಸಂಪಾದಕತ್ವದಲ್ಲಿ ಕಾಮತರ ಸಮಗ್ರ ಸಾಹಿತ್ಯ ಐದು ಸಂಪುಟಗಳಲ್ಲಿ ಪ್ರಕಟವಾಗಿದೆ. "ಎಲ್ಲಿ ಮನಕಳುಕಿರದು" ರವೀಂದ್ರನಾಥ ಠಾಗೂರರ ಕವನದ ಅನುವಾದವಾಗಿದ್ದು, ಕೆಲವು ಶಾಲೆಗಳಲ್ಲಿ ಇಂದಿಗೂ ಪ್ರಾರ್ಥನಾ ಗೀತೆಯಾಗಿದೆ.

ಕನ್ನಡದ ಮೊದಲ ಕತೆಗಾರರಲ್ಲಿ ಒಬ್ಬರಾದ ಕೊರಡ್ಕಲ್ ಶ್ರೀನಿವಾಸರಾವ್ (೧೮೯೫–೧೯೪೬) ಅವರ 'ದನಿಯರ ಸತ್ಯನಾರಾಯಣ' ಕನ್ನಡದ ಶ್ರೇಷ್ಠ ಕತೆಗಳಲ್ಲಿ ಒಂದೆಂದು ಪರಿಗಣಿತವಾಗಿದೆ. ೨೧ ಕಥನ ಕವನಗಳನ್ನು ಹೊಂದಿದ್ದ ಪದ್ಯಾವಳಿ ಸಂಕಲನವು ಪಠ್ಯಪುಸ್ತಕವಾಗಿದ್ದಿತು. ಇದರಲ್ಲಿ ಚಾರಿತ್ರಿಕ ಕತೆಗಳು, ನೀತಿ ಕಥೆಗಳು ಮತ್ತು ಆರೋಗ್ಯ ಸಂದೇಶಗಳನ್ನು ಹಾಡಿನ ರೂಪದಲ್ಲಿ ಹೆಣೆಯಲಾಗಿದೆ. ಶಾಲಾ ಮಕ್ಕಳಿಂದಲೇ ತರಲಾಗುತ್ತಿದ್ದ ಶೈಕ್ಷಣಿಕ ಪತ್ರಿಕೆ ಬಾಲಾನಂದಂ, ಆರೋಗ್ಯ ಪ್ರತಾಪ–ನಾಟಕ ಕೃತಿ. ಈ ನಾಟಕಕ್ಕೆ ಎರಡು ಸ್ವರ್ಣ ಪದಕಗಳು ಲಭಿಸಿವೆ. ನಂದಾದೀಪ ಹನ್ನೊಂದು ಕತೆಗಳ ಸಂಕಲನ ಸವಿಗನ್ನಡ ಪುಸ್ತಕಮಾಲೆ ಮಕ್ಕಳಿಗಾಗಿ ರಚಿಸಲಾದ ಪುಸ್ತಕ, ಚಿಕ್ಕ ಕಥೆಗಳ ಸಂಗ್ರಹ– ಮೊದಲಾದವು ಇವರ ಕೃತಿಗಳು. ಧರ್ಮಸಂಕಟ, ಸುಶೀಲಾ ಸುಂದರ, ಮೂರು ಪ್ರಹಸನ, ರಂಗನ ಬುಡುಬುಡಿಕೆ, ವಶೀಕರಣ ಮುಂತಾದವು ಇವರ ಜನಪ್ರಿಯ ನಾಟಕಗಳಾಗಿವೆ.

ಕುಂದಾಪುರ ತಾಲೂಕಿನ ಪಡುಕೋಣೆ ರಮಾನಂದರಾಯರು (೧೮೯೬–೧೯೮೫) ಶಿವರಾಮ ಕಾರಂತರ ನಾಲ್ಕನೆ ಪಿಶಾಚಿ ನಾಟಕವನ್ನು ಇಂಗ್ಲಿಷಿಗೆ ಅನುವಾದಿಸಿದರು. ಆ್ಯಂಟನ್ ಚೆಕಾವ್‌ನ ಚೆರ್ರಿ ಆರ್ಚರ್ಡ್ಸ್ ನಾಟಕದ ಅನುವಾದ ಚೆರ್ರಿ ಹಣ್ಣಿನ ತೋಟ, ಎರಿಕ್ ಫಾನ್ ರಿಮಾರ್ಕನ ಪಶ್ಚಿಮ ರಣರಂಗದಲ್ಲಿ ಎಲ್ಲವೂ ಶಾಂತ (ಕಾದಂಬರಿ) ಅವರ ಉತ್ತಮ ಅನುವಾದಗಳಾಗಿವೆ. ಅವರ 'ಹುಚ್ಚು ಬೆಳದಿಂಗಳಿನ ಹೂಬಾಣಗಳು' ಕನ್ನಡದ ಅತ್ಯುತ್ತಮ ಹಾಸ್ಯ ಕೃತಿಗಳಲ್ಲಿ ಒಂದಾಗಿದೆ. ಲೆಬನೀಸ್ ಕವಿ ಮಿಖೈಲ್ ನಾಯಮಿಯ 'ಮಿರ್ದಾದ' ಎಂಬ ಕವನವನ್ನು ಆಧರಿಸಿ ಮಿರ್ದಾದ್ ಎಂಬ ಸರಳ ರಗಳೆಯ ಇಂಗ್ಲಿಷ್ ನಾಟಕ ರಚಿಸಿದ್ದಾರೆ. ಹಟ್ಟಿಯಂಗಡಿ ನಾರಾಯಣರಾಯರು ಮೊತ್ತಮೊದಲು ಆಂಗ್ಲ ಕವಿತೆಗಳ ಕನ್ನಡಾನುವಾದ (ಆಂಗ್ಲ ಕವಿತಾಸಾರ) ಮೂಲಕ ಕನ್ನಡದಲ್ಲಿ ನವೋದಯಕ್ಕೆ ನಾಂದಿ ಹಾಡಿದರು. ೧೯೧೯ರಲ್ಲಿ ಪ್ರಕಟವಾದ ಆಂಗ್ಲ ಕವಿತಾವಳಿಯಲ್ಲಿ ಅವರು ಅನುವಾದಕ್ಕೆ ಐದು ಬಗೆಯ ಛಂದೋರೂಪಗಳನ್ನು ಬಳಸಿದ್ದಾರೆ. ಕನ್ನಡ ಕಥಾನಕ ಎಂಬ ಕಿರುಹೊತ್ತಿಗೆಯಲ್ಲಿ ಕನ್ನಡ ನಿಷ್ಪತ್ತಿಯ ಬಗ್ಗೆ ವಿಶ್ಲೇಷಿಸಿದ್ದಾರೆ. ಕ್ಷತ್ರಿಯ ರಮಣಿ (ಐತಿಹಾಸಿಕ) ಕಥಾಂಜಲಿ, ಚಂಡಮಾರುತ(ಕಥೆ), ಬಿರುಸು, ಶ್ರೀಗಂಧ, ಅಂಧಶಿಲ್ಪ(ರೂಪಾಂತರಿತ ಕತೆಗಳು), ಸೂಜಿಗಲ್ಲು ಇವು ಪ್ರಮುಖ ಕೃತಿಗಳಾಗಿವೆ.

ಸಾಂತ್ಯಾರು ವೆಂಕಟರಾಜ(೧೯೧೩–೧೯೮೮) ನವೋದಯದ ಪ್ರಮುಖ ಕವಿಗಳಲ್ಲಿ ಒಬ್ಬರು. ಕನ್ನಡ ಮತ್ತು ಸಂಸ್ಕೃತಗಳಲ್ಲಿ ಕಾವ್ಯ ರಚನೆ ಮಾಡಿದವರು. ಸಂಗೀತ, ಹುಲಿಬೇಟೆ, ಜ್ಯೋತಿಷ್ಯ, ರತ್ನಪರೀಕ್ಷೆ ಮುಂತಾದ ವೈವಿಧ್ಯಮಯ ಆಸಕ್ತಿಯಿದ್ದ ವೆಂಕಟರಾಜರು ೧೯೬೩ ರಿಂದ ೭೦ ರವರೆಗೆ ವೀರಭೂಮಿ ಸಾಹಿತ್ಯ ಪತ್ರಿಕೆಯನ್ನು ಸಂಪಾದಿಸಿ ಪ್ರಕಟಿಸಿದ್ದರು. ಕವಿತಾ ಕಾಮಿನಿ ಭಾಗ–೧ ಮತ್ತು ಭಾಗ–೨, ಮಾನಸಗಂಗೆ, ಕಾವ್ಯ ಮನೋರಮಾ, ಪದ್ಮ ಸರೋವರ, ಮಾನಸಪುಷ್ಪ, ಚಿಂತಾಮಣೀ ಇವರ ಕವನಸಂಕಲನಗಳು. ಇವರು ಮೂರು ಕಾದಂಬರಿ, ನಾಲ್ಕು ನಾಟಕ, ಎರಡು ಕಥಾಸಂಕಲನಗಳನ್ನು ರಚಿಸಿದ್ದಾರೆ. ಅವರಿಗೆ ರಾಜ್ಯ ಸರ್ಕಾರದ ಬಹುಮಾನ ಲಭಿಸಿದೆ. ಕಾವ್ಯ ಮನೋರಮಾ ಎಂಬ ದ್ವಿಭಾಷಾ ಸಂಕಲನದಲ್ಲಿ ಸಂಸ್ಕೃತ ವೃತ್ತಗಳ ಜತೆಗೆ ಕನ್ನಡ ರೂಪಾಂತರವನ್ನು ನೀಡಿದ್ದಾರೆ.

ಬಿ.ಎಚ್. ಶ್ರೀಧರರು ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಬೈಂದೂರು ಗ್ರಾಮದ ಬವಲಾಡಿಯಲ್ಲಿ ೧೯೧೮ರಲ್ಲಿ ಜನಿಸಿದರು. ಅಜ್ಜಿ ಮಹಾಲಕ್ಷ್ಮಿ ಕವಯತ್ರಿ. ತಂದೆ ಬವಲಾಡಿ ಸೀತಾರಾಮ ಹೆಬ್ಬಾರರು ಯಕ್ಷಗಾನ ಭಾಗವತರು. ಇವರ ಪ್ರಥಮ ಕವನ 'ಸುಬೋಧ ಪತ್ರಿಕೆ'ಯಲ್ಲಿ ಪ್ರಕಟವಾಯಿತು. ೧೯೪೧ರಲ್ಲಿ ಪ್ರಬುದ್ಧ ಕರ್ನಾಟಕದಲ್ಲಿ ಪ್ರಕಟವಾದ 'ಕವಿಯೂ–ವಿಜ್ಞಾನಿಯೂ' ಪ್ರಬಂಧಕ್ಕೆ ಹೊನ್ನಶೆಟ್ಟಿ ಪಾರಿತೋಷಕ ಸಂದಿದೆ. ಮೇಘನಾದ, ಕಿನ್ನರಗೀತ–ಮಂಜುಳಗೀತ, ಅಮೃತಬಿಂದು, ರಸಯಜ್ಞ – ಕಾವ್ಯಗಳು; ರಮಣಮಹರ್ಷಿ, ಮಯೂರಶರ್ಮ, ಕೌಶಿಕ ರಾಮಾಯಣ ಇವರ ಮಕ್ಕಳ ಕಥೆಗಳು; ಕವೀಂದ್ರ ರವೀಂದ್ರ, ಟಿ.ಎಸ್. ಎಲಿಯಟ್, ಬೇಂದ್ರೆ, ಹೊಸಗನ್ನಡ ಸಾಹಿತ್ಯ ಶೈಲಿ, ಕಾವ್ಯಸೂತ್ರ ಇವರ ವಿಮರ್ಶಾ ಕೃತಿಗಳು; ಸಂಸ್ಕೃತ ಸುಭಾಷಿತ ಸಂಗ್ರಹ ಹಾಗೂ ಕುಂದಮಾಲೆ ನಾಟಕಗಳು ಅನುವಾದ ಕೃತಿಗಳು; ಬೇತಾಳ ಕುಣಿತ ಹಾಗೂ ಭೈರವನ ಒಡ್ಡೋಲಗ ಹಾಸ್ಯ ಕೃತಿಗಳು; ವಿದೇಶದ ತಿಳಿವಳಿಕೆಗಳು, ಜ್ಞಾನಸೂತ್ರ – ಹೀಗೆ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಇವರ ರಸಯಜ್ಞ ಕೃತಿಗೆ ದೇವರಾಜ ಬಹದ್ದೂರ್ ಬಹುಮಾನ ಲಭಿಸಿದೆ. ಜ್ಞಾನಸೂತ್ರ ಕೃತಿಗೆ ಲೋಕಶಿಕ್ಷಣ ಟ್ರಸ್ಟಿನ ಬಹುಮಾನ, ಕಾವ್ಯಸೂತ್ರ ಕೃತಿಗೆ ಪ್ರೊ. ತೀ.ನಂ.ಶ್ರೀ. ಸ್ಮಾರಕ ಬಹುಮಾನ, ೧೯೭೪ರಲ್ಲಿ ಯಲ್ಲಾಪುರದಲ್ಲಿ ನಡೆದ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಮೊದಲಾದವು ಶ್ರೀಯುತರ ಸಾಹಿತ್ಯ ಸೇವೆಗೆ ಸಂದ ಗೌರವ ಪ್ರಶಸ್ತಿಗಳಾಗಿವೆ.

ಶಿವರಾಮ ಕಾರಂತರು ಉಡುಪಿ ಜಿಲ್ಲೆಯ ಕೋಟದಲ್ಲಿ ೧೯೦೨ರ ಅಕ್ಟೋಬರ್ ೧೦ರಂದು ಜನಿಸಿದರು. ಕೋಟದ ಪ್ರಾಥಮಿಕ ಶಾಲೆ ಮತ್ತು ಕುಂದಾಪುರದ ಪ್ರೌಢಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡಿ ಮುಂದಿನ ಶಿಕ್ಷಣಕ್ಕಾಗಿ ಮಂಗಳೂರಿನ ಸರ್ಕಾರಿ ಕಾಲೇಜನ್ನು ಸೇರಿದರು. ಗಾಂಧೀವಾದಿಗಳಾಗಿ, ಕಾಲೇಜನ್ನು ಬಿಟ್ಟು ಪಾನನಿರೋಧ, ಖಾದಿಯ ಬಳಕೆ ಇಂತಹ ವಿಷಯಗಳ ಪ್ರಚಾರಕ್ಕಾಗಿ ನಾಡಿನ ಮೂಲೆ ಮೂಲೆಯಲ್ಲಿ ಅಲೆದರು. ಮುಂದೆ ಪುತ್ತೂರಿನಲ್ಲಿ ನೆಲೆಸಿ ಬಾಲವನವನ್ನು ಕಟ್ಟಿ ಮಕ್ಕಳ ಕೂಟ, ಶಾಂತಿ ಶಿಬಿರ, ನಾಡಹಬ್ಬ, ಶಿಕ್ಷಕರ ಸಮ್ಮೇಳನ ಇಂತಹ ಚಟುವಟಿಕೆಗಳ ಕೇಂದ್ರ ಶಕ್ತಿಯಾದರು. ಮಕ್ಕಳಿಗಾಗಿ ಬಾಲ ಪ್ರಪಂಚ, ದೊಡ್ಡವರಿಗಾಗಿ ವಿಜ್ಞಾನ ಪ್ರಪಂಚ ಯೋಜನೆಗಳನ್ನು ಒಬ್ಬರೇ ಕೈಗೊಂಡು ಸಾಧಿಸಿದರು. ಯಕ್ಷಗಾನ ತಂಡವನ್ನು ರೂಪಿಸಿ ಯೂರೋಪ್, ಜಪಾನ್‌ಗಳಲ್ಲಿ ಪ್ರದರ್ಶನ ನೀಡಿ ಮೆಚ್ಚುಗೆ ಗಳಿಸಿದರು. ಕಾರಂತರು ಕಾದಂಬರಿ, ಕವಿತೆ, ಗೀತನಾಟಕ, ಜೀವನಚರಿತ್ರೆ, ಆತ್ಮಚರಿತ್ರೆ, ಮಕ್ಕಳ ಸಾಹಿತ್ಯ, ವಿಜ್ಞಾನ, ಸಾಹಿತ್ಯ, ನಿಘಂಟು, ವಿಶ್ವಕೋಶ, ಪಠ್ಯಪುಸ್ತಕ, ವಿಚಾರಸಾಹಿತ್ಯ, ಅನುವಾದ ಹೀಗೆ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಕೃತಿ ರಚನೆ ಮಾಡಿ ಹೆಸರಾಗಿದ್ದಾರೆ. ಅವರ ಕೆಲವು ಕೃತಿಗಳು ಹಿಂದಿ, ತಮಿಳು, ಮಲೆಯಾಳಿ, ಗುಜರಾತಿ, ಮರಾಠಿ, ತೆಲುಗು, ತುಳು, ಒರಿಯಾ, ಕೊಂಕಣಿ ಮತ್ತು ಇಂಗ್ಲಿಷ್ ಭಾಷೆಗಳಿಗೆ ಅನುವಾದವಾಗಿವೆ.

ಶಿವರಾಮ ಕಾರಂತರ ಮೂಕಜ್ಜಿಯ ಕನಸುಗಳು ಕಾದಂಬರಿಗೆ ಜ್ಞಾನಪೀಠ ಪ್ರಶಸ್ತಿ (೧೯೭೮) ಯಕ್ಷಗಾನ ಬಯಲಾಟ ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ (೧೯೫೯), ಮೈಮನಗಳ ಸುಳಿಯಲ್ಲಿ ಕೃತಿಗೆ ಪಂಪ ಪ್ರಶಸ್ತಿ, ಭಾರತೀಯ ಚಿತ್ರಕಲೆಗೆ ೧೯೩೧ರಲ್ಲಿ ದೇವರಾಜ ಬಹದ್ದೂರ್ ಬಹುಮಾನ, ಕಲಾಪ್ರಪಂಚಕ್ಕೆ ೧೯೭೮ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಬಹುಮಾನ, ೧೯೮೪ರಲ್ಲಿ ಭಾರತೀಯ

ಶಿಲ್ಪ ಗ್ರಂಥಕ್ಕೆ ಕರ್ನಾಟಕ ಲಲಿತಕಲಾ ಅಕಾಡಮಿಯ ಬಹುಮಾನ ಸಂದಿವೆ. ೧೯೭೫ರಲ್ಲಿ ಚೋಮನ ದುಡಿ ಚಲನಚಿತ್ರವು ರಾಷ್ಟ್ರಮಟ್ಟದಲ್ಲಿ ಅತ್ಯುತ್ತಮ ಚಿತ್ರಕಥೆಯ ಪ್ರಶಸ್ತಿಯನ್ನು ಗೆದ್ದುಕೊಂಡಿತು. ೧೯೬೫ರಲ್ಲಿ ಮೈಸೂರು ರಾಜ್ಯ ಸಾಹಿತ್ಯ ಅಕಾಡಮಿಯು ಗೌರವ ಪ್ರಶಸ್ತಿಯನ್ನು ಅರ್ಪಿಸಿತು. ೧೯೭೩ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಫೆಲೋಷಿಪ್, ೧೯೮೫ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯ ಗೌರವ ಫೆಲೋಷಿಪ್ ಕಾರಂತರಿಗೆ ಸಂದವು. ಕಾರಂತರ ಅಸಾಧಾರಣ ಸಾಧನೆಯನ್ನು ಗುರುತಿಸಿ ಹಲವು ಸಂಸ್ಥೆಗಳು ಬಹುಮಾನಗಳನ್ನೂ ಪದಕಗಳನ್ನೂ ಅರ್ಪಿಸಿವೆ. ದಿ ಏಷ್ಯಾಟಿಕ್ ಸೊಸೈಟಿ ಆಫ್ ಬಾಂಬೆ ಸಂಸ್ಥೆಯ ಕ್ಯಾಂಪ್‌ಬೆಲೆ ಮೆಮೋರಿಯಲ್ ಚಿನ್ನದ ಪದಕ, ದಾದಾಬಾಯಿ ನವರೋಜಿ ಸ್ಮಾರಕ ಬಹುಮಾನ. ಯಕ್ಷಗಾನ ಕಲಾಸೇವೆಗಾಗಿ ಸ್ವೀಡನ್ನಿನ ದ ಆರ್ಕೈವ್ಸ್ ಇಂಟರ್‌ನ್ಯಾಷನಲ್ ಸಂಸ್ಥೆಯ ಕಂಚಿನ ಪದಕ ಅವರು ನಿರ್ದೇಶಿಸಿದ ಯಕ್ಷಗಾನ ಪ್ರದರ್ಶನಗಳಿಗೆ ಜಪಾನಿನ ಡಾನ್ಸ್ ಕ್ರಿಟಿಕ್ಸ್ ಸೊಸೈಟಿ ಪ್ರಶಸ್ತಿ ಸಂದಿದೆ. ಶಿವರಾಮ ಕಾರಂತರಿಗೆ ದೇಶವಿದೇಶಗಳ ಅನೇಕ ವಿಶ್ವವಿದ್ಯಾಲಯಗಳು ಗೌರವ ಡಾಕ್ಟೋರೇಟ್ ಪ್ರಶಸ್ತಿಯನ್ನು ಅರ್ಪಿಸಿವೆ.

ಮಧ್ಯಪ್ರದೇಶ ಸರ್ಕಾರವು ಯಕ್ಷಗಾನಕ್ಕೆ ಹೊಸ ಚೈತನ್ಯ ನೀಡಿದ ಕಾರಂತರ ಸಾಧನೆಗಾಗಿ ೧೯೯೦ರಲ್ಲಿ ಅವರಿಗೆ ತುಲಸೀ ಸಂಮಾನ್ ಗೌರವನ್ನು ಸಲ್ಲಿಸಿತು. ೧೯೬೮ರಲ್ಲಿ ಭಾರತ ಸರ್ಕಾರವು ಕಾರಂತರಿಗೆ ಪದ್ಮಭೂಷಣ ಪ್ರಶಸ್ತಿಯನ್ನು ನೀಡಿತು (ತುರ್ತು ಪರಿಸ್ಥಿತಿಯ ಅವಧಿಯಲ್ಲಿ ಕಾರಂತರು ಈ ಪ್ರಶಸ್ತಿಯನ್ನು ಹಿಂದಿರುಗಿಸಿದರು). ೧೯೮೫ರಲ್ಲಿ ಮೈಸೂರಿನಲ್ಲಿ ನಡೆದ ವಿಶ್ವ ಕನ್ನಡದ ಸಮ್ಮೇಳನ, ೧೯೫೫ರಲ್ಲಿ ಮೈಸೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನ, ತಿರುವನಂತಪುರದಲ್ಲಿ ನಡೆದ ಅಖಿಲ ಭಾರತ ಗ್ರಂಥಕರ್ತರ ಸಮಾವೇಶ, ನ್ಯೂಯಾರ್ಕಿನಲ್ಲಿ ನಡೆದ ಒಂಭತ್ತನೆಯ ಈಶಾನ್ಯ ಅಮೇರಿಕಾ ಕನ್ನಡ ಸಮ್ಮೇಳನ, ಅಖಿಲ ಭಾರತ ಅಣುಸ್ಥಾವರ ಯೋಜನೆಯ ಕಮ್ಮಟದ ಕೈಗಾ ಅಣುಸ್ಥಾವರವನ್ನು ಕುರಿತು ವಿಶೇಷ ಸಮ್ಮೇಳನದ ಗೋಷ್ಠಿ ಇಂತಹ ಹಲವಾರು ಮಹತ್ವದ ಸಮ್ಮೇಳನಗಳ ಅಧ್ಯಕ್ಷ ಸ್ಥಾನವನ್ನು ಅವರು ಅಲಂಕರಿಸಿದ್ದಾರೆ.

ನಿರಂಜನರ ನಿಜನಾಮ ಕುಳಕುಂದ ಶಿವರಾಯ, ಪರ್ತಕರ್ತರಾಗಿ ಜೀವನಾರಂಭ. ಕಾದಂಬರಿ ಕಥೆಗಾರರಾಗಿ ಪ್ರಸಿದ್ಧಿ. ವಿಮೋಚನೆ, ಬನಶಂಕರಿ, ಅಭಯ, ರಂಗಮ್ಮನ ವಠಾರ, ಚಿರಸ್ಮರಣೆ, ಮೃತ್ಯುಂಜಯ, ಇವೆಲ್ಲಾ ಅವರ ಪ್ರಸಿದ್ಧ ಕಾದಂಬರಿಗಳು. ಶ್ರೀಮತಿ ಅನುಪಮಾ ಅವರ ಸಹದರ್ಮಿಣಿ. ಪಾಡಿಗಾರು ವೆಂಕಟರಮಣ ಆಚಾರ್ಯರು (೧೯೧೫-೧೯೯೨) ಉಡುಪಿಯಲ್ಲಿ ಹುಟ್ಟಿದವರು. ಹುಬ್ಬಳ್ಳಿಯ ಕಸ್ತೂರಿ ಮಾಸಿಕದ ಸ್ಥಾಪಕ ಸಂಪಾದಕರಾಗಿದ್ದರು. ಕವನ, ಹರಟೆ, ವ್ಯಂಗ್ಯ, ವಿಡಂಬನಾತ್ಮಕ ಪ್ರಬಂಧ, ಅನುವಾದ ಹೀಗೆ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಕೃತಿಯನ್ನು ರಚಿಸಿದ್ದಾರೆ. ರಶಿಯಾದ ರಾಜ್ಯಕ್ರಾಂತಿ, ಸ್ವತಂತ್ರ ಭಾರತ, ಗ್ರಂಥಗಳು ಪ್ರಹಾರ, ಲೋಕದ ಡೊಂಕು, ವಿಪರೀತ, ವಕ್ರದೃಷ್ಟಿ ಅವರ ಪ್ರಮುಖ ಪ್ರಬಂಧ ಸಂಕಲನಗಳು, ನವನೀರದ, ಕೆಲವು ಪದ್ಯಗಳು ಕವನ ಸಂಕಲನಗಳು, ಬಯ್ಯ ಮಲ್ಲಿಗೆ ತುಳು ಕವನ ಸಂಕಲನ ಇವರ ಕೃತಿಗಳು. ಮುಂಬಯಿ ಸರಕಾರದ ಬಹುಮಾನ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತಿನ ವಜ್ರಮಹೋತ್ಸವ ಪ್ರಶಸ್ತಿ, ಪಿ. ಆರ್. ರಾಮಯ್ಯ ಪ್ರಶಸ್ತಿ, ಪತ್ರಿಕೋದ್ಯಮದಲ್ಲಿ ಸಲ್ಲಿಸಿದ ಸೇವೆಗಾಗಿ ಗೋಯಂಕ ಪ್ರಶಸ್ತಿ (ಮಾಸ ಪತ್ರಿಕೆಯ ಪತ್ರಕರ್ತರಲ್ಲಿ ಗೋಯಂಕಾ ಪ್ರಶಸ್ತಿ ಪಡೆದ ಮೊದಲಿಗರು) ಮುಂತಾದ ಪ್ರಶಸ್ತಿಗಳು ಇವರಿಗೆ ಸಂದಿವೆ. ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ ಪಡೆದಿದ್ದರು.

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ನವ್ಯ ಮಾರ್ಗ ಪ್ರವರ್ತಕರು ಒಂದು ಜನಾಂಗದ ಕಣ್ಣು ತೆರೆಸಿದ ಕವಿ ಎಂಬ ಹಿರಿಮೆಗೆ ಪಾತ್ರರಾಗಿದ್ದ ಗೋಪಾಲಕೃಷ್ಣ ಅಡಿಗರು ಕುಂದಾಪುರ ತಾಲೂಕಿನ ಮೊಗೇರಿಯಲ್ಲಿ ಜನಿಸಿದವರು (ಜ. ೧೯೧೮-ನಿ. ೧೯೯೨). ಸಾಕ್ಷಿ ತ್ರೈಮಾಸಿಕ ಪತ್ರಿಕೆ (೧೯೬೨)ಯ ಸಂಪಾದಕರಾಗಿ ಹೊಸ ಸಾಹಿತ್ಯಕ ಪರಿಸರಕ್ಕೆ ಸ್ಫೂರ್ತಿ ಮತ್ತು ಮಾರ್ಗದರ್ಶನ ನೀಡಿದವರು. ಇಂಗ್ಲಿಷ್‌ನ ಹಲವಾರು ಮೌಲಿಕ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಅಡಿಗರ ಅನೇಕ ಕೃತಿಗಳು ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳಿಗೆ ಅನುವಾದವಾಗಿವೆ.

ನವೋದಯ ಮಾರ್ಗದಲ್ಲಿ ಭಾವತರಂಗ, ಕಟ್ಟುವೆವು ನಾವು ಸಂಕಲನಗಳನ್ನು ಪ್ರಕಟಿಸಿದರು. ಹೊಸತನದ ತುಡಿತದ ಪರಿಣಾಮವಾಗಿ ಕನ್ನಡ ನವ್ಯಕಾವ್ಯಕ್ಕೆ ಅಸ್ತಿಭಾರ ಹಾಕಿದುದು ಚಂಡೆ ಮದ್ದಳೆ ಕವನ ಸಂಕಲನದಲ್ಲಿ. ಚಂಡೆ ಮದ್ದಳೆ, ಭೂಮಿಗೀತೆ, ವರ್ಧಮಾನ, ಬತ್ತಲಾರದ ಗಂಗೆ, ಸುವರ್ಣ ಪುತ್ಥಳಿ, ಚಿಂತಾಮಣಿಯಲ್ಲಿ ಕಂಡಮುಖ ಮೊದಲಾದ ಸಂಕಲನಗಳ ಮೂಲಕವೂ ನವ್ಯಕಾವ್ಯಮಾರ್ಗದಲ್ಲಿ ತಮ್ಮ ಹೆಜ್ಜೆ ಗುರುತುಗಳನ್ನು ಸ್ಪಷ್ಟವಾಗಿ ಮೂಡಿಸಿದವರು. ಅವರ ಎಲ್ಲ ಕವನ ಸಂಕಲನಗಳ ಸಮಗ್ರ ಕಾವ್ಯ. ಆಕಾಶದೀಪ, ಅನಾಥೆ ಕಾದಂಬರಿಗಳು ಹುಲಿರಾಯ ಮತ್ತು ಇತರ ಕಥೆಗಳು ಮಣ್ಣಿನ ವಾಸನೆ, ನಮ್ಮ ಶಿಕ್ಷಣ ಕ್ಷೇತ್ರ, ವಿಚಾರ ಪಥ ಮುಂತಾದ ಗದ್ಯಕೃತಿಗಳನ್ನು ಒಳಗೊಂಡ ಇವರ ಸಮಗ್ರ ಗದ್ಯ ಪ್ರಕಟವಾಗಿವೆ. ಸುವರ್ಣ ಕೀಟ, ಇತಿಹಾಸ ಚಕ್ರ, ಬನದ ಮಕ್ಕಳು, ಭೂಗರ್ಭಯಾತ್ರೆ, ರೈತರ ಹುಡುಗಿ ಮುಂತಾದ ಅನುವಾದ ಗ್ರಂಥಗಳೂ ಪ್ರಕಟವಾಗಿವೆ. ಗೋಪಾಲಕೃಷ್ಣ ಅಡಿಗರಿಗೆ ಕೇಂದ್ರ ಮತ್ತು ರಾಜ್ಯ ಸಾಹಿತ್ಯ ಅಕಾಡೆಮಿಗಳ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಕೇರಳದ ಆಸಾನ್ ಪ್ರಶಸ್ತಿ, ಮಧ್ಯ ಪ್ರದೇಶ ಸರ್ಕಾರ ನೀಡುವ ಕಬೀರ್ ಸಮ್ಮಾನ್, ಸುವರ್ಣ ಪುತ್ಥಳಿ ಕವನ ಸಂಕಲನಕ್ಕೆ ಪಂಪ ಪ್ರಶಸ್ತಿಗಳು ಸಂದಿವೆ. ೧೯೭೯ರಲ್ಲಿ ಧರ್ಮಸ್ಥಳದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು.

ನವೋದಯ ಕಾವ್ಯ ಪರಂಪರೆಯಲ್ಲಿ ಉಲ್ಲೇಖಾರ್ಹ ಕವಿ ಗಣಪತಿರಾವ್ ಪಾಂಡೇಶ್ವರ (ಜಿ.ಆರ್. ಪಾಂಡೇಶ್ವರ) ಬ್ರಹ್ಮಾವರದಲ್ಲಿ ಹುಟ್ಟಿದವರು. ಉಡುಪಿ ತಾಲೂಕಿನ ಪಾಂಡೇಶ್ವರ ಅವರ ಹಿರಿಯರ ಊರು. ಕನ್ನಡ, ಸಂಸ್ಕೃತ, ಇಂಗ್ಲಿಷ್, ಮೂರು ಭಾಷೆಗಳಲ್ಲಿ ವಿದ್ವಾಂಸರು, ಹಿರಿಯ ಕವಿ ಹಾಗೂ ಪರ್ತಕರ್ತರು. ಫ್ರ್ಯಾಗ್ರೆಂಟ್ ಬಡ್ಸ್ (ಖಂಡಕಾವ್ಯ), ಕೊಳಲು ಕೃಷ್ಣ, ಹೂಗೊಂಚಲು, ಚೆಂಗಲವೆ (ಇದು ಕನ್ನಡ ರಮ್ಯಪಂಥದ ಪ್ರಮುಖ ಕೃತಿ) ಸುಪಂಥಾ –ಇವರ ಕವನ ಸಂಕಲನಗಳು. ಹಾಳೂರ ಕಥೆ ನೀಳ್ಗವನ. ಪಾಂಡೇಶ್ವರರ ಕ್ರಿಸ್ತಜನ್ಮ ಕವನ ಗೋವಿಂದ ಪೈಗಳಿಗೆ ಗೊಲ್ಗೊಥಾ ಬರೆಯಲು ಪ್ರೇರಣೆ ನೀಡಿತು ಎಂಬುದಾಗಿ ತಿಳಿದುಬರುತ್ತದೆ. 'ನಾಗರಿಕ' ಎಂಬ ಪತ್ರಿಕೆಯನ್ನು ದೀರ್ಘಕಾಲ ಸಂಪಾದಿಸಿದರು. ಆರ್.ಡಿ.ಕಾಮತ್ ಅವರು ಉಡುಪಿಯಲ್ಲಿ ೧೯೨೩ರಲ್ಲಿ ಜನಿಸಿದರು. ಮರಾಠಿ, ಹಿಂದಿಯಲ್ಲೂ ಪಾಂಡಿತ್ಯ ಗಳಿಸಿದ್ದಲ್ಲದೆ ಭಾರತೀಯ ವಿದ್ಯಾ ಭವನದಲ್ಲಿ ನಾಟ್ಯ ಶಿಕ್ಷಕರಾಗಿದ್ದರು. ಇವರು ರಂಗನಾಟಕ ಹಾಗೂ ಏಕಾಂಕಗಳನ್ನು ರಚಿಸಿದ್ದಾರೆ. ಹೃದಯ ದೇಗುಲ, ದೇವರ ಕಣ್ಣು, ಟಿಪ್ಪುಸುಲ್ತಾನ್, ಜ್ವಾಲಾಮುಖಿ, ನಾರದ–ನಾರದಿ (ನಾಟಕಗಳು), ಮಾನವತಿ, ಏಕಲವ್ಯ, ಸಾಕ್ರಟೀಸ್, ಕನಕನ ಕಿಂಡಿ (ಏಕಾಂಕಗಳು) ಮುಂತಾದವು ಇವರ ಪ್ರಮುಖ ಕೃತಿಗಳಾಗಿವೆ.

ವ್ಯಾಸರಾಯ ಬಲ್ಲಾಳ ಅವರು ಡಿಸೆಂಬರ್ ೧, ೧೯೨೩ರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿಯಲ್ಲಿ ಜನಿಸಿದರು. ಅನುರಕ್ತೆ (೧೯೫೩) ಹೇಮಂತಗಾನ (೧೯೫೪), ವಾತ್ಸಲ್ಯಪಥ (೧೯೫೭) ಉತ್ತರಾಯಣ (೧೯೬೯) ಬಂಡಾಯ ಬಲ್ಲಾಳರ ಪ್ರಸಿದ್ಧ ಕಾದಂಬರಿಗಳು ಕಾಡುಮಲ್ಲಿಗೆ (೧೯೫೭), ಮಂಜರಿ (೧೯೭೫) ಸಂಪಿಗೆ ಪ್ರಸಿದ್ಧ ಕಥಾಸಂಕಲನಗಳು, ಈ ದಶಕದ ಶ್ರೇಷ್ಠ ಕಾದಂಬರಿ ಎನಿಸಿದ 'ಬಂಡಾಯ' ಅವರ ಎಲ್ಲ ಕೃತಿಗಳಿಗೆ ಶಿಖರಪ್ರಾಯ. ಇದನ್ನು ಬೆಂಗಳೂರಿನ ಪತ್ರಕರ್ತ ಟಿ.ಜಿ. ಅಶ್ವತ್ಥನಾರಾಯಣ ಅವರು ಕಿರುತೆರೆಯ ಧಾರಾವಾಹಿಯಾಗಿಸಿದ್ದಾರೆ. ಮುಂಬೈ ಜೀವನದ ಅನೇಕ ಚಿತ್ರಗಳನ್ನು ಅವರ ಅನೇಕ ಕೃತಿಗಳಲ್ಲಿ ಕಂಡರಿಸಿದ್ದಾರೆ. ಬಲ್ಲಾಳರ ಕೃತಿಗಳಿಗೆ ಮುಂಬಯಿ ಮತ್ತು ಕರ್ನಾಟಕ ಸರ್ಕಾರದ ಬಹುಮಾನಗಳು ದೊರಕಿವೆ. ಶ್ರೀಯುತರು ಮುಂಬಯಿಯ ಅನೇಕ ಸಾಹಿತ್ಯಿಕ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಆಸ್ಥೆಯಿಂದ ಪಾಲ್ಗೊಂಡವರು. ಇವರ ಕಾಡುಮಲ್ಲಿಗೆ ಕಥಾಸಂಕಲನಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ, ಅನುರಕ್ತೆ ಕಾದಂಬರಿಗೆ ಮೈಸೂರು ಸರ್ಕಾರ ಬಹುಮಾನ ನೀಡಿವೆ. ಬಂಡಾಯ ಕೃತಿಗೆ ರಾಜ್ಯ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಸಂದಿವೆ.

ಪಿ. ಗುರುರಾಜಭಟ್ಟ (೧೯೨೪–೧೯೭೮): ಅಧ್ಯಾಪಕ, ಪ್ರಸಿದ್ಧ ಸಂಶೋಧಕ ಮತ್ತು ಸಾಹಿತಿ. ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲೂಕಿನ ಪಾದೂರಿನಲ್ಲಿ ೧೯೨೪ ಜೂನ್ ೧೫ರಂದು ಜನನ.

ಕಾರ್ಕಳದ ಅತ್ತೂರು ಪ್ರಾಥಮಿಕ ಶಾಲೆ ಮತ್ತು ಮೂಡಬಿದರೆಯ ಜೈನ ಪ್ರೌಢಶಾಲೆಯಲ್ಲಿ ಅಧ್ಯಾಪಕ ವೃತ್ತಿ. ಬನಾರಸ್ ಹಿಂದೂ ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಗಳಿಸಿ, ಉಡುಪಿಯ ಎಂ.ಜಿ.ಎಂ. ಕಾಲೇಜಿನಲ್ಲಿ ಇತಿಹಾಸ ಪ್ರಾಧ್ಯಾಪಕರಾಗಿ ವೃತ್ತಿ ಆರಂಭ, ಮಿಲಾಗ್ರೆಸ್ ಕಾಲೇಜಿನ ಪ್ರಿನ್ಸಿಪಾಲರಾಗಿ ಸೇವೆ (೧೧ ವರ್ಷಗಳು) ಇತಿಹಾಸ-ಸಂಸ್ಕೃತಿಗಳಲ್ಲಿ ಆಸಕ್ತಿ. ಮೈಸೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ. ತುಳುನಾಡು ಗ್ರಂಥಕ್ಕೆ ದೇವರಾಜ ಬಹದ್ದೂರ್ ದತ್ತಿ ಬಹುಮಾನ. ೨೫ಕ್ಕೂ ಹೆಚ್ಚು ಅಪೂರ್ವ ಶಾಸನಗಳ ಸಂಶೋಧನೆ ನಡೆಸಿದ್ದಾರೆ. ತುಳುನಾಡಿನ ಸ್ಥಾನಿಕರು, ಇವರ ಉತ್ತಮ ಸಂಶೋಧನಾ ಕೃತಿ ಎಂಬ ಪ್ರಶಂಸೆ ಪಡೆದಿದೆ. ಇವರ *Antiquities of Sounth Kanara* ಕೃತಿ-ತುಳುವ ಇತಿಹಾಸ ಮತ್ತು ಸಾಂಸ್ಕೃತಿಕ ಅಧ್ಯಯನದ ಮೇರುಕೃತಿ. ಮಣಿಪಾಲ ಶಿಕ್ಷಣ ಅಕಾಡೆಮಿ ಗೌರವ ಸದಸ್ಯತ್ವ, ಮೈಸೂರು ವಿಶ್ವವಿದ್ಯಾಲಯದ ಸುವರ್ಣ ಮಹೋತ್ಸವ ಪ್ರಶಸ್ತಿ, ಉಡುಪಿ ಗೋವಿಂದ ಪೈ ಸಂಶೋಧನಾ ಕೇಂದ್ರದ ಅಭಿವೃದ್ಧಿ ಮಂಡಳಿ ಸದಸ್ಯರಾಗಿ ಕರ್ನಾಟಕ ಸರ್ಕಾರದ ಪುರಾತತ್ವ ಮತ್ತು ವಸ್ತುಸಂಗ್ರಹಾಲಯ ಇಲಾಖೆಯ ಸಲಹಾ ಸಮಿತಿ ಸದಸ್ಯರಾಗಿ, ಸೇವೆ ಸಲ್ಲಿಕೆ. ೧೯೭೮ ಆಗಸ್ಟ್ ೨೭ರಂದು ನಿಧನರಾದರು.

ಕರ್ನಾಟಕದ ಕರಾವಳಿ ಸಾಂಸ್ಕೃತಿಕ ರಂಗದ ಹರಿಕಾರರೆಂದೇ ಖ್ಯಾತರಾಗಿದ್ದ ಕುಂಜಿಬೆಟ್ಟು ಶಿವ ಹರಿದಾಸಭಟ್ಟರು (ಕು.ಶಿ. ಹರಿದಾಸಭಟ್ಟರು) ೧೯೨೪ರಲ್ಲಿ ಉಡುಪಿಯ ಅಗ್ರಹಾರದಲ್ಲಿ ಜನಿಸಿದರು. ಎಂ.ಜಿ. ಎಂ. ಕಾಲೇಜಿನ ಪ್ರಾಂಶುಪಾಲರಾಗಿ ಅದನ್ನು ಸಾಂಸ್ಕೃತಿಕ ಕೇಂದ್ರವಾಗಿ ಕಟ್ಟಿ ಬೆಳಸಿದ, ಹರಿದಾಸಭಟ್ಟರು ನಿವೃತ್ತಿಯ ನಂತರ ಜಾನಪದ ರಂಗಕಲೆಗಳ ಪ್ರಾದೇಶಿಕ ಅಧ್ಯಯನ ಕೇಂದ್ರ, ತುಳು ನಿಘಂಟು, ಗೋವಿಂದ ಪೈ ಸಂಶೋಧನಾ ಕೇಂದ್ರ ಹೀಗೆ ಹಲವು ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದರು. ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಮೂವತ್ತಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದರು ಮತ್ತು ೩೦ಕ್ಕೂ ಹೆಚ್ಚು ಕೃತಿಗಳಿಗೆ ಸಂಪಾದಕರಾಗಿ ದುಡಿದಿದ್ದರು. ಯುಗವಾಣಿ (ಕವನ ಸಂಕಲನ), ಕಾಲವೇ ಬದಲಾಗಿದೆ, ಅವರು ಯುದ್ಧಕ್ಕೆ ಹೋಗಲಿಲ್ಲ. (ಸಣ್ಣಕತೆ), ಇತಾಲಿಯಾ ನಾನು ಕಂಡಂತೆ, ಜಗದಗಲ, ರಂಗಾಯನ, ರಷ್ಯಾದಲ್ಲಿ ಡೊಳ್ಳಿನ ದಿಗ್ವಿಜಯ (ಪ್ರವಾಸ ಕಥನ): ಕನ್ನಡ ಕಟ್ಟಿದವರು, ಕಟ್ಟಿಂಗೇರಿ ಕೃಷ್ಣಹೆಬ್ಬಾರರು (ಜೀವನಚರಿತ್ರೆ), ಅವ್ಯಕ್ತ ಮಾನವ (ಮ್ಯಾನ್ ದಿ ಅನ್‌ನ್ನೋನ್), ರಮಾನಾಥ (ಅನುವಾದ) ಅರ್ಥಶಾಸ್ತ್ರ, ಏಷಿಯಾದ ಸಂಪತ್ತು ಮೊದಲಾದವು ಅವರ ಕೆಲವು ಪ್ರಮುಖ ಕೃತಿಗಳಾಗಿವೆ. ಉದಯವಾಣಿಯ ಲೋಕಾಭಿರಾಮ ಅಂಕಣ ಬರಹಗಾರರಾಗಿ ವೈವಿಧ್ಯಮಯ ವಿಷಯಗಳ ಮೇಲೆ ಬರೆದ ಅಂಕಣ ಬರಹಗಳ ಆರು ಸಂಪುಟಗಳು ಪ್ರಕಟವಾಗಿವೆ. ೧೯೮೪ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ೧೯೮೫ರಲ್ಲಿ ಶಿಕ್ಷಣ ಕ್ಷೇತ್ರದ ಸೇವೆಗಾಗಿ ರಾಜ್ಯ ಸರ್ಕಾರದ ಪ್ರಶಸ್ತಿ, ೧೯೮೬ರಲ್ಲಿ ಫಿನ್‌ಲ್ಯಾಂಡ್ ಸರ್ಕಾರದ ಕಾಲೇಜು ಪ್ರಶಸ್ತಿ, ೧೯೮೯ರಲ್ಲಿ ಶ್ರೇಷ್ಠ ಜೀವನ ಪ್ರಶಸ್ತಿ ಬರವಣಿಗೆಗಾಗಿ ವಿಶ್ವಮಾನವ ಪ್ರಶಸ್ತಿ-ಇವು ಕು. ಶಿ. ಹರಿದಾಸಭಟ್ಟರಿಗೆ ಸಂದಿವೆ.

ಸುಗುಣಮಾಲಾ ಮಾಸಪತ್ರಿಕೆಯ ಸಂಪಾದಕರಾಗಿದ್ದ ಎಂ. ರಾಜಗೋಪಾಲಾಚಾರ್ಯರು (೧೯೨೬) ಶ್ರೇಷ್ಠ ವಿದ್ವಾಂಸರಾಗಿದ್ದರು. ಕನ್ನಡ ವಾಗ್ರೂಢಿಗಳು ರಾಜ್ಯ ಪ್ರಶಸ್ತಿ ಪಡೆದ ಗ್ರಂಥ. ಪ್ರಬಂಧ ಸೌರಭ, ಕಾಳಿದಾಸನ ಉಪಮೆಗಳು, ರಂಗಪ್ರಸಂಗ, ಎರಡನೆಯ ನಾಗವರ್ಮ (ಇತರರೊಡನೆ), ಶ್ರೀ ಅರವಿಂದರು (ಅನುವಾದ), ಯಕ್ಷಗಾನ ಸಂಗೀತ ಮೊದಲಾದ ಪುಸ್ತಕಗಳನ್ನೂ ಪ್ರಕಟಿಸಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಮಗ್ರ ದಾಸ ಸಾಹಿತ್ಯ ಪ್ರಕಟಣಾ ಯೋಜನೆಯ ಸದಸ್ಯರಾಗಿದ್ದವರು.

ಉಡುಪಿ ಜಿಲ್ಲೆಯ ಕೋಟೇಶ್ವರದಲ್ಲಿ ಜನಿಸಿದ ಸೂರ್ಯನಾರಾಯಣ ಚಡಗ (ಜನನ ೧೯೩೦) ಕನ್ನಡದ ಪ್ರಸಿದ್ಧ ಕತೆಗಾರರು ಹಾಗೂ ಕಾದಂಬರಿಕಾರರು. ನಂದನ ಪ್ರಕಾಶನದ ಸಂಪಾದಕರಾಗಿದ್ದರು. ಇವರ, 'ಮನೆತನ' ಎಂಬ ಕಾದಂಬರಿಗೆ ೧೯೭೧ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಮನೆ ತುಂಬಿದ ಮಡದಿ, ಹೆಣ್ಣು-ಹೊನ್ನು-ಮಣ್ಣು, ಬತ್ತದ ಕಣ್ಣೀರು, ಸ್ವರ್ಗದ ಬಾಗಿಲು ಮುಂತಾದವು ಪ್ರಮುಖ ಕಾದಂಬರಿಗಳು, ಜರತಾರಿ ಕುಪ್ಪುಸ, ನಮ್ಮೂರಿನ ಕತೆಗಳು (ಕಥಾಸಂಕಲನ), ಕಾಮಧೇನು, ದಕ್ಷಿಣ ಕನ್ನಡದ ಬರಹಗಾರರು ಮುಂತಾದವು ಸಂಪಾದಿತ ಕೃತಿಗಳು.

ಬನ್ನಂಜೆ ಗೋವಿಂದಾಚಾರ್ಯ (ಜನನ–೧೯೩೬) ಪ್ರಸಿದ್ಧ ಸಂಸ್ಕೃತ ವಿದ್ವಾಂಸ ಹಾಗೂ ಸಂಶೋಧಕ. ನವಭಾರತ, ಪ್ರಕಾಶ, ಉದಯವಾಣಿ ಪತ್ರಿಕೆಗಳ ಸಂಪಾದಕ ಮಂಡಳಿಯಲ್ಲಿದ್ದರು. ಮುಖ್ಯ ಕೃತಿಗಳು– ವಾಲ್ಮೀಕಿ ರಾಮಾಯಣ (೧೯೮೬), ಸಂಗ್ರಹ ಭಾಗವತ (೧೯೮೩), ಮಹಾಶ್ವೇತಾ (೧೯೮೪), ದಂಡಿಯ ಹತ್ತು ಹುಡುಗರ ಕತೆ, ಬಾಣಾಭಟ್ಟರ ಆತ್ಮಕತೆ, ಪುರಂದರೋಪನಿಷತ್ತು (೧೯೮೪), ಜಿ. ವಿ. ಅಯ್ಯರ್, ಮಹಾಭಾರತ ತಾತ್ಪರ್ಯ ನಿರ್ಣಯ (೧೯೯೩), ಮೊದಲಾದ ಮಾಧ್ವ ತತ್ತ್ವ ಗ್ರಂಥಗಳನ್ನು ಅನುವಾದಿಸಿದ್ದಾರೆ. ಪಲಿಮಾರಿನಲ್ಲಿ ಕವಿಗಳ ಕೂಟವನ್ನು ಕಟ್ಟಿ ಪಲಿಮಾರು ಮಠದ ಸ್ವಾಮೀಜಿಯಾಗಿದ್ದ ಕುಮುದಾತನಯ ಹಾಗೂ ಅಧ್ಯಾಪಕರಾಗಿದ್ದ ಕುರಾಡಿ ಸೀತಾರಾಮ ಅಡಿಗ ಅವರ ಜೊತೆ ಸೇರಿ ಮುಕ್ಕಣ್ಣ ದರ್ಶನ ಎಂಬ ಕವನಸಂಕಲನವನ್ನು ತಂದರು. 'ಹೇಳದೆ ಉಳಿದದ್ದು' ಅವರ ಇನ್ನೊಂದು ಕವನ. ಸಂಸ್ಕೃತ ವಿದ್ವಾಂಸ ಬನ್ನಂಜೆ ರಾಮಾಚಾರ್ಯ ಅವರು ಪತ್ರಿಕೋದ್ಯಮಿ ಹಾಗೂ ಕತೆಗಾರರಾಗಿಯೂ ಹೆಸರಾಗಿದ್ದಾರೆ.

ಗುಂಡ್ಮಿ ಚಂದ್ರಶೇಖರ ಐತಾಳರು (೧೯೩೬–೧೯೯೦) ಉಡುಪಿ ತಾಲೂಕಿನ ಗುಂಡ್ಮಿಯಲ್ಲಿ ಜನಿಸಿದವರು. ಅವರ 'ಮದ್ದುಂಟೆ ಜನನ ಮರಣಕ್ಕೆ' ಎಂಬುದು ತ್ರಿಪದಿಗಳನ್ನೊಳಗೊಂಡ ಜನಪದ ಬೃಹತ್ ಸಂಕಲನ. ತಾಯಿಯನ್ನು ಕುರಿತು ವಚನಗಳನ್ನೊಳಗೊಂಡ ಕೃತಿ ಮಾತೃಸಂಹಿತೆ. ಇದು ಓವರ್ ಟು ಮದರ್ ಎಂಬ ಹೆಸರಿನಲ್ಲಿ ಇಂಗ್ಲಿಷಿಗೆ ಅನುವಾದವಾಗಿದೆ. ಬೆಳಗಾಯಿತು, ಗುಂಡು ಸೂಜಿ, ಹೂವಿನ ಕೋಲು, ಪಟಾಚಾರಾ ಸೀಯಾಳ–ಇವು ಅವರ ಕೆಲವು ಪ್ರಮುಖ ಕವನ ಸಂಕಲನಗಳು. 'ಕೈಲಿಯೆ ಕರೆದ ನೊರೆ ಹಾಲು' ಮೊದಲಾದ ಜನಪದ ಕೃತಿಗಳನ್ನು ಸಂಪಾದಿಸಿರುವ ಗುಂಡ್ಮಿಯವರಿಗೆ ಬಿ. ಎಂ. ಶ್ರೀ. ಸುವರ್ಣ ಪದಕ (ಪಟಾಚಾರ), ದೇವರಾಜ ಬಹದ್ದೂರ್ ಸಾಹಿತ್ಯ ಪ್ರಶಸ್ತಿ (ಸೌಂದರ್ಯದ ಸಾನ್ನಿಧ್ಯದಲ್ಲಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ (ಕೈಲಿಯ ಕರೆದ ನೊರೆ ಹಾಲು), ಮೈಸೂರು ವಿಶ್ವವಿದ್ಯಾಲಯದ ಸುವರ್ಣೋತ್ಸವ ಪ್ರಶಸ್ತಿ (ಮದ್ದುಂಟೆ ಜನನ ಮರಣಕ್ಕೆ), ಕಡೆಂಗೋಡ್ಲು ಶಂಕರಭಟ್ಟ ಪ್ರಶಸ್ತಿ (ಸೀಯಾಳ) – ಸಂದ ಕೆಲವು ಪ್ರಶಸ್ತಿ ಪುರಸ್ಕಾರಗಳಾಗಿವೆ.

ಪ್ರೊ.ಎಂ.ರಾಮಚಂದ್ರ (ಜನನ ೧೯೩೯) ಕನ್ನಡ ಪ್ರಾಧ್ಯಾಪಕರು. ಒಸಗೆ (ಶ್ರೀ ಸೇಡಿಯಾಪು ಸಂಭಾವನಾ ಗ್ರಂಥ–ಸಹಸಂಪಾದಕರು), ದಿಬ್ಬಣ, ಬಾಸಿಗ, ತೋರಣ, ಹೂರಣ ಇವರ ಕೆಲವು ಸಂಪಾದಿತ ಕೃತಿಗಳು. ಸೇಡಿಯಾಪು ಕೃಷ್ಣಭಟ್ಟ, ಬಾಡದ ಹೂಗಳು, ವಿ. ಸೀತಾರಾಮಯ್ಯ ಕನ್ನಡದ ಆಸ್ತಿ, ರಸಾಯನ, ಸಮುಚ್ಚಯ ಇವು ಇವರ ಕೆಲವು ಸ್ವತಂತ್ರ ಗ್ರಂಥಗಳು. ಭುವನೇಂದ್ರ ಕಾಲೇಜನ್ನು ಒಂದು ಮನ್ನಣೆ ಕೇಂದ್ರವಾಗಿ ರೂಪಿಸಿದ್ದಾರೆ. ಕಾರ್ಕಳ ಸಾಹಿತ್ಯ ಸಂಘದ ರೂವಾರಿ. ಕಾರ್ಕಳ ತಾಲೂಕು ನಾಲ್ಕನೆಯ ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿದ್ದರು. ಅನೇಕ ಸಂಘ ಸಂಸ್ಥೆಗಳಿಂದ ಪುರಸ್ಕೃತರಾಗಿದ್ದಾರೆ.

ಸಾಹಿತಿ, ವಿಜ್ಞಾನಿ ವ್ಯಾಸರಾವ್ ನಿಂಜೂರು ಅವರು ೧೯೪೦ರಲ್ಲಿ ಉಡುಪಿ ಜಿಲ್ಲೆಯ ತೆಂಕನಿಡಂಬೂರಿನಲ್ಲಿ ಜನಿಸಿದವರು. ಮುಂಬಯಿಯ ಬಾಬಾ ಪರಮಾಣು ಕೇಂದ್ರದಲ್ಲಿದ್ದಾಗ ಇವರ ೮೭ ಸಂಶೋಧನಾ ಪ್ರಬಂಧಗಳು ಪ್ರತಿಷ್ಠಿತ ಪತ್ರಿಕೆಗಳಲ್ಲಿ ಪ್ರಕಟಗೊಂಡಿದೆ. ಇವರು ಹಲವಾರು ಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ಉಸಿರು, ಚಾಮುಂಡೇಶ್ವರಿ ಭವನ (ಕಾದಂಬರಿಗಳು), ಕುಂಕುಮ, ಮಂಚ (ಕಥಾ ಸಂಕಲನ), ನಲ್ವತ್ತರ ನಲುಗು (ನಾಟಕ), ಹೋಮಿ ಬಾಬಾ (ಮಕ್ಕಳಿಗಾಗಿ ಬರೆದ ಪುಸ್ತಕ). ಇವರು ಬರೆದ ಹಲವಾರು ನಾಟಕಗಳು ಪ್ರದರ್ಶನಗೊಂಡಿವೆ. ಹಲವಾರು ಕಥೆ, ಕವಿತೆಗಳು ನಾಡಿನ ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಬುಲೆಟಿನ್ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿ, ಇರ್ರೇಡಿಯೇಷನ್ ನ್ಯೂಸ್, ಬೆಳಗು, ಗೋಕುಲವಾಣಿ ಮುಂತಾದ ಪತ್ರಿಕೆಗಳ ಸಂಪಾದಕತ್ವವನ್ನು ವಹಿಸಿದ್ದರು. ಇವರ ಸೇವೆಯನ್ನು ಗುರುತಿಸಿ, ತ್ರಿವೇಣಿ ಸ್ಮಾರಕ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ವರ್ಧಮಾನ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಫೆಲೋಷಿಪ್, ಮೂಡಬಿದಿರೆ ೭೧ನೇ ಸಾಹಿತ್ಯ ಸಮ್ಮೇಳನದಲ್ಲಿ 'ಕರ್ನಾಟಕ ಶ್ರೀ' ಪ್ರಶಸ್ತಿ, ಮಹಾರಾಷ್ಟ್ರದ ಆರನೆಯ ಸಾಂಸ್ಕೃತಿಕ ಸಮಾವೇಶದಲ್ಲಿ 'ಮಹಾರಾಷ್ಟ್ರದ ಶ್ರೇಷ್ಠ ಕನ್ನಡಿಗ' ಪ್ರಶಸ್ತಿ ಮುಂತಾದ ಹಲವಾರು ಪ್ರಶಸ್ತಿ ಪುರಸ್ಕಾರಗಳು ಲಭಿಸಿವೆ.

ಕಾಸರಗೋಡು ಮೂಲದ ನಾರಾಯಣಭಟ್ಟ (ಜನನ ೧೯೪೪) ಮೊಗಸಾಲೆ, ಕಾರ್ಕಳ ತಾಲೂಕಿನ ಕಾಂತಾವರದಲ್ಲಿ ನೆಲಸಿದರು. ವೃತ್ತಿಯಲ್ಲಿ ವೈದ್ಯರು ಪ್ರವೃತ್ತಿಯಲ್ಲಿ ಸಾಹಿತಿ. ಮಣ್ಣಿನ ಮಕ್ಕಳು ಇವರ ಪ್ರಥಮ ಕಾದಂಬರಿ, ನನ್ನದಲ್ಲದ್ದು, ಪಲ್ಲಟ, ಪ್ರಕೃತಿ, ನೆಲಮುಗಿಲುಗಳ ಮಧ್ಯೆ, ದಿಗಂತ, ಸೃಷ್ಟಿ ಮುಂತಾದ ೧೪ ಕಾದಂಬರಿಗಳನ್ನು ಬರೆದಿದ್ದಾರೆ. ಎಂಟು ಕವನ ಸಂಗ್ರಹ, ಒಂದು ಗೀತ ನಾಟಕ, ಐದು ವೈದ್ಯಕೀಯ ಕೃತಿಗಳನ್ನು ಪ್ರಕಟಿಸಿದ್ದಾರೆ. ಏಳು ಸಂಪಾದಿತ ಕೃತಿಗಳಲ್ಲದೆ ಆತ್ಮಕತೆ 'ಬಯಲುಬೆಟ್ಟ' ಪ್ರಕಟಗೊಂಡಿವೆ. ವಸಂತ ಸಾಹಿತ್ಯದ ಸ್ಥಾಪಕ ಸದಸ್ಯರಲ್ಲಿ ಒಬ್ಬರಾಗಿದ್ದರು. (೧೯೬೫) ಪ್ರಸಿದ್ಧ ಲೇಖಕರಿಗೂ, ಉದಯೋನ್ಮುಖ ಬರಹಗಾರರಿಗೂ ಪ್ರೋತ್ಸಾಹ ನೀಡುವ ಉದ್ದೇಶದಿಂದ ಇವರು ಮುದ್ದಣ ಕಾವ್ಯ ಪ್ರಶಸ್ತಿ ಮತ್ತು ವರ್ಧಮಾನ ಪ್ರಶಸ್ತಿ ಎಂಬ ಎರಡು ಪ್ರಶಸ್ತಿಗಳನ್ನು ನೀಡಲು ಪ್ರೇರಕರಾಗಿದ್ದಾರೆ. ಅನೇಕ ಗೌರವಗಳಿಗೆ ಭಾಜನರಾಗಿದ್ದಾರೆ. ರೈತಯುವಕ ಸಂಘ, ಕಾಂತಾವರ ಮೊಗಸಾಲೆಯವರ ಕನಸು. ನಾ. ಮೊಗಸಾಲೆಯವರ ನನ್ನದಲ್ಲದ್ದು ಎಂಬ ಕಾದಂಬರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಬಹುಮಾನ; ಅವರ ಕಾವ್ಯಕ್ಕೆ ಕಡೆಂಗೋಡ್ಲು ಪ್ರಶಸ್ತಿ, ಬಿ.ಹೆಚ್. ಶ್ರೀಧರ ಪ್ರಶಸ್ತಿ, ಉಗ್ರಾಣ ಪ್ರಶಸ್ತಿ, ಪರ್ಲ ಪ್ರಶಸ್ತಿ, ದಿನಕರ ದೇಸಾಯಿ ಪ್ರಶಸ್ತಿ ಮುಂತಾದ ಪ್ರಶಸ್ತಿಗಳು ಹಾಗೂ ಕಾರ್ಕಳ ತಾಲೂಕಿನ ೭ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ ಲಭಿಸಿದೆ. ರಾಜ್ಯೋತ್ಸವ ಪ್ರಶಸ್ತಿ (೨೦೦೪) ಬಂದಿದೆ. ಅವರ ಬದುಕು ಬರೆಹದ ಕುರಿತು ಗ್ರಂಥ ರಚಿಸಿ ಮಾಧವ ಮೂಡುಕೊಂಬಾಚೆ ಎಂಬುವರು ಪಿಎಚ್.ಡಿ. ಪದವಿ ಪಡೆದಿದ್ದಾರೆ.

ಕೃಷ್ಣಾನಂದ ಹೆಗ್ಡೆ (ಜನನ ೧೯೩೫): ಕಾರ್ಲ್ ಮಾರ್ಕ್ಸ್ (೧೯೫೬) ಸಂಪಾದಿತ ಅರ್‍ಲು ಕಬಿತೆಲು, ಪೊರ್‍ಲು ಕಬಿತೆಲು– ೧೯೯೦ ತುಳು ಆಯ್ದ ಕವನಗಳು ಮೊದಲಾದ ಕೃತಿಗಳನ್ನು ಹೆರಂಜೆ ಕೃಷ್ಣಭಟ್ಟ (ಜನನ ೧೯೪೨): ಸಂಶೋಧನ ಪ್ರಜ್ಞೆ ( ಸಂ ೧೯೯೫), ಕೆ. ಎಂ. ರಾಘವ ನಂಬಿಯಾರ್ (ಜನನ– ೧೯೪೬) ಯಕ್ಷಗಾನ ವಿಮರ್ಶಕ, ಪ್ರಸಂಗ ಕರ್ತ, ಇವರ ಕೆಲವು ಮುಖ್ಯ ಯಕ್ಷಗಾನ ಪ್ರಸಂಗಗಳು– ಚಕ್ರೇಶ್ವರ ಪರೀಕ್ಷಿತ, ಉತ್ತಮ ಸೌದಾಮಿನಿ, ಅನುರೇಂದ್ರಪಾದ ವಿಜಯ, ವಜ್ರಧರವಿಲಾಸ ರಘುವಂಶ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಕುಂದಾಪುರದ ಎಚ್.ವಿ. ನರಸಿಂಹ ಮೂರ್ತಿ(ಜನನ–೧೯೪೬) ಅವರು ಗುರುದೇವ ಭಾರತೀ ತೀರ್ಥ(ಜೀವನ ಚರಿತ್ರೆ), ಸಂಸ್ಕೃತ ಸೌರಭ, ಸೊಬಗಿನ ಸಂಸ್ಕೃತ, ಸಂಚಯ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯ ಸೇವೆಗೆ ತಿರುಮಲ ಪ್ರಶಸ್ತಿ, ಸಾಹಿತ್ಯ ಶ್ರೀ ಪ್ರಶಸ್ತಿ ಸಂದಿವೆ. ನೆಂಪು ನರಸಿಂಹ ಭಟ್ಟ (ಜನನ–೧೯೪೭) ಭಾವ ತರಂಗಾವಳಿ, ಕನಸು ನನಸು, ನಿರ್ಬಂಧಿ(ಕವನ ಸಂಕಲನ); ಬೆಳಕು (ನಾಟಕ), ಕಂದನ ಹಾಡುಗಳು, ನನ್ನ ದೇವರು (ಮಕ್ಕಳ ಸಾಹಿತ್ಯ) ಮುಂತಾದ ಕೃತಿಗಳನ್ನು ರಚಿಸಿದ್ದಾರೆ.

ಮಾಳ ಗ್ರಾಮದ ಎಂ.ಪ್ರಭಾಕರ ಜೋಶಿ (ಜನನ–೧೯೪೬) ಅವರ ಪಿಎಚ್.ಡಿ ಮಹಾಪ್ರಬಂಧ ಕೃಷ್ಣಸಂಧಾನ ಪ್ರಸಂಗ ಮತ್ತು ಪ್ರಯೋಗ. ಜಾಗರ(ವಿಮರ್ಶೆ); ಕೇದಗೆ ; ಮಾರುಮಾಲೆ; ಯಕ್ಷಗಾನ ಪದಕೋಶ; ಮಂದಾರ ಕೇಶವಭಟ್(ತುಳು); ಪ್ರದರ್ಶನ ಕಲೆ–ತಾಳಮದ್ದಲೆ ಮುಂತಾದವು ಇವರ ಕೃತಿಗಳಾಗಿವೆ. ಇವರ ಕೃತಿಗಳಿಗೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬಹುಮಾನ (೧೯೮೪,೧೯೯೪) ಸಂದಿವೆ. ಕಟಪಾಡಿಯಲ್ಲಿ ಜನಿಸಿದ ಫಕೀರ ಮಹಮ್ಮದ್ ಕಟ್ಪಾಡಿ (ಜನನ–೧೯೪೮) ಮುಸ್ಲಿಂ ಸಂವೇದನೆಯನ್ನು ಕನ್ನಡಕ್ಕೆ ಪರಿಚಯಿಸಿದವರಲ್ಲಿ ಮುಖ್ಯರು. ಗೋರಿ ಕಟ್ಟಿಕೊಂಡವರು, ನೋಂಬು ಇವರ ಕಥಾಸಂಕಲನಗಳು; ಸರಕುಗಳು, ಕಚ್ಚಾದ, ನೆರೆ– ಕಾದಂಬರಿಗಳು; ಕೇರಳದಲ್ಲಿ ಹದಿನೈದು ದಿನಗಳು ಪ್ರವಾಸಕಥನ; ರಾಷ್ಟ್ರೀಯತೆ ಮತ್ತು ಮುಸ್ಲಿಮರು ಪ್ರಬಂಧ ಲೇಖನ; ದುಶ್ಯಾಸನ ರಾಜ್ಯ, ಕಾಗಕ್ಕ, ಆನೆ ಬಂತು ಆನೆ–ನಾಟಕಗಳು. ನೋಂಬು ಕಥಾಸಂಕಲನಕ್ಕೆ ರಾಷ್ಟ್ರೀಯ ಕಥಾ ಪುರಸ್ಕಾರ ಸಂದಿದೆ. ಶ್ರೀಯುತರಿಗೆ ರಾಜ್ಯಪ್ರಶಸ್ತಿ ಸಹ ಲಭಿಸಿದೆ.

ಮುರಳೀಧರ ಉಪಾಧ್ಯ ಹಿರಿಯಡ್ಕ (ಜನನ: ೧೯೫೦): ಅವರ ಮುಖ್ಯ ಕೃತಿಗಳು ಪೇಜಾವರ ಸದಾಶಿವರಾಯರು (೧೯೭೨) ಎಂ. ಎನ್. ಕಾಮತ್ (೧೯೭೫), ಕಯ್ಯಾರ ಕಿಞ್ಞಣ್ಣ ರೈ (೧೯೮೯);

ಇವಲ್ಲದೆ ದಕ್ಷಿಣ ಕನ್ನಡ ಕಾವ್ಯ (೧೯೦೧–೧೯೭೬), ಸಾಹಿತ್ಯ ವಿಮರ್ಶೆ೧೯೯೦ (೧೯೯೨)ಸಂಪಾದಿತ ಕೃತಿಗಳಾಗಿವೆ. ಬನ್ನಂಜೆ ಗೋವಿಂದಾಚಾರ್ಯರ ಹೇಳದೆ ಉಳಿದಿದ್ದು (ಕವನ  ಸಂಕಲನ–೧೯೮೦), ಕೊಂಕಣಿ ಭಾಷೆ ಮತ್ತು ಸಾಹಿತ್ಯ (೧೯೯೫), ಗೋವಿಂದ ಪೈ ಸಂಶೋಧನ ಸಂಪುಟದ ಸಂಪಾದಕರಲ್ಲೊಬ್ಬರು.

ಬಿ. ವಸಂತಶೆಟ್ಟಿ (ಜನನ–೧೯೫೦): ದಿವಂಗತರ ಮುಖ್ಯ ಕೃತಿಗಳು–ಬಾರಕೂರಿನ ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ (ಪಿಎಚ್.ಡಿ. ಮಹಾಪ್ರಬಂಧ–೧೯೮೬) ಪ್ರಕಟಿತ ಕೃತಿಗಳು–ಬ್ರಹ್ಮಾವರದ ಇತಿಹಾಸ, ಶಾಸನಶಾಸ್ತ್ರ, ಭಾರತದ ಆಯ್ದ ಶಾಸನಗಳು (ಸಹಕರ್ತೃ), ಕರ್ನಾಟಕದ ಇತಿಹಾಸ, ಬೇಳಂಜೆಯ ಇತಿಹಾಸ, ಉಡುಪಿ ತಾಲೂಕಿನ ಶಾಸನಗಳು.

ಉಡುಪಿಯ ಕೆಮ್ಮೂರಿನವರಾದ ಆರ್ಕೆ, ಮಣಿಪಾಲ (ಜನನ – ೧೯೫೨) ಜಿಲ್ಲೆಯ ಮುಖ್ಯ ಬಂಡಾಯ ಸಾಹಿತಿ. ಅವರ ಪ್ರಮುಖ ಕೃತಿಗಳು ಷಣ್ಮುಖ, ಕಾವ್ಯಕನ್ನಿಕೆಯ ಸೆರಗು ಸರಿಸಿ, ಅಂಬೇಡ್ಕರ್ ಮತ್ತು ನನ್ನೂರ ಕೊರಗನ ಆನೆಕಾಲು, ಕಿವಿಮಾತು, ತೊಟ್ಟಿಕ್ಕುವ ಪದ್ಯಗಳು (ಕವನ ಸಂಕಲನ); ವಾಸ್ತವ, ಸೀತಾಯಣ–ಸುತ್ತುನೋಟ; ಸಾಹಿತ್ಯ, ಸಿದ್ಧಾಂತ ಮತ್ತು ಹೋರಾಟ; ಸಾಹಿತ್ಯ–ಆಶಯ ಮತ್ತು ವಿನ್ಯಾಸ, ಸಾಹಿತ್ಯ ಪ್ರಕ್ರಿಯೆ; ಲೋಕಗ್ರಹಿಕೆ ಮತ್ತು ಅಭಿವ್ಯಕ್ತಿ (ವಿಮರ್ಶೆ); ತುಳುನಾಡಿನ ಸ್ಥಳನಾಮಗಳು; ಹೆಸರಿನಲ್ಲೇನಿದೆ?; ಕನಕನ ಕಿಂಡಿಯೂ ಕೃಷ್ಣನ ಹುಂಡಿಯೂ (ಸಂಶೋಧನೆ); ಅಲ್ಲದೆ ಸಮಾಜ ವಿಜ್ಞಾನ: ಅಮಾಸನ ಪಾಠಗಳು; ಶಿಕ್ಷಣ ಮತ್ತು ವೈಚಾರಿಕತೆ ಮುಂತಾದವು ಇವರ ಸಂಕೀರ್ಣ ಕೃತಿಗಳು;

ಪಾದೇಕಲ್ಲು ವಿಷ್ಣುಭಟ್ಟ ಬಂಟ್ವಾಳ ತಾಲೂಕಿನ ರೋವಾಡಿಯಲ್ಲಿ ಜನಿಸಿದರು (೧೯೫೬). ಆದರೆ ಅವರ ಕಾರ್ಯಕ್ಷೇತ್ರ ಉಡುಪಿ. ಮುಖ್ಯ ಕೃತಿಗಳು–ಸೇಡಿಯಾಪು ಕೃಷ್ಣಭಟ್ಟರ ವಿಚಾರ ಪ್ರಪಂಚ (೧೯೯೨) ಸೇಡಿಯಾಪು ಕೃಷ್ಣಭಟ್ಟರ ಚಂದ್ರಖಂಡ ಮತ್ತು ಕೆಲವು ಸಣ್ಣಕಾವ್ಯಗಳು (೧೯೯೪), ರಂಗವೈಖರಿ (೧೯೮೧). ಮಲ್ಪೆಯವರಾದ ದಾಮೋದರ ಕಲ್ಮಾಡಿಯವರು ೧೯೫೬ರಲ್ಲಿ ಜನಿಸಿದರು. ಕೋಟಿ ಚೆನ್ನಯ್ಯ ಮೌಖಿಕ ಸಾಹಿತ್ಯದ ಅಂತರಾತ್ಮ ದರ್ಶನ, ಜನಮಾನಸದಲ್ಲಿ ಕೋಟಿ ಚೆನ್ನಯ್ಯರು ಕೃತಿಯನ್ನು ಪ್ರಕಟಿಸಿದ್ದಾರೆ. ಕೋಟಿ ಚೆನ್ನಯ್ಯರ ಮೇಲೊಂದು ಹೊಸ ಬೆಳಕು ಎಂಬ ಸಾಕ್ಷ್ಯಚಿತ್ರವನ್ನು ನಿರ್ಮಿಸಿದರು. ಇವರ ಕೋಟಿ ಚೆನ್ನಯ್ಯ ಪಾಡ್ದನ ಸಂಪುಟಕ್ಕೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಬಹುಮಾನ ಸಂದಿದೆ ಹಾಗೂ ಈ ಸಂಪುಟವು ಇಂಗ್ಲಿಷಿಗೆ ಭಾಷಾಂತರಗೊಂಡಿದೆ.

ಉಡುಪಿಯ ಹಟ್ಟಿ ಕುದ್ರುವಿನ ಎಚ್. ದುಂಡಿರಾಜ್ (೧೯೫೬) ನಮ್ಮ ಗೋಡೆಯ ಹಾಡು ಬನ್ನಿ ನಮ್ಮ ಹಾಡಿಗೆ ಮತ್ತಿತರ ಕವನ ಸಂಕಲನಗಳು; ಪಾಡ್ಯ ಬಿದಿಗೆ ತದಿಗೆ, ಹನಿಕೇತನ ಮೊದಲಾದ ಹನಿಗವನ ಸಂಗ್ರಹ, ಓಡುವವರು ಇಪ್ಪತ್ತೊಂದನೆ ಶತಮಾನ ಇತ್ಯಾದಿ ನಾಟಕಗಳು, ಹೀಗೆ ವಿವಿಧ ಕೃತಿಗಳನ್ನು ಪ್ರಕಟಿಸಿದ್ದಾರೆ.  ಕಡೆಂಗೋಡ್ಲು ಕಾವ್ಯ ಪ್ರಶಸ್ತಿ, ಮುದ್ದಣ ಕಾವ್ಯ ಪ್ರಶಸ್ತಿ, ಅತ್ಯುತ್ತಮ ಹಾಸ್ಯ (ಬಾನುಲಿ) ನಾಟಕ ಪುರಸ್ಕಾರ, ಭಾರ್ಗವ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ, ಚುಟುಕು ರತ್ನ ಪ್ರಶಸ್ತಿ, ಕಾರಂತ ಪ್ರಶಸ್ತಿ ಮುಂತಾದವನ್ನು ಅವರು ಪಡೆದಿದ್ದಾರೆ.

ಪ್ರದೀಪ್‌ಕುಮಾರ್ ಹೆಬ್ರಿ (ಜನನ–೧೯೫೭) ಅವರು ಭಾವಬಂಧ, ಗೆದ್ದಲು ಹುಳುಗಳು, ನೂರೊಂದು ಹನಿಗವನಗಳು, ಕಾರ್ಗಿಲ್ ಗೀತೆಗಳು (ಕವನ ಸಂಕಲನ); ಹೀಗೊಂದು ಕತೆ (ಸಣ್ಣ ಕತೆ); ಬೇಡರ ಕಣ್ಣಪ್ಪ (ನೃತ್ಯ ನಾಟಕ); ಋತುಗಳು (ಬಾನುಲಿ ನಾಟಕ); ಸಕ್ಕರೆ ಸಿಹಿಯಲ್ಲ, ಮಹಾಮಾರಿ ಏಡ್ಸ್ (ವೈದ್ಯಕೀಯ) ಮುಂತಾದ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ರಾಜ್ಯ ವಯಸ್ಕರ ಶಿಕ್ಷಣ ಪ್ರಶಸ್ತಿ, ರಾಷ್ಟ್ರಮಟ್ಟದ ಪರಿಸರ ಮತ್ತು ಅರಣ್ಯ ಇಲಾಖಾ ಪ್ರಶಸ್ತಿಯನ್ನು ಪಡೆದಿದ್ದಾರೆ.

ಉಡುಪಿಯ ಬೆಳ್ಮಣ್ಣುವಿನಲ್ಲಿ ಜನಿಸಿದ ಬಿ. ಜನಾರ್ದನ ಭಟ್ (ಜನನ–೧೯೬೦) ಪುಸ್ತಕಾಲೋಕ, ಕೆ.ಎಸ್. ನರಸಿಂಹ ಸ್ವಾಮಿ, (ವಿಮರ್ಶೆ), ಮೂರನೆಯ ಕಣ್ಣು, ದ್ವಾರವಿಲ್ಲದ ದ್ವಾರ (ವೈಚಾರಿಕ ಕೃತಿ), ಕ್ಯಾಂಟರ್‌ಬರಿ ಕತೆಗಳು(ಅನುವಾದ) ಅಂಕಣಾಕಾರರು.  ದಕ್ಷಿಣ ಕನ್ನಡದ ಶತಮಾನದ ಕಾವ್ಯ

(೧೯೦೦–೨೦೦೦), ದಕ್ಷಿಣ ಕನ್ನಡದ ಶತಮಾನದ ಕತೆಗಳು (೧೯೦೦–೨೦೦೦)–ಇವರ ಸಂಪಾದಿತ ಕೃತಿಗಳು. ಇಂಗ್ಲೀಷ್ ಪ್ರಾಧ್ಯಾಪಕರಾದ ಇವರು ಸಾಂತ್ಯಾರು ವೆಂಕಟರಾಯರ ಬಗ್ಗೆ ಮಹಾಪ್ರಬಂಧ ರಚಿಸಿ ಪಿಎಚ್.ಡಿ. ಪಡೆದಿದ್ದಾರೆ.

ಕೋಟದಲ್ಲಿ ಜನಿಸಿದ ಜಿ.ಎನ್. ಉಪಾಧ್ಯ (ಜನನ–೧೯೬೭)ಅವರು "ಮಹಾರಾಷ್ಟದ ಕನ್ನಡ ಶಾಸನಗಳು : ಒಂದು ಅಧ್ಯಯನ" ಎಂಬ ಪಿಹೆಚ್.ಡಿ ಗ್ರಂಥ. ಸೊಲ್ಲಾಪುರ–ಒಂದು ಅಧ್ಯಯನ, ಮಹಾರಾಷ್ಟ್ರದ ಕನ್ನಡ ನಾಡಿನ ಸಂಪುಟ, ಗೋದಾವರಿವರಂ ಇರ್ದ ಕನ್ನಡ ನಾಡು, ಸೊನ್ನಲಿಗೆ ಸಿದ್ಧರಾಮ ಮುಂತಾದವು ಅವರ ಇತರ ಕೃತಿಗಳು. ವಿಶ್ವಂಭರ ಉಪಾಧ್ಯಾಯರ ಭ್ರಾಂತಿ ಕಥನ ಕವನ, ಹರಿವು ಕಥನ ಕವನಕ್ಕೆ ಮೈಸೂರು ವಿಶ್ವವಿದ್ಯಾಲಯದ ಚಿನ್ನದ ಪದಕ ಸಿಕ್ಕಿದೆ. ಗಾಥಾ ಗಣೇಶ ಕಥನ ಕವನವನ್ನೂ ಸಣ್ಣ ಕವನಗಳನ್ನೂ ರಚಿಸಿದ್ದಾರೆ.

ರಾಮದಾಸ್, ಕುರಾಡಿ ಸೀತಾರಾಮ ಅಡಿಗ, ಯು.ಕೆ.ವಿ. ಆಚಾರ್ಯ, ರಸಿಕ ಪುತ್ತಿಗೆ, ಬನ್ನಂಜೆ ಗೋವಿಂದಾಚಾರ್ಯ, ಪಾ.ವೆಂ. ಆಚಾರ್ಯ, ನಾ.ಮೊಗಸಾಲೆ, ಕಿರಣ, ಲಕ್ಷ್ಮೀಶ ತೋಳ್ಪಾಡಿ, ಆರ್ಯ, ಜಿ.ಕೆ.ಐತಾಳ್, ಕುಮುದಾತನಯ ಅಡಿಗರಿಂದ ನವ್ಯ ಕಾವ್ಯದ ಪ್ರಭಾವಕ್ಕೆ ಒಳಗಾದವರು. ಮಟ್ಟಿ ರಾಧಾಕೃಷ್ಣರಾವ್ (೧೯೩೪) ನವೋದಯದ ಕವಿಯಾಗಿ ಹೃದಯ ತರಂಗ ಹಾಗೂ ಬೇಕು ನನಗೀ ಜೀವನ ಕವನ ಸಂಕಲನವನ್ನು ಯು.ಕೆ.ವಿ. ಆಚಾರ್ಯರು 'ಯೋಗಾಯೋಗ' ಕವನ ಸಂಕಲನವನ್ನು, ದಲಿತ ಬ್ರಾಹ್ಮಣ ಎಂಬ ಕವನ ಸಂಕಲನವನ್ನು ಪಾಂಡೇಶ್ವರ ಚಂದ್ರಶೇಖರ ಚಡಗರು, ಕಿರಣರು ಪರಸ್ಪರ ಕವನ ಸಂಕಲನವನ್ನು ಪ್ರಕಟಿಸಿದ್ದಾರೆ. ಖ್ಯಾತ ಚಿತ್ರ ಕಲಾವಿದ ಉಡುಪಿಯ ಆರ್ಯ (ಪಿ. ರಾಜಗೋಪಾಲ ಆಚಾರ್ಯ) ಉಡುಪಿಯ ಶೀರೂರು ಮಠದ ಸ್ವಾಮೀಜಿಯಾಗಿದ್ದು, ಪೀಠತ್ಯಾಗ ಮಾಡಿ, ಬ್ಯಾಂಕ್ ಉದ್ಯೋಗಿಯಾಗಿದ್ದಾರೆ. ಇವರು ಕಾವ್ಯ, ಕತೆ, ನಾಟಕ, ಕಾದಂಬರಿ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. 'ಮನುಷ್ಯ' ಅವರ ಪ್ರಮುಖ ಕವನ ಸಂಕಲನ. ಕುಂದಾಪುರ ತಾಲೂಕಿನ ಬೆಳಗೋಡಿನವರಾದ ಬಿ. ರಮೇಶ್ ಭಟ್ ಕಡೆಂಗೋಡ್ಲು ಪ್ರಶಸ್ತಿ ಪುರಸ್ಕೃತ ಕವಿ.

ಉಡುಪಿಯ ರಾಮದಾಸ್ ನವ್ಯ ಮಾರ್ಗದ ಕತೆ, ಕಾದಂಬರಿ, ನಾಟಕ ಮತ್ತು ವಿಮರ್ಶೆ ಈ ಎಲ್ಲ ಪ್ರಕಾರಗಳಲ್ಲಿ ಕೃತಿಗಳನ್ನು ರಚಿಸಿದ್ದಾರೆ. ಅಡಿಗರ ಕಾವ್ಯವನ್ನು ಪರಿಚಯಿಸುವ ಗ್ರಂಥ ಭೂಮಿಗೀತ ಕಾವ್ಯಪ್ರವೇಶವನ್ನು ರಚಿಸಿದ್ದಾರೆ. ಅಲ್ಲದೆ, ಋತು ಗೀತಾಮೃತ, ರಾಮದಾಸರ ಕವನಗಳು, ಭಸ್ಮಾಸುರ, ಹದಿಹರೆಯದ ಹುಡುಗರು, ಮತ್ತು ಸ್ವಾತಂತ್ರ್ಯೋತ್ತರ ವಚನಗಳು ಕೃತಿಗಳನ್ನು ರಚಿಸಿದ್ದಾರೆ. ಇದರಲ್ಲಿ ಭಸ್ಮಾಸುರ ಕವನಸಂಕಲನಕ್ಕೆ ಕಡೆಂಗೋಡ್ಲು ಪ್ರಶಸ್ತಿ ಮತ್ತು ಹದಿಹರೆಯದ ಹುಡುಗರು ಕೃತಿಗೆ ಮುದ್ದಣ ಪ್ರಶಸ್ತಿ ಸಂದಿದೆ. ಉಡುಪಿ ಎಂ.ಜಿ.ಎಂ. ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿರುವ ಡಿ.ಆರ್. ಪಾಂಡುರಂಗ (೧೯೫೦) ಕಡೂರು ತಾಲೂಕು ದೇವನೂರಿನವರು. 'ದಕ್ಷಿಣ ಕನ್ನಡ ಜಿಲ್ಲೆಯ ಭೈರರ ಸಾಹಿತ್ಯಕ ಸಾಂಸ್ಕೃತಿಕ ಅಧ್ಯಯನ' ಇವರ ಪಿಎಚ್.ಡಿ. ಗ್ರಂಥ. ಮೇದರು, ಸೇರಗಾರರು, ಆಗಸ್ಟಸ್ ದಾಸಪ್ಪ, ಲಕ್ಷ್ಮೀಶನ ದೇವನೂರು ಮೊದಲಾದವು ಇತರ ಕೃತಿಗಳು. ಸಕಲೇಶಪುರ ಮೂಲದ ಎಸ್.ಎ. ಕೃಷ್ಣಯ್ಯ ಎಂ.ಜಿ.ಎಂ. ಕಾಲೇಜಿನ ಆರ್.ಆರ್.ಸಿ.ಯಲ್ಲಿ ಸಂಶೋಧನಾಧಿಕಾರಿಯಾಗಿದ್ದಾರೆ. ಇವರು ಕರ್ನಾಟಕ ಪಪ್ಪೆಟ್ರಿ ಬಾಚಿಗೊಂಡನಹಳ್ಳಿ ಮತ್ತು ಏಣಗಿ ಬಸಾಪುರದ ಜನಪದ ಗೀತೆಗಳು (ಅಕಾಡೆಮಿ ಪ್ರಶಸ್ತಿ) ದಾಖಲೀಕರಣ ಮತ್ತು ಸಂರಕ್ಷಣೆ ಮೊದಲಾದ ಪುಸ್ತಕಗಳನ್ನು ರಚಿಸಿದ್ದಾರೆ. ಅಶೋಕ ಆಳ್ವ ಅವರು ತುಳುನಾಡಿನ ಪ್ರಾಣಿ ಜಾನಪದ ಕುರಿತು ಪಿಎಚ್.ಡಿ ಪದವಿ ಪಡೆದಿದ್ದಾರೆ. ಒಳಸಿರಿ (ಇಂಗ್ಲಿಷ್‌ನಲ್ಲಿ) ಕೊಡಗಿನ ಜನಪದ ಕುಣಿತಗಳ ಸಾಂಸ್ಕೃತಿಕ ಅಧ್ಯಯನ, ಸಾನಾದಿಗೆ (ಸಂ), ಪಂಚವಾದ್ಯ (ಸಂ) ಇವರ ಕೃತಿಗಳಾಗಿವೆ. ಎನ್.ಟಿ.ಭಟ್ ಜರ್ಮನ್ ಭಾಷೆಯಲ್ಲಿ ಪಿ.ಎಚ್.ಡಿ. ಮಾಡಿದ್ದಾರೆ. ಪ್ರಸಂಗ ಹಾಗೂ ತುಳುವ ಪತ್ರಿಕೆಗಳ ಸಂಪಾದಕರಾಗಿದ್ದಾರೆ. ಬನ್ನಂಜೆ ಬಾಬು ಅಮೀನ್, ತುಳುನಾಡ ಗರೋಡಿಗಳ ಸಾಂಸ್ಕೃತಿಕ ಅಧ್ಯಯನ, ತುಳು ಜಾನಪದ ಬದುಕು ಮತ್ತಿತರ ಕೃತಿಗಳನ್ನು ಪ್ರಕಟಿಸಿದ್ದು, ಯಕ್ಷಗಾನ ಅರ್ಥಧಾರಿಯಾಗಿಯು ಗುರುತಿಸಲ್ಪಟ್ಟಿದ್ದಾರೆ.

**ಮಹಿಳಾ ಸಾಹಿತ್ಯ**

ಕಾರ್ಕಳ ಬಳಿಯ ಹಳ್ಳಿಯಲ್ಲಿ ಹುಟ್ಟಿದ ರಮಾಬಾಯಿಯವರು ತಮ್ಮ ಸಾಮಾಜಿಕ ಸೇವೆಗಳಿಗಾಗಿ ಅಂತಾರಾಷ್ಟ್ರೀಯ ಪ್ರಸಿದ್ಧಿ ಪಡೆದವರು. ೧೮೭೮ರಲ್ಲಿ ಕಲ್ಕತ್ತಾ ವಿಶ್ವವಿದ್ಯಾಲಯದಿಂದ ಪಂಡಿತಾ ಸರಸ್ವತಿ ಎಂಬ ಬಿರುದು ಪಡೆದದ್ದು, ಅವರ ಸಂಸ್ಕೃತ ವಿದ್ವತ್ತಿಗೆ ಸಾಕ್ಷಿಯಾಗಿದೆ. ಅವರು ಸ್ತ್ರೀಧರ್ಮನೀತಿ (ಮರಾಠಿ), ಉಚ್ಚವರ್ಗದ ಹಿಂದೂ ಮಹಿಳೆ (ಇಂಗ್ಲಿಷ್) ಮೊದಲಾದ ಪುಸ್ತಕಗಳನ್ನೂ ರಚಿಸಿದ್ದಾರೆ.

ಉಡುಪಿ ಜಿಲ್ಲೆಯ ಮೊದಲ ತಲೆಮಾರಿನ ಲೇಖಕರಲ್ಲಿ ಒಬ್ಬರಾದ ಉಳ್ಳೂರು ಮೂಕಾಂಬಿಕಾ ಅಮ್ಮ (೧೯೦೮-೧೯೯೮) ಅವರು ಪತ್ರಗಳನ್ನು ಕೂಡ ಪದ್ಯರೂಪದಲ್ಲೆ ಬರೆಸುತ್ತಿದ್ದರು. ನಿಷ್ಠುರವಾದಿ, ಆಶು ಕವಿಯತ್ರಿ ಪತ್ರ ಕವನಗಳು, ಸಂಗೀತಗಳು, ದೇವರನಾಮಗಳು, ವ್ಯಕ್ತಿ ಚಿತ್ರಗಳು, ಸ್ವಾನುಭವ ಕಥನ ಹೀಗೆ ಹಲವು ಪದ್ಯಗಳನ್ನು ಕಟ್ಟಿರುವ ಇವರ ಪ್ರತಿಭೆ ವಿಶೇಷವಾದುದು. ಸರಸ್ವತಿಬಾಯಿ ರಾಜವಾಡೆ, ಪಡುಕೋಣೆ ಸೀತಾದೇವಿ ಮತ್ತು ಬೆಳ್ಳೆ ಸೀತಾರತ್ನಮ್ಮ ಇವರೆಲ್ಲ ಇಪ್ಪತ್ತರ ದಶಕದಲ್ಲಿ ಸಾಹಿತ್ಯ ರಚನೆಯನ್ನು ಪ್ರಾರಂಭಿಸಿದವರು. ಉಡುಪಿ ಪರಿಸರದಲ್ಲಿನ ಮಹಿಳಾ ಸಾಹಿತಿಗಳಲ್ಲಿ ಭಾರತೀಭಾಯಿ ಪಣಿಯಾಡಿ, ಕೃಷ್ಣವೇಣಿಬಾಯಿ, ಲೀಲಾಬಾಯಿ ಕಾಮತ್, ಪಿ. ಮಂದಾಕಿನೀಬಾಯಿ, ಕಮಲಾಕ್ಷಿ ಮಟ್ಪಾಡಿ ಮತ್ತು ಗುಣ ಉದ್ಯಾವರ ಅವರೂ ಪ್ರಮುಖರಾಗಿದ್ದಾರೆ.

ಸರಸ್ವತಿಬಾಯಿ ರಾಜವಾಡೆಯವರು (೧೯೧೩) ಕಾವ್ಯ, ಕತೆ, ನಾಟಕ ಮತ್ತು ಪ್ರಬಂಧಗಳನ್ನು ರಚಿಸಿದ್ದಾರೆ. ಇವರು ಗಿರಿಬಾಲೆ ಎಂಬ ಹೆಸರಿನಿಂದ ಮಾತ್ರವಲ್ಲದೆ ಸರಸ್ವತಿ, ಯು. ಸರಸ್ವತಿ, ವಿಶಾಖ, ವೀಣಾಪಾಣಿ ಮುಂತಾದ ಹೆಸರುಗಳಿಂದಲೂ ಬರೆಯುತ್ತಿದ್ದರು. ಅಂದು ಪ್ರಸಿದ್ಧವಾಗಿದ್ದ ಕಥಾವಳಿ ಮಾಸಪತ್ರಿಕೆಯ ಮಹಿಳಾ ವಿಭಾಗದಲ್ಲಿ ಏಳು ವರ್ಷಗಳ ಕಾಲ ಸಂಪಾದಕಿಯಾಗಿ ಸೇವೆ ಸಲ್ಲಿಸಿದ್ದಲ್ಲದೆ, ೧೯೩೨ರಲ್ಲಿ ಸುಪ್ರಭಾತ ಎಂಬ ಮಾಸಪತ್ರಿಕೆಯನ್ನು ಮಹಿಳೆಯರಿಗಾಗಿಯೇ ಆರಂಭಿಸಿದರು. ಅನೇಕ ಸಂಘ ಸಂಸ್ಥೆಗಳು ಇವರನ್ನು ಸನ್ಮಾನಿಸಿವೆ.

ಸೀತಾಬಾಯಿ ಪಡುಕೋಣೆ (೧೯೦೨-೧೯೬೯) ಕಟುಕ ರೋಹಿಣಿ ಸಂವತ್ಸರದಲ್ಲಿ ಎಂಬ ಪ್ರಹಸನವನ್ನು ರಚಿಸಿದ್ದಾರೆ. ಕೈಲಾಸಂ ಅವರ **'ಹೋಂರೂಲ್'** ಕೃತಿಯನ್ನು ಕೊಂಕಣಿಗೂ, ವಿಸೀ ಅವರ **'ಸೊಹ್ರಾಬ್ ರುಸ್ತುಂ'** ಅನ್ನು ಹಿಂದಿಗೂ ಅನುವಾದಿಸಿದ್ದಾರೆ. ವಧು ಪರೀಕ್ಷಾ, ಮೇರೆ ಗೋಪಾಲ್ (ಹಿಂದಿ), **'ಕುಟ್ಟಮಕ್ಕಾರಿ ಫಜೀತಿ'** (ಕನ್ನಡ), **'ಹೀಗಾಗಬೇಕೇ'** ಮರಾಠಿ ಕಾದಂಬರಿ ಜಾಯಿಮಾನದ ಅನುವಾದ, **'ವೇಣು ಮಾವ'** ಮೊದಲಾದವು ಇವರ ಅನುವಾದಿತ ಕೃತಿಗಳು. ಮೂಲತಃ ಬೈಂದೂರಿನವರಾದ ಕರ್ನಾಟಕದ ಹೊರಗೆ ಬಹುಕಾಲ ನೆಲಸಿದ್ದ ವಾಸಂತಿಬಾಯಿ ಪಡುಕೋಣೆಯವರು ಕಥಾ ಪ್ರಕಾರದಲ್ಲಿ ಕೆಲಸ ಮಾಡಿದವರು. ಬಾಲ್ಯ ವಿವಾಹ, ವಿಧವಾ ಸಮಸ್ಯೆ ಮುಂತಾದವು ಇವರ ಕಥೆಗಳ ವಸ್ತುಗಳಾಗಿವೆ. ಮಿಥುನ ಲಗ್ನ, ಕರ್ಮಚಾರಿ, (ತಮ್ಮ ಮಗ ಸುಪ್ರಸಿದ್ಧ ನಟನನ್ನು ಕುರಿತು) ನನ್ನ ಮಗ ಗುರುದತ್ತ ಜೀವನದ ಹೋರಾಟ ಇವು ಅವರ ಕೃತಿಗಳು. ಇವರು ಹಿಂದಿ ಚಲನಚಿತ್ರಗಳಿಗೆ ಸ್ಕ್ರಿಪ್ಟ್ಸ್ (ಚಿತ್ರಕಥೆ) ಬರೆದುಕೊಡುವ ಕೆಲಸವನ್ನೂ ಮಾಡಿದ್ದಾರೆ.

ಬೆಳ್ಳೆ ಸೀತಾರತ್ನಮ್ಮ (೧೯೧೦-೧೯೭೫) ಭಗವದ್ಗೀತೆಯನ್ನು ಭಾಮಿನಿ ಷಟ್ಪದಿಯಲ್ಲಿ ರಚಿಸಿದ್ದಾರೆ. ಲೀಲಾಬಾಯಿ ಕಾಮತ್ ಹಿಂದಿ, ಮರಾಠಿ ಮತ್ತು ಬಂಗಾಲಿ ಭಾಷೆಗಳ ನೂರಕ್ಕೂ ಹೆಚ್ಚು ಕತೆಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ಹಾರಿಹೋದ ಹಕ್ಕಿ ಮತ್ತು ನಮ್ಮೂರ ಶಿವಪಾರ್ವತಿ, ಅವರ ಸ್ವತಂತ್ರ ಕಥಾಸಂಕಲನ. ಉಡುಪಿಯ ಇಂದಿರಾ ಹಾಲಂಬಿ (೧೯೩೪-) ಗಿರಿವಾಸಿನಿ ಕಾವ್ಯನಾಮದಿಂದ ಪ್ರಾಣಿ ಪರ್ಯಾಯ (ಮಕ್ಕಳ ಕಥೆ), ಹೆಜ್ಜೆಯ ಗೆಜ್ಜೆ (ಮಕ್ಕಳ ಕವನಗಳು), ವನಮಾಲೆ (ಕಥನ ಕವನಗಳು), ಶುಭದೃಷ್ಟಿ (ನಾಟಕ), ಭಕ್ತ ಪ್ರಹ್ಲಾದ(ನಾಟಕ), ಚಂದ್ರಹಾಸ (ನಾಟಕ)-ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ತಮ್ಮ ಸಂದೀಪ ಸಾಹಿತ್ಯದ ಮೂಲಕ ಭಾವತರಂಗ, ವನಮಾಲೆ, ಅಪೂರ್ವ, ಕಾದಂಬರಿಗಳನ್ನು ಪ್ರಕಟಿಸಿದ್ದಾರೆ.

'ವೈದೇಹಿ' ಕಾವ್ಯನಾಮದಿಂದ ಖ್ಯಾತರಾಗಿರುವ ಜಾನಕಿ ಶ್ರೀನಿವಾಸಮೂರ್ತಿ ಮರಗಿಡ ಬಳ್ಳಿ, ಅಂತರಂಗದ ಪುಟಗಳು, ಗೋಲ ಕಥಾಸಂಕಲನಗಳು. ಧ್ಯಾನ ಮತ್ತು ಜಾತ್ರೆ ಲಲಿತ ಬರಹಗಳ ಸಂಕಲನಗಳು. ಬಿಂದು ಬಿಂದಿಗೆ, ಪಾರಿಜಾತ ಕವನಸಂಕಲನಗಳು ಧಾಂಧೂಂ ಸುಂಟರಗಾಳಿ, ಮೂಕನ ಮಕ್ಕಳು, ಗೊಂಬೆ ಮಾಕ್ಬತ್, ಮೊದಲಾದ ಮಕ್ಕಳ ನಾಟಕಗಳನ್ನೂ ರಚಿಸಿದ್ದಾರೆ. ಗೊಂಬೆ ಮ್ಯಾಕ್ಬೆತ್ ನಾಟಕಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿದೆ. ಕೋ. ಲ. ಕಾರಂತರ ಬದುಕಿನ ನೆನಪುಗಳ ಸಂಗ್ರಹ ನೆನಪಿನಂಗಳದಲ್ಲಿ ಮುಸ್ಸಂಜೆ ಹೊತ್ತು ಸೇಡಿಯಾಪು ಕೃಷ್ಣಭಟ್ಟರ ನೆನಪುಗಳ ಸಂಗ್ರಹ ಸೇಡಿಯಾಪು ನೆನಪುಗಳು ಬಿ.ವಿ.ಕಾರಂತರ ಆತ್ಮಕತೆಯ ಸಂಗ್ರಹ, ಕಮಲಾದೇವಿ ಚಟ್ಟೋಪಾಧ್ಯಾಯರ ಭಾರತೀಯ ಮಹಿಳೆಯರ ಸ್ವಾತಂತ್ರ್ಯ ಹೋರಾಟ, ಮೈತ್ರೇಯಿ ಮುಖ್ಯೋಪಾಧ್ಯಾಯರ ಬೆಳ್ಳಿ ಸಂಕೋಲೆಗಳು, ಮತ್ತಿತರ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ಮುಂಬೈನಲ್ಲಿ ನೆಲೆಸಿರುವ ಕುಂದಾಪುರ ಮೂಲದ ಮಿತ್ರಾ ವೆಂಕಟ್ರಾಜ್, ರುಕುಮಾಯಿ ಹಾಗೂ ಹಕ್ಕಿ ಮತ್ತು ಅವಳು ಕಥಾ ಸಂಕಲನ ಪ್ರಕಟಿಸಿದ್ದಾರೆ. ಒಂದು ಒಸಗೆ ಒಯ್ಯುವುದಿತ್ತು ಕಥೆಗೆ ರಾಷ್ಟ್ರೀಯ ಕಥಾ ಪುರಸ್ಕಾರ, ಹಕ್ಕಿ ಮತ್ತು ಅವಳು ಕಥಾ ಸಂಕಲನಕ್ಕೆ ವರ್ಧಮಾನ ಉದಯೋನ್ಮುಖ ಸಾಹಿತ್ಯ ಪ್ರಶಸ್ತಿ ಎಚ್. ವಿ. ಸಾವಿತ್ರಮ್ಮ ದತ್ತಿನಿಧಿ ಪ್ರಶಸ್ತಿ, ಮೊದಲಾದ ಪ್ರಶಸ್ತಿ ದೊರೆತಿವೆ. ೧೯೫೪ರಲ್ಲಿ ಉಡುಪಿಯ ಕೋಟೇಶ್ವರದಲ್ಲಿ ಹುಟ್ಟಿದ ಗಾಯತ್ರಿ ನಾವಡ ಜಾನಪದ ಸಂಶೋಧನಾ ರಂಗದಲ್ಲಿ ತೊಡಗಿಸಿಕೊಂಡವರು. ಮೂಕಜ್ಜಿ ಬದುಕು–ಸಾಹಿತ್ಯ; ಚಿತ್ತಾರ ಬರೆದ ಬದುಕು, ಸಿರಿಕತೆ, ಕರಾವಳಿ ಮಹಿಳಾ ಜನಪದ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು; ಕರಾವಳಿ ಮಹಿಳಾ ಜನಪದ ಕಥೆಗಳು, ಸಾಮೂಹಿಕ ವಿವಾಹ–ಒಂದು ಸಾಮಾಜಿಕ ಅಧ್ಯಯನ, ನಮ್ಮ ಹೆಣ್ಣು ಮಗು; ವಿರಚನೆ; ಭಾರತೀಯ ಸ್ತ್ರೀವಾದ– ಒಂದು ಸಂಕಥನ, ಮಹಿಳಾ ಸಂಕಥನ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ.

೧೯೩೯ರಲ್ಲಿ ಉಡುಪಿಯಲ್ಲಿ ಜನಿಸಿದ ಶಾರದಾ ಶೆಣೈ ಅವರು ಋಣಾನುಬಂಧ ಕಾದಂಬರಿಯನ್ನು ರಚಿಸಿದ್ದಾರೆ. ೧೯೪೯ರಲ್ಲಿ ಕುಂದಾಪುರದಲ್ಲಿ ಜನಿಸಿದ ಕೆ. ಶಾರದಾ ಭಟ್ ಪಯಣ ಹಾಗೂ ಪಲಾಯನ ಎಂಬ ಕಾದಂಬರಿಗಳನ್ನು ರಚಿಸಿದ್ದಾರೆ. ಕುಡಿರುದ್ಯಾವರದಲ್ಲಿ ೧೯೫೫ರಲ್ಲಿ ಜನಿಸಿದ ವಿದ್ಯಾ ಅವರು ಮಹಿಳೆ ಮತ್ತು ಮಕ್ಕಳು, ಸಪ್ತಮಿ (ಕಥಾಸಂಕಲನ), ದರ್ಪಣ(ಕಥಾಸಂಕಲನ) ಕೃತಿಗಳನ್ನು ರಚಿಸಿದ್ದಾರೆ. ೧೯೫೮ರಲ್ಲಿ ಉಡುಪಿಯಲ್ಲಿ ಜನಿಸಿದ ವಿದ್ಯಾ ಗಣೇಶ್ ಅವರು ಭಾವ ತರಂಗ(ಕಥಾ ಸಂಕಲನ), ಅಪೂರ್ವ (ಕಥಾಸಂಕಲನ), ಉಸುಳುಗಳು (ಕಥಾಸಂಕಲನ), ಕಥಾ ಕಿರಣ(ಕಥಾಸಂಕಲನ), ಒಳ ಹೊರಗಿನ ದನಿ (ಕವನ ಸಂಕಲನ), ಸ್ವರ ಸಂಸಾರ(ಕವನ ಸಂಕಲನ) ಕೃತಿಗಳನ್ನು ರಚಿದ್ದಾರೆ. ಕಾರ್ಕಳದಲ್ಲಿ ೧೯೫೮ರಲ್ಲಿ ಜನಿಸಿದ ಮುಮ್ತಾಜ್ ಬೇಗಂ ಅವರು ಅವ್ಯಕ್ತ (ಕಥಾಸಂಕಲನ), ಪರದೇಶಿ ಕಾದಂಬರಿಗಳನ್ನು ರಚಿಸಿದ್ದಾರೆ.

ಕನ್ನಡದೊಂದಿಗೆ ತುಳು ಸಾಹಿತ್ಯದಲ್ಲೂ ತೊಡಗಿಸಿಕೊಂಡ ಲೇಖಕಿಯರು ಹಲವರಿದ್ದಾರೆ. ಎಂ. ಜಾನಕಿ ಬ್ರಹ್ಮಾವರ, ಕ್ಯಾಥರೀನ್ ರಾಡ್ರಿಗಸ್, ಅತ್ರಾಡಿ ಅಮೃತಾಶೆಟ್ಟಿ ಇವರು ದ್ವಿಭಾಷಾ ಲೇಖಕಿಯರಾಗಿದ್ದಾರೆ. ಜಾನಕಿ ಬ್ರಹ್ಮಾವರ ಅವರ ಕುದುರುದ ಕೇದಗೆ, ತುಳು ಪರಿಸರವನ್ನು ಬಿಂಬಿಸುವ ಕಾದಂಬರಿಯಾಗಿದೆ. ಅತ್ರಾಡಿ ಅಮೃತಾಶೆಟ್ಟಿ, ಕ್ಯಾಥರೀನ್ ರಾಡ್ರಿಗಸ್ ಅವರ ಕಥೆಗಳು 'ಅತ್ಯುತ್ತಮ ತುಳು ಕಥೆಗಳು' ಸಂಕಲನದಲ್ಲಿ ಸೇರ್ಪಡೆಗೊಂಡಿದೆ. ಮೂಲತಃ ಉತ್ತರ ಕರ್ನಾಟಕದವರಾಗಿದ್ದು, ಉಡುಪಿಯಲ್ಲಿ ನೆಲೆಸಿರುವ ಮಾಧವಿ ಭಂಡಾರಿಯವರು ಉತ್ಸವದಿಂದ ಉತ್ಸವಕ್ಕೆ, ಕಟ್ಟುವುದು ಬಲುಕಷ್ಟ–ಕವನ ಸಂಕಲನಗಳನ್ನು ಹಾಗೂ ಗಾಯಿ ಕಥಾ ಸಂಕಲನವನ್ನು ಪ್ರಕಟಿಸಿದ್ದಾರೆ. ಅವರು ತಮ್ಮ ಕಥೆಗಳಲ್ಲಿ ಬಂಡಾಯದ ಧೋರಣೆಗಳನ್ನು ಸೂಕ್ಷ್ಮವಾಗಿ ಬಿಂಬಿಸಿರುತ್ತಾರೆ. ಸುಶೀಲಾ ಆರ್ ರಾವ್ ಇನ್ನೂ ಅನೇಕ ಕವಯತ್ರಿಯರು ಜಿಲ್ಲೆಯಲ್ಲಿದ್ದಾರೆ. ವಿನೋದ ಸಾಹಿತ್ಯದಲ್ಲಿ ಟಿ. ಎಸ್. ಅಂಬುಜಾ ಅವರೂ ಗಮನಾರ್ಹ ಲೇಖಕಿ. ಅಂಬುಜಾ ಅವರ ಹೋಯ್ ಮತ್ತೇನು ವಿಶೇಷ, ರಂಗದ ರಂಗೋಲಿ ಮತ್ತು ನಗುಮೊಗದ

ಸಿರಿ, ಉತ್ತಮ ವಿನೋದ ಗುಣವನ್ನು ಒಳಗೊಂಡ ಕೃತಿಗಳಾಗಿವೆ. ಇವರಿಗೆ ಅತ್ತಿಮಬ್ಬೆ ಪ್ರಶಸ್ತಿ ಸಂದಿದೆ. ಮಕ್ಕಳ ಸಾಹಿತ್ಯದಲ್ಲಿ ಈಶ್ವರಿ ಕೆ. ಭಟ್, ಲೀಲಾಬಾಯಿ ಹೀಗೆ ಹಲವು ಲೇಖಕಿಯರನ್ನು ಹೆಸರಿಸಬಹುದು.

## ತುಳು ಭಾಷೆ ಮತ್ತು ಸಾಹಿತ್ಯ

ತುಳು ಭಾಷೆಯು ದ್ರಾವಿಡ ಭಾಷಾ ವರ್ಗದಲ್ಲಿ ಪ್ರಮುಖ ಸ್ಥಾನ ಪಡೆದ ಸಂಪದ್ಯುಕ್ತವಾದ ಪ್ರಾಚೀನ ಭಾಷೆಯಾಗಿದೆ. ಪಶ್ಚಿಮ ಕರಾವಳಿಯ ಕಲ್ಯಾಣಪುರ ಹೊಳೆ ಮತ್ತು ಚಂದ್ರಗಿರಿ ಹೊಳೆಗಳ ನಡುವಿನ ಪ್ರದೇಶದ (ಇಂದಿನ ಕಾಸರಗೋಡು, ದಕ್ಷಿಣಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪ್ರಸಿದ್ಧವಾಗಿರುವ) ಜನರು ಹೆಚ್ಚಾಗಿ ಆಡುವ ಭಾಷೆ ತುಳು. ತುಳು ಭಾಷೆಯನ್ನಾಡುವ ಜನರನ್ನು ತುಳವರೆಂದು ಅವರ ಪ್ರದೇಶವನ್ನು ತುಳುನಾಡು ಎಂದೂ ಕರೆಯಲಾಗುತ್ತದೆ. ಸಂಗಂ ಸಾಹಿತ್ಯದ ಅಗನಾನೂರುನಲ್ಲಿ ತುಳುವರನ್ನು ಹೆಸರಿಸಲಾಗಿದೆ. (ಅಕಂ–೧೫–೧–೫) ತುಳುನಾಡು ಮತ್ತು ಅಲ್ಲಿನ ಜನರ ಬಗ್ಗೆ ಶಾಸನಗಳಲ್ಲಿ ಉಲ್ಲೇಖಗಳಿವೆ. ಕನ್ನಡ ಮತ್ತು ಸಂಸ್ಕೃತಗಳಲ್ಲಿ ರಚಿತವಾಗಿರುವ ದಕ್ಷಿಣಕನ್ನಡದ ಅನೇಕ ಶಾಸನಗಳು ತುಳುನಾಡನ್ನು ಹೆಸರಿಸುತ್ತವೆ. ಉಡುಪಿಯ ಹತ್ತಿರ ತುಳು ಲಿಪಿಯಲ್ಲಿರುವ ಕನ್ನಡ ಶಾಸನವೊಂದು ದೊರಕಿದೆ.

ಆಳುಪ, ಭೈರರಸ, ಡೊಂಬಹೆಗಡೆ ಮುಂತಾದ ರಾಜವಂಶಗಳು ಅನೇಕ ಶತಮಾನಗಳ ಕಾಲ ತುಳುನಾಡನ್ನು ಆಳಿದರು. ತುಳು ಶಬ್ದವನ್ನು ಮೊದಲು ಭೂಪ್ರದೇಶಕ್ಕೂ, ನಂತರ ಅಲ್ಲಿನ ಜನವರ್ಗಕ್ಕೂ, ಕೊನೆಯದಾಗಿ ಭಾಷೆಗೂ ಬಳಸಲಾಯಿತೆಂದು ಲಭ್ಯ ದಾಖಲೆಗಳಿಂದ ಸ್ಪಷ್ಟವಾಗುತ್ತದೆ. ತುಳು ಮತ್ತು ಅದರಿಂದ ನಿಷ್ಪತ್ತಿಯಾದ ತುಳುವ ಶಬ್ದಗಳ ಮೂಲವನ್ನು ಹುಡುಕುವ ಪ್ರಯತ್ನವನ್ನು ಅನೇಕ ವಿದ್ವಾಂಸರು ಮಾಡಿದ್ದಾರೆ. ತುಳುನಾಡಿಗೆ ಸೇರಿದ್ದು, ತುಳು ಮಾತನಾಡುವವನು, ಮೃದು, ತಿರಳು, ನೀರೂಡಿದ ಎಂಬ ಅರ್ಥಗಳಲ್ಲಿ ತುಳುವ ಎಂಬ ಶಬ್ದವನ್ನು ಪ್ರಯೋಗಿಸಲಾಗುತ್ತದೆ. ಪ್ರಾಂತೀಯ ವ್ಯತ್ಯಾಸಗಳ ಆಧಾರದಿಂದ ಅದನ್ನು ಉಡುಪಿ ತುಳು, ಮಂಗಳೂರು ತುಳು, ಪುತ್ತೂರು ತುಳು, ಕಾಸರಗೋಡು ತುಳು ಎಂದು ವರ್ಗೀಕರಿಸಬಹುದು. ಮಾತನಾಡುವುದರಲ್ಲಿ ಕಂಡುಬರುವ ವ್ಯತ್ಯಾಸಗಳಿಂದಾಗಿ ಬ್ರಾಹ್ಮಣರ ತುಳು ಮತ್ತು ಸಾಮಾನ್ಯ ತುಳು ಎಂದು ಎರಡು ಮುಖ್ಯವಾದ ವ್ಯತ್ಯಾಸಗಳನ್ನು ಗುರುತಿಸಬಹುದು. ಹೀಗೆಲ್ಲ ವೈವಿಧ್ಯವಿದ್ದೂ, ಭಾಷೆ ಬಗ್ಗೆ ಯಾವುದೇ ಗೊಂದಲವಿಲ್ಲದೆ, ಸಹಜ ವ್ಯವಹಾರವಿರುವುದು ಈ ಪ್ರದೇಶದ ವೈಶಿಷ್ಟ್ಯವಾಗಿದೆ. ತುಳು ಬಹಳ ಅಭಿವೃದ್ಧಿಗೊಂಡಿರುವ ಭಾಷೆಯಾಗಿದ್ದರೂ ಅದಕ್ಕೆ ತನ್ನದೇ ಆದ ಲಿಪಿಯಿಲ್ಲವೆಂದೂ ಮಲೆಯಾಳ ಮಾದರಿಯ ಲಿಪಿಯೊಂದನ್ನು ತುಳು ಹೊಂದಿದ್ದಾಗಿಯೂ ಅಭಿಪ್ರಾಯಪಡಲಾಗಿತ್ತು. ಆದರೆ ತುಳುವಿಗೆ ಪ್ರತ್ಯೇಕ ಲಿಪಿಯಿದ್ದು, ತುಳುಲಿಪಿಯನ್ನೇ ವಿಷ್ಣುತುಂಗ ಮೊದಲಾದವರು ಬಳಸಿದ್ದರೆಂಬುದು ಇತ್ತೀಚೆಗೆ ಬೆಳಕಿಗೆ ಬಂದಿದೆ.

ತುಳುವಿನಲ್ಲಿ ಪಾಡ್ದನ, ಸಂಧಿ, ಕಬಿತ, ಮದಿಪು, ಕತೆ, ಗಾದೆ, ಒಗಟು, ನೃತ್ಯ–ಪದ್ಯ, ಉರಲ್, ಜೋಗುಳ, ಅಜ್ಜಿಕತೆ ಮೊದಲಾದ ಸಮೃದ್ಧ ಜನಪದ ಸಾಹಿತ್ಯವಿದೆ. ಪಾಡ್ದನ ಅಥವಾ ಸಂಧಿಯು ಲಾವಣಿಯಂತೆ ಕಥನಾತ್ಮಕ ಗೀತೆಯಾಗಿದ್ದು, ತುಳು ಜನಪದ ಸಾಹಿತ್ಯದ ಅತ್ಯಂತ ಸತ್ತ್ವಶಾಲಿ ವಿಭಾಗವಾಗಿದೆ. ಪಾಡ್ದನಗಳು ತುಳುನಾಡಿನಲ್ಲಿ ಪೂಜೆಗೊಳ್ಳುವ ಭೂತಗಳ ಕುರಿತು, ಅಥವಾ ಜನಪದ ಮಹಾವ್ಯಕ್ತಿಗಳ ಕುರಿತು ಕತೆಗಳನ್ನು ನಿರೂಪಿಸುತ್ತವೆ. ಭೂತದ ಪಾಡ್ದನಗಳನ್ನು ಆಯಾ ಭೂತಗಳಿಗೆ ಆವೇಶ ಬರುವುದಕ್ಕೆ ಮೊದಲು ಹಾಡಲಾಗುವುದು. ಪಾಡ್ದನವನ್ನು ಹಾಡುವಾಗ ತೆಂಬರೆ ಎಂಬ ಸಣ್ಣ ಚರ್ಮವಾದ್ಯವನ್ನು ಬಾರಿಸುತ್ತಾರೆ. ಮನೋರಂಜನೆಗಾಗಿಯೂ ಪಾಡ್ದನಗಳನ್ನು ಹಾಡುತ್ತಾರೆ. ನಾಲ್ಕುನೂರಕ್ಕೂ ಹೆಚ್ಚಿನ ಭೂತಗಳಿಗೆ ಸಂಬಂಧಪಟ್ಟ ಪಾಡ್ದನಗಳು ಲಭ್ಯವಾಗಿದ್ದು, ಪಾಡ್ದನಗಳ ರಚನೆಗಳ ಕಾಲ ಹದಿನೈದರಿಂದ ಹದಿನೇಳನೆಯ ಶತಮಾನ ಎಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ರೆವರೆಂಡ್ ಎ. ಮೇನರ್ ಅವರ ತುಳು ಪಾಡ್ದನೊಳು (೧೮೮೬) ಗ್ರಂಥದಲ್ಲಿ ಇಪ್ಪತ್ತೊಂದು ಪಾಡ್ದನಗಳಿವೆ. ಕನರಾಡಿ ವಾದಿರಾಜ ಭಟ್ಟರು ಸಂಪಾದಿಸಿದ ಪಾಡ್ದನಗಳು (೧೯೭೪) ಹಾಗೂ ಅಮೃತ ಸೋಮೇಶ್ವರರ ತುಳು ಪಾಡ್ದನ ಸಂಪುಟ (೧೯೯೭) ಮೌಲಿಕ ಗ್ರಂಥಗಳಾಗಿವೆ. ಭತ್ತದ ಸಸಿಗಳನ್ನು ನೆಡುವಾಗ ಹೆಣ್ಣುಮಕ್ಕಳು ಮಾತ್ರ ಹಾಡುವ ಹಾಡುಗಳು ತುಳುವಿನ

ಕಬಿತಗಳು. ಇವು ಸ್ವಲ್ಪ ದೀರ್ಘ ಕವಿತೆಯಾಗಿದ್ದು ವಿವಿಧ ಘಟನೆಗಳನ್ನು ನಿರೂಪಿಸುತ್ತವೆ. ಮದಿಪು, ಪದ್ಯವೂ ಅಲ್ಲದ ಗದ್ಯವೂ 'ಅಲ್ಲದ ಶ್ಲೋಕ'ದ ರೀತಿಯಲ್ಲಿದ್ದು, ಭೂತನೃತ್ಯ ಮಾಡುವವರು ನೃತ್ಯದ ಸಮಯದಲ್ಲಿ ಅದನ್ನು ಹೇಳುತ್ತಾರೆ. 'ಉರಲ್' ಕನ್ನಡದ ಚುಟುಕುಗಳಿಗೆ ಹತ್ತಿರವಾಗಿದ್ದು, ಇದನ್ನು ಉಳುವಾಗ, ಗಾಡಿ ಹೊಡೆಯುವಾಗ, ಹೆಂಡ ಇಳಿಸುವಾಗ ಹಾಡುತ್ತಾರೆ. ಇದು ಎರಡು ಪಾದಗಳಿಂದ ಕೂಡಿದ್ದು ಅಂತ್ಯಪ್ರಾಸವನ್ನು ಹೊಂದಿರುತ್ತದೆ. ಮೊದಲನೆಯ ಪಾದದಲ್ಲಿ ಅಭಿವ್ಯಕ್ತಿಗೊಂಡ ವಿಚಾರಕ್ಕಿಂತ ವಿಭಿನ್ನವಾದ ಬೇರೊಂದು ಆಶ್ಚರ್ಯಕರ ತಿರುವನ್ನು ಎರಡನೆಯ ಪಾದವು ಪಡೆದುಕೊಳ್ಳುತ್ತದೆ ಎಂಬುದು ಇದರ ವಿಶೇಷವಾಗಿದೆ. ಆಟಿಕಳಂಜ ತಂಡದವರು ಪದ್ಯಗಳನ್ನು ಹಾಡುತ್ತಾ ಕುಣಿಯುತ್ತಾರೆ. ಗಾದೆ ಮತ್ತು ಒಗಟುಗಳು ಪ್ರಾಚೀನರ ಯುಕ್ತಿಪೂರ್ಣ ರಚನೆಗಳಾಗಿವೆ. ಇವಲ್ಲದೆ ಸಿರಿ, ಪಂಜುರ್ಲಿ ಮುಂತಾದ ಜನಪದ ಮಹಾಕಾವ್ಯಗಳಿವೆ. ಫಿನ್ಲೆಂಡಿನ ಲಾರಿಹಾಂಕೊ ಅವರು ಸಿರಿಪಾಡ್ದನದ (ಮೂಲಪಾಠ: ಗೋಪಾಲನಾಯ್ಕ) ಉದ್ಗ್ರಂಥವನ್ನು ಇಂಗ್ಲಿಷಿಗೆ ಅನುವಾದಿಸಿ ಪ್ರಕಟಿಸಿದ್ದಾರೆ.

ತುಳು ಮಹಾಭಾರತದ ಕರ್ತೃ ಅರುಣಾಬ್ಜ ಉಡುಪಿಯ ಕೊಡವೂರಿನವನು. ಅರುಣಾಬ್ಜನು ತನಗೆ ಮಾರ್ಗದರ್ಶನ ನೀಡಿದ ಗುರುಕಾವ್ಯ ರಾಮಾಯಣವೆಂದು ಕಾವ್ಯಗುರು ವಿಣಾಪಾಣಿ ಮುಕುಂದ ಎಂದು ತಿಳಿಸಿರುವುದರಿಂದ ಇವನನ್ನು ಆದಿಕವಿ ಎಂದು ತಿಳಿಯಲಾಗದೆಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ಅಲ್ಲದೆ, ಇವನು ರುಕ್ಮಿಣೀ ಸ್ವಯಂವರ, ಕೀಚಕ ವಧೆ, ಬಾಣಾಸುರವಧೆ ಎಂಬ ಮೂರು ಕಾವ್ಯಗಳನ್ನು ಬರೆದ ಗುಡ್ಡೆತ ರಾಯೆ ಎಂಬ ಕವಿಯನ್ನು, ಹಾಗೂ ಅಂಬರೀಷೋಪಾಖ್ಯಾನ ಎಂಬ ಭಕ್ತಿಕಾವ್ಯವನ್ನು ರಚಿಸಿದ ಇನ್ನೊಬ್ಬ ಹಿರಿಯ ಕವಿಯನ್ನು ಸ್ಮರಿಸುತ್ತಾನೆ. ಅರುಣಾಬ್ಜನು ಮಹಾಭಾರತದ ಸಂಭವ ಪರ್ವದ ಕಥೆಯನ್ನು ಕಾವ್ಯರೂಪದಲ್ಲಿ ಬರೆಯುವುದಾಗಿ ಹೇಳಿದರೂ ಆತ ಖಾಂಡವದಹನದ ಪರ್ವದವರೆಗೆ ಹನ್ನೆರಡು ಉಪಪರ್ವಗಳನ್ನು ೨೪ ಸಂಧಿಗಳಲ್ಲಿ ಬರೆದಿದ್ದಾನೆ.

೧೮೭೨ರಲ್ಲಿ ರೆವರೆಂಡ್ ಜೆ.ಬ್ರಿಗೆಲ್‌ರವರು ಇಂಗ್ಲಿಷಿನಲ್ಲಿ ತುಳುಭಾಷೆಯ ಮೊತ್ತ ಮೊದಲ ವ್ಯಾಕರಣ ಗ್ರಂಥ ಗ್ರ್ಯಾಮರ್ ಆಫ್ ತುಳು ಲಾಂಗ್ವೇಜ್ ಬರೆದದ್ದು ಇದರಲ್ಲಿ ತುಳುಕಾವ್ಯದ ಬಗ್ಗೆ ಬರೆಯುತ್ತಾ ಅಜ್ಞಾತ ಕಾವ್ಯವೊಂದರ ನಾಲ್ಕು ಪದ್ಯಗಳನ್ನು ಉದಾಹರಿಸಿದ್ದಾರೆ. ಈ ಪದ್ಯಗಳಲ್ಲಿ ತುಳು ಪ್ರಾಚೀನ ಕಾವ್ಯಗಳಲ್ಲಿ ಕಂಡುಬರುವ 'ಸ್ಟ' ಕಾರವು 'ತ' ಕಾರವಾಗಿದೆ. ಕಾಲ್ಡ್‌ವೆಲ್ ತನ್ನ ಎ ಕಂಪ್ಯಾರೇಟಿವ್ ಗ್ರ್ಯಾಮರ್ ಓಲ್ಡ್ ದ್ರಾವಿಡಿಯನ್ ಲಾಂಗ್ವೇಜ್‌ನಲ್ಲಿ ದ್ರಾವಿಡ ಭಾಷೆಗಳಲ್ಲಿ ತುಳು ಹೆಚ್ಚು ಶಕ್ತಿಶಾಲಿ ಭಾಷೆ ಎಂದು ಗುರುತಿಸಿದ್ದಾನೆ. ಶ್ರೀ ಭಾಗವತೋ, ಕಾವೇರಿ, ತುಳು ಮಹಾಭಾರತ ಕೃತಿಗಳು ತುಳುವಿನಲ್ಲಿ ದೊರಕಿರುವ ಮಹಾಕಾವ್ಯಗಳಾಗಿವೆ. ಇದಲ್ಲದೆ ಪ್ರಾಚೀನ ಗದ್ಯಗ್ರಂಥ ತೆಂಕಿಲ್ಲಾಯ ಎಂಬ ಕುಲನಾಮದ ಲೇಖಕ ಬರೆದಿರುವ ತುಳು ದೇವೀಮಹಾತ್ಮೆ ಲಭ್ಯವಾಗಿದೆ. ಇತ್ತೀಚೆಗೆ ತುಳು ಕರ್ಣಪರ್ವದ ನಾಲ್ಕೈದು ವಾಲೆಗಳು ಲಭ್ಯವಾಗಿದ್ದು ಇದು ಅರುಣಾಬ್ಜ ಕವಿಯ ತುಳುಭಾರತದ ಮುಂದುವರಿದ ಭಾಗವಲ್ಲವೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ.

ಕ್ರೈಸ್ತ ಪಾದ್ರಿಗಳು ತುಳು ಕಲಿತು ತುಳುವಿಗೆ ಕನ್ನಡ ಲಿಪಿಯನ್ನು ಬಳಸಿ ಧಾರ್ಮಿಕ ಪುಸ್ತಕಗಳ ಮುದ್ರಣ ಮಾಡಲು ಆರಂಭಿಸಿದಾಗ ತುಳುವಿನ ಆಧುನಿಕ ಯುಗ ಪ್ರಾರಂಭವಾಯಿತು ಎಂದು ತಿಳಿದುಬರುತ್ತದೆ. ಗ್ರಂಥಸ್ಥ ತುಳು ಆರಂಭವಾದುದು ಅನುವಾದದ ಮೂಲಕವಾಗಿದ್ದು, ಈ ಕಾರ್ಯ ಕ್ರೈಸ್ತ ಮಿಶನರಿಗಳಿಂದಲೇ ಮೊದಲಾಯಿತು ಎಂಬುದು ಗಮನಾರ್ಹ ಸಂಗತಿಯಾಗಿದೆ. ಮಿಶನರಿಗಳು ತುಳು ಬಗೆಗೆ ಆಸಕ್ತಿ ತಳೆದು, ಮುದ್ರಣಕ್ಕೆ ಆರಂಭ ಮಾಡಿದಾಗ, ತುಳುವು ಲಿಪಿರಹಿತ ಭಾಷೆಯೆಂದು ಪರಿಗಣಿತವಾಗಿದ್ದಿತು. ಆದ್ದರಿಂದ ಬಾಸೆಲ್ ಮಿಶನರಿಗಳು ತುಳುವನ್ನು ಕನ್ನಡ ಲಿಪಿಯಲ್ಲಿ ಬರೆದು ಕೆಲವು ಪುಸ್ತಕಗಳನ್ನು ಹೊರತಂದರು. ಬಾಸೆಲ್ ಮಿಶನ್ನಿನ ಕೊಡುಗೆಗಳಲ್ಲಿ ತುಳು ಸಾಹಿತ್ಯ ಪ್ರಕಟಣೆಯು ಒಂದಾಗಿದೆ. ತುಳು ಪುಸ್ತಕ ಪ್ರಕಟಣೆಯು ಗೋಸ್ಪೆಲ್ ಆಫ್ ಸೇಂಟ್ ಮ್ಯಾಥ್ಯೂವಿನ ತುಳು ಭಾಷಾಂತರ 'ಮತ್ತಾಯನ ಸುವಾರ್ತೆ' ಯಿಂದ (೧೮೪೭) ಪ್ರಾರಂಭವಾಯಿತು. ತುಳು ಕೀರ್ತನೆಗಳ ಪುಸ್ತಕವೊಂದು ಅದೇ ವರ್ಷ ಪ್ರಕಟವಾಗಿರಬೇಕೆಂದು ಶ್ರೀನಿವಾಸ ಹಾವನೂರರು ಅಭಿಪ್ರಾಯಪಡುತ್ತಾರೆ. ೧೮೪೭ರಲ್ಲಿ 'ನ್ಯೂ ಟೆಸ್ಟಮೆಂಟ್' ಮುದ್ರಣಗೊಂಡು ಅದರ

ಮರುಮುದ್ರಣವು ೧೯೫೯ರಲ್ಲಿ ಬಂದಿತು. ೧೮೫೯ರಲ್ಲಿ ತುಳು ಭಾಷೆಯ ಸಮಗ್ರ ಬೈಬಲ್ ಕನ್ನಡ ಲಿಪಿಯಲ್ಲಿ ಮುದ್ರಣಗೊಂಡಿತು. ತುಳುಭಾಷೆಯ ಮೊತ್ತ ಮೊದಲ ಬೃಹತ್ ಗ್ರಂಥವೆಂದು, ತುಳು ಗೀತೆಗಳ ಸಂಕಲನವು ೧೮೬೪ರಲ್ಲಿ ಪ್ರಕಟವಾಯಿತೆಂದು ತಿಳಿದುಬರುತ್ತದೆ. ಇದರಲ್ಲಿ ಅಮ್ಮಾನ್ ಕೆ.ಮರರ್ ಅವರಿಂದ ರಚಿತವಾದ ಹಾಡುಗಳಿದ್ದವು. ನಂತರದ ಆವೃತ್ತಿಯಲ್ಲಿ ಎ.ಮೆನರ್ ಹಾಡುಗಳೂ ಇದರಲ್ಲಿ ಸೇರಿತು. ೧೮೭೨ರಲ್ಲಿ ತುಳುವಿನ ಮೊದಲ ವ್ಯಾಕರಣ ಗ್ರಂಥ ರೆವರೆಂಡ್ ಜೆ.ಬ್ರಿಗೆಲ್‌ರವರು 'ಗ್ರಾಮರ್ ಆಫ್ ತುಳು ಲ್ಯಾಂಗ್ವೇಜ್' ಎಂಬ ಗ್ರಂಥವನ್ನು ಇಂಗ್ಲಿಷಿನಲ್ಲಿ ರಚಿಸಿದರು. ೧೮೮೬ರಲ್ಲಿ ಪ್ರಕಟಿಸಿದ ತುಳು–ಇಂಗ್ಲಿಷ್ ಡಿಕ್ಷ್ನರಿ (ರೆವರೆಂಡ್ ಜಿ.ಮೆಕೇರರ್ ಪ್ರಾರಂಭಿಸಿ ರೆವರೆಂಡ್ ಎ.ಮ್ಯಾನರ್ ಪೂರ್ಣಗೊಳಿಸಿದ) ತುಳುವಿನ ಮೊತ್ತ ಮೊದಲ ನಿಘಂಟು. ತುಳುವು ಭಾರತೀಯ ಮತ್ತು ಪಾಶ್ಚಾತ್ಯ ವಿದ್ವಾಂಸರ ಅರಿವಿಗೆ ಬಂದುದು ಮಿಶನರಿಗಳು ಮುದ್ರಿಸಿದ ಈ ನಿಘಂಟು ಮತ್ತು ವ್ಯಾಕರಣ ಕೃತಿಗಳಿಂದ ಎಂಬುದು ಉಲ್ಲೇಖನೀಯ ಸಂಗತಿಯಾಗಿದೆ. ತುಳು ಭಾಷೆಗೆ ಗ್ರಂಥಸ್ಥ ರೂಪ ನೀಡಿ ಅದಕ್ಕೆ ಸಾಹಿತ್ಯಿಕವಾಗಿ ಮನ್ನಣೆಯನ್ನು ತಂದುಕೊಟ್ಟದ್ದು ಬಾಸೆಲ್ ಮಿಶನ್ ಅದರದ್ದಾಗಿದೆ. ಈ ಮಿಶನರಿಗಳು ತುಳು ಭಾಷೆಗಾಗಿ ಮಾಡಿದ ಕೆಲಸಗಳನ್ನು ತುಳು ಜಾಗೃತಿಯ ಮೊದಲ ಹಂತವೆಂದು ವಿದ್ವಾಂಸರು ಗುರುತಿಸಿದ್ದಾರೆ. ೧೮೮೬ರಲ್ಲಿ ಪ್ರಕಟವಾದ 'ತುಳು ಪಾಡ್ದನೊಳು' ಎಂಬ ಕೆಲವು ತುಳು ಪಾಡ್ದನಗಳ ಸಂಗ್ರಹವು ತುಳು ಜನಪದ ಸಾಹಿತ್ಯ ಸಂಗ್ರಹ ಕ್ಷೇತ್ರಕ್ಕೆ ಬಾಸೆಲ್ ಮಿಶನ್ ಸಂಸ್ಥೆಯ ಕೊಡುಗೆಯಾಗಿದೆ. ಸಹಸ್ರಾರ್ಥ ಗಾದೆಲು (೧೮೭೪) ತುಳು ಗೀತೊಳೆ ಪುಸ್ತಕ (೧೮೭೮) ಇಂಗ್ಲಿಷ್–ತುಳು ನಿಘಂಟು (೧೮೮೮), ಎ.ಸಿ.ಬರ್ನೆಲ್ ಅವರ ದಿ ಡೆವಿಲ್ ವರ್ಷಿಪ್ ಆಫ್ ದಿ ತುಳುವಾಸ್ (೧೮೯೪–೯೭) ಇಂಥ ಹಲವು ಕೃತಿಗಳನ್ನು ಬಾಸೆಲ್ ಮಿಶನ್ ಪ್ರಕಟಿಸಿತು. ಬಾಸೆಲ್ ಮಿಶನ್‌ನ ಧರ್ಮಗುರುಗಳು ಬೈಬಲನ್ನು ತುಳುವಿಗೆ ಅನುವಾದಿಸಿದರು (ದ್ವಿ.ಮು.–೧೮೫೯). ತುಳುವಿನಲ್ಲಿ ನೂರಾರು ಸ್ತೋತ್ರ ಗೀತೆಗಳನ್ನು ರಚಿಸಿದರು. ತುಳುವಿನ ಮೊತ್ತ ಮೊದಲ ನಿಘಂಟನ್ನು (ಈ ಹಿಂದೆ ಉಲ್ಲೇಖಿಸಿರುವ ರೆವರೆಂಡ್ ಜಿ.ಮೆಕೇರರ್ ಪ್ರಾರಂಭಿಸಿ, ರೆವರೆಂಡ್ ಎ. ಪೂರ್ಣಗೊಳಿಸಿದ) ಪ್ರೊ.ಎಂ. ಮರಿಯಪ್ಪ ಭಟ್ಟ ಹಾಗೂ ಎ.ಶಂಕರ ಕೆದಿಲ್ಲಾಯ ಅವರು ಪರಿಷ್ಕರಿಸಿ ೮,೨೪೮ ತುಳು ಶಬ್ದಗಳಿರುವ ಹೊಸ ನಿಘಂಟನ್ನು ರಚಿಸಿದರು. ಎಮ್.ಆರ್. ಸುಬ್ರಹ್ಮಣ್ಯ ಶಾಸ್ತ್ರಿ ಅವರ ತುಳು ಕನ್ಯೋಪದೇಶ (ಪ್ರ.ಮು.೧೯೧೬, ದ್ವಿ.ಮು. ೧೯೩೦)ವು ಐತಿಹಾಸಿಕ ಮಹತ್ವವುಳ್ಳ ಮೌಲಿಕ ಗ್ರಂಥವಾಗಿದೆ. ಕನ್ಯೋಪದೇಶವು ಬ್ರಾಹ್ಮಣರ ತುಳುವಿನಲ್ಲಿದ್ದು, ೮೮ ಶ್ಲೋಕಗಳನ್ನು ಒಳಗೊಂಡಿದೆ. ೧೯೨೦ರಲ್ಲಿ ತುಳುನಾಡು ಪ್ರಾಂತರಚನೆಯ ವಿಚಾರವೆದ್ದಿತು. ಅದರ ಪರಿಣಾಮವಾಗಿ ತುಳುನಾಡ್ ಬ್ಯಾಂಕ್, ತುಳುನಾಡು ಛಾಪಾಖಾನೆ ಸಂಸ್ಥೆಗಳು ತಲೆಎತ್ತಿದವು. ೧೯೨೮ರಲ್ಲಿ ಉಡುಪಿಯಲ್ಲಿ ಸ್ಥಾಪನೆಯಾದ ತುಳುವ ಮಹಾಸಭೆ ಪಣಿಯಾಡಿ ಶ್ರೀನಿವಾಸ ಉಪಾಧ್ಯಾಯ (ಎಸ್.ಯು.ಪಣಿಯಾಡಿ) ಅವರ ನೇತೃತ್ವದಲ್ಲಿ ಮಾಡಿದ ಕಾರ್ಯ ತುಳು ಸಾಹಿತ್ಯ ಚರಿತ್ರೆಯಲ್ಲಿ ಅನನ್ಯವಾದುದು. ಭಾರತದಿಂದ ಬ್ರಿಟಿಷರನ್ನು ಓಡಿಸಲು ನಡೆಸುತ್ತಿದ್ದ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದಕ್ಕಾಗಿ ತುಳುನಾಡಿನ ಎಸ್.ಯು.ಪಣಿಯಾಡಿ, ಪೊಳಲಿ ಶೀನಪ್ಪ ಹೆಗ್ಡೆ ಹಾಗೂ ಕೆ.ಬಿ.ನಾರಾಯಣಶೆಟ್ಟಿ ಕಿಲ್ಲೆಯನ್ನು ವೆಲ್ಲೂರಿನ ಸೆಂಟ್ರಲ್ ಜೈಲಿಗೆ ಹಾಕಲಾಯಿತೆಂದು, ಅಲ್ಲಿ ಅವರು ತುಳುಕತೆ, ಕವನಗಳನ್ನು ಬರೆಯುತ್ತಿದ್ದುದಾಗಿ ತಿಳಿದುಬರುತ್ತದೆ.

'ತುಳುವ ಮಹಾಸಭೆ' ವಾರ್ಷಿಕವು ಉಡುಪಿಯ ತುಳು ಮಹಾಸಭೆಯ ಕಾರ್ಯದರ್ಶಿಯಾಗಿದ್ದ ಎಸ್.ಯು.ಪಣಿಯಾಡಿಯವರ ಸಂಪಾದಕತ್ವದಲ್ಲಿ ೧೯೨೯ರಲ್ಲಿ ಪ್ರಕಟವಾಯಿತು. ಇದರಲ್ಲಿ ಕೆಲವು ತುಳು ಕವಿತೆಗಳು, ತುಳು ಭಾಷೆ ಹಾಗೂ ನಾಡಿನ ಬಗ್ಗೆ ಸಂಶೋಧನಾ ಲೇಖನಗಳು: ಕೊರಡ್ಕಲ್ ಶ್ರೀನಿವಾಸರಾವ್, ಉಡುಪಿ ಕಾಂತಾಚಾರ್ಯ, ಪಿ.ಸುಬ್ರಹ್ಮಣ್ಯಶಾಸ್ತ್ರಿ, ಕೆ.ಹೊನ್ನಯ್ಯಶೆಟ್ಟಿ, ಮುದ್ರಾಡಿ ಜನಾರ್ದನಾಚಾರ್ಯರ ಕವಿತೆಗಳು ಹಾಗೂ ಸತ್ಯಮಿತ್ರ ಬಂಗೇರ, ಅಡ್ಡೆ ಸುಬ್ರಹ್ಮಣ್ಯ ಆಚಾರ್, ಮಂಜೇಶ್ವರ ಗೋವಿಂದಪೈ, ಎಮ್. ಗಣಪತಿರಾವ್ ಐಗಳ್, ಉಡುಪಿ ಗೋವಿಂದರಾವ್ ಮೊದಲಾದವರ ತುಳು, ಕನ್ನಡ ಲೇಖನಗಳಿದ್ದುದಾಗಿ ತಿಳಿದುಬರುತ್ತದೆ.

ಪಣಿಯಾಡಿಯವರ ನೇತೃತ್ವದಲ್ಲಿ ತುಳುವ ಸಾಹಿತ್ಯ ಮಾಲೆಯ ಒಂದನೆಯ ಹೂ–ಕನ್ನಡ ಕೃಷ್ಣ ಸಂಧಾನದ ಭಾಷಾಂತರವಾದ ಬಡಕಬೈಲು ಪರಮೇಶ್ವರಯ್ಯ ಅವರ 'ತುಳು ಕಿಟ್ಣ ರಾಜಿ ಪರ್ಸಂಗೊ' (೧೯೨೯) ಯಕ್ಷಗಾನ ಪ್ರಸಂಗವನ್ನು ಮೂಲದೊಂದಿಗೆ ನೀಡಲಾಗಿದೆ. ಬಡಕಬೈಲ್ ಪರಮೇಶ್ವರಯ್ಯ ಅವರು ಶಂಕರಾಚಾರ್ಯರ ಭಜಗೋವಿಂದಂನ ಶ್ಲೋಕವನ್ನು ತುಳುವಿಗೆ ಅನುವಾದಿಸಿ 'ತುಳು ಭಜಗೋವಿಂದೊ' (೧೯೨೯) ಕೃತಿಯನ್ನು ರಚಿಸಿದ್ದಾರೆ.

ನಂದಳಿಕೆ ಅಮುಣಿಂಜೆ ಗುತ್ತು ಶೀನಪ್ಪ ಹೆಗ್ಗಡೆಯವರು ತುಳು ನಾಡಿನ ಮತ್ತು ತುಳು ಸಾಹಿತ್ಯದ ಇತಿಹಾಸದಲ್ಲಿ ಅವಿಸ್ಮರಣೀಯರು. ಸಂಶೋಧಕರು ಹಾಗೂ ಆದ್ಯ ತುಳು ಸಾಹಿತಿಗಳಲ್ಲಿ ಒಬ್ಬರು. ದಕ್ಷಿಣ ಕನ್ನಡ ಜಿಲ್ಲೆಯ ಸಂಸ್ಕೃತಿ, ಇತಿಹಾಸಗಳ ಬಗೆಗೆ ಕನ್ನಡದಲ್ಲಿ ಹಾಗೂ ತುಳುವಿನಲ್ಲಿ ಅನೇಕ ಗ್ರಂಥಗಳನ್ನು ರಚಿಸಿದ್ದಾರೆ. ತುಳು ಭಾಷೆಯಲ್ಲಿ ಲಲಿತಸಾಹಿತ್ಯ, ಕತೆ, ನಾಟಕ ಮುಂತಾದವನ್ನು ಬರೆದವರು. ಶ್ರೀಯುತರು ಕನ್ನಡದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಇತಿಹಾಸ, ಭೂತಾಳ ಪಾಂಡ್ಯರಾಯನ ಅಳಿಯಕಟ್ಟು; ತುಳು ಭಾಷೆಯ ಪ್ರಥಮ ಕಾದಂಬರಿ ಎನಿಸುವ ಮಿತ್ಯನಾರಾಯಣನ ಕತೆ ಕೃತಿಗಳನ್ನು ರಚಿಸಿದ್ದಾರೆ. ಶಿನಪ್ಪ ಹೆಗ್ಗಡೆಯವರ ಪುಸ್ತಕಗಳಲ್ಲಿ ಅವರು ಪೊಳಲಿಯ ಸುತ್ತಣದ ನಡುನಾಡ ತುಳು ಬಳಸಿರುವುದಾಗಿ ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. ತುಳುವ ಸಾಹಿತ್ಯ ಮಾಲೆಯ ಎರಡನೆಯ ಹೂ–ತುಳು ಜನಪದ ಸಾಹಿತ್ಯದ ಆಸಕ್ತಿಯಿಂದಾಗಿ ಸಂಗ್ರಹಿಸಿದ ತುಳುವಿನ ಬಲೀಂದ್ರನ ಪಾಡ್ದನ ತುಳುವಾಲ ಬಲಿಯೇಂದ್ರ (೧೯೨೯) ಇದರಲ್ಲಿ ಮೂರು ಸಂಧಿಗಳಿವೆ. ಇವರು ಬಂಗಾರ್ ದಂಗಿದ ಕತೆ (೧೯೩೩) ಮತ್ತು ಮಿತ್ಯನಾರಾಯಣ ಕತೆ ಎಂಬ ಎರಡು ಗ್ರಂಥಗಳು ಪ್ರಕಟವಾಗಿವೆ. ಮಿತ್ಯನಾರಾಯಣನ ಕತೆ ಜೈಲಿನಲ್ಲಿ ಹುಟ್ಟಿದ ಕಿರು ಕಾದಂಬರಿ. ಈ ಕಿರು ಕಾದಂಬರಿಯಲ್ಲಿ ತುಳುನಾಡಿನ ಜಾತ್ರೆಗಳು, ಸಂತೆಗಳು, ಒಡವೆಗಳು, ಆಟ, ನಾಗಪೂಜೆ–ಇವುಗಳ ಬಗ್ಗೆ ವಿವರಣೆಗಳಿರುವುದಾಗಿ ತಿಳಿದುಬರುತ್ತದೆ. ಇದನ್ನು ಪಣಿಯಾಡಿಯವರು, ೧೯೩೫ರಲ್ಲಿ ತಮ್ಮ ತುಳುಸಾಹಿತ್ಯ ಮಾಲೆಯಿಂದ ಪ್ರಕಟಿಸಿದ್ದಾರೆ. ಇವರ ಮತ್ತೊಂದು ಗ್ರಂಥ ದಕ್ಷಿಣ ಕನ್ನಡ ಜಿಲ್ಲೆಯ ಚರಿತ್ರೆ ಮತ್ತು ಭೂತಾಳ ಪಾಂಡ್ಯರಾಯನ ಅಳಿಯಕಟ್ಟು (೧೯೩೫) ಹಾಗೂ ಎನ್.ಎಸ್.ಕಿಲ್ಲೆಯವರ ಜತೆಯಲ್ಲಿ ಬರೆದ ಪ್ರಾಚೀನ ತುಳುನಾಡು. ಈ ಎರಡು ಕೃತಿಗಳನ್ನು ಕನ್ನಡದಲ್ಲಿ ಬರೆದರು. ಇವರು ನವನವಾಂಕ ಶ್ರೀನಿವಾಸಲಿಪಿ ಎಂಬ ಅಂಕಲಿಪಿಯನ್ನು ಸಂಶೋಧಿಸಿದ್ದರೆಂಬುದಾಗಿ ತಿಳಿದುಬರುತ್ತದೆ. ಹೀಗೆ ಸ್ವಾತಂತ್ರ್ಯ ಹೋರಾಟ, ತುಳು ಚಳವಳಿ, ಐತಿಹ್ಯಗಳ ಸಂಶೋಧನೆ ಮತ್ತು ಸೃಜನಶೀಲ ಬರವಣಿಗೆ ಇವುಗಳಲ್ಲಿ ತೊಡಗಿಕೊಂಡಿದ್ದ ಶೀನಪ್ಪ ಹೆಗ್ಡೆಯವರಿಗೆ ತುಳುವಾಲ ಬಿರುದು ಸಂದಿದೆ.

ಸತ್ಯಮಿತ್ರ ಬಂಗೇರರ, ಅಳಿಯ ಸಂತಾನದ ಕಟ್ಟ್‌ದ ಗುಟ್ಟು (೧೯೨೯) ಎಂಬ ತುಳು ಗ್ರಂಥವು ತುಳು ಸಾಹಿತ್ಯ ಮಾಲೆಯಿಂದ ಪ್ರಕಟವಾದ ಮೂರನೆಯ ಗ್ರಂಥವಾಗಿದೆ. ಎಸ್.ಯು. ಪಣಿಯಾಡಿಯವರ ತುಳು ವ್ಯಾಕರಣ (೧೯೩೨), ತುಳು ಭಾಷೆಯಲ್ಲಿಯೇ ರಚಿತವಾದ ವ್ಯಾಕರಣವಾಗಿದ್ದು, ತುಳುವ ಸಾಹಿತ್ಯ ಮಾಲೆಯ ನಾಲ್ಕನೆಯ ಗ್ರಂಥವಾಗಿದೆ. ಸಂಶೋಧನಾ ಕ್ಷೇತ್ರದಲ್ಲಿ ಆಚಾರ್ಯ ಕೃತಿಯೆನಿಸಿದ ಈ ಗ್ರಂಥಕ್ಕೆ ಬ್ರಿಗೆಲ್ ಅವರ *Grammar of Tulu Language* ಪ್ರೇರಣೆ ನೀಡಿದ್ದರೂ, ಪಣಿಯಾಡಿಯವರು ಆ ಗ್ರಂಥದಲ್ಲಿನ ದೋಷಗಳನ್ನು ನಿವಾರಿಸಿದ್ದಾರೆಂದು ತಿಳಿದುಬರುತ್ತದೆ. ಈ ಗ್ರಂಥದ ಮುನ್ನುಡಿಯಲ್ಲಿ ೧೯೨೧ರಲ್ಲಿ ಮಾದರಿಗಾಗಿ ಸತಿ ಕಮಲೆ ಎಂಬ ಕಾದಂಬರಿಯನ್ನು ತುಳು ಭಾಷೆಯಲ್ಲಿ ಬರೆದಿದ್ದರೂ ಹಣದ ಅಡಚಣೆಯಿಂದ ಪ್ರಕಟಿಸಲಾಗಲಿಲ್ಲ' ಎಂದು ತಿಳಿಸಿದ್ದರು. ನಂತರ ಈ ಗ್ರಂಥವು ೧೯೩೪–೩೬ರ ಅವಧಿಯಲ್ಲಿ ಅಚ್ಚಾಗಿದುದಾಗಿ ತಿಳಿದುಬರುತ್ತದೆ. ಪಣಿಯಾಡಿಯವರ ಸತೀಕಮಲೆ ತುಳು ಕಾದಂಬರಿಯಾಗಿದೆ. ಗಾಂಧೀ ವಿಚಾರಧಾರೆಯ ಪ್ರಭಾವವನ್ನು ಕಾಣುವ ಈ ಕಾದಂಬರಿಯನ್ನು ಪಣಿಯಾಡಿಯವರು ಶಿವಳ್ಳಿ ಬ್ರಾಹ್ಮಣರ ತುಳುವಿನಲ್ಲಿ ಬರೆದುದಾಗಿ ತಿಳಿದುಬರುತ್ತದೆ. ೧೯೩೦ಕ್ಕೆ ಮೊದಲೇ ಎಮ್.ಪಿ.ವಿ.ಶರ್ಮ ಅವರ ಕನ್ನಡಕೊ ಎಂಬ ತುಳು ಸಂಗ್ರಹ ಪ್ರಕಟವಾಗಿದ್ದು, ಇವು ತುಳು ಸಾಹಿತ್ಯ ಚರಿತ್ರೆಯಲ್ಲಿ ಮೈಲಿಗಲ್ಲನ್ನು ನಿರ್ಮಿಸಿವೆ.

ಎಂ.ವಿಠಲ ಹೆಗ್ಗಡೆಯವರ ಮದ್‌ಮಾಳತ್ತ್ ಮದ್‌ಮಾಯೆ (೧೯೩೩) ಎಂಬ ಕಥಾಗ್ರಂಥ, ತುಳುವ ಸಾಹಿತ್ಯ ಮಾಲೆ ಪ್ರಕಟಿಸಿದ ಆರನೆಯ ಗ್ರಂಥ ದುಂದೊಂಜಿ ಪಾತೆರ ಗ್ರಂಥ, ಬರೆದ ಕೆ. ಹೊನ್ನಯ್ಯಶೆಟ್ಟರು ತುಳುವಿನಲ್ಲಿ ಇಷ್ಟರವರೆಗೆ ಇಂಥ ಕತೆ ಬಂದಿಲ್ಲವೆಂದು ಶ್ಲಾಘಿಸಿದ್ದಾರೆ. ತುಳುವ ಸಾಹಿತ್ಯ ಮಾಲೆಯ ಏಳನೆಯ ಗ್ರಂಥ ತುಳುವಿನಲ್ಲಿ ಪ್ರಕಟವಾದ ಮೊದಲ ನಾಟಕ ಮಾಧವ ತಿಂಗಳಾಯರ ಜನಮರ್ಲ್ (೧೯೩೩) ಗ್ರಂಥ. ಇದು ರಂಗದಲ್ಲಿ ಪ್ರದರ್ಶನಗೊಂಡು ಜನಪ್ರಿಯತೆ ಪಡೆದಿದೆ. ಇದಲ್ಲದೆ, ಮಾಧವ ತಿಂಗಳಾಯರ ಧರ್ಮದ ಉದಲ್ ಮತ್ತು ಬದಿರಕ್ಕಸೆ ಎಂಬ ನಾಟಕಗಳನ್ನು ಬರೆದಿದ್ದು, ಇದು ತುಳುವ ಸಾಹಿತ್ಯಮಾಲೆಯಲ್ಲಿ ಪ್ರಕಟವಾಗಲು ಸಿದ್ಧವಾಗಿದ್ದು, ಆದರೆ ತುಳುವ ಸಾಹಿತ್ಯ ಮಾಲೆ ನಿಂತಿದ್ದರಿಂದಾಗಿ ಪ್ರಕಟವಾಗಲಿಲ್ಲವೆಂದು ತಿಳಿದುಬರುತ್ತದೆ. ಸುಮಾರು ೧೯೩೩ರ ವೇಳೆಗೆ ಬಂದ ಇನ್ನಿತರ ಕೆಲವು ಗ್ರಂಥಗಳೆಂದರೆ ಕೆ.ಗಂಗಾಧರ ರಾಮಚಂದ್ರ ಅವರ 'ತುಳು ಪದ್ಯಮಾಲಿಕೆ', ಎಲ್.ನಾರಾಯಣರಾವ್ ಅವರ ಪತಿತೋದ್ಧರಣ (ಪದ್ಯಾವಳಿ) ಮೊದಲಾದವು. ಎಸ್.ಯು. ಪಣಿಯಾಡಿಯವರ ತುಳು ಕೃತಿಗಳ ರಚನೆ ಮತ್ತು ಮೇಲ್ಕಂಡ ಕೃತಿಗಳ ಪ್ರಕಟಣೆ, ತುಳುವ ಮಹಾಸಭೆಯ ಸ್ಥಾಪನೆ, ತುಳುನಾಡ್ ಪ್ರೆಸ್, ತುಳುನಾಡು ಬ್ಯಾಂಕ್ ಮುಂತಾದ ಚಟುವಟಿಕೆಗಳ ಕಾರ್ಯಾರಂಭ ಮಾಡಿದುದು ತುಳು ಜಾಗೃತಿಯ ಎರಡನೆಯ ಹಂತವೆಂದು ಗುರುತಿಸಲಾಗಿದೆ. ತುಳು ಚಳವಳಿಯನ್ನೇ ದೊಡ್ಡ ಪ್ರಮಾಣದಲ್ಲಿ ನಡೆಸಿದವರು ಎಸ್.ಯು.ಪಣಿಯಾಡಿ, ಸತ್ಯಮಿತ್ರ ಬಂಗೇರ, ಶೀನಪ್ಪ ಹೆಗ್ಗಡೆ ಮೊದಲಾದವರು. ತುಳುನಾಡಿನ ವಾಸಿಗಳೆಲ್ಲಾ ತುಳುವರೆಂಬ ಸಿದ್ಧಾಂತ ಈ ಚಳವಳಿದಾರರದ್ದಾಗಿತ್ತು. ಈ ಚಳವಳಿಯಿಂದಾಗಿ ತುಳು ಭಾಷಾಭಿಮಾನ ಜಾಗೃತಿಗೊಂಡಿದ್ದಲ್ಲದೆ, ತುಳುನಾಡು ಮತ್ತು ಭಾಷೆಯ ಬಗ್ಗೆ ಸಂಶೋಧನೆ ಮಾಡುವುದಕ್ಕೆ ವಿದ್ವಾಂಸರನ್ನು ಪ್ರೇರೇಪಿಸಿತು.

ಉಡುಪಿಯ ನವಯುಗ ಪತ್ರಿಕೆಯು ೧೯೩೬ ರಿಂದ ಸುಮಾರು ಮೂರು ವರ್ಷಗಳ ಕಾಲ ತಿಂಗಳಿಗೊಂದು ತುಳು ಸಂಚಿಕೆಯನ್ನು ಪುರವಣಿಯಾಗಿ ಪ್ರಕಟಿಸಿದ್ದಾಗಿ ತಿಳಿದುಬರುತ್ತದೆ. ಇದರಲ್ಲಿ ಎಂ.ವಿಠಲಹೆಗ್ಡೆ, ಆರ್.ಜೆ.ಗಾಮಾ, ಶೀನಪ್ಪ ಹೆಗ್ಡೆ ಮೊದಲಾದವರು ಬರೆದಿದ್ದಾರೆ. ತುಳು ಸಾಹಿತ್ಯ ಚರಿತ್ರೆಯಲ್ಲಿ ಎರಡನೆಯ ಘಟ್ಟ. ಕೆಮ್ತೂರು ದೊಡ್ಡಣ್ಣಶೆಟ್ಟರು ಕಸ್ತೂರಿ ಸಾಹಿತ್ಯ ಮಾಲೆ, ಉಡುಪಿ ಎಂಬ ಪ್ರಕಾಶನ ಸಂಸ್ಥೆಯ ಮೂಲಕ ಹತ್ತಕ್ಕೂ ಹೆಚ್ಚು ತುಳುಕೃತಿಗಳನ್ನು ಪ್ರಕಟಿಸಿದ್ದಾಗಿದೆ. ಅವು ವಾವ್ವಾರೆ ಕಮ್ಮೆನ (ಹಾಡು), ಬೊಂಬಾಯಿ ಸಂಗತಿ (ಲಾವಣಿ), ತುಳು ನಾಡ್ದ ಮಲ್ಲಿಗೆ (ಭಾವಗೀತೆ), ಕಸ್ತೂರಿ ತುಳು ಭಜನೆ ಹಾಡುಗಳು, ಅಂಗದ ರಾಜಿ ಪರ್ಸಂಗ (ಯಕ್ಷಗಾನ), ರಾಮಯಣ್ದ ಪಾಡ್ದನ, ಭಾರಿ ಕಮ್ಮೆನ (ನಾಟಕದ ಪದ್ಯಾವಳಿ), ತುಳು ಶೋಭಾನೆ ಹಾಡುಗಳು, ಸಾರೆಸದ ಪದೊಕುಳು, ತುಳುವಾಲ ಬಲಿಯೇಂದ್ರ.. ಕೆಮ್ತೂರರು ತುಳು ನಾಟಕ ಕ್ಷೇತ್ರದಲ್ಲಿ ಪ್ರಸಿದ್ಧಿ ಪಡೆದವರು. ಮುತ್ತುನ ಮದ್ಮೆಯಿಂದ ಮೊದಲುಗೊಂಡು ಹದಿಮೂರು ತುಳು ನಾಟಕಗಳನ್ನು ರಚಿಸಿದ್ದಾರೆ. ಸೀತಾನದಿ ಗಣಪಯ್ಯ ಶೆಟ್ಟಿ ಅವರು ತುಳು ಭಜನಾವಳಿಯು ಪ್ರಕಟಗೊಂಡಿದೆ.

ಕಟಪಾಡಿಯ ಕ್ಯಾಥರೀನ್ ರೋಡ್ರಿಗಸ್ ಕೊಂಕಣಿ ಮಾತೃಭಾಷೆಯಾಗಿದ್ದರೂ ಕೊಂಕಣಿ, ತುಳು, ಕನ್ನಡ ಮೂರು ಭಾಷೆಗಳಲ್ಲೂ ನಾಟಕಗಳನ್ನು ಬರೆದಿದ್ದಾರೆ. ಇವರು ೫೦ಕ್ಕಿಂತಲೂ ಹೆಚ್ಚು ತುಳು ನಾಟಕಗಳನ್ನು ರಚಿಸಿದ್ದಾರೆ. ಅವು ಪ್ರದರ್ಶನ ಕಂಡು ರಂಗದಲ್ಲೂ ಯಶಸ್ವಿಯಾಗಿವೆ. ತುಳು ನಾಟಕ ರಚನೆಗಾಗಿ ಹಲವಾರು ಬಾರಿ ರತ್ನಮ್ಮ ಹೆಗ್ಗಡೆ ಸ್ಮಾರಕ ಪ್ರಶಸ್ತಿ ಪಡೆದಿದ್ದಾರೆ. ಮಂಗಳೂರು ಆಕಾಶವಾಣಿಯಿಂದ ಹಲವು ಜನಪದ ರೂಪಕಗಳು ಪ್ರಸಾರಗೊಂಡಿವೆ. ಕೇದಗೆ (೧೯೯೨) ಸಿರಿತುಪ್ಪೆ (೧೯೯೬), ಪ್ರಕಟಿತ ತುಳು ನಾಟಕಗಳು. ಇವುಗಳಲ್ಲಿ ಕೇದಗೆ ಮೊತ್ತ ಮೊದಲ ರತ್ನಮ್ಮ ಹೆಗ್ಗಡೆ ನಾಟಕ ಸ್ಪರ್ಧೆಯ (೧೯೮೭) ಬಹುಮಾನ ಪಡೆದುಕೊಂಡಿದೆ.

ತುಳು ಯಕ್ಷಗಾನ ಮತ್ತು ತುಳು ನಾಟಕಗಳ ಹೊಸ ಪ್ರಯೋಗ, ೧೯೭೦ರ ಅನಂತರ ತುಳು ಸಿನಿಮಾ ತಯಾರಿಕೆಯನ್ನು ಆರಂಭಿಸಿದುದು, ತುಳು ಯಕ್ಷಗಾನ ತಿಟ್ಟು ಎಂಬ ಪ್ರತ್ಯೇಕ ಮಾರ್ಗವನ್ನು ಗುರುತಿಸಬೇಕೆಂಬ ವಾದ, ಅನೇಕ ತುಳು ನಾಟಕಗಳ ಮೌಲಿಕತೆಯ ಬಗ್ಗೆ ವಾದ–ವಿವಾದಗಳಿದ್ದರೂ,

ಸಾಮಾನ್ಯ ಜನರ ಮೆಚ್ಚುಗೆ ಗಳಿಸಿದ ತುಳು ನಾಟಕಗಳು, ತುಳು ಜಾನಪದದ ಆಕರ್ಷಣೆ ಮತ್ತು ಅಧ್ಯಯನಕ್ಕೆ ತೊಡಗಿದ ಅವಧಿಯು ತುಳು ಜಾಗೃತಿಯ ಮೂರನೆಯ ಘಟ್ಟವೆಂದು ವಿದ್ವಾಂಸರಿಂದ ಪರಿಗಣಿತವಾಗಿದೆ.

ತುಳುನಾಡಿನ ದಲಿತರ ಅಸಹಾಯಕತೆಯನ್ನು ತೆರೆದಿಡುವ ಎಂ.ಜಾನಕಿ ಬ್ರಹ್ಮಾವರ ಅವರ ಪ್ರಥಮ ತುಳು ಕಾದಂಬರಿ ಕುದುರುದ ಕೇದಗೆ (೧೯೯೪), ಕಪ್ಪುಗಿಡಿ ಭೂಸುಧಾರಣೆಯಿಂದ ಉಂಟಾದ ಸಾಮಾಜಿಕ ಪರಿವರ್ತನೆಯನ್ನು ಚಿತ್ರಿಸುತ್ತದೆ. ತುಳು ಜನಪದ ಕತೆಗಳು ಹುಲುಸಾಗಿವೆ. ಕನರಾಡಿ ವಾದಿರಾಜ ಭಟ್, ಮೊದಲಾದವರು ತುಳು ಜನಪದ ಕತೆಯನ್ನು ಸಂಗ್ರಹಿಸಿದ್ದಾರೆ. ಎಂ.ವಿ.ಹೆಗ್ಡೆಯವರ ಮುದಿಮಾಳತ್ತ್ ಮದಿಮಾಯೆ (೧೯೩೩) ಆಧುನಿಕ ತುಳು ಸಾಹಿತ್ಯದ ಮೊದಲ ಕತೆಯೆಂದು ಪರಿಗಣಿತವಾಗಿದೆ. ಕಿನ್ಯ ಕತೆಕ್ಲು (೧೯೮೬), ಬೋಂಟೆ (೧೯೮೮) ಬಾ.ಸಾಮಗರ ಕಥಾಸಂಕಲನಗಳಾಗಿವೆ. ಉದಿಪು (೧೯೮೭) ಹಾಗೂ ಒಸಯೊ (೧೯೯೪) ಸಂಕಲನಗಳಲ್ಲಿ ಮುದ್ದುಮೂಡುಬೆಳ್ಳೆಯವರು ಗ್ರಾಮೀಣ ಬದುಕಿನ ವಿವಿಧ ಮುಖಗಳನ್ನು ಚಿತ್ರಿಸಿದ್ದಾರೆ. ಬೀಜ್ಞ ಎಂಬ ತುಳು ಕಾದಂಬರಿಯನ್ನು ರಚಿಸಿದ್ದು, ಇದಕ್ಕೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಹಾಗೂ ಮುಂಬೈ ಮೊಗವೀರ ಪತ್ರಿಕೆಯ ಪ್ರಶಸ್ತಿಯೂ ಸಂದಿದೆ. ಪರ್ವ ಪರ್ಬದ ಪೊರ್ಲು ಕಬಿತೆಲು (೧೯೯೭) – ಗ್ರಂಥದ ಸಂಪಾದನಾ ಕಾರ್ಯವನ್ನು ನಿರ್ವಹಿಸಿದ್ದಾರೆ. ಅಮೃತಶೆಟ್ಟಿ ಆತ್ರಾಡಿ ಅವರ ಒಂಜಿ ನೆಂಪುದ ನಡುಟು, ಮುದ್ದುಮೂಡು ಬೆಳ್ಳೆ ಅವರ ಬೀಮಾಬಿರು ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಕೊರಡ್ಕಲ್ ಶ್ರೀನಿವಾಸರಾಯರು, ಉಡುಪಿ ಶ್ರೀಕಾಂತಾಚಾರ್ಯ, ಪಿ.ಸುಬ್ರಹ್ಮಣ್ಯ ಶಾಸ್ತ್ರಿ, ಕೆ.ಹೊನ್ನಯ್ಯಶೆಟ್ಟಿ, ಮುದ್ರಾಡಿ ಜನಾರ್ದನ ಆಚಾರ್ಯ, ತುಳು ಭಜನಾವಳಿಯ ಸೀತಾನದಿ ಗಣಪಯ್ಯ ಶೆಟ್ಟಿ ಮೊದಲಾದವರು ತುಳು ಚಳವಳಿಯ ಸಂದರ್ಭದಲ್ಲಿ ತುಳು ಕಾವ್ಯವನ್ನು ಸಮೃದ್ಧಗೊಳಿಸಿದವರು. ಆಲಡೆ (೧೯೮೩), ಕನರಾಡಿ ವಾದಿರಾಜ ಭಟ್ಟರು ಜೀವನ ಪಾಡ್ದನ (೧೯೮೯) ಕವನ ಸಂಕಲನವನ್ನು ರಚಿಸಿದ್ದಾರೆ. ಡಾ.ಯು.ಪಿ.ಉಪಾಧ್ಯಾಯ, ಡಾ.ಸುಶೀಲಾ ಉಪಾಧ್ಯಾಯ, ಬನ್ನಂಜೆ ಬಾಬು ಅಮೀನ್, ಡಾ.ಗಾಯಿತ್ರಿ ನಾವಡ, ಪೀಟರ್ ಜೆ.ಕ್ಲಾಸ್, ಕು.ಶಿ. ಹರಿದಾಸಭಟ್ ಮೊದಲಾದವರು ತುಳು ಜಾನಪದ ಅಧ್ಯಯನಕ್ಕೆ ಮೌಲಿಕ ಕೊಡುಗೆ ನೀಡಿದ್ದಾರೆ.

ತುಳು ಕೂಟದ ಸ್ಥಾಪನೆ, ತುಳು ಪತ್ರಿಕೆಗಳ ಪ್ರಕಟಣೆ, ೧೯೭೭ರಲ್ಲಿ ಉಡುಪಿ ಗೋವಿಂದ ಪೈ ಸಂಶೋಧನಾ ಕೇಂದ್ರ. ಈ ಅವಧಿಯಲ್ಲಿ ತುಳುವಿಗಾಗಿ ಸಾಂಘಿಕ ಪ್ರಯತ್ನಗಳು, ಸಮ್ಮೇಳನಗಳು ಅನುವಾದ ಕಾರ್ಯಗಳು, ತುಳು ದಿನಾಚರಣೆ – ಇವು ಆರಂಭಗೊಂಡಿದ್ದಲ್ಲದೆ, ಇಂದಿಗೂ ನಡೆಯುತ್ತಾ ಬಂದಿದೆ. ಮಂಗಳೂರಿನಲ್ಲಿ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿ ಸ್ಥಾಪನೆಗೊಂಡಿತು. ಇವು ತುಳು ಜಾಗೃತಿಯ ನಾಲ್ಕನೆಯ ಹಂತದ ಪ್ರಮುಖ ಅಂಶಗಳಾಗಿವೆ. ತುಳುವ ಪ್ರದೇಶದ ಕುರಿತಾಗಿ ಉತ್ತಮ ಕೃತಿಗಳು ರಚಿಸಲ್ಪಟ್ಟಿವೆ. ಗುರುರಾಜಭಟ್ ಮತ್ತು ಕೆ.ವಿ.ರಮೇಶ್ ರವರ ಕೃತಿಗಳೂ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಚಾರಿತ್ರಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಿಚಯವನ್ನು ಪಡೆಯಲು ಸಹಕಾರಿಯಾಗಿವೆ. ಅಲ್ಲದೆ, ದಕ್ಷಿಣ ಕನ್ನಡ ಜಿಲ್ಲೆಯ ಜನಜೀವನ, ಧಾರ್ಮಿಕ ಬೆಳವಣಿಗೆಯನ್ನು ಕೃಷ್ಣಕುಡ್ವ, ಶೀನಪ್ಪ ಹೆಗ್ಗಡೆಯವರ ಕೃತಿಗಳು ಪರಿಚಯಿಸುತ್ತವೆ. ತುಳು ಸಮ್ಮೇಳನ, ತುಳುಕೂಟ, ತುಳುವರ ಉತ್ಸವಗಳ ಮೂಲಕ ತುಳು ಸಾಹಿತ್ಯ ಮತ್ತು ಸಂಸ್ಕೃತಿಯತ್ತ ಆಸಕ್ತಿ ಬೆಳೆಯುತ್ತಿದೆ. ತುಳು ರಂಗಭೂಮಿ ತುಳುಚಲನಚಿತ್ರ, ತುಳು ಯಕ್ಷಗಾನ ಇವು ತುಳು ಭಾಷಾಭಿಮಾನವನ್ನು ಜಾಗೃತಿಗೊಳಿಸಿ ಮತ್ತು ಆ ಭಾಷೆಯ ಅಭಿವೃದ್ಧಿಗೆ ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯನ್ನು ಸ್ಥಾಪಿಸಲಾಗಿದೆ. ಅಕಾಡೆಮಿಯ ಮರೆಯಬಾರದ ತುಳವರ ಮಾಲೆಯಲ್ಲಿ ಅ.ಬಾಲಕೃಷ್ಣ ಪೊಳಲಿಯವರ ಎನ್.ಎ.ಶೀನಪ್ಪ ಹೆಗ್ಗಡೆ, ಮುರಳೀಧರ ಉಪಾಧ್ಯ ಹಿರಿಯಡಕ ಅವರ ಎಸ್.ಯು.ಪಣಿಯಾಡಿ, ದೇರ್ಲ ಅವರ ನವಯುಗದ ಹೊನ್ನಯ್ಯ ಶೆಟ್ರ್ ಮೊದಲಾದ ತುಳು ಸಾಹಿತ್ಯದ ಪ್ರಾತಃಸ್ಮರಣೀಯರ ಕುರಿತ ಗದ್ಯಕೃತಿಗಳು ಪ್ರಕಟಗೊಂಡಿವೆ.

ಯು.ಪಿ.ಉಪಾಧ್ಯಾಯ, ಸಂಶೋಧಕ, ಭಾಷಾ ವಿದ್ವಾಂಸ, ಕನ್ನಡ ಉಪಭಾಷೆಗಳ ತೌಲನಿಕ ಅಧ್ಯಯನ ವಿಷಯದಲ್ಲಿ ಡಾಕ್ಟರೇಟ್ ಪಡೆದಿದ್ದಾರೆ. ನಂಜನಗೂಡು ಕನ್ನಡ, ಕೊಡಗುಕನ್ನಡ, ಕನ್ನಡ

ಧ್ವನಿಶಾಸ್ತ್ರ, ದ್ರಾವಿಡ ಮತ್ತು ನೀಗ್ರೋ ಆಫ್ರಿಕಾ ಸಾಂಸ್ಕೃತಿಕ ಭಾಷಾ ವೈಜ್ಞಾನಿಕತೆ, ಭೂತಾರಾಧನೆ ಮೊದಲಾದವು ಇವರು ಇಂಗ್ಲಿಷ್‌ನಲ್ಲಿ ರಚಿಸಿದ ಕೃತಿಗಳು. ತುಳು ನಾಡಿನ ಜನಪದ ಪುರಾಣಗಳು (ಸಂಪಾದಿತ) ಕೃತಿಗಳು. ಸುಶೀಲಾ ಯು ಪಿ ಉಪಾಧ್ಯಾಯ, ಭಾಷಾವಿಜ್ಞಾನ, ತುಳು ಜಾನಪದ ಅಧ್ಯಯನಗಳಲ್ಲದೆ ಹಿಂದಿ–ಕನ್ನಡ *Common Voccabulary, Kuyi Phonetics Reader*, ಗ್ರಂಥಗಳನ್ನು ಇಂಗ್ಲಿಷ್‌ನಲ್ಲೂ, ಮಲಯಾಳಿ ಭಾಷೆ ಮತ್ತು ಸಾಹಿತ್ಯ ಹಾಗೂ ಜನಪದ ಆರಾಧನೆ ಮತ್ತು ರಂಗಕಲೆ ಕೃತಿಗಳನ್ನು ಕನ್ನಡದಲ್ಲೂ ಬರೆದಿದ್ದಾರೆ. ಈ ವಿದ್ವಾಂಸ ದಂಪತಿಗಳ ನೇತೃತ್ವದಲ್ಲಿ ಸಿದ್ಧವಾಗಿರುವ ತುಳು ನಿಘಂಟು ಸಂಪುಟ ತುಳು ಭಾಷೆ, ಸಾಹಿತ್ಯ, ಸಂಸ್ಕೃತಿಗಳ ಅಧ್ಯಯನಕ್ಕೂ ಉತ್ತಮ ಆಕರವೆನಿಸಿದೆ.

ಜಿಲ್ಲೆಯಲ್ಲಿ ಭೂತಗಳ ವೇಷಹಾಕುವ, ಪಾಡ್ದನ ಹಾಡುವ ಕಲಾವಿದರು ಹಲವರಿದ್ದಾರೆ. ಓಂತಿಬೆಟ್ಟುನ ದಂಗು ಪಾಣಾರ ನಿಪುಣ ಭೂತ ವೇಷಧಾರಿಯಾಗಿದ್ದು, ಹೊರರಾಜ್ಯಗಳಲ್ಲಿಯೂ ಪ್ರದರ್ಶನ ನೀಡಿದ್ದಾರೆ. ನೀರೆಬೈಲೂರಿನ ನರಂಗಪರವ, ಪೂವಪ್ಪ, ಪರವ ಸಹ ಒಳ್ಳೆಯ ಕಲಾವಿದರೆನಿಸಿದ್ದಾರೆ. ಅಚ್ಚಿಲಾಡು ಗ್ರಾಮದ ಜಗ್ಗು ಪಾಣಾರ ಡೋಗುನಲಿಕೆಯಂತಹ ಕಲಾವಿದರು ಭೂತ ನರ್ತನ ಮತ್ತು ಸಂಧಿಗಳ ಹಾಡುಗಾರಿಕೆಯಲ್ಲಿಯೂ ನಿಪುಣರೆನಿಸಿದ್ದಾರೆ. ಚಂದುಕೋಟ್ಯಾನ್ (ಉಡುಪಿ) ಸಂಧಿ ಹಾಡುಗಾರರಾಗಿ ಗುರುತಿಸಲ್ಪಟ್ಟಿದ್ದಾರೆ. ರಾಮಕೃಷ್ಣ ಐತಾಳ, ನಾಗೇಶ್ವರ ಬಾಯಿರಿ, ಗೋಪಾಲಕೃಷ್ಣ ಸಾಮಗ ಮೊದಲಾದವರು ನಾಗ ಪಾತ್ರಿಗಳಾಗಿ ಹೆಸರಾಗಿದ್ದಾರೆ.

ಮಂಚಕಲ್ಲು ಗ್ರಾಮದ ಮಣಿನಲ್ಕೆ, ದಂಗು ಪಾಣಾರನ ಪತ್ನಿ ಅಂಜಾರು ತೋಟದಮನೆ ಗ್ರಾಮದ ಅಮ್ಮಣ್ಣಿ ಪಾಣಾರ್, ಸಗ್ರಿಗ್ರಾಮದ ಅಮ್ಮು ಪೂಜಾರ್ತಿ, ಪಯ್ಯು ಮುಂಡಾಲ್ದಿ, ಆದಿ ಉಡುಪಿಯ ಐತಕ್ಕ ಪೂಜಾರ್ತಿ ಮೊದಲಾದವರು ಪಾಡ್ದನ ಹಾಡುಗಾರ್ತಿಯರಾಗಿ ಪ್ರಸಿದ್ಧರಾಗಿದ್ದಾರೆ. ಬಡಗಬೆಟ್ಟು ಬೈಲೂರಿನ ಕರ್ಗಿನಲಿಕೆ ಅವರು ಕಲ್ಲುರ್ಟಿ, ಪಂಜುರ್ಲಿ, ಗುಳಿಗ ದೇವಪೂಂಜ, ಮೈಸಂದಾಯ, ಪಿಲಿಚಾಮುಂಡಿ, ಜುಮಾದಿ ಕೋಟಿ ಚೆನ್ನಯ್ಯ ಮೊದಲಾದ ಭೂತಗಳ ಸಂಬಂಧಿಸಿದ ಪಾಡ್ದನಗಳಲ್ಲದೆ, ಕಬಿತ, ಸಂಧಿಗಳನ್ನೂ ಸುಶ್ರಾವ್ಯವಾಗಿ ಹಾಡುವ ಪ್ರತಿಭಾವಂತೆಯಾಗಿದ್ದು ವಿದ್ವಾಂಸರಿಂದ 'ಪಾಡ್ದನಗಳರಾಣಿ' ಎಂಬ ಪ್ರಶಂಸೆಗೆ ಪಾತ್ರರಾಗಿದ್ದಾರೆ. ಇವರು ಜನಪದ ಕತೆಗಳನ್ನು ಹೇಳುವುದರಲ್ಲಿ, ಜನಪದ ವೈದ್ಯ ಮಾಡುವುದರಲ್ಲಿ ಸಹ ಹೆಸರಾಗಿದ್ದಾರೆ. ನಾಟಿವೈದ್ಯದ ಪರಿಣತಿಗಾಗಿ ಕಾರ್ಕಳ ತಾಲೂಕು ಮಾಳದ ಕುಂಜಿರಮೂಲ್ಯ ಅವರಿಗೆ ಅಹಮದಾಬಾದಿನ ಭಾರತೀಯ ಮ್ಯಾನೇಜ್‌ಮೆಂಟ್ ಸಂಸ್ಥೆಯ ವತಿಯಿಂದ ಮಹೋನ್ನತ ಸಾಂಪ್ರದಾಯಿಕ ಜ್ಞಾನ ಸಂಪನ್ನ ಪ್ರಶಸ್ತಿಯನ್ನು ಭಾರತದ ರಾಷ್ಟ್ರಪತಿ ಎ.ಪಿ.ಜೆ.ಅಬ್ದುಲ್ ಕಲಾಂ ಅವರು ನೀಡಿ ಗೌರವಿಸಿದ್ದಾರೆ. ಇವರಲ್ಲದೆ ಹಿಡಿಯಡ್ಕದ ಅಪ್ಪಿಕೊರಗ (ಕೊರಗ ಭಾಷೆಯರ ಕತೆಗಾರ) ಉಡುಪಿಯ ಭಾಗೀರಥಿಯಮ್ಮ (ಸಂಪ್ರದಾಯದ ಹಾಡುಗಳ ಹಾಡುಗಾತಿ) ಕುಂಜಾಲುನ ಬೂದಕೊರಗ (ಡೋಲುವಾದಕ) ಗಂಗೊಳ್ಳಿಯ ದುಗ್ಗದೇವಾಡಿಗ (ಸೂರ್ಯ–ಚಂದ್ರ ವಾದ್ಯ ಕಲಾವಿದ) ಕಾಪುವಿನ ಅಪ್ಪಿ ಸುವರ್ಣ (ಜನಪದ ಹಾಡುಗಾರ್ತಿ) ಹೀಗೆ ವಿವಿಧ ಪ್ರಕಾರಗಳಲ್ಲಿ ತಮ್ಮ ಪ್ರತಿಭೆ ತೋರಿದ ಅನೇಕ ಕಲಾವಿದರೂ ಜಿಲ್ಲೆಯಲ್ಲಿದ್ದಾರೆ.

### ಕೊಂಕಣಿ ಭಾಷೆ ಮತ್ತು ಸಾಹಿತ್ಯ

ಕೊಂಕಣ ಎನ್ನುವ ಶಬ್ದದಿಂದ ಕೊಂಕಣಿ ಭಾಷೆ ತನ್ನ ಹೆಸರನ್ನು ಪಡೆದುಕೊಂಡಿದೆ. ಕೊಂಕಣಿ ಕೇವಲ ಭೌಗೋಲಿಕ ಅಸ್ತಿತ್ವ ಮಾತ್ರವಲ್ಲ. ಅದೊಂದು ಸಾಂಸ್ಕೃತಿಕ ಪರಂಪರೆ, ಕೊಂಕಣಿ, ಭಾರತ ಸಂವಿಧಾನದ ಎಂಟನೆಯ ಪರಿಚ್ಛೇದದಲ್ಲಿ ಸೇರ್ಪಡೆಯಾಗಿದೆ. ೧೯೭೫ರಲ್ಲಿ ಕೊಂಕಣಿಯನ್ನು ಸತ್ವಯುತ ಸ್ವತಂತ್ರ ಸಾಹಿತ್ಯ ಭಾಷೆ ಎಂದು ಕೇಂದ್ರ ಸಾಹಿತ್ಯ ಅಕಾಡೆಮಿಯು ಮಾನ್ಯತೆ ನೀಡಿದೆ. ಭಾರತದ ಪಶ್ಚಿಮ ಕರಾವಳಿಯಲ್ಲಿ ಉತ್ತರದ ಥಾಣೆ (ಮಹಾರಾಷ್ಟ್ರ) ಯಿಂದ ಹಿಡಿದು ದಕ್ಷಿಣದಲ್ಲಿ ಕರ್ನಾಟಕದವರೆಗೆ ಚಾಚಿಕೊಂಡಿರುವ ಭೂಪ್ರದೇಶಕ್ಕೆ ಹಿಂದಿನಿಂದಲೂ ಕೊಂಕಣ ಎನ್ನುವ ಹೆಸರಿದ್ದುದಾಗಿ ತಿಳಿದುಬರುತ್ತದೆ. ಕೊಂಕಣಿ ಭಾಷೆಯನ್ನು ಮಾತನಾಡುವವರನ್ನು ಕೊಂಕಣಿಗರೆಂದು ಕರೆಯುತ್ತಾರೆ. ಪ್ರಾಕೃತದಿಂದ ಹೆಚ್ಚು ಪ್ರಭಾವಿತವಾದ ಕೊಂಕಣಿ, ಮೈಥಿಲಿ, ಬಂಗಾಲಿ, ಗುಜರಾತಿ ಮುಂತಾದ ಭಾಷೆಗಳಂತೆಯೇ ಸ್ವತಂತ್ರವಾದದ್ದು.

ಇತಿಹಾಸದಲ್ಲಿ, ಕೊಂಕಣ ಎಂದೂ ಸ್ವತಂತ್ರ ರಾಜ್ಯ ಆಗಿರಲಿಲ್ಲ. ಕ್ರಿಸ್ತಪೂರ್ವಕಾಲದಿಂದ ಮೌರ್ಯರ ಆಡಳಿತದಲ್ಲಿದ್ದ ಕೊಂಕಣ ಏಳನೆಯ ಶತಮಾನದಲ್ಲಿ ಚಾಲುಕ್ಯ ಪುಲಿಕೇಶಿಯ ವಶಕ್ಕೆ ಬಂದಿತು. ಅಲ್ಲಿಂದ ದೇವಗಿರಿ ಪತನದವರೆಗೆ ೧೭೪೭ರ ನಡುವೆ ಸುಮಾರು ೪೫೦ ವರ್ಷ ಬಿಟ್ಟರೆ ಕೊಂಕಣವನ್ನು ಕನ್ನಡ ರಾಜವಂಶವಾದ ಕದಂಬರು ಆಳಿದರು. ಗೋವೆಯನ್ನಾಳುತ್ತಿದ್ದ ಕದಂಬ ಮನೆತನದ ಕನ್ನಡ ರಾಜರು (ಜಯಕೇಶಿ ೧೦೫೦–೧೦೮೦) ಮತ್ತು ಸಾರಸ್ವತ ಬ್ರಾಹ್ಮಣರ ನಡುವಿನ ವೈವಾಹಿಕ ಸಂಬಂಧದಿಂದಾಗಿ ಅವರು ಕೊಂಕಣಕ್ಕೆ ಬರುವಂತಾಯಿತು ಎಂಬುದು ಕೊಂಕಣಿ ಭಾಷೆ ಮತ್ತು ಇತಿಹಾಸದ ಪ್ರಮುಖ ಘಟನೆ ಎನ್ನಬಹುದು. ಸಾರಸ್ವತ ಬ್ರಾಹ್ಮಣರು ಬಹು ದೊಡ್ಡ ಸಂಖ್ಯೆಯಲ್ಲಿ ವಲಸೆ ಬರುವುದಕ್ಕೆ ಇದೂ ಒಂದು ಕಾರಣವಾಗಿರಬಹುದು. ಆದರೆ ಕ್ರಿ.ಶ.೧೦ನೆಯ ಶತಮಾನದ ಕೆಲವು ಶಿಲಾಹಾರ ಶಾಸನಗಳು ಕೊಂಕಣ ತೀರದಲ್ಲಿ ಕೊಂಕಣಿ ಬ್ರಾಹ್ಮಣರು ಅದಕ್ಕೂ ಮುಂಚೆಯೇ ನೆಲಸಿದ್ದರೆಂಬುದನ್ನು ಸಾಬೀತುಪಡಿಸಿವೆ. ಉತ್ತರಭಾರತದ ಸಾರಸ್ವತ ಬ್ರಾಹ್ಮಣರು ವಲಸೆ ಬಂದ ಕಾಲದಲ್ಲಿ ಸಮಗ್ರ ಕೊಂಕಣ ತೀರವೂ ಸೇರಿದಂತೆ ಗೋದಾವರಿಯಿಂದ ಕಾವೇರಿಯವರೆಗಿನ ತೀರಪ್ರದೇಶದವರೆಗೆ ಕನ್ನಡನಾಡು ವ್ಯಾಪಿಸಿತ್ತು.

ಆ ಕಾಲದಲ್ಲಿ ಗೋವೆಯ ಅಧಿಕೃತ ಭಾಷೆ ಕನ್ನಡವಾಗಿದ್ದರೂ ಗೋವೆಯಲ್ಲಿ ನೆಲೆಯೂರಿದ ಸಾರಸ್ವತ ಬ್ರಾಹ್ಮಣರು ವ್ಯಾಪಾರದಲ್ಲಿ ಅಭಿವೃದ್ಧಿಗೊಂಡು ತಮ್ಮ ಲೆಕ್ಕದ ಪುಸ್ತಕ ಹಾಗೂ ವ್ಯಾಪಾರದ ಪತ್ರವ್ಯವಹಾರದಲ್ಲಿ ಬಳಸುತ್ತಿದ್ದ ಭಾಷೆ ಕೊಂಕಣಿಯಾಗಿತ್ತು. ಕದಂಬರಾದ ಮೇಲೆ ರಾಷ್ಟ್ರಕೂಟರು, ಯಾದವ ಅರಸರು ಆಳಿದ ನಂತರ ಗೋವೆಯನ್ನು ಮುಸಲ್ಮಾನರು ಗೆದ್ದುಕೊಂಡರು. ವಿಜಯನಗರ ಸಾಮ್ರಾಜ್ಯ ಅವನತಿಗೊಂಡು ಗೋಮಂತಕ ಅಥವಾ ಗೋವೆ, ಆದಿಲ್‌ಷಾನ ವಶಕ್ಕೆ ಹೋಯಿತು. ಆತನಿಂದ ಪೋರ್ಚುಗೀಸ್ ಅಪೊನ್ಸೊ ಅಲ್ಬುಕರ್ಕ್ ಗೋವೆಯನ್ನು ೧೫೦೦ರಲ್ಲಿ ಕಸಿದುಕೊಂಡನು. ಅದು ಅವರ ವಸಾಹತು ಆಯಿತು. ಪೋರ್ಚುಗೀಸರು ಕೊಂಕಣ ಮಂದಿ ನಿರ್ಮಿಸಿದ ವಿಶಿಷ್ಟ ಸಂಸ್ಕೃತಿಯನ್ನು ನಾಶಮಾಡಿದರು. ೧೫೬೦ರ ಮತೀಯ ವಿಚಾರಣಾ ಪ್ರಕರಣ (ಇಂಕ್ವಿಜಿಷನ್) ಮತ್ತು ಬಲಾತ್ಕಾರದ ಮತಾಂತರ – ಈ ಹಿಂಸಾಕಾಂಡಗಳಿಗೆ ಹೆದರಿ ಕೊಂಕಣಿ ಜನರು ನೆರೆಯ ಕರ್ನಾಟಕ, ಕೇರಳ, ಮಹಾರಾಷ್ಟ್ರಗಳಲ್ಲಿ ಚದುರಿಹೋಗಿರಬೇಕು. ಆ ಸಮಯದಲ್ಲಿ ಲಿಖಿತ ಕೊಂಕಣಿ ಸಾಹಿತ್ಯವೆಲ್ಲ ಸಂಪೂರ್ಣವಾಗಿ ನಾಶವಾಯಿತು. ಕೊಂಕಣಿ ಜನರ ಭಾಷಾ–ಸಾಹಿತ್ಯದ ಮೇಲೆ ಬರ್ಬರ ದೌರ್ಜನ್ಯವಾದುದಾಗಿ ತಿಳಿದುಬರುತ್ತದೆ.

ಗೋಮಂತಕಕ್ಕೆ ಬಂದ ಪೋರ್ಚುಗೀಸರು ಅಲ್ಲಿಯ ಕೊಂಕಣಿಯನ್ನು ಕನ್ನಡ ಎಂದು ತಪ್ಪಾಗಿ ಲಿಂಗ್ವಾ ಕ್ಯಾನರಿಸಾ ಎಂದು ಕರೆದರು. ಪೋರ್ಚುಗೀಸರ ದಾಳಿಯಿಂದಾಗಿ ಕೊಂಕಣಿ ಭಾಷಿಗರು ಚದುರಿ ಹೋದದ್ದರಿಂದ ಒಂದೇ ಪ್ರಮಾಣಭೂತ ಸಾಹಿತ್ಯ ರೂಪವು ಚೂರುಚೂರಾಗಿ ಶಿಥಿಲವಾಯಿತು. ಇದರಿಂದಾಗಿ ಏಳು ಸಾಹಿತ್ಯಿಕ ಉಪಭಾಷೆಗಳು ಅಥವಾ ಭಾಷಾ ಪ್ರಭೇದಗಳು ಹುಟ್ಟಿಕೊಂಡಿತು. ಅವು ಶಷ್ಟಿ, ಕಾರ್ವಾರಿ, ಬಾರ್ಹದೇಶೀ, ಮಂಗ್ಳೂರಿ, ಕೊಡಿಯಾಳಿ, ಅಂತ್ರೂಝಿ ಹಾಗೂ ಕೇರಳಿ. ಗೋವಾದಲ್ಲಿ ಕ್ರಿಶ್ಚಿಯನ್ ಮತಸಂಬಂಧೀ ಕೊಂಕಣಿಯ ಉತ್ಕೃಷ್ಟ ಕೃತಿಗಳ ರಚನೆಯ ಕಾಲದಲ್ಲಿಯೇ ಕರ್ನಾಟಕದಲ್ಲಿ ನೆಲಸಿದ ವಲಸಿಗರು ಸಂತ ಸಾಹಿತ್ಯವೆನ್ನುವ ಕೊಂಕಣಿ ಸಾಹಿತ್ಯವನ್ನು ಸೃಷ್ಟಿಸಿದರು. ಅವರ ಹೊಸ ನೆಲಸುನಾಡು ಮಂಗಳೂರು ಮತ್ತು ಅದರ ಸುತ್ತಮುತ್ತಲಿನ ಪ್ರದೇಶವಾಗಿದ್ದಿತು. ಇದನ್ನು ಕೊಡಿಯಾಲ ಎಂದು ಕರೆಯಲಾಗುತ್ತಿತ್ತು. ಆದ್ದರಿಂದ ಅವರು ಬರೆದ ಕೊಂಕಣಿ ಪ್ರಭೇದಕ್ಕೆ ಕೊಡಿಯಾಳಿ ಎಂಬ ಹೆಸರು ಬಂದಿತು.

ಇಕ್ಕೇರಿಯ ಅರಸರ ಆಡಳಿತವಿದ್ದಾಗ (೧೭ ಮತ್ತು ೧೮ನೆಯ ಶತಮಾನದಲ್ಲಿ) ಶಾಂತಪ್ಪಯ್ಯ, ರಾಘವದಾಸ, ಬೈಲೂರಿನ ಸಂತ ಸಮರ್ಥ ಅಪ್ಪಯ್ಯ ನಾಡಗಾರ್, ಸಂತ ಅವಢೀಬಾಯಿ ಯಾನೆ ಲಕ್ಷ್ಮೀಬಾಯಿ ನಾಡಕರ್ಣಿ ಹಾಗೂ ಹೆಮ್ಮಾಡಿಯ ಸಂತ ಜೋಗವ್ವಾ ಯಾನೆ ಜೋಗ್ನಾನಿ ಅವರಂತಹ ಕೆಲವು ಖ್ಯಾತ ಭಕ್ತಕವಿಗಳು ಮತ್ತು ಕವಯತ್ರಿಯರು ಭಕ್ತಿಕಾವ್ಯಗಳನ್ನು ರಚಿಸಿದರು. ಅನಂತರ ಪಾಂಡುರಂಗಸ್ವಾಮಿ ಮತ್ತು ಆನಂದಾಶ್ರಮ ಸ್ವಾಮಿ ಅವರಂತಹ ಚಿತ್ರಾಪುರ ಸ್ವಾಮೀಜಿಗಳು ಈ ಸಂತಪರಂಪರೆಯನ್ನು

ಪುನರುತ್ಥಾನಗೊಳಿಸಿದರು. ಉದ್ಯಾವರ ನಾರಾಯಣಾಚಾರ್ ಹಾಗೂ ಹಟ್ಟಂಗಡಿ ನಾರಾಯಣರಾವ್ (೧೮೬೩-೧೯೨೧) ಅವರಂತಹ ಪಂಡಿತರು ಕೊಂಕಣಿ ವ್ಯಾಕರಣ ಪುಸ್ತಕಗಳನ್ನು ಪ್ರಕಟಿಸಿದರು.

ಇಂದು ಕೊಂಕಣಿ ಮಾತನಾಡುವ ೨೫ ಲಕ್ಷಕ್ಕೂ ಹೆಚ್ಚು ಕೊಂಕಣಿಗರು ಕರ್ನಾಟಕದಲ್ಲಿದ್ದಾರೆ. ವಿವಿಧ ಸಮುದಾಯಗಳವರು ಮತ್ತು ಜಾತಿಯ ಜನರು ಕೊಂಕಣಿ ಮಾತನಾಡುತ್ತಾರೆ. ಕ್ಯಾಥೊಲಿಕ್ ಕ್ರೈಸ್ತರು, ನವಾಯತರು (ಮುಸಲ್ಮಾನರು) ಮತ್ತು ಹಿಂದೂಗಳ ಪೈಕಿ ಗೌಡ ಸಾರಸ್ವತರು, ಸಾರಸ್ವತರು, ಸೋನಾರರು, ಕೊಂಕಣ ಮರಾಠರು, ಖಾರ್ವಿಗಳು, ಕುಣಬಿಗಳು ಮುಂತಾದವರು. ಕೊಂಕಣಿಯನ್ನು ದೇವನಾಗರಿ, ರೋಮನ್, ಮಲೆಯಾಳಮ್, ಕನ್ನಡ ಈ ನಾಲ್ಕು ಲಿಪಿಯಲ್ಲಿ ಬರೆಯಲಾಗುತ್ತಿದೆ. ಪ್ರಾರಂಭದಲ್ಲಿ ಕೊಂಕಣಿಯಲ್ಲಿ ಮುದ್ರಣಗೊಂಡ ಪುಸ್ತಕಗಳೆಂದರೆ ಕೇವಲ ಜಪ, ಪ್ರಾರ್ಥನೆ, ಭಕ್ತಿಗೀತೆಗಳ ಕೃತಿಗಳು. ಕ್ರೈಸ್ತ ಭಕ್ತಿ ಸಾಹಿತ್ಯದ ನಡುವೆ ಪಾದರಿ ಲೂಯಿ ಡಿಸೋಜಾ ಅವರು ಪ್ರಕಟಿಸಿದ ಗಾದೆ, ಒಗಟು, ಮದುವೆ ಹಾಡು, ಲಾಲಿ ಪದಗಳ ಸಂಗ್ರಹ – ಇವು ಕೊಂಕಣಿ ಸಾಹಿತ್ಯಕ್ಕೆ ಹೊಸ ತಿರುವನ್ನು ತಂದುಕೊಟ್ಟವು.

೧೯೧೨ರಲ್ಲಿ ಮಂಗಳೂರಿನ ಬೈಂದೂರಿನ ಲುವಿಸ್ ಮಸ್ಕರೇನಸ್ ಮತ್ತು ಲುವಿಸ್ ಕಣ್ಣಪ್ಪ ಕೊಂಕ್ಣಿ ದಿರ್ವೆಂ ಪತ್ರಿಕೆಯನ್ನು ಪ್ರಕಟಿಸುವ ಮೂಲಕ ಕೊಂಕಣಿ ಸಾಹಿತ್ಯ ಕ್ಷೇತ್ರದಲ್ಲಿ ನವೋದಯಕ್ಕೆ ನಾಂದಿ ಹಾಡಿದರು. ಲುವಿಸ್ ಮಸ್ಕರೇನಸ್ ಕೊಂಕಣಿ ಅಭಿಮಾನಿ ಮಾತ್ರವಲ್ಲ ಪ್ರತಿಭಾವಂತ ಲೇಖಕರಾಗಿದ್ದರು. ಅವರು ಬರೆದ ಅಬ್ರಹಾಮನ ಯಜ್ಞದಾನ ನಾಟಕ ಶ್ರೇಷ್ಠ ಕೃತಿಯಾಗಿದೆ. ಕವಿಯೂ ಆಗಿದ್ದ ಮಸ್ಕರೇನಸ್; ದಿರ್ವೆಂ ಪತ್ರಿಕೆಯಲ್ಲಿ ಕೊಂಕಣಿ ಕತೆ, ಕಾದಂಬರಿಗಳನ್ನು, ನಾಟಕಗಳನ್ನು ಪ್ರಕಟಿಸಿದನು. ಉಡುಪಿ ಜಿಲ್ಲೆ ಕನ್ನಡದ ಜೊತೆಗೆ, ತುಳು, ಕೊಂಕಣಿ ಭಾಷೆಗಳನ್ನು ಬೆಳೆಸಿದೆ. ಹೆನ್ರಿ ಡಿಸಿಲ್ವ ಅವರು ರಾನ್ ಉದ್ಯಾವರ್ ಎಂಬ ಕಾವ್ಯನಾಮದಿಂದ ಕೊಂಕಣಿ ಕವನ ಮತ್ತು ನಾಟಕಗಳನ್ನು ಬರೆದಿದ್ದಾರೆ.

ಫ್ರಾನ್ಸಿಸ್ ದಾಂತಿ ಕನ್ನಡ ಕೊಂಕಣಿಗೆ ಸಲ್ಲಿಸಿದ ಸೇವೆ ಅಪಾರ. ಕ್ರಿಸ್ತರ ವಿಶೇಷ ಸಂದರ್ಭಗಳಲ್ಲಿ ಕನ್ನಡ ಕೊಂಕಣಿ ಲೇಖನಗಳು ಶಕ್ತಿಯುತವಾಗಿದ್ದವು. ಅವರ ಸಾಹಿತ್ಯ ಸೇವೆಯ ಸವಿನೆನಪಿಗೆ ಶ್ರೀದಾಂತಿ ಪುರಸ್ಕಾರವನ್ನು ಸ್ಥಾಪಿಸಿ, ಲೇಖಕರನ್ನು ಪುರಸ್ಕರಿಸಲಾಗುತ್ತಿದೆ. ಕಟಪಾಡಿಯ ಪಿ. ನೋರೋನ್ಹಾ ನಾಟಕಗಳಿಗೆ ಹಾಡನ್ನು ರಚಿಸುತ್ತಿದ್ದರು. ಅವರ ಹಾಡುಗಳು ಜನಮಾನಸದಲ್ಲಿ ಇಂದಿಗೂ ಉಳಿದಿವೆ. ಜೆ.ಬಿ.ಸಿಕ್ವೇರಾ ಖ್ಯಾತ ಕವಿ. ಟಿ.ಎಂ.ಎ.ಪೈ. ಪ್ರಶಸ್ತಿಯಲ್ಲದೆ ಹಲವಾರು ಪ್ರಶಸ್ತಿಗಳು ಇವರಿಗೆ ಸಂದಿವೆ. ಇವರ ಕವನ ಸಂಗ್ರಹಗಳು ತುಳುವಿಗೆ ಅನುವಾದಗೊಂಡಿವೆ. ಸಲ್ವಹೆಂತ್ ಜೀಕ್ ಇವರ ಪ್ರಮುಖ ಕಾದಂಬರಿ. ಕಾಳ್ಜಾಚೆ ಉಮಾಳೆ, ಸಪಾಣ್ ಅಧುರೆಂ, ಚಿಕೊಳಿಂ ಇವರ ಕವನಸಂಕಲನಗಳು. ವಾವ್ರಾಡ್ಯಾಚೊ ತಾಳೊ ಪತ್ರಿಕೆಯ ಸಂಪಾದಕರಾಗಿದ್ದರು. ಮುಂಬಯಿಯ ಕಲಾಸಾಗರ ಸಂಸ್ಥೆಯು ಕವಿರಾಜ್ ಬಿರುದು ನೀಡಿ ಪುರಸ್ಕರಿಸಿದೆ.

ಕೊಂಕಣಿ ನಾಟಕರಂಗದ ಗಟ್ಟಿತನದಿಂದಾಗಿ ನಾಟಕ ಸಾಹಿತ್ಯವು ಅಪಾರವಾಗಿ ವೃದ್ಧಿ ಹೊಂದಿದೆ. ಅದರ ಇತಿಹಾಸವೂ ರೋಚಕವಾದುದು. ಕೊಂಕಣಿ ದಿರ್ವೆಂ ಪತ್ರಿಕೆಯ ಲುವಿಸ್ ಮಸ್ಕರೇನಸ್ ಅವರ ಆಬ್ರಾಂವ್ಹೆಂ ಯಜ್ಞದಾನ್ (೧೯೩೬) ಆ ಕ್ಷೇತ್ರದ ಆದ್ಯಕೃತಿರತ್ನಗಳಲ್ಲೊಂದು. ಅದೊಂದು ಅಪೂರ್ವ ಪದ್ಯನಾಟಕವೆನಿಸಿ ಇಂದಿಗೂ ಕೊಂಡಾಡಲ್ಪಡುತ್ತಿದೆ. ದೇವರಾಯ ಬೈಂದೂರು (೧೯೧೦) ಮತ್ತು ಡೊಂಗರಕೇರಿ ಉಮಾನಾಥರಾವ್ (ವಜ್ರ ಕುಟ್ಕಂ, ೧೯೧೪) ನಾಟಕಕಾರರ ಸಾಲಿನಲ್ಲಿ ಉಲ್ಲೇಖಾರ್ಹರು. ಕಲ್ಯಾಣಪುರದ ನರಹರಿಭಟ್ (೧೯೧೨), ಗುಲ್ವಾಡಿ ಹರಿಶಂಕರ್, ನಾಟಕಗಳನ್ನು ರಚಿಸಿದವರೆಂದು ಉಲ್ಲೇಖವಿದೆ. ಹೆಮ್ಮಾಡಿಯ ಶಾಂತೇರಿ ಜೋಗವ್ವ, ಬೈಲೂರಿನ ಅಪ್ಪಯ್ಯ, ನಾಯಕಸ್ವಾಮಿ, ನಾರಾಯಣತೀರ್ಥ, ರಾಘವೇಂದ್ರದಾಸ ಪಾಂಡುರಂಗಶರ್ಮ, ಆನಂದಶರ್ಮ, ಶಿವರಾಮಾಶ್ರಮಸ್ವಾಮಿ, ಸಹಜಾನಂದ ಎಂಬುವರು ಭಕ್ತಿಸಾಹಿತ್ಯದ ನಿರ್ಮಾಪಕರು.

ವಲ್ಲಿ ಕ್ವಾಡ್ರಸ್ ಅಜೆಕಾರ್ ಮೊಗಾಮ್ಹುಜಾ ಸಂಘರ್ಷ್ ಕಾದಂಬರಿಗಳನ್ನು, ಆಶಾವಾದಿ, ಖಿಳೊ ಕಥಾಸಂಕಲನವನ್ನು ಚಾರ್ ಮುಖಾಂ ಕವನ ಸಂಕಲನವನ್ನು ಪ್ರಕಟಿಸಿದ್ದಾರೆ. ಕಾಣಿಕ್ ಪಾಕ್ಷಿಕದ

ಸಹಸಂಪಾದಕರಾಗಿ ಆಮ್ಚೊಯುವಕ್ ಮಾಸಿಕ ಹಾಗೂ ಝುರ್ ಪತ್ರಿಕೆಯ ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ. ಅಂಕಣಕಾರರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಸಂತೋಷಕುಮಾರ ಗುಲ್ವಾಡಿಯವರು ಕುಂಡ್ಯಾ ಕುರ್ಕುಳಾ ಎಂಬ ಕೊಂಕಣಿ ಜನಪದ ಕಥಾ ಸಂಗ್ರಹವನ್ನು ಹಾಗೂ ಹಲವಾರು ವೈಚಾರಿಕ ಲೇಖನಗಳನ್ನು ಬರೆದಿದ್ದಾರೆ. ವಾಸುದೇವ ಶೆಣೈ, ಕೆ.ವಿ.ಕಾಮತ್ ಕಟ್ಪಾಡಿ ಹಜಾರ ಮುಲ್ಲಂ ಕೃತಿ ಬರೆದಿದ್ದಾರೆ. ಉರ್ಮಿಳಾ ಶಿವರಾವ್ ಬರೆದ ಹಲವಾರು ಕತೆಗಳು ಆಕಾಶವಾಣಿಯಿಂದ ಪ್ರಸಾರವಾಗಿದೆ. ಶಾಂತಾರಾಮ್ ಬಾಳಿಗ, ಮಾಧವಪೈ ಹಿರಿಯಡ್ಕ ಕೊಂಕಣಿ ಪಂಚ್ಕದಾಯಿ ಮಾಸಿಕದ ಸಂಪಾದಕರಾಗಿ ಸೇವೆ ಸಲ್ಲಿಸಿದ್ದಾರೆ. ಕಲ್ಯಾಣಪುರದ ನರಹರಿ ಭಟ್ (ಜನನ–೧೯೧೨) ಕೊಂಕಣಿ ನಾಟಕರಂಗದಲ್ಲಿ ದುಡಿದಿದ್ದಾರೆ. ದೇವರಾಯ ಬೈಂದೂರು (ಜನನ–೧೯೧೦) ಹನ್ನೆರಡು ಕೊಂಕಣಿ ನಾಟಕಗಳನ್ನು ರಚಿಸಿದ್ದಾರೆ.

ಶಿರ್ವದ ಡಾ.ಎಡ್ವರ್ಡ್ ನಜರತ್ ನಿರ್ಮೊಣೆಂ, ಆಡ್ವಾರ್ಲೆಲೆಂ ಫಳ್, ಭುರ್ಗ್ಯಾಂಚಿ ಜತನ್ ಕೃತಿಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯ ಇತರ ಭಾಷೆಗಳಿಗೂ ಭಾಷಾಂತರಗೊಂಡಿವೆ. ನವ್ಯಕಾವ್ಯದ ನೇತಾರರೆಂದು ಪ್ರಸಿದ್ಧರಾದ ಮೌವ್ರಿಸಾ ಡೆಸಾ ಪಾಂಬೂರ್ ಕಾಣಿಕ್' ಮಾಸಿಕದ ಸಂಪಾದಕರಾಗಿ ಕೊಂಕಣಿ ಸಾಹಿತ್ಯ ಕ್ಷೇತ್ರದಲ್ಲಿ ಗುರುತಿಸಿಕೊಂಡ ಕವಿ. ಉದಯೋನ್ಮುಖ ಸಾಹಿತಿಗಳಲ್ಲಿ 'ಕಿಶೂ ಬಾರ್ಕೂರ್' ಪ್ರಸಿದ್ಧಿ ಪಡೆದಿದ್ದಾರೆ. ರುಪ್ಲಿ ಮತ್ತು ದಾಕ್ಸ್ಯಾದೆವಾಚಿಂ ಭುರ್ಗಿ ಎಂಬ ಎರಡು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇವರಿಗೆ ಕೊಂಕಣಿ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ದೊರಕಿದೆ.

ದಿನೇಶ್ ಕೊರೆಯ ಪೆರ್ನಾಲ್ ಎಲ್ಯೆಸ್ ಕಾವ್ಯನಾಮದಿಂದ ಸಾಹಿತ್ಯ ರಚಿಸುತ್ತಿದ್ದಾರೆ. ಮೆಲ್ಕ ಯುವಕ್ ಪತ್ರಿಕೆಯ ಸಂಪಾದಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕುಂದಾಪುರದ ಪಡುಕೋಣೆಯ ವಿಲ್ಸನ್ ಒಲಿವೇರಾ ಮತ್ತು ರೊನಾಲ್ಡ್ ಒಲಿವೆರಾ ಸಹೋದರರು ತಮ್ಮ ಕವನಗಳಿಗೆ ಸ್ವರಸಂಯೋಜನೆ ಮಾಡಿ ಧ್ವನಿಸುರುಳಿಗಳನ್ನು ಬಿಡುಗಡೆ ಮಾಡಿರುವರು. ಉದ್ಯಾವರದ ಜೋವಿ ಮರಿಯಾ ಭೂಮಿ, ರೋಬರ್ಟ್ ಪುರ್ಟಾಡೊ ಸಾಸ್ತಾನ, ಕಟ್ಪಾಡಿ ನಾಟಕರಂಗದಲ್ಲಿ ಸೇವೆ ಸಲ್ಲಿಸಿದ್ದಾರೆ. ಡಾ। ಜೆರಾಲ್ಡ್ ಪಿಂಟೊ ಲಡಾಯ್, ಪಾಟಿಂಘರಾ, ಮಹಾತ್ಮ, ಶಿವೊಟ್ ಪರ್ಯಾಂತ್, ವಿಜ್ಞಾನ ಗೆಲಾಕ್ಸಿ, ತುಜೆಂ ಶಿಕಾಪ್ ತುಜಿ ವೃತ್ತಿ – ಮುಂತಾದವು ಅವರ ಪ್ರಮುಖ ಗ್ರಂಥಗಳಾಗಿವೆ.

ಮಹಿಳಾ ಸಾಹಿತಿಗಳಲ್ಲಿ ಗ್ರೇಸಿವಾಜ್, ಜೆಯಲ್ ಡಿ'ಸೋಜಾ ಮಂಜರಪಲ್ಕೆ, ರೊಜಿಪಿಂಟೊ, ಕ್ಯಾಥರಿನ್ ರೊಡ್ರಿಗಸ್ ಕಾಟ್ಪಾಡಿ ಕತೆ, ಕಾದಂಬರಿ ಕವನಗಳನ್ನು ರಚಿಸಿದ್ದಾರೆ. ಆದರೂ ಮಹಿಳಾ ಸಾಹಿತ್ಯ ಅಷ್ಟಾಗಿ ಜಿಲ್ಲೆಯಲ್ಲಿ ಬೆಳೆದು ಬಂದಿಲ್ಲವೆಂದು ಹೇಳಬಹುದು. ಕ್ಯಾಥರಿನ್ ರೊಡ್ರಿಗಸ್ ಬರೆದ ಮಾನ್ ಲಾಸ್ತಾನ, ಕೊಗುಳ್ ಗಾಯ್ತಾನ, ಶಿಂಪಿಯೆಂಲ್ಲೆಮೊಥಿಯಾಂ, ದೆವಾಚೆಂ ಭುರ್ಗೆ, ತುಳಸಿ ಕಾದಂಬರಿಗಳು ಪ್ರಕಟಗೊಂಡಿವೆ. ಅಲ್ಲದೆ ಇವರು ನಾಟಕಗಾರ್ತಿಯಾಗಿಯೂ ಹೌದು. ಕಾನ್ಸೆಪ್ಟಾ ಫೆರ್ನಾಂಡಿಸ್ ಬರೆದು ಪ್ರಸ್ತುತಪಡಿಸಿದ ಗುಂಮ್ಯಾ ಶಬ್ದಚಿತ್ರಕ್ಕೆ ರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿ ಸಂದಿದೆ. ದಿವೊ ವಾರಪತ್ರಿಕೆ ಸಂಪಾದಕರಾದ ಲೊರೆನ್ಸ್ ಕುವೆಲ್ಲೊ, ನಕ್ರೆಯ ಜೋರ್ಜ್ ಕಾಸ್ತೆಲಿನೊ, ಕೆ.ಎನ್.ಡಿ ಮೆಲ್ಲೊ, ಬರ್ನಾಡ್ ಡಿ'ಸೋಜಾ, ವಿತೊರಿ ಕಾರ್ಕಳ, ಜೊಯ್ ಕುಮಾರ್, ಟೋನಿ ಮೆಂಡೊನ್ಸಾ, ಅನಿಲ್ ಪೆರ್ನಾಲ್, ಎಚ್.ಆರ್.ಆಳ್ವ, ಹೆನ್ರಿ ಎಮ್. ಪೆರ್ನಾಲ್, ರೋಬರ್ಟ್ ಫೆರ್ನಾಂಡಿಸ್ ಉದ್ಯಾವರ ಮುಂತಾದವರು ಜಿಲ್ಲೆಯ ಇನ್ನಿತರ ಬರಹಗಾರರಾಗಿದ್ದಾರೆ.

ಉಡುಪಿಯ ರಾಷ್ಟ್ರಕವಿ ಗೋವಿಂದಪೈ ಸಂಶೋಧನಾ ಕೇಂದ್ರದಲ್ಲೂ ಕೊಂಕಣಿ ಅಧ್ಯಯನ ಪೀಠವಿದೆ. ಕೊಂಕಣಿ ರಂಗಭೂಮಿಯನ್ನು ಸಮೃದ್ಧಗೊಳಿಸುವ ದಿಕ್ಕಿನಲ್ಲಿ ಮಣಿಪಾಲದ ಟಿ.ಎಂ.ಎ.ಪೈ. ಪ್ರತಿಷ್ಠಾನದ ಸೇವೆ ಅಮೂಲ್ಯವಾದುದು. ಅದು ವರ್ಷಂಪ್ರತಿ ಅಖಿಲಭಾರತ ಮಟ್ಟದಲ್ಲಿ ಕೊಂಕಣಿ ನಾಟಕ ಸ್ಪರ್ಧೆಗಳನ್ನು ಉಡುಪಿಯಲ್ಲಿ ರಂಗಭೂಮಿಯ ಸಹಕಾರದೊಂದಿಗೆ ನಡೆಸುತ್ತಿದೆ. ಇದರಲ್ಲಿ ದೇಶಾದ್ಯಂತ ಇರುವ ಹವ್ಯಾಸಿತಂಡಗಳು ಪಾಲ್ಗೊಳ್ಳುತ್ತವೆ. ೧೯೫೮ರಲ್ಲಿ ಪದ್ಯಾಂ ಪಾಟ್ಲೆ ಸುರಿ ರಚನೆ, ನಿರ್ದೇಶನ ರಾಬರ್ಟ್‌ಪುರ್ಟಾಡೋ ಕೊಂಕಣ ಕಲಾಕೇಂದ್ರ, ಸಾಸ್ತಾನ, ಉಡುಪಿಗೆ ತೃತೀಯ ಬಹುಮಾನ ಸಂದಿತ್ತು.

೧೯೬೫ರಲ್ಲಿ ಡಾ॥ಎಚ್.ಶಾಂತಾರಾಮ್ ಅಧ್ಯಕ್ಷತೆಯಲ್ಲಿ ಪ್ರಾರಂಭವಾದ ರಂಗಭೂಮಿ ಕೊಂಕಣಿ ನಾಟಕ ಸ್ಪರ್ಧೆಗಳನ್ನು ನಡೆಸುತ್ತಿದೆ. ೧೯೩೮ರಲ್ಲಿ ಅಖಿಲ ಭಾರತ ಕೊಂಕಣಿ ಸಾಹಿತ್ಯ ಪರಿಷತ್ತು ಸ್ಥಾಪನೆಗೊಂಡಿತು. ೧೯೪೦ರಲ್ಲಿ ಕೊಂಕಣಿ ಸಾಹಿತ್ಯ ಸಮ್ಮೇಳನವನ್ನು ಉಡುಪಿಯಲ್ಲಿ ನಡೆಸಲಾಗಿದ್ದು, ಜೆರೋಮ್ ಎ.ಸಾಲ್ಡಾನಾ ಅಧ್ಯಕ್ಷತೆ ವಹಿಸಿದ್ದರು. ೧೯೮೯ರ ಸಮ್ಮೇಳನವನ್ನು ಮಣಿಪಾಲದಲ್ಲಿ ನಡೆಸಿದ್ದು ಎಂ.ವಿ.ಕಾಮತ್ ಅಧ್ಯಕ್ಷತೆ ವಹಿಸಿದ್ದರು. ಬಿ.ವಿ.ಬಾಳಿಗರು ಮಂಗಳೂರಿನಲ್ಲಿ ಪ್ರಾರಂಭಿಸಿದ 'ಪಂಚ್ಕದಾಯಿ' ಕೊಂಕಣಿ ಮಾಸಿಕ ಕನ್ನಡ ಲಿಪಿಯಲ್ಲಿ ಈಗ ಮಣಿಪಾಲದಿಂದ ಹೊರಡುತ್ತಿದೆ. 'ಜೈಕೊಂಕಣಿ' ಕುಂದಾಪುರದಿಂದ ಪ್ರಕಟವಾಗುತ್ತಿರುವ ಪತ್ರಿಕೆಯಾಗಿದೆ.

## ಸಂಗೀತ ಮತ್ತು ನೃತ್ಯ

### ಕರ್ನಾಟಕ ಸಂಗೀತ

ಹದಿಮೂರನೆಯ ಶತಮಾನದಲ್ಲಿ ಜನ್ಮ ತಾಳಿದ ಮಧ್ವಾಚಾರ್ಯರು (೧೨೩೮–೧೩೧೮) ಕರ್ನಾಟಕ ಸಂಗೀತದ ಆದ್ಯಪ್ರವರ್ತಕರೆಂದೂ ಹಿರಿಯ ವಿದ್ವಾಂಸರಾದ ಬನ್ನಂಜೆ ಗೋವಿಂದಾಚಾರ್ಯರು ಅಭಿಪ್ರಾಯಪಡುತ್ತಾರೆ. ಹದಿನೈದನೆಯ ಶತಮಾನದ ಸೋದೆ ಮಠದ ವಾದಿರಾಜ ಸ್ವಾಮಿಗಳು (೧೪೮೦–೧೬೦೦)ಸಂಗೀತದಲ್ಲಿ ಅಪಾರ ಜ್ಞಾನಿಗಳಾಗಿದ್ದರು. ಕುಂದಾಪುರದ ಕುಂಭಾಶಿಯ ಸಮೀಪದ ಇವರು ಪ್ರಾಯಶಃ ವ್ಯಾಸರಾಯರಿಂದ ಸಂಗೀತದ ದೀಕ್ಷೆಯನ್ನು ಪಡೆದಿರಬೇಕು. ದಶಾವತಾರ ಸ್ತುತಿ, ಲಕ್ಷ್ಮೀ ಶೋಭಾನೆ, ಹಲವಾರು ಕೀರ್ತನೆಗಳು, ಭ್ರಮರ ಗೀತೆ, ಸುಳಾದಿ, ಉಗಾಭೋಗ – ಮೊದಲಾದ ಹಲವು ರಚನೆಗಳನ್ನು ವಾದಿರಾಜರು ಹಯವದನ ಅಂಕಿತದಲ್ಲಿ ರಚಿಸಿದ್ದಾರೆ. ಆದರೆ ಇವು ಶಾಸ್ತ್ರೀಯ ವಾಗ್ಗೇಯಕಾರರು ಮಾಡಿದ ಕೃತಿ ರಚನೆಗಳಂತಿಲ್ಲವೆಂದು ಅರವಿಂದ ಹೆಬ್ಬಾರರು ತಿಳಿಸುತ್ತಾರೆ.

ಬಿಡಾರಂ ಕೃಷ್ಣಪ್ಪ (೧೮೬೬–೧೯೩೧) ಉಡುಪಿ ಜಿಲ್ಲೆಯ ನಂದಳಿಕೆಯವರು. ೧೯೩೦ರ ಸುಮಾರಿಗೆ ಉಡುಪಿ ಜಿಲ್ಲೆಯಲ್ಲಿ ಖ್ಯಾತರಾಗಿದ್ದ ಪಿಟೀಲು ಮಂಜುನಾಥಯ್ಯನವರು, ಬಿಡಾರಂ ಕೃಷ್ಣಪ್ಪನವರ ಶಿಷ್ಯರು. ಇವರು ಪಿಟೀಲು ವಿದ್ವಾಂಸರಾಗಿದ್ದರೂ ವೀಣೆ, ಕೊಳಲು, ಹಾಡುಗಾರಿಕೆಯಲ್ಲೂ ಸಿದ್ಧಹಸ್ತರು. ಮಂಜುನಾಥಯ್ಯನವರು ದಾಸಕೀರ್ತನೆಗಳ ಎರಡು ಸಂಪುಟಗಳನ್ನು ಸಂಪಾದಿಸಿದ್ದರು. ಮಂಜುನಾಥಯ್ಯನವರ ಅನೇಕ ಶಿಷ್ಯರಲ್ಲಿ ಪಾದೂರಿನ ಬಿ.ವಿ.ನಾರಾಯಣ ಐತಾಳರು, ಸೂರಾಲು ಪರಮೇಶ್ವರ ಭಟ್ಟರು, ಕೊಳಲು ಶ್ರೀನಿವಾಸ ಪುತ್ತೂರಾಯ, ಮಟಪಾಡಿ ರಾಜಗೋಪಾಲಚಾರ್ಯರು, ಉಡುಪಿ ವಾಸುದೇವ ಭಟ್ಟರು, ವಿದ್ವಾನ್ ಪಿ.ವಿಷ್ಣುಮೂರ್ತಿ ಭಟ್ಟರು, ಶ್ರೀಶದಾಸರು, ಪಾಂಡುರಂಗಾಚಾರ್ಯರು, ಎನ್.ಕೆ.ಸುಂದರಾಚಾರ್ಯರು, ಯಶೋದೆ ಮುಂತಾದವರು ಪ್ರಮುಖರು. ಉಡುಪಿ ಪಲಿಮಾರು ಮಠಕ್ಕೆ ಹೊಂದಿಕೊಂಡು ಬಾಳಿದ್ದ ಪೆರ್ಮುದೆಯ ವಿಠಲ ಆಚಾರ್ಯರು (೧೮೮೭–೧೯೧೭) ಕೊಯಮತ್ತೂರು ತಾಯಿ ಮತ್ತು ತಂಜಾವೂರು ತಾಯಿ ಎಂಬುವರಲ್ಲಿ ಸಂಗೀತಾಭ್ಯಾಸ ಮಾಡಿ ಉಡುಪಿಯ ಪರ್ಯಾಯದಲ್ಲೂ ಹಾಡಿದ್ದಾರೆ. ಹಲವಾರು ಸಂಗೀತ ಕಛೇರಿಗಳನ್ನು ನೀಡಿದ್ದಾರೆ. ಮುಸುರಿ ಸುಬ್ರಹ್ಮಣ್ಯ ಅಯ್ಯರರ ಶಿಷ್ಯ ಖ್ಯಾತ ಸಂಗೀತಗಾರ ಟಿ.ಕೆ.ಗೋವಿಂದರಾವ್ ಪಡುಬಿದ್ರೆಯವರು.

ಉಡುಪಿ ಲಕ್ಷ್ಮೀಬಾಯಿ ಕಳೆದ ಶತಮಾನದ ಆರಂಭದಲ್ಲಿ ಇದ್ದ ಬಹು ದೊಡ್ಡ ಹೆಸರು. ಫಿಡ್ಲು ಕೃಷ್ಣರಾಯರ ಶಿಷ್ಯೆ. ರಂಗನಾಥ ಭಾಗವತರಲ್ಲಿ ಸಂಗೀತಾಭ್ಯಾಸ ಮಾಡಿದರು. ಲಕ್ಷ್ಮೀಬಾಯಿಯವರು ಮೈಸೂರು ಅರಮನೆಯಲ್ಲಿ ಕೃಷ್ಣರಾಜ ಒಡೆಯರ ಸಮ್ಮುಖದಲ್ಲಿ ಹಾಗೂ ಹೈದರಾಬಾದಿನ ನಿಜಾಮನ ಸಮ್ಮುಖದಲ್ಲಿ ಹಾಡಿ ಸನ್ಮಾನಿತರಾಗಿದ್ದಾರೆ. ವೀಣೆ ಶೇಷಣ್ಣ, ಸುಬ್ಬಣ್ಣ, ಮುತ್ತಯ್ಯ, ಭಾಗವತರು ಇವರ ಹಾಡುಗಳನ್ನು ಮೆಚ್ಚಿಕೊಂಡಿದ್ದರು. ಇವರ ಹಾಡುಗಳನ್ನು ಓಡಿಯನ್ ಮತ್ತು ಎಚ್ ಎಂ ವಿ ಗ್ರಾಮಾಫೋನ್ ಕಂಪನಿಗಳು ಮುದ್ರಿಸಿಕೊಂಡಿವೆ. ದೆಹಲಿ ಆಕಾಶವಾಣಿ ನಿಲಯದ ಆರಂಭೋತ್ಸವದ ಮೊದಲ ದಿನ ಲಕ್ಷ್ಮೀಬಾಯಿಯವರ ಹಾಡುಗಾರಿಕೆಯನ್ನು ೪೫ ನಿಮಿಷ ಬಿತ್ತರಿಸಲಾಗಿತ್ತು. ಮುಂಬಯಿ ಆಕಾಶವಾಣಿಯಲ್ಲಿ ಇವರು ಒಂದು

ವರ್ಷ ನಿಲಯ ಕಲಾವಿದರಾಗಿದ್ದರು. ಅನೇಕ ಬಾರಿ ಬರ್ಮ, ಸಿಲೋನ್, ನೇಪಾಲ, ಲಂಡನ್, ಪ್ಯಾರಿಸ್, ಜರ್ಮನಿ, ರೋಮ್‌ಗಳಲ್ಲಿ ಪ್ರವಾಸ ಮಾಡಿ ಹಲವಾರು ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದಾರೆ.

ಬೆಳ್ಳೆ ಅನಂತರಾಮ ಉಪಾಧ್ಯಾಯರು (೧೯೦೪-೧೯೮೯) ಉಡುಪಿಯ ಹತ್ತಿರ ಇರುವ ಬೆಳ್ಳೆ ಎಂಬ ಗ್ರಾಮದಲ್ಲಿ ಹುಟ್ಟಿದರು. ಬಾಲ್ಯದಲ್ಲಿ ತಾಯಿಯ ಗಾಯನದಿಂದ ಪ್ರಭಾವಿತರಾಗಿ ಮುಂದೆ ಪಿಟೀಲು ವಿದ್ವಾನ್ ಕೃಷ್ಣರಾಯರಲ್ಲಿ ಗುರುಕುಲ ಪದ್ಧತಿಯಲ್ಲಿ ಸಂಗೀತಾಭ್ಯಾಸ ಮಾಡಿದರು. ಮುಂದೆ ಮೈಸೂರು ವಾಸುದೇವಾಚಾರ್, ಟೈಗರ್ ವರದಾಚಾರ್ ಮೊದಲಾದ ಹಿರಿಯ ವಿದ್ವಾಂಸರಲ್ಲಿ ಪ್ರೌಢ ವ್ಯಾಸಂಗ ಮಾಡಿದರು. ಕರ್ನಾಟಕ, ಆಂಧ್ರ, ತಮಿಳುನಾಡುಗಳಲ್ಲಿ ಕಚೇರಿ ನೀಡಿ ಖ್ಯಾತರಾದರು. ಇವರಿಗೆ ಸಂಗೀತ ಕೇಸರಿ ಬಿರುದು ಸಂದಿದೆ. ಯಕ್ಷಗಾನದ ಹಾಡುಗಾರರಿಗೆ ಈ ಜಿಲ್ಲೆಯಲ್ಲಿ ಭಾಗವತರೆಂದು ಕರೆಯುವುದರಿಂದ ಬೆಳ್ಳೆಯವರು ಅನಂತರಾಮ ಭಾಗವತರೆಂದು ಪ್ರಸಿದ್ಧರು. ಪಲ್ಲವಿ ಹಾಡುವಿಕೆಯಲ್ಲಿ ಅವರದು ಎತ್ತಿದ ಕೈ. ಬೆಳ್ಳೆಯವರ ಪುತ್ರ ಕೃಷ್ಣಮೂರ್ತಿ ಉಪಾಧ್ಯಾಯರು ಸಂಗೀತ ಸೇವೆ ಸಲ್ಲಿಸುತ್ತಿದ್ದಾರೆ. ಬೆಳ್ಳೆಯವರ ಪುತ್ರಿಯರಾದ ಅಂಬಲಪಾಡಿಯ ವಾರಿಜಾಕ್ಷಿ ಆರ್.ಭಟ್ ಮತ್ತು ಬೆಂಗಳೂರಿನ ಸತ್ಯವತಿಯವರು ಸಂಗೀತ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಉತ್ತಮ ಹಾಡುಗಾರರಾಗಿ ಮತ್ತು ಶಿಕ್ಷಕಿಯಾಗಿ ಹೆಸರು ಮಾಡುತ್ತಿದ್ದಾರೆ.

ಪಡುಬಿದ್ರಿ ಸುಬ್ರಾಯ ಮಾಣಿ ಭಾಗವತರು (ಜ. ೧೯೧೭) ಉತ್ತಮ ಸಂಗೀತಗಾರರು. ಇವರು ಪಡುಬಿದ್ರೆಯಲ್ಲೇ ಸಂಗೀತ ಸೇವೆ ಮಾಡುತ್ತಾ ಕೃಷಿ ಕೆಲಸ ಮಾಡುತ್ತಿದ್ದಾರೆ. ದಕ್ಷಿಣ ಕನ್ನಡದ ಚೆಂಬೈ ಎಂದೇ ಖ್ಯಾತರು. ಕೇರಳದ ತ್ರಿಪುಣಿತ್ತುರ ವಿಶ್ವನಾಥಯ್ಯರ್ ಅವರಲ್ಲಿ ಸಂಗೀತಾಭ್ಯಾಸ ಪ್ರಾರಂಭಿಸಿ, ಬಳಿಕ ಚೆಂಬೈ ವೈದ್ಯನಾಥ ಭಾಗವತರಲ್ಲಿ ಗುರುಕುಲ ಪದ್ಧತಿಯಲ್ಲಿ ೧೦-೧೫ ವರ್ಷಗಳ ಕಾಲ ಕಠಿಣ ಸಂಗೀತಾಭ್ಯಾಸ ನಡೆಸಿದರು. ಅವರಿಗೆ ಬೆಂಗಳೂರಿನ ಅನನ್ಯ ಸಂಸ್ಥೆಯ ಅನನ್ಯ ಪುರಸ್ಕಾರ ಸಂದಿದೆ. ಶಿಕ್ಷಕರಾಗಿ ಭಾಗವತರು ಎಡನೀರು, ಮಂಗಳೂರು, ಉಪ್ಪಂಗಳ, ಕಾಸರಗೋಡುಗಳಿಗೆ ಹೋಗಿ ಸಂಗೀತ ಪಾಠ ಹೇಳುತ್ತಿದ್ದರು. ಉಡುಪಿಯ ಮಧೂರು ಬಾಲಸುಬ್ರಹ್ಮಣ್ಯ ಅವರು ಭಾಗವತರ ಹೆಮ್ಮೆಯ ಶಿಷ್ಯ. ಪಾದೂರಿನ ಬಿ.ವಿ.ನಾರಾಯಣ ಐತಾಳರೂ ಚೆಂಬೈಯವರ ಇನ್ನೋರ್ವ ಶಿಷ್ಯ. ಈಗಲೂ ಹಲವಾರು ಕಡೆ ಸಂಗೀತ ಶಿಕ್ಷಣ ನೀಡುತ್ತಿದ್ದಾರೆ. ವಿದ್ಯಾಭೂಷಣರು ಐತಾಳರಿಂದ ಪ್ರಾಥಮಿಕ ಶಿಕ್ಷಣವನ್ನು ಪಡೆದಿದ್ದಾರೆ. ಇವರು ಮಂಗಳೂರಿನಲ್ಲಿ ತ್ಯಾಗರಾಜ ಸಂಗೀತ ಶಾಲೆಯನ್ನು ಸ್ಥಾಪಿಸಿದ್ದಾರೆ. ಸೂರಾಲು ಪರಮೇಶ್ವರ ಭಟ್ಟರು (೧೯೨೬ರಲ್ಲಿ) ಪಿಟೀಲು ಮಂಜುನಾಥಯ್ಯನವರಲ್ಲಿ ಗುರುಕುಲ ಪದ್ಧತಿಯಲ್ಲಿ ಐದು ವರ್ಷ ಸಂಗೀತಾಭ್ಯಾಸ ನಡೆಸಿದವರು. ಮದ್ರಾಸ್ ಸಂಸ್ಥಾನದ ಹೈಯರ್ ಗ್ರೇಡ್ ಪರೀಕ್ಷೆಗೆ ಕುಳಿತು (೧೯೫೧ರಲ್ಲಿ) ಉತ್ತೀರ್ಣರಾದರು. ಹಾಡುಗಾರಿಕೆ ಅಲ್ಲದೆ ಕೊಳಲು ನುಡಿಸುವುದರಲ್ಲೂ ಪರಿಣತರು. ಪಿ.ಕಾಳಿಂಗರಾಯರ ಜತೆ ಹಾರ್ಮೋನಿಯಂ ನುಡಿಸುತ್ತಿದ್ದರು. ಉಡುಪಿಯ ರಥಬೀದಿಯ ಬಳಿ ವಾದಿರಾಜ ಕರ್ನಾಟಕ ಸಂಗೀತ ಶಾಲೆ ನಡೆಸಿ ಹಲವಾರು ಶಿಷ್ಯಂದಿರನ್ನು ರೂಪಿಸಿದ್ದಾರೆ. ವಾರಿಜಾಕ್ಷಿ ಆರ್.ಭಟ್, ಶಶಿಕಾಂತ್ ಕೊಳಂಬೆ, ಸಂಗೀತಾ (ಪುರಾಣಿಕ) ಬಾಲಚಂದ್ರ ಮುಂತಾದವರು ಇವರ ಶಿಷ್ಯರಾಗಿ ಸಾಧನೆ ಮಾಡಿದ್ದಾರೆ.

ಉಡುಪಿಯ ವಾಸುದೇವಭಟ್ಟರು ಪಿಟೀಲು ಮಂಜುನಾಥಯ್ಯನವರ ಇನ್ನೋರ್ವ ಶಿಷ್ಯ. ನಾದ ವೈಭವಂ ಎಂಬ ಸಂಸ್ಥೆಯನ್ನು ಸ್ಥಾಪಿಸಿ, ಸಂಗೀತ ತರಬೇತಿ, ಕ್ಯಾಸೆಟ್ಟು ಬಿಡುಗಡೆಯೇ ಮೊದಲಾದ ಹಲವಾರು ಚಟುವಟಿಕೆಗಳನ್ನು ನಡೆಸಿದವರು. ಕ್ರೈಸ್ತರ ಹಾಡುಗಳಿಗೆ ಸಂಗೀತ ಸಂಯೋಜನೆ ಮಾಡಿರುವುದು ಇವರ ವೈಶಿಷ್ಟ್ಯ. ಇವರ ಮಗಳಾದ ವಸುಧಾಗಿರಿಧರ್ ಮತ್ತು ಅಳಿಯ ಎಂ.ಎಸ್.ಗಿರಿಧರ್ ಲಘು ಶಾಸ್ತ್ರೀಯ ಸಂಗೀತದಲ್ಲಿ ಹೆಸರು ಗಳಿಸಿರುವ ಸಂಗೀತ ಕಲಾವಿದರು. ಮಾಧವೀ ಭಟ್ ಪೆರಣಂಕಿಲ ಹಾಡುಗಾರರು. ಅವರು ಸಂಗೀತ ಅಧ್ಯಾಪಕಿಯಾಗಿದ್ದಾರೆ.

ಪಡುಬಿದ್ರಿಯ ಕೆ.ವಿ.ರಮಣನ್ (ಕೆ.ವೆಂಕಟ್ರಮಣನ್) (ಜ.೧೯೩೬) ತಿರುವನಂತಪುರದಲ್ಲಿ ವಾಸವಿದ್ದರೂ, ಮಂಗಳೂರು, ಪಾವಂಜೆಗಳ ನಿಕಟ ಸಂಪರ್ಕವಿಟ್ಟುಕೊಂಡು ಹಲವರಿಗೆ ಸಂಗೀತ ಶಿಕ್ಷಣ ನೀಡಿದವರು. ಟ್ರಿವೆಂಡ್ರಂ ಸ್ವಾತಿ ತಿರುನಾಳ್ ಕಾಲೇಜ್ ಆಫ್ ಮ್ಯೂಸಿಕ್‌ನಲ್ಲಿ ಸಂಗೀತ ಪ್ರೊಫೆಸರ್ ಆಗಿ

ನಿವೃತ್ತಿ ಹೊಂದಿದವರು. ನೆಲ್ಲೈ ಟಿ.ವಿ.ಕೃಷ್ಣಮೂರ್ತಿ ಇವರ ಸಂಗೀತ ಗುರುಗಳು. ಕುಂದಾಪುರ ಮೂಲದ ತೊರೆವಳ್ಳಿಯವರಾದ ಕೆ.ಎಸ್.ಮಂಜುನಾಥ ಅವರು ಹಿರಿಯ ಘಟ ವಿದ್ವಾಂಸರಾಗಿ ಜಿಲ್ಲೆಯ ಹೊರಗೆ ಪ್ರಖ್ಯಾತರಾದವರು. ಮೃದಂಗದ ಉಳ್ಳೂರು ನಾಗೇಂದ್ರ ಉಡುಪರು ಮೃದಂಗ ವಿದ್ವಾಂಸರು. ಬೆಂಗಳೂರಿನಲ್ಲಿ ನೆಲೆಸಿರುವ ಇವರು ದೇಶವಿದೇಶಗಳಲ್ಲಿ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ.

ಗೌರಿ ಶ್ರೀಕಂಠ (ಜ.೧೯೩೭) ಅವರು ಮಂಗಳೂರಿನ ವಾಸುದೇವ ರಾವ್, ಮದ್ರಾಸಿನ ಲಲಿತಾ ಬಾಯಿ ಶಾಮಣ್ಣ, ಬೆಂಗಳೂರಿನ ಅನಂತ ಪದ್ಮನಾಭ ರಾವ್ ಹಾಗೂ ಮಂಗಳೂರಿನ ಶ್ರೀನಿವಾಸ ಉಡುಪರಲ್ಲಿ ಶಿಕ್ಷಣ ಪಡೆದವರು. ಉಡುಪಿಯಲ್ಲಿ ಹಲವಾರು ಶಿಷ್ಯಂದಿರನ್ನು ಹೊಂದಿರುವವರು. ಸಂಧ್ಯಾ ಮೋಹನ್ ರಾವ್ (ಜ.೧೯೪೭) ಅವರು ಕಾಂಚನದ ವೆಂಕಟಸುಬ್ರಹ್ಮಣ್ಯ ಅಯ್ಯರ್ ಅವರ ಶಿಷ್ಯೆ. ಶಾಂತಾ ಬಿ.ರಾವ್ (ಜ.೧೯೪೦) ಅವರು ಅಜ್ಜರಕಾಡಿನಲ್ಲಿ ವಾಸವಾಗಿದ್ದು, ಇವರು ಬಿ.ವಿ.ನಾರಾಯಣ ಐತಾಳ ಮತ್ತು ಶ್ರೀನಿವಾಸ ಉಡುಪರಲ್ಲಿ ಸಂಗೀತ ಶಿಕ್ಷಣ ಪಡೆದಿದ್ದಾರೆ.

ಮಧೂರು ಪಿ.ಬಾಲಸುಬ್ರಹ್ಮಣ್ಯ (ಜ.೧೯೫೧) ಅವರು ಕಾಸರಗೋಡಿನ ಸಮೀಪದ ಮಧೂರಿನವರಾದರೂ ವಿಟ್ಲದ ಮೂಲದವರು. ಪಡುಬಿದ್ರೆ ಮಾಣಿ ಭಾಗವತರರಲ್ಲಿ ಪ್ರಾಥಮಿಕ ಶಿಕ್ಷಣ ಪಡೆದು, ಕಾಂಚನ ವೆಂಕಟಸುಬ್ರಹ್ಮಣ್ಯ ಅಯ್ಯರರ ಗರಡಿಯಲ್ಲಿ ಪಳಗಿದರು. ಬಳಿಕ ಶೃಂಗೇರಿ, ಹರಿಹರಪುರಗಳಲ್ಲಿ ಸಂಗೀತ ತರಗತಿಗಳನ್ನು ನಡೆಸಿ ೧೯೮೩ರಲ್ಲಿ ಉಡುಪಿಗೆ ಬಂದು, ಅಕಾಡೆಮಿ ಸಂಗೀತ ಶಾಲೆಯಲ್ಲಿ ಸಂಗೀತ ಶಿಕ್ಷಕರಾಗಿ ದುಡಿದದ್ದೇ ಅಲ್ಲದೆ ಅನೇಕ ಶಿಷ್ಯರಿಗೆ ಸಂಗೀತ ಶಿಕ್ಷಣ ನೀಡಿದರು. ೧೯೮೯ರಲ್ಲಿ ಉಡುಪಿಯ ರಾಗಧನ ಸಂಸ್ಥೆಯನ್ನು ಸ್ಥಾಪಿಸಿದರು. ಶಿರ್ವದ ಲತಾ ತಂತ್ರಿ (ಜ. ೧೯೬೩) ಅಕ್ಕ ಕ್ಷಮಾ ಗೋವಿಂದರಾವ್ ಅವರಲ್ಲೂ, ಕಾಂಚನ ವಿ.ಸುಬ್ಬುರತ್ನಂ ಅವರಲ್ಲೂ ಸಂಗೀತ ಶಿಕ್ಷಣ ಪಡೆದಿದ್ದಾರೆ. ಮಂಗಳೂರು ಆಕಾಶವಾಣಿಯ ಬಿ–ಹೈಗ್ರೇಡ್ ಕಲಾವಿದೆ. ವಿದ್ಯಾಲಕ್ಷ್ಮಿ ಕಡಿಯಾಳಿ (ಜ.೧೯೬೩) ಇವರು ನರಸಿಂಹ ಉಪಾಧ್ಯ, ಸೂರಾಲು ಪರಮೇಶ್ವರ ಭಟ್ಟ, ಶ್ರೀನಾಥ ಮರಾಠೆ ಹಾಗೂ ಪದ್ಮಾ ಸುಂದರ್ ಅವರಲ್ಲಿ ಸಂಗೀತ ಶಿಕ್ಷಣ ಪಡೆದಿದ್ದಾರೆ. ಉಡುಪಿಯ ವೀ. ರಂಜನಿ ಹೆಬ್ಬಾರ್ (ಜ.೧೯೮೩) ಬಾಲಪ್ರತಿಭೆಯಾಗಿ ಮಿಂಚಿ, ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ಅಸಾಧಾರಣ ಸಾಧನೆಯನ್ನು ರಾಷ್ಟ್ರಮಟ್ಟದಲ್ಲಿ ತೋರಿಸಿದ ಯುವ ಕಲಾವಿದರು.

ಫಿಡ್ಲು ಕೃಷ್ಣರಾಯರು (೧೮೮೬–೧೯೪೩) ಉಡುಪಿಯ ಬಡಾನಿಡಿಯೂರಿನವರು. ನಂತರ ಮಂಗಳೂರಿನಲ್ಲಿ ನೆಲಸಿದರು. ಇವರು ತಿರುವನಂತಪುರದ ಅನಂತಶಯನ ದೇವಸ್ಥಾನದಲ್ಲಿ ಕೆಲಸ ಮಾಡುತ್ತಾ ಸಂಗೀತ ಕಲಿತರು. ಮುಂದೆ ತಂಜಾವೂರಿಗೆ ಹೋಗಿ ಫಿಡ್ಲು ಪೊನ್ನುಸಾಮಿ (ಪೊನ್ನಯ್ಯ) ಅವರಿಂದ ಪಿಟೀಲು ಅಭ್ಯಾಸ ಮಾಡಿದರು. ಫಿಡ್ಲು ಕೃಷ್ಣರಾಯರು ಚೆಂಬೈ ಮುಂತಾದ ಹಿರಿಯ ಕಲಾವಿದರಿಗೆ ಪಕ್ಕವಾದ್ಯ ನೀಡಿದ್ದಾರೆ. ಸಿಲೋನಿನ ಜಾಫ್ನಾದಲ್ಲೂ ಕಛೇರಿ ನೀಡಿದ್ದಾರೆ. ಕೃಷ್ಣರಾಯರ ಶಿಷ್ಯ ವೃಂದದಲ್ಲಿ ಪುತ್ತೂರು ಬೆಣ್ಣೆ ಜೋಯಿಸರು ಬೆಳ್ಳೆ ಅನಂತರಾಮ ಉಪಾಧ್ಯಾಯ, ಉಡುಪಿ ಲಕ್ಷ್ಮೀಬಾಯಿ, ಚಕ್ರಕೋಡಿ ನಾರಾಯಣ ಶಾಸ್ತ್ರಿ, ಗೋಕರ್ಣಭಟ್ಟ, ಮುಂಬಯಿಯ ವಿಘ್ನೇಶ್ವರ ಪಂಡಿತ ಮೊದಲಾದವರು ಸೇರಿದ್ದಾರೆ.

ಸೂರಾಲು ಪರಮೇಶ್ವರ ಭಟ್ಟರು (೧೯೨೬ರಲ್ಲಿ) ಪಿಟೀಲು ಮಂಜುನಾಥಯ್ಯನವರಲ್ಲಿ ಗುರುಕುಲ ಪದ್ಧತಿಯಲ್ಲಿ ಐದು ವರ್ಷ ಸಂಗೀತಾಭ್ಯಾಸ ನಡೆಸಿದವರು. ಉಡುಪಿಯ ರಥಬೀದಿಯ ಬಳಿ ವಾದಿರಾಜ ಕರ್ನಾಟಕ ಸಂಗೀತ ಶಾಲೆ ನಡೆಸಿ ಹಲವಾರು ಶಿಷ್ಯಂದಿರನ್ನು ರೂಪಿಸಿದ್ದಾರೆ. ವಾರಿಜಾಕ್ಷಿ ಆರ್.ಭಟ್, ಶಶಿಕಾಂತ್ ಕೊಳಂಬೆ, ಸಂಗೀತಾ (ಪುರಾಣಿಕ) ಬಾಲಚಂದ್ರ ಮುಂತಾದವರು ಇವರ ಶಿಷ್ಯರಾಗಿ ಸಾಧನೆ ಮಾಡಿದ್ದಾರೆ. ಮಟಪಾಡಿಯ ಎಂ.ರಾಜಗೋಪಾಲಾಚಾರ್ಯ (೧೯೨೬–೧೯೯೭) ಪಿಟೀಲು ಮಂಜುನಾಥಯ್ಯನವರ ಶಿಷ್ಯರು. ಉಡುಪಿಯ ಕನ್ನಡ ಸಾಹಿತ್ಯ ಪರಿಷತ್ತಿನ ಸದಸ್ಯರಾಗಿ ಗಮಕ ವಿಭಾಗದ ಸಂಚಾಲಕತ್ವವನ್ನು ನಿರ್ವಹಿಸಿದರು. ಮುಖ್ಯವಾಗಿ ದಾಸಸಾಹಿತ್ಯ ಪ್ರಚಾರಕರಾಗಿ ತಿರುಪತಿಯ ದಾಸಸಾಹಿತ್ಯ ಯೋಜನೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಮಗ್ರ ದಾಸಸಾಹಿತ್ಯ ಯೋಜನೆಯ

ಸದಸ್ಯರಾಗಿದ್ದರು. ಸಂಗೀತ ಶಾಸ್ತ್ರ ಹಾಗೂ ಲಕ್ಷ್ಯ – ಎರಡರಲ್ಲೂ ಅಪಾರ ಜ್ಞಾನಿ. ಇವರ ಸುಮಾರು ಹತ್ತಕ್ಕೂ ಹೆಚ್ಚು ಗ್ರಂಥಗಳು ಪ್ರಕಟವಾಗಿವೆ. ಅದರಲ್ಲಿ ಅವರ ರಾಗತಾಳ ಮತ್ತು ಯಕ್ಷಗಾನ ಸಂಗೀತ (೧೯೭೭) ಎಂಬ ಕಿರುಹೊತ್ತಗೆಗಳು ಮೌಲಿಕವಾದ ಕೃತಿಗಳು. ಇವರ ಯಕ್ಷಗಾನ ಸಂಗೀತ ಕೃತಿಗೆ ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿಯ ಬಹುಮಾನ ಸಂದಿದೆ. ಸುಗುಣ ಮಾಲಾ ಪತ್ರಿಕೆಯ ಸಂಪಾದಕರಾಗಿ ಕರಾವಳಿ ಪ್ರದೇಶದ ಸಂಗೀತ ಸ್ವರೂಪ ಕುರಿತು ಸಂಶೋಧನೆ ಮಾಡಿದವರು. ಉಡುಪಿಯ ಕಡಿಯಾಳಿ ಕಾಳುಭಟ್ಟ (ಲಕ್ಷ್ಮೀ ನಾರಾಯಣ ಭಟ್ಟ), ಪಾಂತೆ ಶ್ರೀನಿವಾಸ ಉಪಾಧ್ಯಾಯ, ದಾಸಭಟ್ಟರು (ಹಾಸ್ಯ ನಟ ಹಾಗೂ ತಬಲ ವಾದಕರು) ಮೊದಲಾದವರು ಸಂಗೀತ ಕ್ಷೇತ್ರದಲ್ಲಿ ದುಡಿದರು. ದಾಸರಾಘವೇಂದ್ರ ಭಟ್ಟರು ಲಘುಸಂಗೀತದಲ್ಲೇ ಹೆಚ್ಚಾಗಿ ದುಡಿದಿದ್ದಾರೆ. ನರಸಿಂಹ ಸೇರೆಗಾರ ಎಂಬುವರು ಸ್ವಾತಂತ್ರ್ಯ ಸಮಯದಲ್ಲಿ ಉಡುಪಿಯಲ್ಲಿ ಬಹುವಾಗಿ ಶ್ರಮಿಸಿ ಸಂಗೀತ ಸೇವೆ ನಡೆಸಿದ್ದಾರೆ. ಅವರು ಮೈಸೂರು ರಾಜರಿಂದ ಪ್ರಶಸ್ತಿಗಳನ್ನು ಪಡೆದುದಾಗಿ ತಿಳಿದು ಬರುತ್ತದೆ. ರಮೇಶ ಎಂಬುವರು ಕೊಳಲು ವಾದಕರಾಗಿ ಉಡುಪಿಯಲ್ಲಿ ಸಂಗೀತ ಪಾಠಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ.

ಉಡುಪಿಯ ಅಕಾಡೆಮಿ ಸಂಗೀತ ಶಾಲೆಯ ಭುಜಂಗರಾವ್ ಮತ್ತು ರಂಗನಾಥ ಆಚಾರ್ಯರು ಇಬ್ಬರೂ ಹಿರಿಯ ಸಂಗೀತ ಶಿಕ್ಷಕರಾಗಿದ್ದಾರೆ. ಪಿಟೀಲು ಮಂಜುನಾಥಯ್ಯವರ ಶಿಷ್ಯ ಮಂಗಳೂರಿನ ಎನ್.ಕೆ.ಸುಂದರಾಚಾರ್ಯರ ತಮ್ಮ ಮಾಧವಾಚಾರ್ಯರು ಶ್ರೇಷ್ಠ ಮೃದಂಗ, ಖಂಜಿರ ವಿದ್ವಾಂಸರಾಗಿ ಹಲವಾರು ಶಿಷ್ಯಂದಿರನ್ನು ತಯಾರು ಮಾಡಿದವರು. ಇವರ ಪುತ್ರ ಕೆ.ಮುರುಳೀಧರ ಓರ್ವ ಪ್ರತಿಭಾವಂತ ಕೊಳಲು, ಕೀಬೋರ್ಡ್, ಗಿಟಾರ್, ತಬಲಾ, ಮೃದಂಗ ವಾದಕರಾಗಿದ್ದಾರೆ. ಪ್ರಸ್ತುತ ಲಘು ಸಂಗೀತದ ಬಗೆಗೆ ಹೆಚ್ಚಿನ ಆಸಕ್ತಿ ನೀಡಿ ದುಡಿಯುತ್ತಿದ್ದಾರೆ.

ಕೆ.ಹರಿಶ್ಚಂದ್ರನ್ ಪ್ರಖ್ಯಾತ ಮೃದಂಗ ಕಲಾವಿದರು. ದಿನಾಂಕ ೩೦–೧–೧೯೩೨ರಂದು ಉಡುಪಿ ಜಿಲ್ಲೆಯ ಕುಂಜೂರಿನಲ್ಲಿ ಜನಿಸಿದರು. ಕೆ.ಹರಿಶ್ಚಂದ್ರನ್ ಅವರು ಪ್ರಸಿದ್ಧ ಯಕ್ಷಗಾನ ಕಲಾವಿದರ ಮನೆತನಕ್ಕೆ ಸೇರಿದವರು. ಇವರ ತಂದೆ ಕುಂಜೂರು ವೆಂಕಪ್ಪಯ್ಯನವರು ಯಕ್ಷಗಾನದಲ್ಲಿ ಮದ್ದಲೆ ನುಡಿಸುತ್ತಿದ್ದರು. ಅವರಿಗೆ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ೨೦೦೩ನೇ ಸಾಲಿನ ಕರ್ನಾಟಕ ಕಲಾಶ್ರೀ ಪ್ರಶಸ್ತಿಯು ಸಂದಿದೆ. ಶ್ರೀಶದಾಸರು ಪಿಟೀಲು ಮಂಜುನಾಥಯ್ಯನವರ ಶಿಷ್ಯರು. ಶ್ರೀಶದಾಸರ ಮಗ ಮಧ್ವೇಶ ತಬಲಾ ವಾದಕರಾಗಿ ಮಧು ಮ್ಯೂಸಿಕಲ್ಸ್ ಉಡುಪಿಯ ಮಾಲೀಕರಾಗಿದ್ದಾರೆ. ಕೊಳಲು ರಾಘವೇಂದ್ರ ರಾಯರು (ಜ.೧೯೩೬) ಎನ್.ಕೆ.ಸುಂದರಾಚಾರ್ಯ, ಮುತ್ತುಸ್ವಾಮಿ ಅಯ್ಯರ್–ಇವರಲ್ಲಿ ಸಂಗೀತ ಶಿಕ್ಷಣ ಪಡೆದು ರಾಜ್ಯ, ಹೊರ ರಾಜ್ಯಗಳಲ್ಲಿ ಕಛೇರಿ ನೀಡಿ ಮನ್ನಣೆ ಪಡೆದಿದ್ದಾರೆ. ಇವರ ಪುತ್ರ ಲಯ ವಿದ್ವಾನ್ ಕೆ.ಯು. ಜಯಚಂದ್ರರಾವ್ (ಜ.೧೯೭೦) ತ್ರಿಶೂರಿನ ನಾರಾಯಣ ಪಿಶಾರಡಿ ಹಾಗೂ ಪಾಲ್ಘಾಟ್ ಟಿ.ಆರ್. ರಾಜಮಣಿಯವರಲ್ಲೂ ಮೃದಂಗ ಅಭ್ಯಾಸ ಮಾಡಿ ರಾಷ್ಟ್ರೀಯ ಮಟ್ಟದಲ್ಲಿ ಖ್ಯಾತಿ ಪಡೆದಿದ್ದಾರೆ. ಶ್ರೀರಂಜನಿಯವರು ಹಾಡುಗಾರಿಕೆ, ಪಿಟೀಲು ಕಲಾವಿದರು. ಅವಧಾನ ಪಲ್ಲವಿಯಲ್ಲಿ ಪರಿಣತರು.

ಕಾರ್ಕಳದ ಪ್ರಸಿದ್ಧ ಕಲ್ಮಠ ಕುಟುಂಬದ ಕೆ.ಪ್ರಭಾಕರ ಉಪಾಧ್ಯಾಯರು (ಜ.೧೯೪೪) ಕೊಳಲಿನಲ್ಲಿ ಖ್ಯಾತಿ ಪಡೆದವರು. ಇವರು ರಚಿಸಿ ನಿರ್ದೇಶಿಸಿದ ಭಾವೋಲ್ಲಾಸ ಎಂಬ ವಾದ್ಯವೃಂದ ರಚನೆಯು ಆಕಾಶವಾಣಿ ರಾಷ್ಟ್ರೀಯ ಸ್ಪರ್ಧೆಯಲ್ಲಿ (೧೯೮೨ರಲ್ಲಿ) ದ್ವಿತೀಯ ಬಹುಮಾನವನ್ನು ಗಳಿಸಿತು. ಅವರ ಪತ್ನಿ ಸುಮಂಗಲಿಯವರು ಉಡುಪಿಯ ಕೊಡವೂರಿನವರು, ಮಂಗಳೂರು ಆಕಾಶವಾಣಿಯಲ್ಲಿ ವೀಣಾ ವಾದಕಿಯಾಗಿದ್ದಾರೆ.

ಕಾರ್ಕಳದಲ್ಲಿ ವ್ಯಾಸ ಮಾಷ್ಟ್ರು ಎಂದೇ ಪ್ರಸಿದ್ಧರಾದ ಕೆ.ವ್ಯಾಸ ಕೃಷ್ಣ ಉಪಾಧ್ಯಾಯರು ಹಾಡುಗಾರಿಕೆ ಹಾಗೂ ಪಿಟೀಲು ಅಧ್ಯಾಪಕರಾಗಿದ್ದವರು. ಕಾರ್ಕಳ ಅನಂತಶಯನ ವಠಾರದಲ್ಲಿ ಶ್ರೀ ಸರಸ್ವತಿ ಸಂಗೀತ ಶಾಲೆಯನ್ನು ಬಹುಕಾಲ ನಡೆಸಿಕೊಂಡು ಬಂದವರು. ಮಾಳದ ಡಿ. ವಿಶ್ವನಾಥ ಪಾಠಕ್ ಕರ್ನಾಟಕ ಸಂಗೀತ ಕಲಾವಿದರು. ಪಿಟೀಲು ವಾದನದಲ್ಲಿ ಪರಿಣತರು. ಕಾರ್ಕಳದ 'ಲಲಿತಕಲಾ ಕೇಂದ್ರ'ದಲ್ಲಿ ಸೇವೆ

ಸಲ್ಲಿಸಿದ್ದಾರೆ. ಹರಿ ಮರಾಠೆ (ಮೃದಂಗ) ಅವರು ಹಲವಾರು ಶಿಷ್ಯಂದಿರನ್ನು ಪಡೆದ ಸಂಗೀತ ಅಧ್ಯಾಪಕರು. ವೆಂಕಟೇಶ ಚಿಪ್ಳೂಣ್ಕರ್ ಮಾಳ (ದುರ್ಗ) ದವರಾಗಿದ್ದು ಅನೇಕ ಶಿಷ್ಯರನ್ನು ಹೊಂದಿದ್ದಾರೆ. ಅನಸೂಯ ವಿ. ಶೆಟ್ಟಿಯವರು ಕೇರಳದ ಗೋವಿಂದ ನಂಬಿಯಾರರಲ್ಲಿ ಸಂಗೀತ ಶಿಕ್ಷಣ ಪಡೆದು, ಸಂಗೀತ ಪ್ರಚಾರಕ್ಕಾಗಿ ಶ್ರಮಿಸಿದವರು.

ವಸಂತಿ ರಾಮಭಟ್ಟ ಅವರು (ಜ.೧೯೩೮) ಉಡುಪಿಯ ರಾಗಧನ ಸಂಸ್ಥೆಯ ಪೋಷಕರಾಗಿ, ಫಿಡ್ಲು ಕೃಷ್ಣರಾವ್ ಸ್ಮಾರಕ ಸಂಗೀತ ಕಾರ್ಯಕ್ರಮದ ಮುಂದಾಳಾಗಿ, ವಯಲಿನ್ ಶಿಕ್ಷಕಿಯಾಗಿ ಕಾರ್ಯನಿರ್ವಹಿಸಿದವರು. ಇವರ ಮಗ ದೇವೇಶ ಭಟ್ ಮೃದಂಗ, ಘಟ ವಾದಕರು. ಕಾರ್ಕಳ ತಾಲೂಕು ಮಾಳ ಗ್ರಾಮದ ಶ್ರೀನಾಥ ಮರಾಠೆಯವರು (ಜ. ೧೯೪೪) ಮಂಗಳೂರು ಆಕಾಶವಾಣಿಯ ನಿಲಯದ ಕಲಾವಿದರಾಗಿದ್ದವರು.

ಅಶ್ವತ್ಥಪುರದ ಎಸ್. ಭೋಜರಾಜನ್ ನಾಗಸ್ವರ ಕಲಾವಿದರು. ತಂದೆ ಸಂಕಪ್ಪ ಸೇರಿಗಾರ, ಮೂಡಬಿದಿರೆಯ ಬಾಬು ಮಡಿವಾಳ ಮೊದಲಾದವರಿಂದ ನಾಗಸ್ವರವಾದನ ಶಿಕ್ಷಣ ಪಡೆದವರು. ವಿವಿಧೆಡೆ ಹಲವಾರು ನಾಗಸ್ವರ ಕಚೇರಿಗಳನ್ನು ನೀಡಿರುವ ಭೋಜರಾಜನ್ ಶೃಂಗೇರಿ, ಮಧುರೆ,ಉಡುಪಿ ಕೃಷ್ಣ ಮಠ ಮುಂತಾದೆಡೆಗಳಲ್ಲಿ ಸನ್ಮಾನ ಪಡೆದಿದ್ದಾರೆ. ಕುಂಜಿಬೆಟ್ಟಿನ ಸರೋಜಾ ಆರ್.ಆಚಾರ್ಯ (ಜ.೧೯೪೮) ಸಂಗೀತ ವಿಮರ್ಶಕರಾಗಿದ್ದಾರೆ. ಮುಂಬೈನಲ್ಲಿದ್ದ ಪಿ.ಯಶೋದಾ ರಾವ್, ಮಣಿಪಾಲದಲ್ಲಿ ಸಂಗೀತ ಅಧ್ಯಾಪಕಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಪಣಿಯೂರಿನ ಬಾಲಕೃಷ್ಣ ತಂತ್ರಿ (ಜ.೧೯೫೧)ಯವರು ಉತ್ತಮ ವೇಣುವಾದಕರೆನ್ನಿಸಿಕೊಂಡಿದ್ದಾರೆ. ಇವರು ಕೊಳಲು ತಯಾರಕರೂ ಹೌದು. ತಾತ ಶ್ರೀನಿವಾಸ ತಂತ್ರಿಯವರು ಪಿಟೀಲು ಭೀಮಣ್ಣ ತಂತ್ರಿಗಳೆಂದು ಖ್ಯಾತರಾಗಿದ್ದುದಾಗಿ ತಿಳಿದುಬರುತ್ತದೆ.

ಸುಮತಿ ರಾಮಕೃಷ್ಣ ಇವರು ಕೊರಂಗ್ರಪಾಡಿಯ 'ಸರಿ ಪದ ನಿಗಮ' ಸಂಸ್ಥೆಯಲ್ಲಿ ಸಂಗೀತ ಅಧ್ಯಾಪಕಿಯಾಗಿದ್ದಾರೆ. ವಸಂತಲಕ್ಷ್ಮಿ ಹೆಬ್ಬಾರರು ಲತಾಂಗಿ ಸ್ಕೂಲ್ ಆಫ್ ಮ್ಯೂಸಿಕ್‌ನಲ್ಲಿ ಸಂಗೀತ ಸೇವೆ ಸಲ್ಲಿಸುತ್ತಿದ್ದಾರೆ. ಅಂಬಾಗಿಲು ವಾಸಿಗಳಾದ ದಿನಕರರಾವ್ ಅವರು ಮೃದಂಗ ವಾದಕರು. ಅಂಬಲಪಾಡಿಯ ಪವನ ಬಾಲಚಂದ್ರ ಆಚಾರ್ (ಜ.೧೯೭೦) ಮತ್ತು ಎಚ್.ವಿ.ಬಾಲಚಂದ್ರ ಆಚಾರ್ (ಜ.೧೯೭೦) ದಂಪತಿಗಳು ಕ್ರಮವಾಗಿ ವೀಣಾ ಹಾಗೂ ಮೃದಂಗ ವಾದನಪಟುಗಳು ಮಾತ್ರವಲ್ಲದೆ ಸಂಗೀತ ಅಧ್ಯಾಪಕರಾಗಿಯೂ ಸೇವೆಸಲ್ಲಿಸುತ್ತಿದ್ದಾರೆ. ಉಡುಪಿಯ ಒಳಕಾಡಿನ ಚೇತನಾ ವೃಜನಾಥ್ (ಜ.೧೯೭೩) ಸಹ ಸಂಗೀತ ಕಲಾವಿದರಾಗಿ ಗುರುತಿಸಲ್ಪಟ್ಟಿದ್ದಾರೆ. ವಿನಯಾರಾವ್, ಉಡುಪಿ ಪ್ರಭಾಕರರಾವ್, ಪಡುಬಿದ್ರಿಯ ವಾಸುದೇವರಾವ್ (ಮೃದಂಗ ಶಿಕ್ಷಕ) ಕಡಿಯಾಳಿ ನರಸಿಂಹ ಉಪಾಧ್ಯ, ಮಣಿಪಾಲದ ಲಕ್ಷ್ಮೀ ಅಯ್ಯಂಗಾರ್ ಬಾಲಕೃಷ್ಣ ಅಯ್ಯಂಗಾರ್ ಕಿನ್ನಿಮೂಲ್ಕಿ ರಾಘವೇಂದ್ರ ಭಟ್ಟ, ಪಿ.ಬಿ. ಪ್ರಸನ್ನ, ಪಿ.ಎಚ್.ಶರ್ಮಿಳಾ ರಘುನಂದನ್ ರೋಹಿತ್ ಮೊದಲಾದವರೂ ಇಲ್ಲಿ ಉಲ್ಲೇಖಾರ್ಹರಾಗಿದ್ದಾರೆ. ಮಂಗಳೂರು ಆಕಾಶವಾಣಿಯ ಬಿ. ಹೈಗ್ರೇಡ್ ಕಲಾವಿದರಾಗಿದ್ದ ವಿ.ಎಸ್. ಅರುಣಕುಮಾರಿಯವರು ಹಲವೆಡೆ ಸಂಗೀತ ಕಚೇರಿಗಳನ್ನೂ ನೀಡಿದ್ದಾರೆ. ಆಕಾಶವಾಣಿಯ ಎ – ಗ್ರೇಡ್ ಕಲಾವಿದ ರವಿಚಂದ್ರ ಕುಳೂರು (ಜ.೧೯೭೩) ಪಾಶ್ಚಾತ್ಯ ದೇಶಗಳಿಗೆ ಹೋಗಿ ಕೊಳಲು ವಾದನ ಕಛೇರಿ ನೀಡಿದ್ದಾರೆ. ಅವರ ಪುನರ್ನವ, ತಾಂಡವ, ಪ್ರವಣ, ಟೆರ್‍ರಾ ಇನ್‌ಕಾಗ್ನಿಟೋ – ಮೊದಲಾದ ಪ್ರಯೋಗಶೀಲ ಕ್ಯಾಸೆಟ್/ಸಿ.ಡಿ.ಗಳು ಹಾಗೂ ಲಯತರಂಗ ಫ್ಯೂಶನ್ ಬ್ಯಾಂಡ್ ಖ್ಯಾತಿ ಪಡೆದಿವೆ. ಕಾಳು ಶೇರಿಗಾರ ನಾಗಸ್ವರ ಕಲಾವಿದರು. ಕ್ಲಾರಿಯೋನೆಟ್ ವಾದನದಲ್ಲೂ ಪರಿಣತರು ಇವರು ಮೈಸೂರು ಮಹಾರಾಜರಿಂದ ಪುರಸ್ಕೃತರಾಗಿದ್ದವರು.

ಪಾಂಡೇಶ್ವರ ಕಾಳಿಂಗರಾಯರು(೧೯೨೦–೨೨–೦೯–೧೯೯೧) ಕನ್ನಡದಲ್ಲಿ ಸುಗಮಸಂಗೀತಕ್ಕೆ ಭದ್ರ ಬುನಾದಿ ಹಾಕಿದವರು. ಕಾಳಿಂಗರಾಯರ ತಂದೆ ಪಾಂಡೇಶ್ವರ ಪುಟ್ಟಯ್ಯನವರು ಯಕ್ಷಗಾನದಲ್ಲಿ ಹೆಸರು ಮಾಡಿದವರು. ಕಾಳಿಂಗರಾಯರನ್ನು ಮುಂಡಾಜೆ ರಂಗನಾಥ ಭಟ್ಟರು ತಮ್ಮ ಅಂಬಾಪ್ರಸಾದಿತ ನಾಟಕ ಮಂಡಳಿಗೆ ಸೇರಿಸಿಕೊಂಡು, ವಿವಿಧ ಕ್ಷೇತ್ರಗಳಲ್ಲಿ ಪರಿಣತಿ ನೀಡಿದರು. ರಾಮಚಂದ್ರ ಬುವಾ

ಅವರ ಸಂಗೀತ ಪಾಠ ಕಾಳಿಂಗರಾಯರನ್ನು ಶಾಸ್ತ್ರೀಯವಾಗಿ ಬೆಳೆಸಿತು. ಭಾವಗೀತೆ, ಜನಪದ ಗೀತೆ, ದಾಸರಪದ ಹಾಗೂ ಶರಣರ ವಚನಗಳನ್ನು ತಮ್ಮ ಸಿರಿಕಂಠದಿಂದ ಹಾಡಿ ಸುಗಮಸಂಗೀತ ಪಿತಾಮಹರೆಂದು ಕೀರ್ತಿತರಾದವರು ಕಾಳಿಂಗರಾಯರು. ಹಿಂದೂಸ್ತಾನಿ ಮತ್ತು ಪಾಶ್ಚಿಮಾತ್ಯ ಸಂಗೀತವನ್ನು ಸುಗಮಸಂಗೀತಕ್ಕೆ ಬಳಸಿಕೊಂಡು, ವಿಶಿಷ್ಟ ಛಾಪನ್ನು ಮೂಡಿಸಿದ ಹಿರಿಮೆ ಇವರದು.

## ಹಿಂದುಸ್ಥಾನೀ ಸಂಗೀತ

ಕೆ. ವಾಸುದೇವ ನಾಯಕ್ (೧೯೦೫–೯೫) ಅವರು ಸಂಗೀತ ಭಾರತಿ ಸಂಸ್ಥೆಯ ಸಂಚಾಲಕರಾಗಿ ಹಿಂದೂಸ್ಥಾನೀ ಶಾಸ್ತ್ರೀಯ ಸಂಗೀತದ ಪ್ರಸಾರ ಮತ್ತು ಅಧ್ಯಯನಕ್ಕಾಗಿ ಶ್ರಮಿಸಿದವರು. ಸಿತಾರ್, ದಿಲ್ರುಬಾ ವಾದ್ಯಗಳನ್ನು ನುಡಿಸುತ್ತಿದ್ದರು. ಹಟ್ಟಿಯಂಗಡಿಯ ಪಂಡಿತ ತಾರಾನಾಥರಾವ್ (೧೯೧೪–೧೯೯೧) ತಬಲಾ ಮಾಂತ್ರಿಕ ರೆಂದು ಖ್ಯಾತಿ ಪಡೆದವರು. ಅವರು ವಿದೇಶಗಳಲ್ಲಿ ಭಾರತೀಯ ಸಂಗೀತದ ಪ್ರಾಧ್ಯಾಪಕರಾಗಿಯೂ ಸೇವೆ ಸಲ್ಲಿಸಿದರು.

೧೯೫೦ರಲ್ಲಿ ಬಂಟ್ವಾಳದಲ್ಲಿ ಸರಸ್ವತಿ ಸಂಗೀತ ಶಾಲೆಯನ್ನು ಸ್ಥಾಪಿಸಿದ ವಿದ್ವಾನ್ ಜಿ.ಮಾಧವಭಟ್ಟರು, ೧೯೫೮ರಲ್ಲಿ ಟಿ.ಎಂ.ಎ.ಪೈ ಅವರ ಆಹ್ವಾನದ ಮೇರೆಗೆ ಎಕಾಡೆಮಿ ಸಂಗೀತ–ನೃತ್ಯ ಸ್ಥಾಪಕ ಪ್ರಾಂಶುಪಾಲರಾಗಿ ಮಣಿಪಾಲಕ್ಕೆ ಬಂದು ೧೫ ವರ್ಷಗಳ ಕಾಲ ಹಿಂದುಸ್ಥಾನೀ ಸಂಗೀತ ಕಲಿಸಿ ಶಾಲೆಯ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿದರು. ನಿವೃತ್ತಿ ಬಳಿಕ ಉಡುಪಿಯಲ್ಲಿ ಮಾಧವ ಸಂಗೀತ ವಿದ್ಯಾಲಯ ಪ್ರಾರಂಭಿಸಿರುತ್ತಾರೆ. ಇವರಿಗೆ ಸಂಗೀತ ಕಲಾನಿಧಿ, ಸಂಗೀತ ವಿದ್ಯಾಭೂಷಣ, ಮುಂತಾದ ಬಿರುದುಗಳು ಸಂದಿವೆ.

ಉಡುಪಿಯ ಶ್ರೀಪತಿ ಪಾಡಿಗಾರ್ (ಜ. ೧೯೨೯) ಹುಬ್ಬಳ್ಳಿ ಮೂಲದವರು. ಪಂಡಿತ ಭೀಮಸೇನ ಜೋಶಿಯವರಲ್ಲಿ ಕಿರಾಣಾ ಘರಾಣೆ ಶೈಲಿಯಲ್ಲಿ ಶಿಕ್ಷಣ ಪಡೆದವರು. ಭಕ್ತಿಗೀತಗಾಯನದಲ್ಲೂ ಪರಿಣತರಾದವರು. ಕುಂದಗೋಳದಿಂದ ಪ್ರಾರಂಭಿಸಿ, ಮುಂಬೈ, ಹೈದರಾಬಾದ್, ಮದರಾಸು, ಪುಣೆ, ಇಂದೋರು, ಝಾನ್ಸಿ ಮುಂತಾದೆಡೆಗಳಲ್ಲಿ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಉಡುಪಿಯಲ್ಲಿ ಅವರನ್ನು ರಾಗ ರಾಗಿಣಿ ರಸಲೋಲ ಬಿರುದಿನೊಂದಿಗೆ ಸನ್ಮಾನಿಸಲಾಗಿದೆ. ಹುಬ್ಬಳ್ಳಿಯಲ್ಲಿ ತಮ್ಮದೇ ಸಂಗೀತ ಶಾಲೆಯ ಮೂಲಕ ಅನೇಕ ಶಿಷ್ಯರನ್ನು ರೂಪಿಸುತ್ತಿದ್ದಾರೆ. ಶ್ರೀಪತಿ ಪಾಡಿಗಾರ್ ಅವರಿಗೆ ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿ(೨೦೦೨) ಪ್ರಶಸ್ತಿಯು ಸಂದಿದೆ. ಕಾರ್ಕಳದವರಾದ ಎ.ಗೋಪಾಲಕೃಷ್ಣ ಮಲ್ಯ(ಜ.೧೯೩೩) ಮುಂಬಯಿಯಲ್ಲಿ ಜನಿಸಿದವರು. ನಾನಾ ದಾಮೋದರ ಅವರಲ್ಲಿ ಹಾರ್ಮೋನಿಯಂ ಅಭ್ಯಾಸ ಮಾಡಿದ ಇವರು ಆತ್ಮಾರಾಮ್, ಹೀರಾಬಾಯಿ ಬಡೋದೆಕರ, ಮಂಗೇಶರಾವ್ ಗೋವೇಕರ ಇವರುಗಳಲ್ಲಿ ಹಿಂದೂಸ್ಥಾನಿ ಸಂಗೀತ ಶಿಕ್ಷಣ ಪಡೆದರು. ಮಂಗೇಶರಾವ್ ಗೋವೇಕರ, ವಿನಾಯಕ ತೊರವಿ, ಸೋನೂಬಾಯಿ ಹನುಮಂತರಾವ್ ಗೋನವಾರ ಮೊದಲಾದವರಿಗೆ ಹಾರ್ಮೋನಿಯಂ ಸಾಥಿ ನೀಡಿದ್ದಾರೆ. ಕಾರ್ಕಳ ಭುವನೇಂದ್ರ ಕಾಲೇಜು, ಮೂಡಬಿದರೆ ಕಾಲೇಜುಗಳಲ್ಲಿ ಸಂಗೀತ ಶಿಕ್ಷಕರಾಗಿ ಕೆಲಸ ಮಾಡಿದ್ದಾರೆ. ಹಲವು ಸಂಘಸಂಸ್ಥೆಗಳಿಂದ ಪುರಸ್ಕಾರ ಪಡೆದಿದ್ದಾರೆ. ಟಿ.ರಂಗ ಪೈ (ಜ.೧೯೪೯) ಹೆಸರಾದ ಹಿಂದುಸ್ಥಾನೀ ತಬಲಾ ವಾದಕರು ಪಂ.ಜಿತೇಂದ್ರ ಅಭಿಷೇಕಿ, ಪ್ರಭುದೇವ ಸರ್ದಾರ್, ಪಂ. ಎಸ್. ಗೋಪಾಲಕೃಷ್ಣ ಮುಂತಾದ ಹೆಸರಾಂತ ಕಲಾವಿದರಿಗೆ ತಬಲಾ ಇಲ್ಲವೇ ವಯೋಲಿನ್ ಸಾಥಿ ನೀಡಿದ್ದಾರೆ. ಅಕಾಶವಾಣಿ ಮಂಗಳೂರು ಕೇಂದ್ರದ ಶಾಸ್ತ್ರೀಯ ಹಾಗೂ ಲಘು ಶಾಸ್ತ್ರೀಯ ಸಂಗೀತ ವಿಭಾಗದ ಶ್ರವಣ ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ. ಪ್ರಸ್ತುತ ಉಡುಪಿಯಲ್ಲಿರುವ ಅಕಾಡೆಮಿ ಸಂಗೀತ – ನೃತ್ಯ ಶಾಲೆಯ ಗೌರವ ಪ್ರಾಂಶುಪಾಲರಾಗಿ ದುಡಿಯುತ್ತಿದ್ದಾರೆ.

ಉಡುಪಿಯ ಅಕಾಡೆಮಿ ಶಾಲೆಯಲ್ಲಿ ಹಿಂದುಸ್ಥಾನೀ ಪ್ರಾಧ್ಯಾಪಕರಾಗಿರುವ ಮಹಾಬಲೇಶ್ವರ ಭಾಗವತರು (ಜ.೧೯೫೪) ಮೂಲತಃ ಹೊನ್ನಾವರದವರು. ಆದರೆ, ಉಡುಪಿ, ಕುಂದಾಪುರಗಳಲ್ಲಿ ಅನೇಕ ಶಿಷ್ಯಂದಿರನ್ನು ಹೊಂದಿದ್ದಾರೆ. ಮಣಿಪಾಲದ ಎಸ್.ಪಿ.ಗುರುದಾಸ್ (ಜ.೧೯೫೮) ಅವರು

ಹಿಂದುಸ್ಥಾನೀ ಗಾಯಕರಾಗಿ ಖ್ಯಾತರು. ಗಿಟಾರ್, ಹಾರ್ಮೋನಿಯಂಗಳಲ್ಲೂ ಪರಿಣತರು. ಉಡುಪಿಯ ಬನ್ನಂಜೆಯ ಪಿ.ಶಂಕರ ಶೆಣೈ (ಜ.೧೯೬೨) ಅವರು ಜಿ.ಮಾಧವ ಭಟ್ ಹಾಗೂ ಜಿ.ವಿಠಲದಾಸ ಭಟ್ಟರಲ್ಲಿ ಸಂಗೀತ ಶಿಕ್ಷಣ ಪಡೆದು, ಹಾರ್ಮೋನಿಯಂ ವಾದಕರಾಗಿ ಬೆಳೆದರು. ವಿದ್ವಾನ್ ಮಾಧವ ಭಟ್ಟರ ಇನ್ನೊರ್ವ ಶಿಷ್ಯ ಮಣಿಪಾಲದ ರವಿಕಿರಣ್ (ಜ.೧೯೬೨) ರಾಷ್ಟ್ರೀಯ ಮಟ್ಟದಲ್ಲಿ ಹೆಸರು ಪಡೆದಿದ್ದಾರೆ. ಉಡುಪಿಯ ಅಕಾಡೆಮಿ ಸಂಗೀತ ಶಾಲೆಯ ರಾಮಭಟ್ಟರು ಬಾನ್ಸುರಿ ವಾದಕರು ಹಾಗೂ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ತಬಲಾ ಪಟುಗಳ ಸರಮಾಲೆಯೇ ಈ ಜಿಲ್ಲೆಯಲ್ಲಿದೆ. ಟಿ.ಹರಿದಾಸ ಪೈ ಬ್ರಹ್ಮಾವರ (ಜ.೧೯೫೧) ಕೆ.ಸತ್ಯ ವಿಜಯಭಟ್ (ಜ.೧೯೫೫), ಜಿ.ವಿಠಲದಾಸಭಟ್ (ಜ.೧೯೬೧), ಪಾಂಗಾಳ ದಿನೇಶ್ ಶೆಣೈ (ತಬಲಾ ವಾದಕರು) ರಾಮಭಟ್ (ಬಾನ್ಸುರಿ), ಶಂಕರ ಶೆಣೈ (ಹಾರ್ಮೋನಿಯಂ) ಮೊದಲಾದವರು ಉಡುಪಿಯ ಭರವಸೆಯ ಹಿಂದೂಸ್ಥಾನಿ ಕಲಾವಿದರಾಗಿದ್ದಾರೆ. ಕಾರ್ಕಳದ ಕೆ. ಕೃಷ್ಣ ಪುರಾಣಿಕರು ತಬಲಾಜೀಯೆಂದು ಖ್ಯಾತರಾಗಿದ್ದಾರೆ. ಕಾರ್ಕಳದ ನಾರಾಯಣ ಭಟ್ಟ ತಮ್ಹಣಕರರು ಹಿಂದೂಸ್ಥಾನೀ ಸಂಗೀತ ಪಾಠಗಳನ್ನು ಹೇಳುತ್ತಿದ್ದರು. ದುರ್ಗದ ಎ.ಪಿ.ಪಾಠಕ್(೧೯೧೫)ರು ಮಹಾರಾಷ್ಟ್ರದಲ್ಲಿದ್ದುಕೊಂಡು ಸಂಗೀತ ಸಾಧನೆ ಮಾಡಿ, ಮರಾಠಿ ರಂಗಗೀತೆ, ಭಜನೆ, ಅಭಂಗಗಳನ್ನು ಹಾಡುತ್ತಿದ್ದರು. ಪಿಟೀಲು ವಾದಕರೂ ಆಗಿದ್ದರು. ವಿದ್ವಾನ್ ಯೋಗೀಶ್ ಬಾಳಿಗಾ ಅವರು ಕಾರ್ಕಳದಲ್ಲಿ ಶಿಷ್ಯಂದಿರನ್ನು ಹೊಂದಿದ್ದರು. ಕೆ. ವ್ಯಾಸಕೃಷ್ಣ ಉಪಾಧ್ಯಾಯರು ಸಂಗೀತ ಶಿಕ್ಷಕರೂ, ಸ್ವತಃ ಗಾಯಕರೂ, ಹಾರ್ಮೋನಿಯಂ ವಾದಕರೂ ಆಗಿದ್ದರು.

ಇವರಲ್ಲದೆ, ಮಹಾಲಕ್ಷ್ಮಿ ಶೆಣೈ (ಹಿಂದೂಸ್ತಾನೀ ಸಂಗೀತ), ರಂಜನಿ ಹೆಬ್ಬಾರ್ (ಕರ್ನಾಟಕ ಸಂಗೀತ), ಹರ್ಷಸಾಮಗ (ಮೃದಂಗ), ಉಡುಪಿಯ ಬಿ.ಎಸ್.ರಾವ್ (ಹಾರ್ಮೋನಿಯಂ), ಮುಂಬೈ ನಿವಾಸಿ ಪಂಡಿತ್ ಓಂಕಾರನಾಥ ಗುಲ್ವಾಡಿ (ತಬಲಾ), ರವೀಂದ್ರ ಕಾಟೋಟಿ (ಹಾರ್ಮೋನಿಯಂ), ಬಸರೂರಿನ ಬಿ.ಶುಭಾಮತಿ ಭಟ್ಟ. (ಆಗ್ರಾ ಘರಾಣೆಯ ಶೈಲಿ, ಗುರುರಾಜ ಮಾರ್ಪಳ್ಳಿ (ಗಾಯಕ), ಲಕ್ಷ್ಮೀ ಗುರುರಾಜ್ (ನೃತ್ಯ), ಸಂಗೀತಾ ಬಾಲಚಂದ್ರ (ಗಾಯಕಿ), ಬಿ.ಕೆ.ಕಾರಂತ (ಗಾಯಕ), ಹೆಚ್.ಚಂದ್ರಶೇಖರ ಕೆದಿಲಾಯ (ಸುಗಮ ಸಂಗೀತ), ಶ್ರೀನಾಥ್ ಮರಾಠೆ (ಆಕಾಶವಾಣಿ ಕಲಾವಿದ), ಅನುಸೂಯ ಬಿ.ಶೆಟ್ಟಿ (ಸಂಗೀತ) ಮೊದಲಾದವರನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ.

## ನೃತ್ಯ

ಕಟ್ಟಿಂಗೇರಿ ಕೆ.ಎನ್. ರಾಜಗೋಪಾಲ್ (ಜ.೧೯೨೪), ನಾಟ್ಯಾಚಾರ್ಯರಾಗಿ ಮೈಸೂರಿನಲ್ಲಿ ಶ್ರೀ ನೃತ್ಯ ಕಲಾಮಂದಿರವನ್ನು ಸ್ಥಾಪಿಸಿ, ಹೆಸರಾಗಿದ್ದಾರೆ. ಅವರಿಗೆ ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿ ಪ್ರಶಸ್ತಿಯು (೧೯೮೩) ಲಭಿಸಿದೆ. ಉಡುಪಿಯ ಕೊಡವೂರು ಮಾಧವರಾಯರು (೧೯೨೪) ಮೈಸೂರಿನಲ್ಲಿ ಕೆ.ಎಸ್. ರಾಜಗೋಪಾಲ, ಬಳಿಕ ಮೂಗೂರು ಜೇಜಮ್ಮನವರ ಬಳಿ ಮೂಗೂರು ಶೈಲಿಯ ಭರತನಾಟ್ಯವನ್ನು ಕಲಿತರು. ಶಾಸ್ತ್ರದಲ್ಲೂ, ಪ್ರಯೋಗಗಳಲ್ಲೂ ಅತ್ಯಂತ ಮೇಲ್ಮಟ್ಟದ ಸಂಗತಿಗಳ ಜೋಡಣೆಯೊಂದಿಗೆ ತಮ್ಮ ಬಾಣಿಯನ್ನು ಅಧಿಕೃತಗೊಳಿಸಿದ್ದಾರೆ. ಉಡುಪಿಯ ಜಯರಾಂ (ಜ. ೧೯೨೯), ಮದರಾಸಿನ ಚಿತ್ರ ಜಗತ್ತನ್ನು ಪ್ರವೇಶಿಸಿ, ವಿವಿಧ ಭಾಷೆಗಳ ೭೦೦ಕ್ಕೂ ಹೆಚ್ಚು ಚಿತ್ರಗಳಿಗೆ ನೃತ್ಯ ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಭರತನಾಟ್ಯವಲ್ಲದೆ, ಮಣಿಪುರಿ, ಕಥಕ್ಕಳಿ, ಬಾಂಗ್ರಾ ಮುಂತಾದ ನೃತ್ಯ ಪ್ರಕಾರಗಳಲ್ಲಿ ಪರಿಣತಿ ಪಡೆದಿದ್ದಾರೆ.

ಉಡುಪಿಯ ನಾರಾಯಣ ಭಟ್ಟ ಹಾಗೂ ರಾಧಾಕೃಷ್ಣ ತಂತ್ರಿ, ನೃತ್ಯ ಕ್ಷೇತ್ರದಲ್ಲಿ ಶ್ರಮಿಸುತ್ತಿರುವ ಜಿಲ್ಲೆಯ ಹಿರಿಯರೆನಿಸಿದ್ದಾರೆ. ರಾಧಾಕೃಷ್ಣ ತಂತ್ರಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೃತ್ಯ ಕಲೆಯ ಅಭಿವೃದ್ಧಿಗೆ ಅನೇಕ ವರ್ಷಗಳಿಂದ ಶ್ರಮಿಸುತ್ತಿದ್ದಾರೆ. ಬೆಂಗಳೂರಿನ ವಿ.ಸಿ.ಲೋಕಯ್ಯನವರಿಂದ ಭರತನಾಟ್ಯ ಮತ್ತು

ಹೈದರಾಬಾದಿನ ಪದ್ಮಶ್ರೀ ನಟರಾಜ ರಾಮಕೃಷ್ಣ ಅವರಲ್ಲಿ ಶ್ರೀಮತಿ ಲಕ್ಷ್ಮಿ ಗುರುರಾಜ್ ಅವರು ಆಂಧ್ರ ಸಂಪ್ರದಾಯ ಮತ್ತು ಕೂಚಿಪುಡಿ ಪ್ರಕಾರಗಳನ್ನು ಅಭ್ಯಾಸ ಮಾಡಿದ್ದಾರೆ. ಪ್ರತಿಷ್ಠಿತ ವೇದಿಕೆಗಳಲ್ಲಿ ನೃತ್ಯ ಕಾರ್ಯಕ್ರಮಗಳನ್ನು ನೀಡಿರುವ ಶ್ರೀಯುತರು ೧೯೯೦ರಲ್ಲಿ ರಾಧಾಕೃಷ್ಣ ನೃತ್ಯ ನಿಕೇತನ ಸಂಸ್ಥೆಯನ್ನು ಉಡುಪಿಯಲ್ಲಿ ಸ್ಥಾಪಿಸಿದ್ದಾರೆ. ತಮ್ಮ ಶಾಲೆಯ ಪ್ರತಿಭೆಗಳ ಪ್ರದರ್ಶನಕ್ಕಾಗಿ ರಾಧಾಕೃಷ್ಣ ಅವರು ಚಿಣ್ಣರ ಉತ್ಸವ, ಯುವ ನೃತ್ಯೋತ್ಸವ, ಭರತಮುನಿ ಜಯಂತಿ, ನೃತ್ಯಾರ್ಪಣ, ನೃತ್ಯ ಕೌಸ್ತುಭ ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುತ್ತಾರೆ. ರಾಧಾಕೃಷ್ಣ ತಂತ್ರಿಯವರಿಗೆ ನೃತ್ಯ ಕಲಾಸಿಂಧು ನಾಟ್ಯ ಕಲಾ ಪ್ರಪೂರ್ಣ, ನೃತ್ಯ ಕಲಾ ಭೂಷಣ, ಮೊದಲಾದ ಪುರಸ್ಕಾರಗಳು, ೨೦೦೪-೦೫ರ ಸಾಲಿನ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ ಸಂದಿವೆ.

ಉಡುಪಿಯ ಸೀಮಾ ಶೆಟ್ಟಿ, ಶೃಂಗಾರಮಣಿ, ನೃತ್ಯ ಶಿವಾಲಿ ಬಿರುದುಗಳನ್ನು ಪಡೆದಿದ್ದಾರೆ. ಉಡುಪಿ ಲಕ್ಷ್ಮೀನಾರಾಯಣ ಅವರು ಭರತನಾಟ್ಯ, ನಟುವಾಂಗದಲ್ಲಿ ಪರಿಣತಿ ಪಡೆದಿದ್ದು, ದಕ್ಷಿಣ ಭಾರತದ ಚಲನಚಿತ್ರಗಳಿಗೆ ನೃತ್ಯ ಸಂಯೋಜನೆ ಮಾಡಿದ್ದಾರೆ. ಇವರಿಗೆ ಚಿದಂಬರಂನ ನಾಟ್ಯಾಂಜಲಿ ಉತ್ಸವದಲ್ಲಿ ನೃತ್ಯಮಯೂರ್ ಪ್ರಶಸ್ತಿ, ನಾಟ್ಯ ಕಲೈಮಾಮಣಿ, ನೃತ್ಯಕಲಾ ಮಹೋದಧಿ ಬಿರುದುಗಳು ಹಾಗೂ ಕರ್ನಾಟಕ ಗಾನಕಲಾ ಪರಿಷತ್ತು, ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿ ಮೊದಲಾದ ಸಂಸ್ಥೆಗಳ ಪುರಸ್ಕಾರಗಳು ಸಂದಿವೆ. ಕಾರ್ಕಳ ತಾಲೂಕಿನ ಪುತ್ತಿಗೆಯ ವೆಂಕಟರಮಣ ಉಪಾಧ್ಯ (ಜ.೧೯೨೦) ಭರತನಾಟ್ಯ, ಕಥಕ್, ಕಥಕ್ಕಳಿ ಶೈಲಿಗಳಲ್ಲಿ ನೃತ್ಯ ಪ್ರದರ್ಶಿಸಿದವರು. ಇವರಿಗೆ ಕರ್ನಾಟಕ ಸಂಗೀತ ಮತ್ತು ನೃತ್ಯ ಅಕಾಡೆಮಿಯ ಪ್ರಶಸ್ತಿ ಲಭಿಸಿದೆ. ಭರತನಾಟ್ಯ ಮತ್ತು ಕೂಚುಪುಡಿ ನೃತ್ಯ ಕಲಾವಿದೆಯಾದ ಮಂಜರಚಂದ್ರ ಅವರು ಜರ್ಮನಿಯ ಸ್ಟುಟ್‌ಗರ್ಟ್‌ನಲ್ಲಿ ನಡೆದ ಕನಕಪುರಂದರ ಸಮ್ಮೇಳನದಲ್ಲಿ ಪ್ರದರ್ಶನ ನೀಡಿದ್ದಾರೆ. ಪಳ್ಳಿ ಕಣಜಾರುವಿನ ಫಾ. ಫ್ರಾನ್ಸೀಸ್ ಬಾರ್ಬೋಜಾ ಧರ್ಮಗುರುಗಳು ಭರತನಾಟ್ಯದಲ್ಲಿ ಪ್ರಾವೀಣ್ಯ ಪಡೆದಿದ್ದು, ವಿದೇಶಗಳಲ್ಲಿ ಭರತನಾಟ್ಯದ ಮೂಲಕ ಕ್ರೈಸ್ತಮತದ ಉಪದೇಶಗಳನ್ನು ಪ್ರಸಾರ ಮಾಡಿದ್ದಾರೆ.

**ಸಂಘ ಸಂಸ್ಥೆಗಳು**

ಉಡುಪಿಯ ಪರ್ಯಾಯ ಸಮಯಕ್ಕೆ ದೊಡ್ಡ ದೊಡ್ಡ ಕಲಾವಿದರ ಸಂಗೀತ ಕಾರ್ಯಕ್ರಮಗಳು ನಡೆಯುತ್ತಿದ್ದವು. ೧೯೫೮ರಲ್ಲಿ ಮಣಿಪಾಲದಲ್ಲಿ ಅಕಾಡೆಮಿ ಸಂಗೀತ-ನೃತ್ಯ ಶಾಲೆಯು ಆರಂಭವಾಯಿತು. ಸಾವಿರಾರು ವಿದ್ಯಾರ್ಥಿಗಳ ಸಂಗೀತಾಸಕ್ತಿಗೆ ಸಾಕಷ್ಟು ಪ್ರೋತ್ಸಾಹ ನೀಡಿದ ಹಾಗೂ ನೀಡುತ್ತಿರುವ ಸಂಸ್ಥೆ ಇದು. ೧೯೬೧ರಲ್ಲಿ ಉಡುಪಿಯಲ್ಲಿ ಕೆ.ಕೆ.ಪೈ ಅವರ ಹಿರಿತನದಲ್ಲಿ ಹಾಗೂ ಯು.ವಿಜಯನಾಥ ಶೆಣೈ ಅವರ ಕಾರ್ಯದರ್ಶಿತ್ವದಲ್ಲಿ ಸಂಗೀತ ಸಭಾ ಎಂಬ ಸಂಸ್ಥೆ ಉದಯವಾಯಿತು. ಇದು ಸಂಗೀತ, ನೃತ್ಯ, ಯಕ್ಷಗಾನ, ಬ್ಯಾಲೆ, ನಾಟಕ, ಚಿತ್ರಕಲೆ, ವಿದೇಶಿ ಸಂಗೀತ, ಸಿನಿಮಾ ಸಂಗೀತ ಇತ್ಯಾದಿ ಹಲವು ಕಲಾಪ್ರಕಾರಗಳ ಬಗ್ಗೆ ಪ್ರದರ್ಶನ, ಪ್ರಾತ್ಯಕ್ಷಿಕೆ, ಉಪನ್ಯಾಸಗಳನ್ನು ನಡೆಸಿದೆ.

ಉಡುಪಿಯ ಎಂ.ಜಿ.ಎಂ. ಕಾಲೇಜಿನಲ್ಲಿ ೧೯೭೮ರಲ್ಲಿ ಆರಂಭವಾದ ಮೂರು ದಿನಗಳ ವಾದಿರಾಜ ಕನಕದಾಸ ಉತ್ಸವ ಸಹ ಉಲ್ಲೇಖನೀಯ ಅಂಶ. ೧೯೮೯ರಲ್ಲಿ ಮಧೂರು ಪಿ.ಬಾಲಸುಬ್ರಹ್ಮಣ್ಯ ಅವರು ವಿ। ಅರವಿಂದ ಹೆಬ್ಬಾರರೊಂದಿಗೆ ಹುಟ್ಟು ಹಾಕಿದ ರಾಗಧನ ಉಡುಪಿ (ರಿ.) ಸಂಸ್ಥೆಯು ನಡೆಸುತ್ತಿರುವ ಗೃಹ ಸಂಗೀತ ಯೋಜನೆ ಅತ್ಯಂತ ಯಶಸ್ವೀ ಪ್ರಯೋಗವೆನಿಸಿದೆ. ಸ್ಥಳೀಯ ಕಲಾವಿದರ ಹಾಗೂ ಪರ ಊರಿನ ಕಲಾವಿದರ ಕಛೇರಿ, ಉಪನ್ಯಾಸ, ಪ್ರಾತ್ಯಕ್ಷಿಕೆ, ಗುಂಪುಚರ್ಚೆ, ವಾಗ್ಗೇಯಕಾರರ ಉತ್ಸವ, ಸಂಗೀತ ಸ್ಪರ್ಧೆ-ಮೊದಲಾದ ಚಟುವಟಿಕೆಯಿಂದ ಉಡುಪಿಯು ಸಂಗೀತ ಕ್ಷೇತ್ರದಲ್ಲಿ ಅತ್ಯುನ್ನತ ಮಟ್ಟಕ್ಕೆ ಏರಿತು.

೧೯೯೨ರಿಂದ ಕಾರ್ಕಳದ ಶಾಸ್ತ್ರೀಯ ಸಂಗೀತ ಸಭಾವು ಪ್ರಕಾಶ ಶೆಣೈ ಅವರ ಕಾರ್ಯದರ್ಶಿತ್ವದಲ್ಲಿ ಸಂಗೀತ ಸೇವೆ ನಡೆಸುತ್ತಿದೆ. ಅಹೋ ರಾತ್ರಿ ನಡೆಯುವ ಕಛೇರಿ, ರಸರಾತ್ರಿ ಕಲಾಸಾಧನೆ ಎಂಬ ಹೆಸರಿನಲ್ಲಿ

ವರ್ಷಂಪ್ರತಿ ನಡೆಸುವ ಸಂಗೀತ ಸ್ಪರ್ಧೆ ಹಾಗೂ ಅದ್ದೂರಿಯಿಂದ ನಡೆಸಲಾಗುವ ಅಂತಾರಾಷ್ಟ್ರೀಯ ಮಟ್ಟದ ಕಲಾವಿದರ ಮೇಳಯಿಸುವಿಕೆ ಮೊದಲಾದವು ಆಸಕ್ತರ ಗಮನ ಸೆಳೆದಿವೆ. ಕುಂದಾಪುರದಲ್ಲಿ ಸಂಗೀತ ಭಾರತಿ ಟ್ರಸ್ಟ್ ಅನ್ನು ವೈಕುಂಠ ಹೆಬ್ಬಾರರು ನಡೆಸಿಕೊಂಡು ಬರುತ್ತಿದ್ದಾರೆ. ೧೯೯೯ರಲ್ಲಿ ಆರಂಭವಾದ 'ಸರಿ ಪದ ನಿಗಮ' ಎಂಬ ಸಂಸ್ಥೆಯ ಮೂಲಕ ಸಂಚಾಲಕರಾದ ಗೋಕುಲದಾಸ ಅತ್ತಾವರ ಅವರು ಸಂಗೀತ ತರಬೇತಿ ಹಾಗೂ ಸಂಗೀತೋಪಕರಣಗಳ ಮಾರಾಟವನ್ನು ಉಡುಪಿಯಲ್ಲಿ ನಡೆಸುತ್ತಿದ್ದಾರೆ. ಮೃದಂಗ ತರಬೇತಿ ತರಗತಿಗಳನ್ನು ಪೇಜಾವರ ಮಠದ ಕಲಾ ಸಂಸತ್ತು ನಿರ್ವಹಿಸುತ್ತಿದೆ. ಮಣಿಪಾಲದ ಉದಯವಾಣಿ ದಿನಪತ್ರಿಕೆ ಸಂಗೀತದ ಪ್ರಚಾರಕ್ಕಾಗಿ ಮಹತ್ತರ ಕೊಡುಗೆ ನೀಡಿದೆ. ಜಿಲ್ಲೆಯ ಕಲಾ ಕಾರ್ಯಕ್ರಮಗಳ ವಿಮರ್ಶೆ ಮಾಡಿ, ಕಲಾಸಂವೇದನೆಯನ್ನು ತಿದ್ದುವ ಕೆಲಸವನ್ನು ಪತ್ರಿಕೆಯ ಸಹಸಂಪಾದಕ ಈಶ್ವರಯ್ಯ ಮಾಡಿದ್ದಾರೆ. (ಲೇಖಕರು : ವೈ.ಎಸ್.ವಿಜಯಲಕ್ಷ್ಮಿ)

## ಯಕ್ಷಗಾನ

ಕರ್ನಾಟಕದ ಜನಪ್ರಿಯ ರಂಗಕಲೆಗಳಲ್ಲಿ ಒಂದಾಗಿರುವ ಯಕ್ಷಗಾನ ಕಲಾ ಪ್ರಕಾರಕ್ಕೆ ಬಯಲಾಟ, ಭಾಗವತರಾಟ, ದಶಾವತಾರ ಎಂಬ ಹೆಸರುಗಳೂ ಇವೆ (ಬಯಲಾಟ ಪ್ರದರ್ಶನವನ್ನು 'ಆಟ' ಎಂದೇ ಕರೆಯುವುದು ಕರಾವಳಿಯಲ್ಲಿ ಸಾಮಾನ್ಯ ರೂಢಿಯಾಗಿದೆ). ನಾಡಿನ ಉದ್ದಗಲಕ್ಕೆ ವ್ಯಾಪಿಸಿರುವ ಈ ಯಕ್ಷಗಾನ ಬಯಲಾಟವು ಪ್ರಾದೇಶಿಕವಾಗಿ ವಿಭಿನ್ನ ಶೈಲಿಗಳನ್ನೂ ಹೊಂದಿದೆ. ವೇಷಭೂಷಣ, ಹಾಡುಗಾರಿಕೆ, ಅಭಿನಯಾದಿಗಳಲ್ಲಿ ಕಾಣಬರುವ ಈ ಶೈಲಿ ಭೇದಗಳನ್ನು ಆಧರಿಸಿ, ಬಯಲು ಸೀಮೆಯ ಬಯಲಾಟವನ್ನು ಮೂಡಲಪಾಯ ಎಂದೂ, ಘಟ್ಟದ ಕೆಳಗಿನ (ಹಾಗೂ ಮಲೆನಾಡಿನಲ್ಲಿನ) ಬಯಲಾಟವನ್ನು ಪಡುವಲಪಾಯ ಎಂದೂ ಪ್ರಧಾನವಾಗಿ ವರ್ಗೀಕರಿಸಲಾಗಿದೆ. ಪಡುವಲಪಾಯದಲ್ಲಿಯೂ ಈ ಮುಂದಿನಂತೆ ಒಳಭೇದಗಳನ್ನು ಗುರುತಿಸಲಾಗಿದೆ; ಇಂದಿನ ಕಾಸರಗೋಡು ಜಿಲ್ಲೆಯ ಉತ್ತರಭಾಗ (ಚಂದ್ರಗಿರಿ ನದಿಯಿಂದ ಉತ್ತರಭಾಗ), ದಕ್ಷಿಣಕನ್ನಡ ಜಿಲ್ಲೆ ಮತ್ತು ಉಡುಪಿ ಜಿಲ್ಲೆಗಳ ದಕ್ಷಿಣ ಭಾಗದಲ್ಲಿ ಪ್ರಚಲಿತವಿರುವ ಯಕ್ಷಗಾನ ಸ್ವರೂಪವನ್ನು 'ತೆಂಕುತಿಟ್ಟು' ಎಂದು ಗುರುತಿಸುತ್ತಾರೆ. ಉಡುಪಿ ಜಿಲ್ಲೆಯ ಉತ್ತರಭಾಗ ಮತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರಚಲಿತವಿರುವ ಯಕ್ಷಗಾನ ರೂಪವನ್ನು 'ಬಡಗುತಿಟ್ಟು' ಎಂದು ಗುರುತಿಸುತ್ತಾರೆ. ಉತ್ತರ ಕನ್ನಡ ಜಿಲ್ಲೆಯದನ್ನು 'ಬಡಬಡಗು' ಎಂದೂ ಗುರುತಿಸುವುದಿದೆ. ತೆಂಕುತಿಟ್ಟಿಗೂ ಬಡಗುತಿಟ್ಟಿಗೂ ಭೇದಗಳಿರುವಂತೆ ಬಡಗುತಿಟ್ಟಿಗೂ ಬಡಬಡಗು (ಉತ್ತರಕನ್ನಡ) ಶೈಲಿಗೂ ಅಲ್ಪಸ್ವಲ್ಪ ಭೇದಗಳಿವೆ. ಒಟ್ಟಿನಲ್ಲಿ ಉಡುಪಿ ಜಿಲ್ಲೆಯ ಹೆಚ್ಚಿನ ಪ್ರದೇಶಗಳಲ್ಲಿ ಬಡಗುತಿಟ್ಟು ಶೈಲಿರೂಢಿಯಲ್ಲಿದೆ.

ಉಡುಪಿ ಜಿಲ್ಲೆ ಬಡಗುತಿಟ್ಟಿನ ಕ್ಷೇತ್ರವಾಗಿದೆ. ಉಡುಪಿ, ಕಾರ್ಕಳ, ಕೋಟ, ಸಾಲಿಗ್ರಾಮ, ಮಂದರ್ತಿ, ಪೆರ್ಡೂರು, ಹಿರಿಯಡಕ, ಹೆಬ್ರಿ, ಬೈಂದೂರು, ಹಾಲಾಡಿ, ಸೌಕೂರು, ಕಮಲಶಿಲೆ, ಕೊಲ್ಲೂರು, ಮಾರಣಕಟ್ಟೆ, ಬ್ರಹ್ಮಾವರ, ಮಾಳ – ಇವೆಲ್ಲ ಯಕ್ಷಗಾನದ ಕೇಂದ್ರಗಳಾಗಿದ್ದ ಸ್ಥಳಗಳು. ಇಲ್ಲಿ ಪ್ರಸಿದ್ಧವಾದ ದೇವಾಲಯಗಳಿವೆ ಮತ್ತು ಈ ಹೆಚ್ಚಿನ ಸ್ಥಳಗಳಲ್ಲಿ ದೇವಾಲಯಗಳ ಹೆಸರನ್ನು ಹೊತ್ತ ಯಕ್ಷಗಾನ ಮೇಳಗಳಿದ್ದವು. ಇವು ಕೇಂದ್ರಗಳೆಂದರೂ ಜಿಲ್ಲೆಯ ಹೆಚ್ಚಿನ ಹಳ್ಳಿಗಳಲ್ಲಿ ಯಕ್ಷಗಾನ ಪ್ರದರ್ಶನಗಳು ನಡೆಯುತ್ತವೆ. ಹಳ್ಳಿಗಳಲ್ಲಿಯೂ ಯಕ್ಷಗಾನದ ಉತ್ತಮ ಕಲಾವಿದರು ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಮೇಳಗಳು ಸಾಂಪ್ರದಾಯಿಕವಾಗಿ ದೀಪಾವಳಿಯಿಂದ ತಿರುಗಾಟ ತೊಡಗಿ ಪತತನಾಜೆ (ಹತ್ತನಾವಧಿ=ವೃಷಭ ಮಾಸದ ಹತ್ತನೆಯ ದಿನ) ಸಾಮಾನ್ಯವಾಗಿ ಮೇ ತಿಂಗಳ ಕೊನೆ, ಸಮಯದಲ್ಲಿ ತಿರುಗಾಟ ಕೊನೆಗೊಳಿಸುತ್ತವೆ. ಆ ಬಳಿಕ ಮೇಳದ ಕಲಾವಿದರು ಸ್ಥಳೀಯವಾಗಿ ಅಥವಾ ಪರವೂರುಗಳಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಿರುತ್ತಾರೆ.

### ಯಕ್ಷಗಾನ ಮೇಳಗಳು

ಯಕ್ಷಗಾನ ಮೇಳಗಳು ದೇವಾಲಯಗಳ ಹೆಸರಿನಲ್ಲಿರುತ್ತಿದ್ದುವು. ದೇವಾಲಯದ ಆಡಳಿತಗಾರರಿಂದ ಆಸಕ್ತ ಮಹನೀಯರು ಮೇಳವನ್ನು ವಹಿಸಿಕೊಳ್ಳುವುದಿತ್ತು. ಸಾಮಾನ್ಯವಾಗಿ ಕಲಾವಿದರೇ ಮೇಳದ

ಯಜಮಾನರಾಗಿರುತ್ತಿದ್ದರು. ಆನಂತರ ಕಾಲದಲ್ಲಿ ಕಲಾವಿದರಲ್ಲದ ಸಂಘಟಿತರೂ ಮೇಳಗಳನ್ನು ವಹಿಸಿಕೊಂಡು ನಿರ್ವಹಿಸಿದ್ದುಂಟು. ಮೇಳಗಳು ದೇವಾಲಯದ ಹೆಸರಿನಲ್ಲಿರುವುದರಿಂದ ದೀಪಾವಳಿಯ ಸಂದರ್ಭದಲ್ಲಿ ಗೆಜ್ಜೆ ಕಟ್ಟಿದ ಆಟ ಆ ದೇವಾಲಯದಲ್ಲಿ ಆಗುತ್ತಿತ್ತು. ಇದಕ್ಕೆ ಸೇವೆ ಆಟವೆಂದು ಹೆಸರು. ಸೇವೆ ಆಟದಲ್ಲಿ ಭಾಗವಹಿಸಲು ಆಹ್ವಾನಿತರಾದ ಕಲಾವಿದರೇ ಆ ವರ್ಷ ಮೇಳದ ತಿರುಗಾಟದಲ್ಲಿರುತ್ತಿದ್ದರು – ಇದು ಸಾಮಾನ್ಯ ಪದ್ಧತಿ. ಇಂದು ಹೆಚ್ಚಿನ ಮೇಳಗಳು ಜೋಡಿ ಮೇಳಗಳಾಗಿದ್ದರೂ ಸೇವೆ ಆಟದ ಪದ್ಧತಿಯನ್ನು ಉಳಿಸಿಕೊಂಡಿವೆ.

ಮೇಳಗಳ ಆಟಗಳಲ್ಲೂ ಬಯಲಾಟ ಮತ್ತು ಡೇರೆ ಆಟಗಳಿವೆ. ಡೇರೆ (ಟೆಂಟ್) ಆಟವೆಂದರೆ ಟಿಕೆಟಿನ ಆಟಗಳು. ಬರಿಯ ಬಯಲಾಟವನ್ನೇ ಪ್ರದರ್ಶಿಸುವ ಮೇಳಗಳೂ ಇವೆ. ಮುಖ್ಯವಾಗಿ ಮಂದರ್ತಿ ದೇವಾಲಯದ ಮೇಳಗಳು ಬಯಲಾಟ ಮಾತ್ರವನ್ನೇ ಆಡುತ್ತವೆ. ಈ ಮೇಳಗಳಿಂದ ಹರಕೆಯಾಟವಾಗಿ ಬಯಲಾಟವಾಡಿಸುವ ಭಕ್ತರ ಸಂಖ್ಯೆ ಸಾಕಷ್ಟಿದೆ. ಇತರ ಮೇಳಗಳೂ ಹರಕೆಯಾಟ ಬಯಲಾಟಗಳನ್ನಾಡುತ್ತವೆ. ಹರಕೆಯಾಟ–ಬಯಲಾಟಗಳಲ್ಲಿ ಸಾಮಾನ್ಯವಾಗಿ ಪೌರಾಣಿಕ ಪ್ರಸಂಗಗಳನ್ನೇ ಆಡಲಾಗುವುದಾದರೂ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ 'ಕ್ಷೇತ್ರ ಮಹಾತ್ಮೆ'ಗಳನ್ನು ಆಡುವ ಪದ್ಧತಿಯೂ ಇದೆ. ಕ್ಷೇತ್ರ ಮಹಾತ್ಮೆ ಪ್ರಸಂಗಗಳ ರಚನೆ ಇತ್ತೀಚಿನ (೨೦ನೆಯ ಶತಮಾನದ ಉತ್ತರಾರ್ಧ) ಬೆಳವಣಿಗೆ. ಎಷ್ಟೋ ದೇವಾಲಯಗಳ ಮೇಳಗಳು ಕೆಲವು ವರ್ಷ ನಡೆದು ಆನಂತರ ಇಲ್ಲವಾದುದಿದೆ; ಹಲವು ವರ್ಷಗಳ ಬಳಿಕ ಪುನರುಜ್ಜೀವನ ಹೊಂದಿರುವುದಿದೆ. ಉದಾಹರಣೆಗೆ ಹಿರಿಯಡಕ ಮೇಳ, ಉಡುಪಿ ಮೇಳ ಎಂಬವುಗಳಿದ್ದಂತೆ ತಿಳಿಯುತ್ತದೆ. ಈಗ ಈ ಮೇಳಗಳಿಲ್ಲ. ಪೆರ್ಡೂರು ಮೇಳ ಹಿಂದೆ ಇದ್ದು ಹಲವು ವರ್ಷಗಳ ಕಾಲ ಅಸ್ತಂಗತವಾಗಿತ್ತು. ಇತ್ತೀಚೆಗೆ ಕೆಲವು ವರ್ಷಗಳಿಂದ ನಡೆಯುತ್ತಿದೆ. ಮಂದರ್ತಿ ಮೇಳಕ್ಕೆ ಹರಕೆಯಾಟಗಳನ್ನು ಪೂರ್ತಿಗೊಳಿಸಲು ಸಾಧ್ಯವಾಗದುದರಿಂದ ನಾಲ್ಕು ಮೇಳಗಳಾಗಿವೆ. ಮಾರಣಕಟ್ಟೆ ಮೇಳ ಒಂದಕ್ಕಿಂತ ಹೆಚ್ಚು ತಂಡಗಳನ್ನು ಹೊಂದಿದೆ. ಉಡುಪಿ ಜಿಲ್ಲೆಯಲ್ಲಿ ಈಗ ಚಾಲ್ತಿಯಲ್ಲಿರುವ ಮೇಳಗಳೆಂದರೆ ಮಂದರ್ತಿ, ಮಾರಣಕಟ್ಟೆ, ಗೋಳಿಗರಡಿ, ಸಾಲಿಗ್ರಾಮ, ಪೆರ್ಡೂರು, ಹಾಲಾಡಿ, ಸೌಕೂರು, ಕಮಲಶಿಲೆ, ಮಡಾಮಕ್ಕಿ, ಅಮೃತೇಶ್ವರಿ–ಕೋಟ ಇವು. ಸಾಲಿಗ್ರಾಮದಲ್ಲಿನ 'ಮಕ್ಕಳ ಮೇಳ'ವು ಒಂದು ಹವ್ಯಾಸಿ–ಪ್ರಾಯೋಗಿಕ ಮೇಳವಾಗಿದೆ ಕಿರಿಯರಿಗೆ ಯಕ್ಷಗಾನವನ್ನು ಶಾಸ್ತ್ರೀಯವಾಗಿ ಕಲಿಸುವ ಕಾರ್ಯವನ್ನು ಈ ಸಂಸ್ಥೆ ಮಾಡುತ್ತದೆ (ಈ ಮಕ್ಕಳ ಮೇಳದ ಪ್ರದರ್ಶನಗಳು ವಿದೇಶಗಳಲ್ಲೂ ಆಗಿವೆ). 'ವರ್ಷಕ್ಕೊಂದು ನೂತನ ಕಲಾ ಕಾಣಿಕೆ' ಎಂಬ ಹೆಸರಿನಲ್ಲಿ ಡೇರೆ ಮೇಳಗಳು ಪ್ರತಿ ವರ್ಷವೂ ಹೊಸ ಹೊಸ ಪ್ರಸಂಗಗಳನ್ನು ರಂಗಕ್ಕೆ ತರುತ್ತಿವೆ. ಅವುಗಳಲ್ಲಿ ಕೆಲವು ಜನಪದ ಕಥೆಯ ಆಧಾರವು. ಹಲವು ಕಾಲ್ಪನಿಕ ಕಥೆಯುಳ್ಳವು. ಇತ್ತೀಚೆಗೆ ಸಿನಿಮಾ ಕಥೆಗಳೂ ಯಕ್ಷಗಾನ ರಂಗವನ್ನು ಪ್ರವೇಶಿಸಿವೆ. ಅವುಗಳನ್ನು ಪ್ರಸಂಗರೂಪದಲ್ಲಿ ಅಳವಡಿಸಿಕೊಡುವ ಪ್ರಸಂಗಕರ್ತರೂ ಇದ್ದಾರೆ. ಕೆಲವು ಮೇಳಗಳ ಇಂತಹ ಪ್ರದರ್ಶನಗಳ ಬಗೆಗೆ ವಿಮರ್ಶೆಯ ಸ್ಪರ್ಧೆಯನ್ನು ಏರ್ಪಡಿಸಿರುವುದು ಇತ್ತೀಚಿನ ವಿದ್ಯಮಾನವಾಗಿದೆ. ಉಡುಪಿ ಜಿಲ್ಲೆಯ ಎಲ್ಲಾ ಮೇಳಗಳೂ ಕನ್ನಡ ಪ್ರಸಂಗಗಳನ್ನೇ ಆಡುವ ಮೇಳಗಳಾಗಿವೆ. ಉಡುಪಿ ಜಿಲ್ಲೆಯ ಮೇಳಗಳಲ್ಲಿ ಮಂದರ್ತಿ, ಮಾರಣಕಟ್ಟೆ ಮೇಳಗಳು ತಮಗೆ ಇರುವ ಸ್ಥಳೀಯ ಬೇಡಿಕೆಗಳಿಂದಾಗಿ ತೆಂಕುತಿಟ್ಟಿನ ಪ್ರದೇಶಗಳಿಗೆ ಹೋಗುವುದು ಬಹಳ ಕಡಿಮೆ. ಆದರೆ, ತೆಂಕುತಿಟ್ಟಿನ ಕಟೀಲು, ಧರ್ಮಸ್ಥಳ ಮೇಳಗಳು ಬಡಗುತಿಟ್ಟಿನ ಪ್ರದೇಶಗಳಿಗೂ ಬರುತ್ತವೆ.

## ಯಕ್ಷಗಾನ ಪ್ರಸಂಗಕರ್ತರು

ಉಡುಪಿ ಜಿಲ್ಲೆಯ ಹಳೆಯ ಯಕ್ಷಗಾನ ಪ್ರಸಂಗಕರ್ತರಲ್ಲಿ ರಾಮಪುತ್ರವಿಷ್ಣು (ವಿರಾಟ ಪರ್ವ), ದೇವಿದಾಸ (ದೇವಿ ಮಹಾತ್ಮೆ, ಅಭಿಮನ್ಯು ಕಾಳಗ, ಕೃಷ್ಣ ಸಂಧಾನ, ಚಿತ್ರಸೇನ ಕಾಳಗ ಇತ್ಯಾದಿ. ದೇವಿದಾಸನ ಸ್ಥಳದ ಬಗೆಗೆ ಭಿನ್ನ ಅಭಿಪ್ರಾಯಗಳೂ ಇವೆ) ಪಾಂಡೇಶ್ವರ ವೆಂಕಟ (ಕರ್ಣಾರ್ಜುನ ಕಾಳಗ), ಧ್ವಜಪುರದ ನಾಗಪ್ಪಯ್ಯ (ಚಂದ್ರಾವಳೀ ವಿಲಾಸ); ಹಟ್ಟಿಯಂಗಡಿ ರಾಮಭಟ್ಟ (ದ್ರೌಪದೀಸ್ವಯಂವರ, ಲವಕುಶರ

ಕಾಳಗ, ಅತಿಕಾಯ ಕಾಳಗ, ಸುಭದ್ರಾಪರಿಣಯ, ಧ್ರುವ ಚರಿತ್ರೆ, ರತಿ ಕಲ್ಯಾಣ ಇತ್ಯಾದಿ) ಮುಖ್ಯರು. ಹತ್ತೊಂಬತ್ತನೆಯ ಶತಮಾನದ ಕೊನೆಯಲ್ಲಿ ಪ್ರಸಂಗ ರಚಿಸಿದವರಲ್ಲಿ ಕನ್ನಡ ಸಾಹಿತ್ಯದ ಮುಂಗೋಳಿಯೆಂದು ಖ್ಯಾತನಾದ ಮುದ್ದಣ ಉಡುಪಿಯವನು. ಅವನ ಕುಮಾರವಿಜಯ, ರತ್ನಾವತೀ ಕಲ್ಯಾಣಗಳು ಪ್ರಸಿದ್ಧ ಕೃತಿಗಳು. ಚೋರಾಡಿ ವೆಂಕಟರಮಣ ಭಟ್ಟರೂ ಈ ಕಾಲದಲ್ಲಿ ಪ್ರಸಂಗ ರಚಿಸಿದವರು (ಇಂದ್ರವಿಜಯ, ಜಾಂಬವತೀಕಲ್ಯಾಣ).

ಇಪ್ಪತ್ತನೆಯ ಶತಮಾನದಲ್ಲಿ ಸೀತಾನದಿ ಗಣಪಯ್ಯ ಶೆಟ್ಟಿ, ಪಂದುಬೆಟ್ಟು ವೆಂಕಟರಾಯ, ಗಂಗಾಧರ ರಾಮಚಂದ್ರಯ್ಯ, ಶಿರೂರು ಫಣಿಯಪ್ಪಯ್ಯ, ಮಾರ್ವಿ ವಾದಿರಾಜ ಹೆಬ್ಬಾರ, ಕೊರ್ಗಿ ಸೂರ್ಯನಾರಾಯಣ ಉಪಾಧ್ಯಾಯ ಮೊದಲಾದವರು ಮುಖ್ಯರು. ಪಂದುಬೆಟ್ಟು ವೆಂಕಟರಾಯರು ಬೈದರ್ಕಳ ಪ್ರತಾಪ ಎಂಬ ಪ್ರಸಂಗ ಬರೆದು ಜನಪದ ಸಾಹಿತ್ಯದ ಕಥೆಯನ್ನು ಯಕ್ಷಗಾನಕ್ಕೆ ಅಳವಡಿಸಿದ ಮೊದಲಿಗರಾದರು. ಈಗಿನ ಹೊಸ ಹೊಸ ಪ್ರಸಂಗಕರ್ತರಲ್ಲಿ ವೈ.ಚಂದ್ರಶೇಖರಶೆಟ್ಟಿ, ಕಂದಾವರ ರಘುರಾಮಶೆಟ್ಟಿ, ಕೆ.ಎಂ.ರಾಘವ ನಂಬಿಯಾರ್, ಅಂಬಾತನಯ ಮುದ್ರಾಡಿ, ಜಿ.ಆರ್.ಕಾಳಿಂಗನಾವಡ, ಬಿ.ಎಂ.ಶೆಣೈ, ಎ.ಮಾಧವ ಶೆಣೈ, ದಯಾನಂದ ಬಳ್ಕೂರು, ಚಂದ್ರಹಾಸ ಹೆಬ್ಬಾರ ಯಳೂರು, ಹೆರಂಜಾಲು ಗೋಪಾಲಗಾಣಿಗ, ಕಬ್ಬಿನಾಲೆ ವಸಂತ ಭಾರದ್ವಾಜ, ಕೆ.ಬಸವರಾಜ ಶೆಟ್ಟಿಗಾರ, ಮರವಂತೆ ಕೃಷ್ಣಭಟ್ಟ ಮೊದಲಾದವರು ಮುಖ್ಯರಾಗಿದ್ದಾರೆ. ಪಂದುಬೆಟ್ಟು ವೆಂಕಟರಾಯರ ಪ್ರಸಂಗ ಕನ್ನಡ ಭಾಷೆಯಲ್ಲಿರುವುದಾದರೂ ತುಳು ಪ್ರಸಂಗ–ತುಳು ಆಟಗಳಿಗೆ ಪ್ರೇರಣೆಯನ್ನು ಕೊಟ್ಟಿದೆ.

## ಯಕ್ಷಗಾನ ಶಿಕ್ಷಣ ವ್ಯವಸ್ಥೆ

ಬಡಗುತಿಟ್ಟು ಯಕ್ಷಗಾನ ಅಧ್ಯಯನಕ್ಕೆ ಸಂಬಂಧಪಟ್ಟ ಹಾಗೆ ಉಡುಪಿಯ ಎಂ.ಜಿ.ಎಂ. ಕಾಲೇಜಿನ ಆಶ್ರಯದಲ್ಲಿ ಕಲಾಕೇಂದ್ರವು ಕಳೆದ ಕೆಲವು ವರ್ಷಗಳಿಂದ ವ್ಯವಸ್ಥಿತವಾಗಿ ಕಾರ್ಯವೆಸಗುತ್ತಿದೆ. ಯಕ್ಷಗಾನ ತಿರುಗಾಟದ ವ್ಯವಸಾಯ ತಂಡವೂ ಈ ಕೇಂದ್ರದಲ್ಲಿದೆ. ಕೇಂದ್ರದಲ್ಲಿ ವೀರಭದ್ರ ನಾಯಕ, ಮಹಾಬಲಕಾರಂತ, ಹಿರಿಯಡಕ ಗೋಪಾಲರಾವ್, ನೀಲಾವರ ರಾಮಕೃಷ್ಣಯ್ಯ, ನೀಲಾವರ ಲಕ್ಷ್ಮೀನಾರಾಯಣರಾವ್, ಹೆರಂಜಾಲು ವೆಂಕಟರಮಣ ಮೊದಲಾದವರು ಗುರುಗಳಾಗಿ ತರಬೇತಿ ನೀಡಿದರು. ಈಗ ಗುರು ಬನ್ನಂಜೆ ಸಂಜೀವ ಸುವರ್ಣರು ಗುರುಗಳಾಗಿಯೂ, ಹೆರಂಜೆ ಕೃಷ್ಣಭಟ್ಟರು ನಿರ್ದೇಶಕರಾಗಿಯೂ ಈ ಕೇಂದ್ರ ಕಾರ್ಯನಿರ್ವಹಿಸುತ್ತಿದ್ದು, ಇತ್ತೀಚೆಗೆ ಶಿವಪ್ರಭಾ ಎಂಬ ಸ್ವಂತ ಕಟ್ಟಡದಲ್ಲಿ ಕಲಾಸಮುಚ್ಚಯವನ್ನು ಹೊಂದಿದೆ. ನೂರಾರು ವಿದ್ಯಾರ್ಥಿಗಳು ಇಲ್ಲಿ ಕಲಿತು ಇಂದು ವ್ಯವಸಾಯ ಮೇಳಗಳಲ್ಲಿದ್ದಾರೆ. ವಿದೇಶೀ ವಿದ್ಯಾರ್ಥಿಗಳೂ ಇಲ್ಲಿ ತರಬೇತಿ ಪಡೆದಿದ್ದಾರೆ. ಜರ್ಮನಿಯ ಕತ್ರಿನಾ ಎಂಬಾಕೆ ಇಲ್ಲಿ ಕಲಿತು ಸ್ವದೇಶದಲ್ಲಿ ಪ್ರದರ್ಶನ ನೀಡಿದ್ದಾರೆ. ಅಮೆರಿಕ, ಜಪಾನ್, ಕೊರಿಯಾ, ಜರ್ಮನಿ ಮೊದಲಾದ ದೇಶಗಳವರು ಈ ಕೇಂದ್ರವನ್ನು ಸಂದರ್ಶಿಸಿದ್ದಾರೆ. ಈ ಕೇಂದ್ರದ ತಂಡವು ಹಲವು ಬಾರಿ ದೇಶವಿದೇಶಗಳಲ್ಲಿ ಯಕ್ಷಗಾನ ಪ್ರದರ್ಶನ ನೀಡಿದೆ. ತಂಡದ ನೇತೃತ್ವವನ್ನು ಮೊದಲಿಗೆ ವಹಿಸಿದವರು ಕು.ಶಿ.ಹರಿದಾಸಭಟ್ಟರು. ತಂಡದಲ್ಲಿ ಶಿವರಾಮ ಕಾರಂತರೂ ಇದ್ದರು. ಆಮೇಲೆ ಕಾರಂತರ ನೇತೃತ್ವದಲ್ಲಿಯೂ, ಹೆರಂಜೆ ಕೃಷ್ಣಭಟ್ಟರ ನೇತೃತ್ವದಲ್ಲಿಯೂ ಈ ತಂಡವು ವಿದೇಶಯಾತ್ರೆ ಮಾಡಿದೆ. ಅಲ್ಲಲ್ಲಿ ಅಲ್ಪಸ್ವಲ್ಪ ತರಬೇತಿ ಮತ್ತು ಪ್ರದರ್ಶನ ನೀಡುವ ಪದ್ಧತಿ ಬಹಳ ವರ್ಷಗಳಿಂದ ಇದೆ. ಈ ರೀತಿಯ ಕಾಲಬದ್ಧ ತರಬೇತಿ ಕಾರ್ಯಕ್ರಮಗಳನ್ನು ಮಾಡಿ ಅನೇಕರಿಗೆ ಈ ಶಿಕ್ಷಣವನ್ನು ನೀಡಿದವರು ತೋನ್ಸೆ ಕಾಂತಪ್ಪ ಮಾಸ್ತರ್ ಅವರು. ಅವರಿಗೆ 'ಚಲಿಸುವ ಯಕ್ಷಗಾನ ತರಬೇತಿ ಕೇಂದ್ರ' ವೆಂಬ ಹೆಸರಿತ್ತು. ಹೀಗೆ ಯಕ್ಷಗಾನ ತರಬೇತಿಯು ಸಾಂಪ್ರದಾಯಿಕ ವಿಧಾನದಿಂದ ಪೂರ್ಣವಾಗಿ ಕಳಚಿಕೊಂಡು ಬೇರೆ ರೂಪವನ್ನು ಪಡೆದಿದೆ.

## ಯಕ್ಷಗಾನ ಗ್ರಂಥ ಪ್ರಕಾಶನ ಮತ್ತು ಸಂಶೋಧನೆ

ಯಕ್ಷಗಾನಕ್ಕೆ ಸಂಬಂಧಿಸಿದ ಪುಸ್ತಕಗಳ ಪ್ರಕಾಶನದಲ್ಲಿ ಉಡುಪಿಗೆ ಒಂದು ವಿಶಿಷ್ಟ ಸ್ಥಾನವಿದೆ. ಯಕ್ಷಗಾನ ಪ್ರಸಂಗಗಳ ಮುದ್ರಣ ದೊಡ್ಡ ಪ್ರಮಾಣದಲ್ಲಿ ತೊಡಗಿದುದು ಬೆಂಗಳೂರಿನಲ್ಲಿ. ಅದು ೧೯ನೆಯ

ಶತಮಾನದ ಅಂತ್ಯಭಾಗದಲ್ಲಿ. ಚೋರಾಡಿ ವೆಂಕಟರಮಣ ಭಟ್ಟರೆಂಬವರ ಇಂದ್ರವಿಜಯ ಎಂಬ ಪ್ರಸಂಗ ೧೮೯೬ರಲ್ಲಿ ಬೆಂಗಳೂರಿನಲ್ಲಿ ಮುದ್ರಿತವಾದುದು ತಿಳಿಯುತ್ತದೆ. ಪಾವಂಜೆ ಶ್ಯಾಮರಾಯರು ಉಡುಪಿಯಲ್ಲಿ ಶ್ರೀಕೃಷ್ಣ ಮುದ್ರಣಾಲಯವನ್ನು ಸ್ಥಾಪಿಸಿ ಶ್ರೀಮನ್ಮಾಧ್ವ ಸಿದ್ಧಾಂತ ಗ್ರಂಥಾಲಯವನ್ನು ನಡೆಸತೊಡಗಿದ ಮೇಲೆ ಯಕ್ಷಗಾನ ಪ್ರಸಂಗ ಕೃತಿಗಳ ಪ್ರಕಾಶನದ ಕೇಂದ್ರ ಉಡುಪಿಯೇ ಆಯಿತು. ೧೯೨೦ರ ಆನಂತರ ೧೯೭೫ರವರೆಗೂ ಈ ಸಂಸ್ಥೆಯವರು ಯಕ್ಷಗಾನ ಪ್ರಸಂಸಗಗಳನ್ನು ಅಚ್ಚುಕಟ್ಟಾಗಿ ಮುದ್ರಿಸಿಕೊಂಡು ಬಂದಿದ್ದಾರೆ.  ಕೆಲವು ಪ್ರಸಂಗಗಳು ಏಳು ಎಂಟು ಮುದ್ರಣಗಳನ್ನು ಕಂಡುದೂ ಇದೆ. ಪಾವಂಜೆಯವರ ಮುದ್ರಣದ ಪ್ರತಿಗಳು ಶುದ್ಧಪ್ರತಿಗಳೆಂದು ಪರಿಗಣಿತವಾದುದಲ್ಲದೆ ಇಡಿಯ ಕರಾವಳಿ ಕರ್ನಾಟಕದಲ್ಲಿ ಈ ಪುಸ್ತಕಗಳು ಜನಪ್ರಿಯವಾಗಿವೆ. ಈ ಪ್ರತಿಗಳು ಗ್ರಂಥಸಂಪಾದನೆಯ ವಿಧಾನದಿಂದ ಸಂಪಾದಿತ ಕೃತಿಗಳಲ್ಲದಿದ್ದರೂ ತಪ್ಪಿಲ್ಲದ ಶುದ್ಧಮುದ್ರಣವಾದುದರಿಂದ ಎಲ್ಲರ ಮೆಚ್ಚುಗೆ ಗಳಿಸಿದವು. ಕಾರ್ಕಳದ ಆರ್.ವಿಟ್ಟಪ್ಪ ಶೆಣೈ ಎಂಬ ಪುಸ್ತಕ ವ್ಯಾಪಾರಿಯೂ ಕೆಲವು ಪ್ರಸಂಗ ಕೃತಿಗಳನ್ನು ಪ್ರಕಟಿಸಿದುದಿದೆ.

ಯಕ್ಷಗಾನ ಕ್ಷೇತ್ರದ ಸಂಶೋಧನ ಗ್ರಂಥಗಳಲ್ಲಿ ಮೊದಲನೆಯದು ಪಂಡಿತ ಮುಳಿಯ ತಿಮ್ಮಪ್ಪಯ್ಯನವರ ಪಾರ್ತಿಸುಬ್ಬ ಎಂಬ ಗ್ರಂಥವಾದರೂ ಸಂಶೋಧನೆಯ ಕ್ಷೇತ್ರದಲ್ಲಿ ಒಂದು ಪರಿವರ್ತನೆಯನ್ನೇ ತಂದ ಕೃತಿ ಕೋಟ ಶಿವರಾಮಕಾರಂತರ ಯಕ್ಷಗಾನ ಬಯಲಾಟ ಎಂಬುದು (ಪ್ರ.ಮು.೧೯೫೭, ದ್ವಿ.ಮು.೧೯೬೩). ಅವರು ಮುಖ್ಯವಾಗಿ ವಿವೇಚನೆ ಮಾಡಿದುದು ಉಡುಪಿ ಜಿಲ್ಲೆಯಲ್ಲಿ ಪ್ರಚಲಿತವಿರುವಂತಹ ಬಡಗುತಿಟ್ಟು ಶೈಲಿಯ ಬಗೆಗೇ ಆಗಿದೆ.

ಯಕ್ಷಗಾನದ ಬಗೆಗೂ, ಯಕ್ಷಗಾನ ಕಲಾವಿದರ ಬಗೆಗೂ ಹಲವು ಕೃತಿಗಳು ಪ್ರಕಟಗೊಂಡಿದ್ದು ಇಂದು ಉಡುಪಿ ಪರಿಸರದಲ್ಲಿ ಈ ಬಗೆಗೆ ಬರೆಯುವವರು ಬಹಳ ಮಂದಿ ಇದ್ದಾರೆ.  ಸಂಶೋಧಕರೂ ಹಲವರಿದ್ದಾರೆ. ಯಕ್ಷಗಾನದ ಬಗೆಗೆ ಮೊದಲ ಪಿಎಚ್.ಡಿ. ೧೯೭೨ರಲ್ಲಿ ಅಮೆರಿಕದ ಡಾ.ಮಾರ್ತಾ ಆಷ್ಟನ್ ಅವರದು. ಅವರು ಮುಖ್ಯವಾಗಿ ಉಡುಪಿ ಪರಿಸರದ ಯಕ್ಷಗಾನವನ್ನು ಹೆಚ್ಚು ಅಧ್ಯಯನ ಮಾಡಿದವರು. ಯಕ್ಷಗಾನದ ಕುರಿತಾಗಿ ಕನ್ನಡದಲ್ಲಿ ಮೊತ್ತ ಮೊದಲ ಪಿಎಚ್.ಡಿ. ಪ್ರಬಂಧವನ್ನು ಬರೆದ ಹಾಗೂ ಪ್ರಕಟಿಸಿದ (೧೯೯೦) ಪಿ.ಆನಂದರಾಮ ಉಪಾಧ್ಯ ಕೋಟ ಸಮೀಪದ ಚಿತ್ರಪಾಡಿಯವರು. ಅವರ ಪ್ರಬಂಧ ಯಕ್ಷಗಾನ ಮಹಾಭಾರತ ಪ್ರಸಂಗಗಳು ಎಂಬುದು. ಪ್ರಸಿದ್ಧ ಯಕ್ಷಗಾನ ವಿಮರ್ಶಕ ಕಲಾವಿದರಾದ ಎಂ.ಪ್ರಭಾಕರ ಜೋಶಿ ಮತ್ತು ಕೆ.ಎಂ.ರಾಘವ ನಂಬಿಯಾರ್ ಅವರು ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದ ಮೂಲಕ ಮಂಗಳೂರು ವಿಶ್ವವಿದ್ಯಾನಿಲಯದ ಪಿಎಚ್.ಡಿ. ಪದವಿ ಪಡೆದವರು. ಇಬ್ಬರೂ ಮೂಲತಃ ಉಡುಪಿ ಜಿಲ್ಲೆಯ ಕಾರ್ಕಳದವರು. ಜೋಶಿಯವರ ಕೃತಿ ಕೃಷ್ಣ ಸಂಧಾನ–ಪ್ರಸಂಗ ಮತ್ತು ಪ್ರಯೋಗ ಉಡುಪಿಯಿಂದಲೇ ಪ್ರಕಟಗೊಂಡಿದೆ (೧೯೯೯). ಉಡುಪಿ ಜಿಲ್ಲೆಯಲ್ಲೇ ಇರುವ ಶ್ರೀಕಾಂತ ಸಿದ್ಧಾಪುರ, ಪಾದೇಕಲ್ಲು ವಿಷ್ಣುಭಟ್ಟ ಇವರೂ ಯಕ್ಷಗಾನ ಕ್ಷೇತ್ರದಲ್ಲಿ ಪಿಎಚ್.ಡಿ. ಪದವಿ ಪಡೆದಿದ್ದಾರೆ. ಬೆಂಗಳೂರಿನಲ್ಲಿ ಉದ್ಯೋಗ ನಿಮಿತ್ತ ನೆಲಸಿರುವ ಕಬ್ಬಿನಾಲೆ ವಸಂತ ಭಾರದ್ವಾಜ ಅವರು ಯಕ್ಷಗಾನ ಛಂದಸ್ಸಿನ ಬಗೆಗೆ ಪ್ರೌಢ ಪ್ರಬಂಧ ರಚಿಸಿದ್ದಾರೆ.  ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಪ್ರಾದೇಶಿಕ ಜನಪದ ರಂಗಕಲೆಗಳ ಅಧ್ಯಯನ ಕೇಂದ್ರ ಮತ್ತು ಯಕ್ಷಗಾನ ಕೇಂದ್ರ – ಈ ಮೂರೂ ಸಂಸ್ಥೆಗಳಿಂದ ಯಕ್ಷಗಾನ ಕ್ಷೇತ್ರಕ್ಕೆ ಸಂಬಂಧಿಸಿದ ಗ್ರಂಥಗಳು ಪ್ರಕಟಗೊಂಡಿವೆ.

ಈ ವಿದ್ವಾಂಸರಲ್ಲದೆ ಕು.ಶಿ.ಹರಿದಾಸಭಟ್ಟ, ಹಂದಾಡಿ ಸುಬ್ಬಣ್ಣಭಟ್ಟ, ಎಚ್.ಶ್ರೀಧರ ಹಂದೆ, ಕುಮಾರಸ್ವಾಮಿ, ಉದ್ಯಾವರ ಮಾಧವಾಚಾರ್ಯ, ಎಂ.ಎಲ್.ಸಾಮಗ, ಶ್ರೀಧರ ಉಪ್ಪೂರ, ಎಂ.ರಾಜಗೋಪಾಲಾಚಾರ್ಯ, ಕೂರಾಡಿ ಸದಾಶಿವ ಕಲ್ಕೂರ, ಟಿ.ಎಸ್.ಅಂಬುಜಾ, ಅಂಬಾತನಯ ಮುದ್ರಾಡಿ, ಬೈಕಾಡಿ ವೆಂಕಟಕೃಷ್ಣರಾಯ, ಕೆ.ಎಸ್.ಉಪಾಧ್ಯಾಯ, ಕೋಟ ಶ್ರೀನಿವಾಸನಾಯಕ, ನೀಲಾವರ ರಾಮಕೃಷ್ಣಯ್ಯ, ನಾರ್ಣಪ್ಪ ಉಪ್ಪೂರ, ಆನಂದರಾಮ ಉಪಾಧ್ಯ  ಮೊದಲಾದವರೂ ಯಕ್ಷಗಾನಕ್ಕೆ ಸಂಬಂಧಿಸಿದ ಕೃತಿಗಳನ್ನು ಇಲ್ಲವೇ ಲೇಖನಗಳನ್ನು ಪ್ರಕಟಿಸಿದ್ದಾರೆ.  ಒಟ್ಟಿನಲ್ಲಿ ಕರಾವಳಿಯ ಯಕ್ಷಗಾನ ಕ್ಷೇತ್ರದ ಪ್ರಾತಿನಿಧಿಕ ಬರಹಗಾರರಲ್ಲಿ ಹಲವರು ಉಡುಪಿ ಜಿಲ್ಲೆಗೆ ಸೇರಿದವರೆಂದು ಹೇಳಬಹುದು.

ಉಡುಪಿ ಜಿಲ್ಲೆಯ ಕಲಾವಿದರಾದ ಮಲ್ಪೆ ಶಂಕರನಾರಾಯಣ ಸಾಮಗ, ಹಿರಿಯಡಕ ಗೋಪಾಲರಾವ್, ಕೋಟ ಶ್ರೀನಿವಾಸಚಾರ್ಯ, ಮಲ್ಪೆ ರಾಮದಾಸ ಸಾಮಗ, ಹಾರಾಡಿ ರಾಮಗಾಣಿಗ, ಐರೋಡಿ ಗೋವಿಂದಪ್ಪ, ಅರಾಟೆ ಮಂಜು, ನಾರ್ಣಪ್ಪ ಉಪ್ಪೂರ, ಗೋರ್ಪಾಡಿ ವಿಠಲ ಪಾಟೀಲ ಮೊದಲಾದವರ ಬಗೆಗೆ ಜೀವನಚರಿತ್ರೆ – ಅಭಿನಂದನ ಗ್ರಂಥರೂಪದ ಪುಸ್ತಕಗಳು ಬಂದಿದ್ದು, ಇವು ಉಡುಪಿ ಪರಿಸರದ ಯಕ್ಷಗಾನದ ಸ್ಥಿತಿಗತಿಯನ್ನು ತಿಳಿಯುವಲ್ಲಿ ಹಾಗೂ ಯಕ್ಷಗಾನದ ಚರಿತ್ರೆಯನ್ನು ಬರೆಯುವಾಗ ಆಕರಗ್ರಂಥಗಳಾಗಿ ಉಳಿಯುವುದಲ್ಲದೆ ಇಂದಿನ ಯಕ್ಷಗಾನ ಪ್ರಯೋಗಕ್ಕೂ ಹಿಂದಿನದಕ್ಕೂ ಇರುವ ಬದಲಾವಣೆಗಳನ್ನು ತಿಳಿಯಲೂ ಈ ಕೃತಿಗಳೇ ಲಿಖಿತ ಆಧಾರಗಳಾಗುತ್ತವೆ. ಈಗ ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಹಲವು ಲೇಖಕರೂ ಉಡುಪಿ ಪರಿಸರದ ಯಕ್ಷಗಾನ ಕುರಿತು ಕೃತಿ ರಚನೆ ಮಾಡಿರುವುದನ್ನು ಮರೆಯುವಂತಿಲ್ಲ.

## ಯಕ್ಷಗಾನ ಕಲಾವಿದರು

ಯಕ್ಷಗಾನ ಕಲಾವಿದರ ಸಂಖ್ಯೆ ಅಸಂಖ್ಯವಾಗಿದೆ. ಉಡುಪಿ ಜಿಲ್ಲೆಯಲ್ಲಿ ಆಗಿಹೋದ ಎಷ್ಟೋ ಜನರ ಹೆಸರೇ ಇಲ್ಲ; ಕೆಲವರದು ಅಲ್ಲಲ್ಲಿ ಉಲ್ಲೇಖಗೊಂಡಿದೆ. ಹತ್ತೊಂಬತ್ತನೆಯ ಶತಮಾನದ ಕೊನೆ ಮತ್ತು ಇಪ್ಪತ್ತನೆಯ ಶತಮಾನದ ಹಲವು ಕಲಾವಿದರ ಹೆಸರುಗಳು ನಮಗೆ ದೊರಕುತ್ತವೆ. ಭಾಗವತ ಶೇಷಗಿರಿ, ನಾರ್ಣಪ್ಪ ಉಪ್ಪೂರ, ಕೋಟ ಶ್ರೀನಿವಾಸ ನಾಯಕ, ನೀಲಾವರ ರಾಮಕೃಷ್ಣಯ್ಯ, ಮರವಂತೆ ನರಸಿಂಹದಾಸ, ಗೋರ್ಪಾಡಿ ವಿಠಲ ಪಾಟೀಲ, ಶ್ರೀನಿವಾಸ ಉಪ್ಪೂರ, ಜಾನುವಾರು ಕಟ್ಟೆ ಗೋಪಾಲಕೃಷ್ಣ ಕಾಮತ್, ರಾಮಚಂದ್ರ ನಾವಡ, ಅಂಪಾರು ಕೃಷ್ಣವೈದ್ಯ, ಜಿ.ಆರ್.ಕಾಳಿಂಗ ನಾವಡ, ಪೆರ್ಡೂರು ರಾಮಣ್ಣಯ್ಯ, ಪಾದೇಮಠ ಅನಂತಕೊಡಂಚ, ಹೆರಂಜೆ ಶಿವರಾಮಯ್ಯ, ಕುಂಜಾಲು ಸುಬ್ಬಣ್ಣಯ್ಯ, ವಕ್ವಾಡಿ ಕೃಷ್ಣರಾಯ ಮೊದಲಾದವರು ಪ್ರಸಿದ್ಧ ಭಾಗವತರಾಗಿದ್ದವರು. ಹಾರಾಡಿ ರಾಮಗಾಣಿಗ, ಹಾರಾಡಿ ಕುಷ್ಟಗಾಣಿಗ, ಉಪ್ರಳ್ಳಿ ರೇವಯ್ಯ, ಗಣಪತಿ ಪ್ರಭು, ತೆಕ್ಕಟ್ಟೆ ಬಾಬಣ್ಣ ಶಾನುಭಾಗ, ವೀರಭದ್ರನಾಯಕ, ಶಿರಿಯಾರ ಮಂಜು, ಮಾರ್ವಿರಾಮಕೃಷ್ಣ ಹೆಬ್ಬಾರ, ಬಡಾಕೆರೆ ರಾಮಪ್ಪ ಅಡಿಗ, ಪಾಂಡೇಶ್ವರ ಪುಟ್ಟಯ್ಯ, ಸಕ್ಕಟ್ಟು ಸುಬ್ಬಣ್ಣಯ್ಯ, ಕೊಕ್ಕರ್ಣೆ ನರಸಿಂಹ ಕಮ್ತಿ, ಪೆರ್ಡೂರು ಹಾಸ್ಯಗಾರ ಕಿಟ್ಟಣ್ಣಯ್ಯ, ಮಲ್ಪೆ ಶಂಕರನಾರಾಯಣ ಸಾಮಗ, ಮಡ್ವಾಡಿ ಹಾಸ್ಯಗಾರ ಅಣ್ಣಪ್ಪ, ಬೇಳೂರು ಶೀನನಾಯ್ಕ, ನಾರಾಯಣ ಗಾಣಿಗ, ಕೊಳ್ಕೆ ಬೈಲುಶೀನ, ನರಸಿಂಹ ಕಾಮತಿ, ಉಡುಪಿಬಸವ, ಮೊದಲಾದವರು ಪ್ರಸಿದ್ಧ ರಂಗಕಲಾವಿದರಾಗಿದ್ದವರು. ೬೦ರ ದಶಕದಲ್ಲಿನ ಕೂಸಾಳು ಮೇಳದ ಸುಕ್ರ ಅವರ ಹನುಮಂತನ ವೇಷವು ಜನ ಮೆಚ್ಚುಗೆ ಪಡೆದಿದ್ದಿತು. ಕೋಟ ಮಹಾಬಲ ಕಾರಂತ, ಹಿರಿಯಡಕ ಗೋಪಾಲರಾವ್ ಮೊದಲಾದವರು ಹಿರಿಯ ಮದ್ದಳೆಗಾರರಾಗಿ ಹೆಸರಾಗಿದ್ದಾರೆ. ಮಲ್ಪೆ ಶಂಕರನಾರಾಯಣ ಸಾಮಗ, ತೆಕ್ಕಟ್ಟೆ ಆನಂದ ಮಾಸ್ತರ್, ಶಿವಪುರ ಶ್ರೀನಿವಾಸ ಪಂಡಿತ ಮೊದಲಾದವರು ತಾಳಮದ್ದಳೆ ಕ್ಷೇತ್ರದಲ್ಲಿ ಹೆಸರು ಮಾಡಿದ ಹಿರಿಯರು. ಇಂದೂ ಈ ಕ್ಷೇತ್ರದಲ್ಲಿ ದುಡಿಯುತ್ತಿರುವ ಕಲಾವಿದರು ಹಲವರಿದ್ದಾರೆ. ಉಡುಪಿ ಪರಿಸರದ ಕೆಲವು ಕಲಾವಿದರು ಕೆಲವು ವರ್ಷ ತೆಂಕುತಿಟ್ಟಿನ ಮೇಳಗಳಲ್ಲೂ ಸಂಚಾರ ಮಾಡಿದ ಉದಾಹರಣೆಗಳುಂಟು. ಯಕ್ಷಗಾನ ಕಲಾವಿದರೇ ಮೇಳಗಳ ಯಜಮಾನರೂ ಆಗಿ ತಿರುಗಾಟಗಳನ್ನು ನಡೆಸಿಕೊಂಡು ಹೋದ ಉದಾಹರಣೆಗಳಿವೆ. ವೇಷಗಾರಿಕೆಯಲ್ಲಿ ಮತ್ತು ನಾಟ್ಯದಲ್ಲಿ ಮಟ್ಪಾಡಿ ಶೈಲಿ, ಹಾರಾಡಿ ಶೈಲಿ ಎಂದು ಎರಡು ಶೈಲಿಗಳನ್ನು ಗುರುತಿಸುತ್ತಿದ್ದು, ಹಾರಾಡಿ ರಾಮಗಾಣಿಗರು ಹಾರಾಡಿ ಶೈಲಿಯ ಪ್ರತಿನಿಧಿಗಳೆಂದೂ, ವೀರಭದ್ರನಾಯಕರು ಮಟ್ಪಾಡಿ ಶೈಲಿಯ ಪ್ರತಿನಿಧಿಗಳೆಂದೂ ಪರಿಗಣಿತರಾಗಿದ್ದಾರೆ.

## ವಿಚಾರಗೋಷ್ಠಿ, ಪ್ರಯೋಗ ಇತ್ಯಾದಿ

ಯಕ್ಷಗಾನಕ್ಕೆ ಸಂಬಂಧಿಸಿದಂತೆ ವಿವಿಧ ವಿಚಾರಗೋಷ್ಠಿಗಳು, ಪ್ರಯೋಗಗಳು ಉಡುಪಿ ಪರಿಸರದಲ್ಲಿ ಹೆಚ್ಚು ನಡೆದಿವೆ. ಶಿವರಾಮಕಾರಂತರು ಅವರು ಪರಿವರ್ತನೆ ಮಾಡಿಕೊಂಡ ಯಕ್ಷಗಾನ ಬ್ಯಾಲೆ ಪ್ರಯೋಗಗಳು ಕೆಲವನ್ನು ಪುತ್ತೂರಿನಲ್ಲಿ ಮಾಡಿದರೆ, ಕೆಲವನ್ನು ಬ್ರಹ್ಮಾವರ, ಉಡುಪಿಗಳಲ್ಲಿ ಮಾಡಿದರು. ಯಕ್ಷಗಾನದ

ಮಾತುಗಾರಿಕೆಯನ್ನು ತೆಗೆದು ಹಿಮ್ಮೇಳದಲ್ಲಿ ವಯಲಿನ್ ಹಾಗೂ ಸ್ಯಾಕ್ಸೋಫೋನ್‌ಗಳನ್ನು ಸೇರಿಸಿ ರಂಗತಂತ್ರದಲ್ಲಿಯೂ, ವೇಷಭೂಷಣಗಳಲ್ಲಿಯೂ ಅಲ್ಪಸ್ವಲ್ಪ ಬದಲಾವಣೆ ಮಾಡಿ ಕಾರಂತರು ಯಕ್ಷಗಾನ ಬ್ಯಾಲೆ ಪ್ರದರ್ಶನಗಳನ್ನು ನಿರ್ದೇಶಿಸಿದರು. ಅದಕ್ಕಾಗಿ ಅವರು ಮೊದಲಿಗೆ ಹಲವು ಮೇಳಗಳ ಕಲಾವಿದರನ್ನು ಅವಲಂಬಿಸಿದ್ದು, ಆನಂತರ ಉಡುಪಿಯ ಯಕ್ಷಗಾನ ಕೇಂದ್ರದ ಕಲಾವಿದರ ತಂಡವನ್ನು ಬಳಸಿಕೊಂಡರು. ೧೯೫೮ರಲ್ಲಿ ಶಿವರಾಮಕಾರಂತರು ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಸಹಕಾರದೊಂದಿಗೆ ಬ್ರಹ್ಮಾವರದಲ್ಲಿ ಭಾಗವತ ಗೋಷ್ಠಿ ನಡೆಸಿದ್ದು ಪ್ರಮುಖ ಹಂತವಾಗಿದೆ. ಯಕ್ಷಗಾನ ಮತ್ತು ಭರತನಾಟ್ಯಕ್ಕೆ ಸಂಬಂಧಿಸಿ ಪದ್ಮಾ ಸುಬ್ರಹ್ಮಣ್ಯಂ, ಆರ್.ಗಣೇಶ್ ಅವರ ನೇತೃತ್ವದಲ್ಲಿ ಕಮ್ಮಟ ನಡೆದಿದೆ. ಉಡುಪಿ ಪರಿಸರದಲ್ಲಿ ಮುಖ್ಯವಾಗಿ ಎಂ.ಜಿ.ಎಂ.ಕಾಲೇಜಿನ ಪರಿಸರದಲ್ಲಿ ೧೯೭೨ರಲ್ಲಿ ರಾಷ್ಟ್ರಮಟ್ಟದ ಯಕ್ಷಗಾನ ಉತ್ಸವವು ಒಂದು ವಾರ ಕಾಲ ನಡೆದು ದೇಶದ ಗಮನ ಸೆಳೆಯಿತು. ಆನಂತರವೂ ದೊಡ್ಡ ಮಟ್ಟದ ಯಕ್ಷಗಾನ ಕಮ್ಮಟಗಳು, ದಾಖಲೀಕರಣಗಳು ನಡೆದಿವೆ (ಉದಾ–ಸ್ತ್ರೀವೇಷ, ಹಾಸ್ಯಗಾರಿಕೆ, ಮುಖವರ್ಣಿಕೆ, ಪೂರ್ವರಂಗ, ಒಡ್ಡೋಲಗ, ಯುದ್ಧನೃತ್ಯ ಪ್ರಾತ್ಯಕ್ಷಿಕೆ – ಇತ್ಯಾದಿ). ಉಡುಪಿಯ ಜನಪದ ರಂಗಕಲೆಗಳ ಅಧ್ಯಯನ ಕೇಂದ್ರದಲ್ಲಿ ಈ ದಾಖಲಾತಿಗಳು ಸಂರಕ್ಷಿಸಲ್ಪಟ್ಟಿವೆ. ವಿವಿಧ ಕಲಾವಿದರ ದಾಖಲಾತಿಯೂ ಇಲ್ಲಿ ನಡೆದಿದೆ. ಅಂಬಲಪಾಡಿ, ಬ್ರಹ್ಮಾವರ ಮೊದಲಾದೆಡೆಗಳಲ್ಲೂ ಇಂತಹ ಕೆಲಸ ನಡೆದಿದೆ.

ಗಾನ ತಾಳಮದ್ದಳೆ, ಕಾವ್ಯ ತಾಳಮದ್ದಳೆ, ಏಕವ್ಯಕ್ತಿ ಯಕ್ಷಗಾನ, ಏಕವ್ಯಕ್ತಿ ತಾಳಮದ್ದಳೆ ಮೊದಲಾದುವು ಈ ಪ್ರದೇಶದಲ್ಲಿ ನಡೆದ ವಿಭಿನ್ನ ಪ್ರಯೋಗಗಳು. ಏಕವ್ಯಕ್ತಿ ಯಕ್ಷಗಾನದ ಮೂಲಪುರುಷ ಪಾಂಡೇಶ್ವರ ಗಣಪತಿರಾಯರು. ಅವರ ಕೃತಿ ಪ್ರಕಟಗೊಂಡಿದೆ. ಇತ್ತೀಚೆಗೆ ಶತಾವಧಾನಿ ಆರ್.ಗಣೇಶರ ಕಲ್ಪನೆಯಂತೆ ಅದನ್ನು ಹೆಚ್ಚು ಜನಪ್ರಿಯಗೊಳಿಸಿದವರು ಉಡುಪಿಯ ಮಂಟಪ ಪ್ರಭಾಕರ ಉಪಾಧ್ಯರು ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಗಣಪತಿರಾಯರ ಆನಂತರ ಏಕವ್ಯಕ್ತಿ ರಂಗಪ್ರಯೋಗವನ್ನು (ಪಾಂಚಾಲಿ) ನಿರ್ದೇಶಿಸಿ ಪ್ರಯೋಗಿಸಿದವರು ಉದ್ಯಾವರ ಮಾಧವಾಚಾರ್ಯರು. ಗಾನತಾಳಮದ್ದಳೆಯಲ್ಲಿ ಅರ್ಥಗಾರಿಕೆಯಿಲ್ಲ. ಭಾಗವತರೇ ಪಾತ್ರಧಾರಿಗಳಾಗಿ ಪಾಠಗಳನ್ನು ಹಾಡುವುದು ಇಲ್ಲಿಯ ವಿಶೇಷತೆ. ಹೊಸ ಕಾವ್ಯಕೃತಿಗಳ ಹಾಡುಗಳನ್ನು ಹಿನ್ನೆಲೆಯಾಗಿಟ್ಟು, ತಾಳಮದ್ದಳೆ ನಡೆದಿದೆ. ಒಬ್ಬನೇ ಒಂದು ಪ್ರಸಂಗದ ಎಲ್ಲಾ ಅರ್ಥಗಳನ್ನು ಹೇಳಿ ತಾಳಮದ್ದಳೆ ನಡೆಸುವುದು ಏಕವ್ಯಕ್ತಿ ತಾಳಮದ್ದಳೆ. ಹೀಗೆ ವೈವಿಧ್ಯಪೂರ್ಣವಾದ ಪ್ರಯೋಗಗಳು ಈ ಕ್ಷೇತ್ರದಲ್ಲಿ ನಡೆದಿವೆ. ಸಾಲಿಗ್ರಾಮದ ಕಾರ್ಕಡ ಗ್ರಾಮದ ಥೇಂಪಿನಕೇರಿಯವರಾದ ತೆಂಕಮನೆ ಗೋಪಾಲಕೃಷ್ಣನ್ಯಾರಿ ಅವರು ಎನ್‌ಎಸ್‌ಡಿ ಪದವೀಧರರು. ಅಲ್ಲಿನ ರೆಪರ್ಟರಿ ಕಂಪನಿಯ ಪ್ರಸಿದ್ಧ ನಟರೂ ಆದ ಅವರು ಯಕ್ಷಗಾನ, ಢಕ್ಕೆಬಲಿ, ಸಿರಿ ಆಚರಣೆಗಳ ಪರಿಕರಗಳನ್ನು ಬಳಸಿಕೊಂಡು ಭಾಸ ಮಹಾಕವಿಯ ನಾಟಕಗಳನ್ನು ವಿಭಿನ್ನವಾಗಿ ಪ್ರಯೋಗಿಸಿ ಹೆಸರಾಗಿದ್ದಾರೆ. ಇವರ ನಿರ್ದೇಶನದಲ್ಲಿ ಪ್ರಯೋಗಗೊಂಡ ಹೊಸ ಆರ್ಥಿಕ ಪ್ರಸಂಗ (ವಿಶ್ವ ಮಾರುಕಟ್ಟೆಯ ಚರ್ಚಾ ವಿಷಯ), ಅಕ್ಷರನ ಪ್ರತಾಪ ಅಥವಾ ಇಳೆಯಣ್ಣನ ಕತೆ (ನಿರಕ್ಷರತೆ ಮತ್ತಿತರ ಸಾಮಾಜಿಕ ಅನಿಷ್ಟಗಳ ಕುರಿತ ವಿಷಯ), ಅನ್ನಪೂರ್ಣೇಶ್ವರಿ ಮಹಾತ್ಮೆ (ಸರಕಾರದ ಅಂತ್ಯೋದಯ ಯೋಜನೆ ಕುರಿತು), ಒಂದು ನೀರ ಪ್ರಸಂಗ (ದೊಂಬಿದಾಸರ ಗಂಗೆ–ಗೌರಿ ಕಥಾನಕವನ್ನು ಬಡಗುತಿಟ್ಟು ಶೈಲಿಗೆ ಅಳವಡಿಸಿದ, ಜಲವಿವಾದ ಕುರಿತ ಪ್ರಯೋಗ) ಕಿತ್ತೂರು ರಾಣಿ ಚೆನ್ನಮ್ಮ ಎಸ್.ಡಿ.ಎಮ್.ಸಿ., (ಸ್ಕೂಲ್ ಡೆವಲಪ್‌ಮೆಂಟ್ ಮಾನಿಟರಿಂಗ್ ಕಮಿಟಿ) ಪ್ರತಾಪ ಮೊದಲಾದುವೂ ಹೊಸ ಬಗೆಯ ಪ್ರಯೋಗಗಳಾಗಿ ಗಮನ ಸೆಳೆದಿವೆ. ಕೆ.ಎಂ.ರಾಘವ ನಂಬಿಯಾರ್ ಅವರು ತಮ್ಮ ಯಕ್ಷಕೌಮುದಿ ತಂಡದ ಮೂಲಕ ದೀವಟಿಗೆ ಬೆಳಕಿನ ಪಾರಂಪರಿಕ ಶೈಲಿಯ ಆಟಗಳನ್ನು ಹೊಸ ಕಾಲದಲ್ಲಿ ಪ್ರಯೋಗಿಸಿದ್ದಾರೆ. ಜಿಲ್ಲೆಯಲ್ಲಿ ಹುಟ್ಟಿ ಪ್ರಸ್ತುತ ಹೊರಗೆ ಇರುವ ಯಕ್ಷ ದೇಗುಲದ ಮೋಹನ್, ಶ್ರೀನಿವಾಸ ಸಾಸ್ತಾನ, ಗುಂಡ್ಮಿ ರಘುರಾಮ್ ಮತ್ತಿತರರು ಯಕ್ಷಗಾನ ಕಲೆಯು ಇತರೆಡೆಯೂ ಪ್ರಚುರಗೊಳ್ಳಲು ಶ್ರಮಿಸುತ್ತಿದ್ದಾರೆ.

ಹೀಗೆ ಉಡುಪಿ ಜಿಲ್ಲೆಯ ಯಕ್ಷಗಾನದ ಇತಿಹಾಸವೂ ದೊಡ್ಡದು; ವರ್ತಮಾನವೂ ದೊಡ್ಡದು, ಜಿಲ್ಲೆಯ ಉದ್ದಗಲಕ್ಕೆ ಹಲವಾರು ಯಕ್ಷಗಾನ ಸಂಸ್ಥೆಗಳು, ತಾಳಮದ್ದಳೆ ಕೂಟಗಳು ಸಕ್ರಿಯವಾಗಿವೆ.

ಉಡುಪಿಯ ಯಕ್ಷಗಾನ ಕಲಾರಂಗದಂತಹ ಸಂಸ್ಥೆ ಕಲಾವಿದರ ಸಾಮಾಜಿಕ ಸ್ಥಿತಿಯ ಸುಧಾರಣೆಗೆ ಬೇಕಾದ ಹಲವು ಯೋಜನೆಗಳನ್ನು ಹಾಕಿದೆ. ಅಲ್ಲಲ್ಲಿ ಯಕ್ಷಗಾನ ಸಪ್ತಾಹ ಎಂಬ ಹೆಸರಿನಿಂದ ಸರಣಿ ಕಾರ್ಯಕ್ರಮಗಳು ನಡೆಯುತ್ತಿವೆ. ರಾಮಾಯಣ ಸರಣಿ, ಮಹಾಭಾರತ ಸರಣಿ ತಾಳಮದ್ದಳೆಗಳು ಸಹ ನಡೆದಿವೆ (ಲೇಖಕರು: ಡಾ। ಪಾದೇಕಲ್ಲು ವಿಷ್ಣುಭಟ್ಟ).

## ರಂಗಭೂಮಿ

ಉಡುಪಿ ಜಿಲ್ಲೆಯಲ್ಲಿ ಹತ್ತೊಂಬತ್ತನೆಯ ಶತಮಾನದ ಆರಂಭದಿಂದ ರಂಗಭೂಮಿಯ ಚಟುವಟಿಕೆಗಳು ಕಂಡುಬರುತ್ತದೆ. ೧೯ ಮತ್ತು ಶತಮಾನಗಳ ಅವಧಿಯಲ್ಲಿ ರಾಜ್ಯದ ಯಾವುದೇ ವೃತ್ತಿ ನಾಟಕ ಕಂಪನಿಗಳು ಕರಾವರಿ ಜಿಲ್ಲೆಗಳಿಗೆ ಬಂದಲ್ಲಿ ಉಡುಪಿ ಕುಂದಾಪುರಗಳಲ್ಲಿ ತಪ್ಪದೇ ಕ್ಯಾಂಪ್ ಹೂಡುತ್ತಿದ್ದುದಾಗಿ ತಿಳಿದುಬರುತ್ತದೆ. ಯಕ್ಷಗಾನದ ಸಿರಿಕಣಜವಾಗಿರುವ ಉಡುಪಿ ಜಿಲ್ಲೆಯಲ್ಲಿ ಹಿಂದಿನಿಂದಲೂ ರಂಗಚಟುವಟಿಕೆಗಳು ನಡೆದು ಬಂದಿರುವುದನ್ನು ಹಾಗೂ ಜನರು ನಾಟಕ ಕಲೆಯನ್ನು ಪ್ರೋತ್ಸಾಹಿಸಿ, ಪೋಷಿಸಿಕೊಂಡು ಬಂದಿರುವುದನ್ನು ಕಾಣಬಹುದಾಗಿದೆ.

ಹತ್ತೊಂಬತ್ತನೆಯ ಶತಮಾನದ ಆದಿಭಾಗದಲ್ಲಿ ಬಸರೂರು ಮತ್ತು ಬಾರಕೂರಿನಿಂದ ಹತ್ತು ಹನ್ನೆರಡು ಜನರ ತಂಡವೊಂದು ತಲೆಯ ಮೇಲೆ ಪೆಠಾರಿಗಳನ್ನು ಹೊತ್ತು, ಊರೂರು ಸಂಚರಿಸಿ ನಾಟಕಗಳನ್ನು ಆಡುತ್ತಿದ್ದವು. ತಾವು ಹೋದಂಥ ಊರಿನ ಮುಖ್ಯಸ್ಥರನ್ನು ಅಥವಾ ಅಲ್ಲಿನ ಪ್ರತಿಷ್ಠಿತ ವ್ಯಕ್ತಿಗಳನ್ನು ಭೇಟಿಮಾಡಿ, ತಮ್ಮ ಕಷ್ಟಗಳನ್ನು ತಿಳಿಸಿ, ಊರವರಿಗೆ ಮನರಂಜನೆಯನ್ನು ಒದಗಿಸುವುದಾಗಿ ಭರವಸೆಯನ್ನು ನೀಡಿ, ಒಂದೊಂದು ಊರಿನಲ್ಲಿಯೂ ತಿಂಗಳುಗಳ ಕಾಲ ಡೇರೆ ಹಾಕಿ, ವಾರಕ್ಕೆರಡು ನಾಟಕಗಳನ್ನು ಪ್ರದರ್ಶಿಸುತ್ತಿದ್ದವು. ಇವರಿಗೆ ಹಣಕ್ಕಿಂತ ಹೆಚ್ಚಾಗಿ ಕಲಾಪ್ರದರ್ಶನ ಮತ್ತು ಊಟೋಪಚಾರಗಳು ಮುಖ್ಯವಾಗಿತ್ತೆಂದೂ, ಈ ಗುಂಪು ದೇವಸ್ಥಾನದ ಪ್ರಾಂಗಣದಲ್ಲಿ ಅಥವಾ ಊರಿನ ಶ್ರೀಮಂತರ ಅಂಗಳದಲ್ಲಿ ನಾಟಕ ಪ್ರದರ್ಶನ ನೀಡುತ್ತಿದ್ದುದಾಗಿಯೂ ತಿಳಿದುಬರುತ್ತದೆ.

ಲಿಖಿತ ದಾಖಲೆಯಂತೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಥಮ ನಾಟಕ ಮಂಡಳಿಯನ್ನು ಕಟ್ಟಿದವರು ಅಪ್ಪು-ಇಂದ್ರರು. ೧೯೦೨ ರಲ್ಲಿ ಸ್ಥಾಪಿತವಾದ ಅಪ್ಪು-ಇಂದ್ರರ ಕಂಪನಿಯಲ್ಲಿ ಕಾರ್ಕಳದ ನಾರಾಯಣ ಹೆಗ್ಡೆಯವರು ವ್ಯವಸ್ಥಾಪಕರಾಗಿದ್ದರು. ಇವರೂ ಸೇರಿದಂತೆ ಮಂಜುನಾಥಯ್ಯ (ಬಿಡಾರಂ ಕೃಷ್ಣಯ್ಯನವರ ಶಿಷ್ಯ) ಶ್ರೀನಿವಾಸರಾಯರು, ಪಂಢರೀಬಾಯಿಯವರ ತಂದೆಯಾದ ರಂಗರಾಯರು, ರಂಗನಾಥ ಭಟ್ಟರು ಮೊದಲಾದವರು ಅಭಿನಯಿಸುತ್ತಿದ್ದುದಾಗಿ ತಿಳಿದುಬರುತ್ತದೆ.

ಅಪ್ಪು ಇಂದ್ರರ ಕಂಪನಿಯು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಮಾತ್ರ ಪ್ರದರ್ಶನ ನೀಡಿತು. ಆದರೆ ೧೯೦೫ರಲ್ಲಿ ಸ್ಥಾಪನೆಗೊಂಡ 'ಕರ್ನಾಟಕ ಮಿತ್ರಮಂಡಳಿ'ಯು ಹೊರ ಜಿಲ್ಲೆಗಳಲ್ಲಿಯೂ ನಾಟಕ ಪ್ರದರ್ಶನ ನೀಡುವ ಮೂಲಕ ಇತಿಹಾಸ ನಿರ್ಮಿಸಿದುದಾಗಿ ತಿಳಿದುಬರುತ್ತದೆ. ಈ ಹೊಸ ಮಂಡಳಿಯನ್ನು ಕಾರ್ಕಳದ ನಾರಾಯಣ ಹೆಗ್ಡೆಯವರು ತಮ್ಮ ಮಿತ್ರರೊಡಗೂಡಿ ಸ್ಥಾಪಿಸಿದರು. ನಾರಾಯಣ ಹೆಗ್ಡೆಯವರೇ ಮಂಡಳಿಯ ವ್ಯವಸ್ಥಾಪಕರೂ ಆಗಿದ್ದರು. ಈ ಕಂಪನಿಯಲ್ಲಿ ನಟಿಯರೂ ಇದ್ದುದಾಗಿ ತಿಳಿದುಬರುತ್ತದೆ.

ಹರಿಕಥೆ ಕುಪ್ಪಣ್ಣಾಚಾರ್ಯರು ೧೯೦೭ರಲ್ಲಿ ಕಟ್ಟಿದ 'ಕೃಷ್ಣದಾಸ ಕಂಪನಿ'ಯು ಉಡುಪಿಯ ಪರಿಸರದಲ್ಲಿ ಪೌರಾಣಿಕ ನಾಟಕಗಳ ಪ್ರದರ್ಶನ ನೀಡುವ ಮೂಲಕ ಪ್ರಸಿದ್ಧಿ ಪಡೆಯಿತು. ಪಲಿಮಾರು ಮಠಾಧೀಶರ ಪ್ರೋತ್ಸಾಹ ಈ ಕಂಪನಿಗಿದ್ದುದಾಗಿ ತಿಳಿದುಬರುತ್ತದೆ. ಕಾರ್ಕಳದಲ್ಲಿ ೧೯೦೫ರಲ್ಲಿ ಸ್ಥಾಪನೆಗೊಂಡು ೧೯೧೨ರ ವರೆಗೆ ನಡೆದ 'ಬಾಲ ಸಂಗೀತ ನಾಟಕ ಮಂಡಳಿ'ಯು ಆಗ ರಂಗಭೂಮಿಯು ಕೆಲಸ ಮಾಡುತ್ತಿದ್ದ ರೀತಿ ಹಾಗೂ ಮಂಡಳಿಯ ನಟವರ್ಗದವರ ಬಗೆಗೆ ಸ್ವಲ್ಪಮಟ್ಟಿಗೆ ಮಾಹಿತಿಯನ್ನು ಒದಗಿಸುತ್ತದೆ. ಅದರಂತೆ ಕಂಪನಿಯ ನಟವರ್ಗದಲ್ಲಿದ್ದ ಮಾಧವ ಶೆಣೈ ಅವರ ಹನುಮಂತನ ಪಾತ್ರ ಬಹಳ ಪ್ರಸಿದ್ಧಿ

ಪಡೆದಿದ್ದುದಾಗಿ ತಿಳಿದುಬರುತ್ತದೆ. ಅವರಿಗೆ ತಿಂಗಳಿಗೆ ಹನ್ನೆರಡು ರೂಪಾಯಿ ಸಂಬಳ ದೊರೆಯುತ್ತಿದ್ದು, ಉಳಿದ ನಟವರ್ಗಕ್ಕೆ ಸಂಬಳ ದೊರೆಯುತ್ತಿರಲಿಲ್ಲ. ವೇಷಭೂಷಣಗಳು, ತಲೆಕಟ್ಟು, ಗಡ್ಡಮೀಸೆಗಳನ್ನು ಮುಂಬಯಿಯಿಂದ ತರಿಸಿಕೊಳ್ಳಲಾಗುತ್ತಿತ್ತು. ವಿಟ್ಲದ ಶಾನುಭಾಗರೆಂಬುವವರು ಅಂಕದ ಪರದೆಯ ಮೇಲೆ ಚಿತ್ರ ಬರೆಯುತ್ತಿದ್ದರು. ರಂಗಭೂಮಿಯ ಎದುರು ಹಾಗೂ ಸೈಡ್‌ವಿಂಗ್ಸ್‌ನಲ್ಲಿ (ರಂಗದ ಎರಡೂ ಬದಿಗಳಲ್ಲಿ ) ಚಿಮಣಿ ದೀಪಗಳನ್ನಿಟ್ಟು ಅದಕ್ಕೆ ಡಬ್ಬಿಯನ್ನು ಮರೆಮಾಡುವ ಮೂಲಕ ಪ್ರೇಕ್ಷಕರಿಗೆ ಬೆಳಕು ಹಾಯುವಂತೆ ನೋಡಿಕೊಳ್ಳಲಾಗುತ್ತಿತ್ತು. ೧೯೧೧ರಿಂದ ಕಿಟ್ಸನ್ ದೀಪಗಳನ್ನು ಬಳಸಲಾಗುತ್ತಿತ್ತು. ರಂಗಭೂಮಿಯ ಸಮೀಪದಲ್ಲಿದ್ದ ನೆಲಕ್ಕೆ ಎರಡಾಣೆ ಪ್ರವೇಶಧನವನ್ನು, ಕುರ್ಚಿಗೆ ಒಂದು ರೂಪಾಯಿ ಪ್ರವೇಶಧನವನ್ನು ನೀಡಬೇಕಾಗುತ್ತಿತ್ತು ಎಂದು ತಿಳಿದುಬರುತ್ತದೆ.

೧೯೦೭ರಲ್ಲಿ ಕಾರ್ಕಳದಲ್ಲಿ 'ಲೋಕಪ್ರಿಯ ಮಿತ್ರ ಮಂಡಳಿ' ಎಂಬ ಸಂಸ್ಥೆ ಸ್ಥಾಪನೆಗೊಂಡು ೧೯೧೦ರ ತನಕ ನಡೆಯಿತು. ಈ ಶತಮಾನದ ಆದಿಯಲ್ಲಿ ದೇವದಾಸಿಯರೇ ಕನ್ನಡ ನಾಡಿನ ವಿವಿಧ ಭಾಗಗಳಲ್ಲಿ ನಾಟಕ ತಂಡಗಳನ್ನು ಕಟ್ಟಿಕೊಂಡು, ನಾಟಕಗಳನ್ನು ಪ್ರದರ್ಶಿಸುವ ಮೂಲಕ ಸ್ಥಳೀಯ ಜನರ ಮೆಚ್ಚುಗೆಗೆ ಪಾತ್ರರಾಗಿದ್ದರು. ದೊಡ್ಡ ಕಂಪನಿಗಳು ಜಿಲ್ಲೆಗೆ ಕಾಲಿಡುವ ಮೊದಲು ಬಸರೂರಿನಲ್ಲಿ ಅಂಥ ಸ್ತ್ರೀ ನಾಟಕ ಮಂಡಳಿಯೊಂದು ೧೯೧೪ರ ಸುಮಾರಿನಲ್ಲಿ ನೀಲಮಣಿ ದೇವಿ ನಾಯಕತ್ವದಲ್ಲಿ ಹುಟ್ಟಿ 'ನೀಲಮಣಿ ಕಂಪನಿ' ಎಂದೇ ಹೆಸರಾಯಿತು. ಇದನ್ನು ಬಸರೂರಿನ ರಾವುತಕೇರಿಯ ಒಂದೇ ಮತಕ್ಕೆ ಸೇರಿದ ಏಳು ಮನೆಗಳ ಹೆಂಗಸರು ಸೇರಿಕೊಂಡು ಪ್ರಾರಂಭಿಸಿದರು. ಈ ಕಂಪನಿಯ ಭಕ್ತ ಪ್ರಹ್ಲಾದ, ಕೃಷ್ಣಲೀಲೆ, ಚಂದ್ರಹಾಸ, ಸುಭದ್ರಾರ್ಜುನ ಪೌರಾಣಿಕ ನಾಟಕಗಳು ತಾಲೂಕಿನಾದ್ಯಂತ ಯಶಸ್ವಿ ಪ್ರದರ್ಶನ ಕಂಡವು. ಅದೇ ಸಮಯದಲ್ಲಿ ಈ ಸಂಸ್ಥೆಗೆ ಎದುರಾಗಿ ದೊಡ್ಡಮನೆ ಪಾರ್ವತಿ ಮನೆಯಿಂದ ಇನ್ನೊಂದು ಸ್ತ್ರೀ ನಾಟಕ ಮಂಡಳಿ ಪ್ರಾರಂಭವಾಯಿತಾದರೂ ಆ ಸಂಸ್ಥೆ ಬಹುಬೇಗ ನಿಂತುಹೋಯಿತೆಂದೂ, ನೀಲಮಣಿ ಕಂಪನಿ ಒಂದೆರಡು ವರ್ಷ ನಡೆದುಬಂದುದಾಗಿ ತಿಳಿದುಬರುತ್ತದೆ.

ಸುಮಾರು ೧೯೧೦ರಿಂದ ಹಲವಾರು ವರ್ಷಗಳ ವರೆಗೆ ಉಡುಪಿಯ ಮಠದಲ್ಲಿ, ಊಳಿಗಕ್ಕೆ ಇರುವವರಿಂದಲೂ ಹೊರ ಊರುಗಳಿಂದ ಬಂದ ಕಂಪನಿಗಳ ನಟರಿಂದಲೂ ನಾಟಕ ಪ್ರದರ್ಶನ ನಡೆಸಲಾಗುತ್ತಿತ್ತು. ಎಲ್ಲ ಮಠಗಳೂ ನಾಟಕ ಕಂಪನಿಗಳಿಗೆ ಪ್ರೋತ್ಸಾಹ ನೀಡಲಾಗುತ್ತಿದ್ದರೂ ಕೃಷ್ಣಾಮಠದ ಪ್ರೋತ್ಸಾಹ ಇಂದಿಗೂ ಜನಮನದಲ್ಲಿ ನೆಲೆಯೂರಿದ್ದಾಗಿ ತಿಳಿದುಬರುತ್ತದೆ.

ಜಿಲ್ಲೆಯ ವಿವಿಧ ಭಾಗಗಳಿಂದ ಹಾಗೂ ಹೊರಜಿಲ್ಲೆಗಳಿಂದ ನಾಟಕ ಕಂಪನಿಗಳು ಉಡುಪಿಗೂ ಬಂದು ಮನರಂಜನೆ ನೀಡಿ ತೆರಳುತ್ತಿದ್ದವು. ೧೯೧೪ರಲ್ಲಿ ನಟಭಯಂಕರ ಎ.ವಿ. ವರದಾಚಾರ್ಯರ ಕಂಪನಿ 'ರತ್ನಾವಳಿ ನಾಟಕ ಸಭಾ' (೧೯೦೪) ಕುಂದಾಪುರಕ್ಕೆ ಬಂದು, ಭಕ್ತ ಪ್ರಹ್ಲಾದ, ನಿರುಪಮಾ ಮುಂತಾದ ನಾಟಕಗಳನ್ನು ಪ್ರದರ್ಶಿಸಿತು. ನಾಟಕಗಳ ಭರ್ಜರಿ ವೈಭವ, ಸಂಗೀತ, ಅದ್ಭುತ ಟ್ರಾನ್ಸ್‌ಫರ್ ಸೀನರಿಗಳು, ಅಭಿನಯ ಜನರ ಮನಸ್ಸನ್ನು ಸೆಳೆದು, ಅವರಲ್ಲಿ ಸ್ಫೂರ್ತಿಯನ್ನುಂಟು ಮಾಡಿತು. ಅವುಗಳಲ್ಲಿನ ಹಿರಣ್ಯಕಶಿಪು, ಸಂತಾಪರ ಪಾತ್ರಗಳಿಂದ ಪ್ರಭಾವಿತರಾಗಿ ಉಡುಪಿ-ಕುಂದಾಪುರ-ಬಸ್ರೂರುಗಳಲ್ಲಿ ಚಿಕ್ಕ ಪುಟ್ಟ ನಾಟಕ ತಂಡಗಳು ಹುಟ್ಟಿಕೊಂಡವು. ಕುಂದಾಪುರದಲ್ಲಿ ಮೊದಲ ಬಾರಿಗೆ ವೆಂಕಟರಮಣ ಪ್ರಭುಗಳ ನೇತೃತ್ವದಲ್ಲಿ ಕಲಾವಿದರು ತಯಾರಾಗಿ 'ಭಕ್ತ ಪ್ರಹ್ಲಾದ' ನಾಟಕವನ್ನು ಅಭಿನಯಿಸಿದರು. ಸುಮಾರು ೧೯೧೩-೧೪ರಲ್ಲಿ ರಾಮಯ್ಯ ಅಡಪರ 'ರಾಜರಾಜೇಶ್ವರಿ ನಾಟಕ ಮಂಡಳಿ' ಮೈಸೂರು ಕಂಪನಿಗಳ ಸ್ಫೂರ್ತಿಯಿಂದ ಮೂಡಿತು. ಈ ಕಂಪನಿಯು ಕಾಳಿದಾಸ, ಪ್ರಭಾವತೀ ದರ್ಬಾರ್, ಯುವತೀ ವಿಜಯ ನಾಟಕಗಳನ್ನು ಪ್ರದರ್ಶಿಸಿತು. ಅಡಪರ ಕಂಪನಿಯ ನಟರಾದ ಗೋಪಾಲಾಚಾರ್ಯರು ಮತ್ತು ಸುಬ್ಬಣ್ಣ ಭಟ್ಟರು ೧೯೫೦ರ ವರೆಗೆ ನಾಟಕಗಳಲ್ಲಿ ಅಭಿನಯಿಸುತ್ತಿದ್ದುದಾಗಿ ತಿಳಿದುಬರುತ್ತದೆ. ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಗೆ ಶಿರಹಟ್ಟಿ ವೆಂಕೋಬರಾಯರ ಮಹಾಲಕ್ಷ್ಮೀ ಪ್ರಸಾದಿತ ನಾಟಕ ಮಂಡಳಿ ೧೯೨೧ರ ಸುಮಾರಿಗೆ ಬಂದು, ಮಂಗಳೂರು, ಉಡುಪಿ, ಕುಂದಾಪುರ, ಪುತ್ತೂರಿನಲ್ಲಿ ನಾಟಕಗಳನ್ನು ಪ್ರದರ್ಶಿಸಿತು. ಜಿಲ್ಲೆಯ

ಪದ್ಮಾಕ್ಷಿಯವರು ಈ ಕಂಪನಿಯ ಅತ್ಯುತ್ತಮ ನಟಿಯಾಗಿದ್ದು, ಅವರ ಕಂಠವೂ ಮಧುರವಾಗಿದ್ದಿತು. ಈ ಕಂಪನಿಯ ದೃಶ್ಯಾವಳಿಗಳು ಹಾಗೂ ಅದರ ವೈಭವವನ್ನು ಜಿಲ್ಲೆಯ ಅಂದಿನ ಕಲಾವಿದರು ಈಗಲೂ ನೆನೆಸುತ್ತಾರೆ. ಶಿವರಾಮ ಕಾರಂತರು "ಶಿರಹಟ್ಟಿಯವರ ನಾರದ, ಲಕ್ಷ್ಮಣಪುರಿಯವರ ಹಾಸ್ಯ, ಅಸುಂಡಿಯ ಅಂತ್ಯವಿಲ್ಲದ ಗಾನ, ವಾಸುದೇವರಾಯನ ಆಲಾಪಗಳು"– ಇವನ್ನೆಲ್ಲ ಕೇಳುತ್ತ ನಾಟಕ ಗಾಯನಗಳ ಒಲವು ಮೂಡಿದುದಾಗಿ ತಮ್ಮ ಮೂಕಜ್ಜಿಯ ಕನಸುಗಳು ಕೃತಿಯಲ್ಲಿ ತಿಳಿಸಿರುತ್ತಾರೆ. ಇದು ವೃತ್ತಿ ನಾಟಕ ಕಂಪನಿಗಳು ನಾಟಕಗಳತ್ತ ಜಿಲ್ಲೆಯ ಜನರನ್ನು ಸೆಳೆದುದಕ್ಕೆ ಸಾಕ್ಷಿಯಾಗಿದೆ. ಗರೂಡ ಸದಾಶಿವರಾಯರ ಶ್ರೀ ದತ್ತಾತ್ರೇಯ ನಾಟಕ ಮಂಡಳಿ, ೧೯೨೫ರಲ್ಲಿ ಮೊದಲಬಾರಿಗೆ ಜಿಲ್ಲೆಗೆ ಬಂದಿದ್ದ ಚಾಮುಂಡೇಶ್ವರಿ ನಾಟಕ ಮಂಡಳಿ, ಗುಬ್ಬಿ ವೀರಣ್ಣನವರ ನೇತೃತ್ವದ ಗುಬ್ಬಿ ಚೆನ್ನಬಸವೇಶ್ವರ ನಾಟಕ ಮಂಡಳಿ, ಹಲಗೇರಿ ದೊಡ್ಡ ಜಟ್ಟಪ್ಪನವರ ಶ್ರೀ ಹಾಲಸಿದ್ಧೇಶ್ವರ ನಾಟಕ ಮಂಡಳಿ, ಸಂಗಮೇಶ್ವರ ನಾಟಕ ಕಂಪನಿ, ಜಿಲ್ಲೆಯದೇ ಆದ ಮನಮೋಹನ ನಾಟಕ ಕಂಪನಿ ಮುಂತಾದ ಕಂಪನಿಗಳು ಜಿಲ್ಲೆಗೆ ಬಂದು ನಾಟಕಗಳನ್ನು ಪ್ರದರ್ಶಿಸಿವೆ. ಈ ಕಂಪನಿಗಳಿಗೆ ತುಂಬ ಹಣ ಕೊಡುತ್ತಿದ್ದುದಾಗಿ ಶಿವರಾಮ ಕಾರಂತರು ತಿಳಿಸುತ್ತಾರೆ. ಆದರೆ ಗುಬ್ಬಿ ಕಂಪನಿಯಲ್ಲಿದ್ದ ಗಂಗಾಧರರಾಯರು "ಲಲಿತಕಲಾವರ್ಧಿನಿ ನಾಟಕ ಸಭಾ" ಉಡುಪಿಯಲ್ಲಿ ಸಂಪೂರ್ಣ ಸೋತಿದ್ದಾಗಿಯೂ ಆಗ ಪಲಿಮಾರು ಮಠದ ಸ್ವಾಮಿಗಳು (ಗಂಗಾಧರರಾಯರ ಹಾರ್ಮೋನಿಯಂ ಪಡೆದುಕೊಂಡು) ಸಹಾಯ ಮಾಡಿದುದಾಗಿ ತಿಳಿದುಬರುತ್ತದೆ. ಇವು ಉಡುಪಿ ಜಿಲ್ಲೆಯ ಜನರು ನಾಟಕ ಕಲೆಯನ್ನು ಪೋಷಿಸಿಕೊಂಡು ಬಂದುದಕ್ಕೆ ಸಾಕ್ಷಿಯಾಗಿವೆ.

ಈ ನಡುವೆ ಸಣ್ಣಪುಟ್ಟ ನಾಟಕಗಳು ಪ್ರದರ್ಶನವಾಗುತ್ತಿದ್ದರೂ ಜಿಲ್ಲೆಯದೇ ಆದ ಭವ್ಯ ಪ್ರದರ್ಶನ ದೃಷ್ಟಿಯಿಂದ ನಾಟಕ ಕಲೆ ಬೆಳೆದು ಬಂದಿರಲಿಲ್ಲ. ೧೯೨೧ರಲ್ಲಿ ಕೊಡ್ಗಿ ಕಾಂಪೌಂಡಿನಲ್ಲಿ ಕಾಂಗ್ರೆಸ್ ಅಧಿವೇಶನ ನಡೆದ ಸಂದರ್ಭದಲ್ಲಿ ಶಿವರಾಮ ಕಾರಂತರು ಕುಡಿತದ ದುಷ್ಪರಿಣಾಮವನ್ನು ಚಿತ್ರಿಸುವ 'ಏಕಚ್ ಪ್ಯಾಲಾ' ಎಂಬ ಮರಾಠಿ ಸಾಮಾಜಿಕ ನಾಟಕವನ್ನು 'ನಿಶಾಮಹಿಮೆ' ಎಂಬ ಹೆಸರಿನಲ್ಲಿ ರೂಪಾಂತರಿಸಿ, ತಾವೇ ನಿಶಾಮಹಿಮನ ಪಾತ್ರದಲ್ಲಿ ಅಭಿನಯಿಸಿದರು. ವಾಸುದೇವ ನಾಯಕರು ಕುಡುಕನ ಮಿತ್ರ ತಳಿರಾಮನ ಪಾತ್ರ ವಹಿಸಿದರು. ಈ ನಾಟಕವನ್ನು ಪುಕ್ಕಟೆಯಾಗಿ ಆಡಿ ಯಶಸ್ವಿಯಾಗಿಸಿದರು. ಅನಂತರ ಶಾಲಾ ವಾರ್ಷಿಕೋತ್ಸವದ ಅಂಗವಾಗಿ ನಾಟಕಗಳನ್ನು ಆಡುವ ಪರಂಪರೆಯೊಂದು ಆರಂಭವಾಯಿತು. ಇದರಲ್ಲಿ ಹಳೆಯ ವಿದ್ಯಾರ್ಥಿಗಳೂ ಅಭಿನಯಿಸುತ್ತಿದ್ದರು. ಅದೇ ಸಮಯದಲ್ಲಿ ವಾಸುದೇವ ನಾಯಕ್, ಹೆಮ್ಮಾಡಿ ಗೋಪಾಲರಾವ್, ಬಿ. ಸಂಜೀವರಾಯರೇ ಮೊದಲಾದವರ ಪ್ರೋತ್ಸಾಹದಿಂದಾಗಿ ಶಾಲಾ ವಾರ್ಷಿಕೋತ್ಸವ ನಾಟಕಗಳು ಕಳೆಗಟ್ಟಿದುದಾಗಿ ತಿಳಿದುಬರುತ್ತದೆ.

೧೯೧೪ರಲ್ಲಿ *Alexandria Theatrical Company* ಸ್ಥಾಪಿಸಿ ಮನರಂಜನೆ ನೀಡಿದ ಶಾಬು ಸಾಹೇಬರು, ಆ ನಾಟಕ ಕಂಪನಿಯು ನಿಷ್ಕ್ರಿಯವಾದಾಗ ಕೆಲವು ನಟರ ಸಹಾಯದಿಂದ ಹಾಗೂ ಹೊರ ಪ್ರದೇಶಗಳಿಂದ ಬಂದ ನಾಟಕ ಮಂಡಳಿಗಳನ್ನು ಕಂಡ ಅನುಭವದಿಂದಾಗಿ ಕನ್ನಡ ನಾಟಕಗಳನ್ನು ಆಡುವ ಹೊಸ ಮಂಡಳಿಯನ್ನು ಸ್ಥಾಪಿಸಿದರು. ೧೯೨೭ರ ಸುಮಾರಿಗೆ ಶಾಬು ಸಾಹೇಬರ ಕಂಪನಿ 'ಭಾರತ ಸಂಗೀತ ನಾಟಕಮಂಡಳಿ' ಎಂಬ ಹೆಸರಿನಿಂದ ಲಂಕಾದಹನವನ್ನು ಕುಂದಾಪುರದಲ್ಲಿ ಆಡಿ ಜನಮೆಚ್ಚುಗೆ ಗಳಿಸಿತು. ನಂಜುಂಡಯ್ಯನವರು ಆಂಜನೇಯ ಪಾತ್ರವನ್ನು ಮಾಡಿದ್ದರು. ಈ ಕಂಪನಿಯು ಕಂಸವಧೆ, ಸತ್ಯಹರಿಶ್ಚಂದ್ರ, ಲಂಕಾದಹನ, ಭಾಮಿನಿ ವಿಜಯ, ತಿಲೋತ್ತಮೆ, ಸದಾರಮೆ ಮುಂತಾದ ನಾಟಕಗಳನ್ನು ಆಡುತ್ತಿದ್ದವು. ಈ ಕಂಪನಿಯಲ್ಲಿ ಹೊರಜಿಲ್ಲೆಗಳಿಂದ ಬಂದ ನಟರಲ್ಲದೆ ಜಿಲ್ಲೆಯವರೇ ಆಗಿದ್ದ ರಾಜೀವಭಟ್, ಸುಶೀಲ, ಮಹಾಬಲ, ಗಿರಿಜ, ಪ್ರಭಾಕರ ಮುಂತಾದವರು ನಟವರ್ಗದಲ್ಲಿದ್ದರು. ಪುತ್ತೂರು, ಕುಂದಾಪುರ ಮತ್ತು ಉಡುಪಿಯಲ್ಲಿ ಮಾತ್ರ ಮುಕ್ಕಾಂ ಮಾಡಿ ಎರಡು ವರ್ಷಗಳ ಕಾಲ ಜಿಲ್ಲೆಯಲ್ಲಿ ಮನರಂಜನೆ ನೀಡಿದ ಕಂಪನಿಯು ಅವ್ಯವಸ್ಥಿತ ಆಡಳಿತದಿಂದ ಸೋತಿತು. ಹೊರಗಿನಿಂದ ಎಷ್ಟೋ ಕಂಪನಿಗಳೂ ಉಡುಪಿ ಜಿಲ್ಲೆಯಲ್ಲಿ ಜೀವದಾನ ಪಡೆದು ಹಿಂತಿರುಗಿದ್ದರೂ, ಶಾಬು ಸಾಹೇಬರ

ಕಂಪನಿ ಹಣ ಸಂಗ್ರಹ ದೃಷ್ಟಿಯಿಂದ ಸೋತಿತೆಂಬುದಾಗಿ ತಿಳಿದುಬರುತ್ತದೆ. ಕಂಪನಿಯು ಹಣಸಂಗ್ರಹ ದೃಷ್ಟಿಯಿಂದ ಸೋತಿತಾದರೂ, ನಾಟಕಗಳಲ್ಲಿ ತೋರಿಸುತ್ತಿದ್ದ ದೃಶ್ಯಾವಳಿಗಳು, ವೇಷಭೂಷಣಗಳು, ಗ್ಯಾಸ್‌ಲೈಟ್ ಬೆಳಕಿನಲ್ಲಿ ನಿಮಿಷಾರ್ಧದಲ್ಲಿ ಮಾಡಲಾಗುವ ಅದ್ಭುತ ಬದಲಾವಣೆಗಳು – ಇವುಗಳಿಂದಾಗಿ ಜನಮನದಲ್ಲಿ ಇಂದಿಗೂ ಶಾಬು ಸಾಹೇಬರ ಕಂಪನಿಯು ಜನರ ನೆನಪಲ್ಲಿ ಉಳಿದುಕೊಂಡು ಬಂದಿರುವುದಾಗಿ ತಿಳಿದುಬರುತ್ತದೆ.

ಸುಮಾರು ೧೯೨೬–೨೭ರಿಂದ ಕಟಪಾಡಿಯ ಯು.ವಿ.ಎಸ್. ಹೈಯರ್ ಎಲಿಮೆಂಟರಿ ಶಾಲೆಯ ಹಳೆಯ ವಿದ್ಯಾರ್ಥಿ ಸಂಘವು ಮರಾಠಿ ನಾಟಕಗಳ ಅನುವಾದವನ್ನು ಹಾಗೂ ಕೆಲವು ಕಂಪನಿ ನಾಟಕಗಳನ್ನು ಪ್ರದರ್ಶಿಸಿತು. ಸುಮಾರು ೧೯೨೭ರಲ್ಲಿ ಗುಬ್ಬಿ ವೀರಣ್ಣನವರ ಕಂಪನಿಯಲ್ಲಿ ಹಾರ್ಮೋನಿಯಂ ವಾದಕರಾಗಿದ್ದ ಶ್ರೀನಿವಾಸ ಐಯ್ಯಂಗಾರ್ ಮಕ್ಕಳನ್ನು ಜೊತೆಗೂಡಿಸಿ ನಾಟಕಗಳನ್ನು ಪ್ರದರ್ಶಿಸಿದುದಾಗಿಯೂ ಮಕ್ಕಳು ನಟರಾಗಿದ್ದರೂ ಶ್ರೀನಿವಾಸ ಐಯ್ಯಂಗಾರ್ ನಿರ್ದೇಶನವು ನಾಟಕಗಳನ್ನು ಮೌಲಿಕಗೊಳಿಸಿದುದಾಗಿಯೂ ತಿಳಿದುಬರುತ್ತದೆ. ಈ ಬಾಲಕಳಾಮಂಡಳಿಯು ಉಡುಪಿಯಲ್ಲಿ ಪ್ರಾರಂಭವಾಗಿ ಉಡುಪಿಯಲ್ಲಿಯೇ ಕೊನೆಗೊಂಡಿತು.

ಉಡುಪಿ, ಕಾರ್ಕಳ, ಕುಂದಾಪುರಗಳಲ್ಲಿ ಮುಕ್ಕಾಂ ಮಾಡಿ, ೧೯೨೮ ರಿಂದ ೧೯೩೬ರ ವರೆಗೆ ಬಂಟ್ವಾಳ ನಾರಾಯಣ ಕಮ್ತಿಯವರ ನಾಟಕ ಕಂಪನಿಯಾದ ಶ್ರೀ ವೆಂಕಟರಮಣ ಕೃಪಾಪೋಷಿತ ನಾಟಕ ಮಂಡಳಿ, ಶ್ರೀ ವೆಂಕಟರಮಣ ಥಿಯೇಟ್ರಿಕಲ್ಸ್, ಶ್ರೀ ವೆಂಕಟರಮಣ ಪ್ರಸಾದಿತ ನಾಟಕ ಸಭಾ– ಹೀಗೆ ಬೇರೆಬೇರೆ ಹೆಸರುಗಳಿಂದ ನಾಟಕ ಪ್ರದರ್ಶಿಸಿದರು. ಈ ಕಂಪನಿಯ ಸಂಸ್ಥಾಪಕರು ನಾರಾಯಣ ಕಮ್ತಿಯವರು ಎನ್ನುವುದಕ್ಕಿಂತ ನಿಂತು ಹೋಗಲಿದ್ದ ಕಂಪನಿಗೆ ಜೀವದ್ರವ್ಯ ತುಂಬಿದವರು ನಾರಾಯಣ ಕಮ್ತಿಯವರೆಂಬುದಾಗಿ ತಿಳಿದುಬರುತ್ತದೆ.

೧೯೩೩ರಲ್ಲಿ ಉಡುಪಿಯಲ್ಲಿ ಪುಟ್ಟುತಂತ್ರಿಗಳಿಂದ ಸ್ಥಾಪಿತವಾದ ಶ್ರೀ ಕೃಷ್ಣ ಮಾರುತಿ ನಾಟಕ ಸಭಾ ಎಂಬ ವೃತ್ತಿ ನಾಟಕ ಮಂಡಳಿಯು ೧೯೩೮ರ ವರೆಗೆ ಬಾಳಿ ಐದನೆಯ ವಾರ್ಷಿಕೋತ್ಸವ ಆಚರಣೆಯೊಂದಿಗೆ ಕೊನೆಗೊಂಡಿತು. ಉಡುಪಿಯಲ್ಲಿ ಎರಡು ವರ್ಷಗಳಿಗೊಮ್ಮೆ ನಡೆಯುವ ಪರ್ಯಾಯೋತ್ಸವಗಳಲ್ಲಿ ಒಂದಲ್ಲ ಒಂದು ವೃತ್ತಿ ನಾಟಕ ಕಂಪನಿ ಉಡುಪಿಗೆ ಬಂದು ಮುಕ್ಕಾಂ ಹೂಡುತ್ತಿದ್ದುದಾಗಿ ತಿಳಿದುಬರುತ್ತದೆ. ನಾಟಕ ಶಿರೋಮಣಿ ವರದಾಚಾರ್ಯರಿಂದ ಹಿಡಿದು ಪಿ.ಬಿ.ರೈ ಅವರ ನಂದಿಕೇಶ್ವರ ಕಂಪನಿಯವರೆಗೆ ಎಲ್ಲ ನಾಟಕ ಕಂಪನಿಗಳು ಉಡುಪಿಗೆ ಬಂದಿವೆಯೆಂದು ರಂಗಭೂಮಿ ಕಲಾವಿದ ಕೆ. ಆನಂದ ಗಾಣಿಗ ಅವರು ಅಭಿಪ್ರಾಯ ಪಡುತ್ತಾರೆ.

೧೯೪೦–೫೦ರ ದಶಕಗಳಲ್ಲಿ ಬುಡಾನ್ ಬಾಶಾ ಸಾಹೇಬರು 'ಶ್ರೀ ಪಂಚಲಿಂಗೇಶ್ವರ ನಾಟಕ ಮಂಡಳಿ' ಎಂಬ ನಾಟಕ ಕಂಪನಿಯನ್ನು ಬಾರಕೂರಿನಲ್ಲಿ ಕಟ್ಟಿ ಸುಮಾರು ಹತ್ತು ವರ್ಷಗಳ ಕಾಲ ಕಂಪನಿಯನ್ನು ಯಶಸ್ವಿಯಾಗಿ ನಡೆಸಿದ ಕೀರ್ತಿಗೆ ಪಾತ್ರರಾಗಿದ್ದರು. ಅಲ್ಲದೆ, ಸ್ವತಃ ಕಲಾವಿದರಾದ ಬುಡಾನ್ ಸಾಹೇಬರ ಕಂಪನಿಯಲ್ಲಿ ವಿ.ವಿ. ನಾಯಕ್, ಇಂದುಶೇಖರ್, ಬೈಕಾಡಿ ಶ್ರೀನಿವಾಸ ರಾವ್, ಮೆಡಲಿಸ್ಟ್ ಕಾಮೆಡಿಯನ್ ಉಡುಪಿ ದಾಸಭಟ್, ಸತ್ಯಭಾಮ ಮೊದಲಾದ ಪ್ರತಿಭಾನ್ವಿತ ಕಲಾವಿದರು ಅಭಿನಯಿಸುತ್ತಿದ್ದುದಾಗಿ ತಿಳಿದುಬರುತ್ತದೆ. ವಿ.ವಿ. ನಾಯಕ್ ಕಂಪನಿಯ ಪ್ರಧಾನ ನಟರಾಗಿದ್ದರು. ಬೈಕಾಡಿ ಶ್ರೀನಿವಾಸರಾವ್ ಅವರ ಶರೀರ, ಶಾರೀರ ಅದ್ಭುತವಾಗಿದ್ದವು. ಕಂಬೈನ್ಡ್ ಬುಕ್ ಏಜೆನ್ಸಿಯಲ್ಲಿ ಬಸ್ ಟಿಕೆಟ್ ಕೊಡುವ ಉದ್ಯೋಗ ಮಾಡುತ್ತಿದ್ದ ಇವರು ರಂಗದಲ್ಲಿ ಅದ್ಭುತವಾಗಿ ನಟಿಸುತ್ತಿದ್ದುದಾಗಿಯೂ ಕಂಪನಿ ಸ್ಥಗಿತಗೊಂಡಾಗ ಪ್ರಸಾದನ ಕಲಾವಿದರಾದರೆಂದು ತಿಳಿದುಬರುತ್ತದೆ. ಉಡುಪಿ ರಂಗಭೂಮಿಯಿಂದ ರಂಗಪ್ರವೀಣ ಪ್ರಶಸ್ತಿ, ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿಯು ಇವರಿಗೆ ಸಂದಿದೆ. ಈ ಕಂಪನಿಯ ಟಿಪ್ಪುಸುಲ್ತಾನ್, ಕೃಷ್ಣಲೀಲೆ, ವರದಕ್ಷಿಣೆ ಮುಂತಾದ ನಾಟಕಗಳು ಜನಪ್ರಿಯವಾಗಿದ್ದವು. ಈ ಕಂಪನಿಯು ೧೯೪೯–೫೨ರ ವರೆಗೆ ಕೋಟದ ವಾಸುದೇವ ಹಂದೆ ಅವರ ಮಾಲೀಕತ್ವದಲ್ಲಿ 'ಜೈ ಹಿಂದ್ ನಾಟಕ ಸಭಾ' ಎಂಬ ಹೆಸರಿನಿಂದ

ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಸಂಚರಿಸಿತಾದರೂ ಮೂರು ವರ್ಷಗಳಲ್ಲಿ ಕಂಪನಿ ಕೊನೆಗೊಂಡಿತು. 'ಅಂಬಾ ಪ್ರಸಾದಿತ ನಾಟಕ ಮಂಡಳಿ' ನಿಂತುಹೋದ ನಂತರ ಅದರಲ್ಲಿ ವಿದೂಷಕ ಪಾತ್ರ ಮಾಡುತ್ತಿದ್ದ ಉಡುಪಿ ದಾಸಭಟ್ಟರು ಬುಡಾನ್ ಸಾಬರ ಕಂಪನಿಗೆ ಸೇರಿದರು. ಅಲ್ಲಿ ಅವರ ಮೀರ್ ಸಾದಿಕ್, ಮಕರಂದ ಮತ್ತು ಗುಂಡಣ್ಣ ಪಾತ್ರಗಳಲ್ಲಿ ಜನಮೆಚ್ಚುಗೆ ಗಳಿಸಿದುದಲ್ಲದೆ ಅವರಿಗೆ ಬಂಗಾರದ ಪದಕ ದೊರಕಿಸಿತ್ತು. ಹೀಗಾಗಿ ಇವರಿಗೆ ಮೆಡಲಿಸ್ಟ್ ಕಾಮೆಡಿಯನ್ ಎಂಬ ಬಿರುದು ಸಂದುದಾಗಿ ತಿಳಿದುಬರುತ್ತದೆ.

೧೯೪೦ರಲ್ಲಿ ಬಸರೂರಿನಲ್ಲಿ 'ತರುಣ ನಾಟ್ಯ ಕಲಾಪ್ರೇಮಿ ಮಂಡಳಿಯು ನಾಟಕ ಕಲೆಗೆ ಉತ್ತಮ ಸೇವೆ ಸಲ್ಲಿಸಿತು. ೧೯೪೦ರ ದಶಕದಲ್ಲಿ ಸಾಹಿತಿ ಕೊರಡ್ಕಲ್ ಶ್ರೀನಿವಾಸರಾವ್ ಸ್ಥಾಪಿಸಿದ "ಮಿತ್ರಮಂಡಳಿ" ತಂಡ ಹತ್ತು ವರ್ಷಗಳಿಗೂ ಹೆಚ್ಚು ಕಾಲ ಉಡುಪಿಯ ಪರಿಸರದಲ್ಲಿ ನಾಟಕವನ್ನಾಡುತ್ತಿದ್ದರು. ಈ ತಂಡದಲ್ಲಿ ಕನ್ನಡ ಕವಿ ಎಸ್. ವೆಂಕಟರಾಜು ಸ್ತ್ರೀ ಪಾತ್ರಗಳನ್ನು ಅಭಿನಯಿಸುತ್ತಿದ್ದುದಾಗಿ ತುಳು ಸಾಹಿತಿ ಎಸ್.ಯು. ಪಣಿಯಾಡಿಯವಯುವರು ಪ್ರಗತಿಪರ ವಿಚಾರಧಾರೆಯ ನಾಟಕಗಳನ್ನು ಕೃಷ್ಣಮಠದ ವಸಂತಮಹಲಿನಲ್ಲಿ ಪ್ರದರ್ಶಿಸಿದುದಾಗಿ ತಿಳಿದುಬರುತ್ತದೆ. ಅನಂತರ ಬಸರೂರಿನಲ್ಲಿ ಸಂಜೀವ ಅವರ ನೇತೃತ್ವದಲ್ಲಿ ಕುಂದಾಪುರದಲ್ಲಿ 'ಕಲಾಕೂಟ'ವು ಅಸ್ತಿತ್ವಕ್ಕೆ ಬಂದಿತು. (೧೯೪೮) ಈ ಸಂಸ್ಥೆಯು ಉಂಡಾಡಿಗುಂಡ, ಬಹದ್ದೂರ್ ಗಂಡು ಮುಂತಾದ ಸಾಮಾಜಿಕ ನಾಟಕಗಳನ್ನು ಅಭಿನಯಿಸಲು ಪ್ರಾರಂಭಿಸಿತು. ೧೯೪೦-೫೦ರ ದಶಕಗಳಲ್ಲಿ ಕೊರಡ್ಕಲ್ ಶ್ರೀನಿವಾಸ ರಾಯರ ಗರಡಿಯಲ್ಲಿ ಅನುಭವ ಪಡೆದಿದ್ದ ಪಾಡಿಗಾರ ಸೀನಶೆಟ್ಟರು 'ನಾಟ್ಯಕೂಟ' ಎಂಬ ಸಂಘಟನೆಯನ್ನು ಉಡುಪಿಯಲ್ಲಿ ಕಟ್ಟಿ ಕೆ.ಕೆ.ಶೆಟ್ಟರ 'ವ್ಯಭಿಚಾರಿಣಿ ಯಾರು?' ಸಾಮಾಜಿಕ ನಾಟಕ ಪ್ರದರ್ಶಿಸಿ ಕ್ರಾಂತಿಯನ್ನೇ ಎಬ್ಬಿಸಿದುದಾಗಿ ತಿಳಿದುಬರುತ್ತದೆ. ಡಾ. ಕೆ. ಎಲ್. ಐತಾಳ. ಡಾ. ಸುಂದರರಾಮ ಪೈ, ಎನ್.ವಿ.ಕಾಮತ್, ಎ.ಜೆ.ಅಲ್ಸೆ, ಇಬ್ರಾಹಿಂ ಸಾಹೇಬ್, ಎಫ್. ದಾಂತಿ, ಆರ್.ಆರ್. ಕುಂಜೂರ್ ಮೊದಲಾದ ಗಣ್ಯರು ಈ ತಂಡದಲ್ಲಿದ್ದುದಾಗಿಯೂ ಎ.ಜೆ. ಅಲ್ಸೆ ಸ್ತ್ರೀ ಪಾತ್ರ ಮಾಡುತ್ತಿದ್ದುದಾಗಿಯೂ ತಿಳಿದುಬರುತ್ತದೆ.

ಹಲವು ಕಂಪನಿಗಳ ಅನುಭವವಿದ್ದ ಮಾಧವರಾವ್ ಹೆಬ್ರಿಯಲ್ಲಿ 'ಗುರುಮಾರುತಿ ಪ್ರಸಾದಿತ ನಾಟಕ ಕಂಪನಿ' ಯನ್ನು ಮೂರು ನಾಲ್ಕು ತಿಂಗಳು ಯಶಸ್ವಿಯಾಗಿ ನಡೆಸಿದುದಾಗಿ ತಿಳಿದುಬರುತ್ತದೆ. ಅಲ್ಲದೆ ಕೆಲವೇ ತಿಂಗಳು ನಡೆದ ಕುಂದಾಪುರದ ಬಾಲಕೃಷ್ಣ ಮಿತ್ರ ಮಂಡಳಿ, ಉಡುಪಿಯ ವಾಸುದೇವ ಭಟ್ಟರ ಕಂಪನಿಗಳು ಅಷ್ಟಾಗಿ ಜನರ ಮನಸ್ಸಿನಲ್ಲಿ ನೆಲೆಯೂರದೇ ಹೋಯಿತು. ೧೯೫೦ರ ದಶಕದ ಕೊನೆಯಲ್ಲಿ ಪತ್ರಕರ್ತ ಎಸ್.ಎಲ್. ನಾರಾಯಣ ಭಟ್ಟರು 'ಎಸ್ಸೆಲ್ ಅಂಡ್ ಪಾರ್ಟಿ' ಎಂಬ ತಂಡವನ್ನು ಕಟ್ಟಿ 'ಬಹದ್ದೂರ್ ಗಂಡು', ಉಂಡಾಡಿ ಗುಂಡ' ಎಂಬ ನಗೆನಾಟಕಗಳನ್ನು ಪ್ರದರ್ಶಿಸಿ ಖ್ಯಾತಿ ಗಳಿಸಿದ್ದಾಗಿ ತಿಳಿದುಬರುತ್ತದೆ. ಕೇಶವ ಕುಡ್ವ, ಕೆ.ಪಿ.ರಾವ್ ಕಲಾವಿದರಾಗಿದ್ದರು.

ಉಡುಪಿಯ ನವಯುಗ ಪತ್ರಿಕೆಯ ಕೆ. ಹೊನ್ನಯ್ಯ ಶೆಟ್ಟರು, ಶಾಸಕರಾಗಿದ್ದ ಕೆ.ಕೆ. ಶೆಟ್ಟರು, ಸಚಿವರಾಗಿದ್ದ ಎ.ಬಿ. ಶೆಟ್ಟರು ನಾಟಕವಾಡುತ್ತಿದ್ದುದಾಗಿ ತಿಳಿದುಬರುತ್ತದೆ. ದಾಸಭಟ್ಟರ ಶಿಷ್ಯರಾಗಿದ್ದ ಕಾಳುಭಟ್ಟರು ಕಲಾವಿದರಾಗಿದ್ದರು. ನಟ, ನಾಟಕಕಾರರಾಗಿದ್ದ ಉಡುಪಿಯ ಆರ್.ಡಿ. ಕಾಮತ್ ಉಡುಪಿಯಲ್ಲಿ ನಂತರ ಮುಂಬಯಿಯಲ್ಲಿ ನಾಟಕಗಳಲ್ಲಿ ಅಭಿನಯಿಸುತ್ತಿದ್ದರು. ಅವರ ಮಾತೃದೇವೋಭವ ನಾಟಕವು ರಾಜ್ಯಾದ್ಯಂತ ಪ್ರದರ್ಶನಗೊಂಡಿದೆ. ೧೯೮೪-೮೭ರ ಅವಧಿಯಲ್ಲಿ ಅವರು ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರಾಗಿದ್ದರು. ಉಡುಪಿಯ 'ನಾದ ವೈಭವಂ' ಖ್ಯಾತಿಯ ಉಡುಪಿಯ ವಾಸುದೇವ ಭಟ್ಟರು ೧೯೬೦ರ ಉತ್ತರಾರ್ಧದಲ್ಲಿ 'ವಾಸನ್ಸ್ ಫೆಟೆಮೆನ್ಸ್ ಟ್ರೂಪ್' ತಂಡವನ್ನು ಕಟ್ಟಿ ಕೆಲವು ನಾಟಕಗಳನ್ನು ಪ್ರದರ್ಶಿಸಿದ್ದುದಾಗಿ ನಂತರ ನಷ್ಟದ ಕಾರಣದಿಂದಾಗಿ ನಿಂತುಹೋದುದಾಗಿ ತಿಳಿದುಬರುತ್ತದೆ.

೧೯೫೨ರಲ್ಲಿ ಕುಂದಾಪುರದಲ್ಲಿ 'ಗಂಡಾಂತರ ಕಂಪನಿ'ಯು, ಬಾಲಕೃಷ್ಣ ಪೈ ಅವರ ನಾಯಕತ್ವದಲ್ಲಿ ವಿಲಿಯಂ ಪಾಯ್ಸ್, ಡೇನ, ರಾಜು ಮಾಸ್ತರ್, ನಾಗೇಶ್ ಆಚಾರ್ಯ ಮೊದಲಾದ ಕಲಾವಿದರೊಂದಿಗೆ 'ದೀಪಾವಳಿ' ನಾಟಕದ ಮೂಲಕ ಜನಮನವನ್ನು ಗೆದ್ದುಕೊಂಡಿತು. ಈ ಗಂಡಾಂತರ ಕಂಪನಿಯೇ

ಮುಂದೆ ಕೋಟೇಶ್ವರ ಸೂರ್ಯನಾರಾಯಣ ಐತಾಳರ' ತಹಸೀಲ್ದಾರ್ ರಾಮರಾಯರ ಹಾಗೂ ಸಂಜೀವ ಪ್ರಭುಗಳ ಪ್ರೋತ್ಸಾಹದಿಂದ ರೂಪರಂಗ (೧೯೫೮) ಸಂಸ್ಥೆಯಾಗಿ ಮಾರ್ಪಟ್ಟಿತು. ೧೯೫೦ರ ದಶಕದಲ್ಲಿ ಸ್ಥಾಪನೆಗೊಂಡಿದ್ದ ಕುಂದಾಪುರದ 'ರೂಪರಂಗ' ವು ಒಂದು ಹವ್ಯಾಸಿ ನಾಟಕ ಸಂಸ್ಥೆಯಾಗಿತ್ತು. ನಾರಾಯಣ ಶಾನುಭೋಗ್, ಕೆ. ಬಾಲಕೃಷ್ಣ ಪೈ, ಎ. ವೈಕುಂಠ ಹೆಬ್ಬಾರ್, ಆನಂದ ಬಸರೂರು, ಮೈಪಾಡಿ ಮೊದಲಾದ ಕಲಾವಿದರನ್ನು ಹೊಂದಿತ್ತು. ಎಚ್.ಎನ್. ನಕ್ರಾಯ ನಾಟಕಗಳ ನಿರ್ದೇಶಕರಾಗಿದ್ದು ತಂಡದ ಟಿಪ್ಪುಸುಲ್ತಾನ್, ಕಲ್ಯಾಣಿ, ಸತ್ಯಹರಿಶ್ಚಂದ್ರ ಮುಂತಾದ ನಾಟಕಗಳು ಜಿಲ್ಲೆಯಾದ್ಯಂತ ಮೆಚ್ಚುಗೆ ಗಳಿಸಿದ್ದವು. ಆರಂಭದ ವರ್ಷಗಳಲ್ಲಿ ರಾಜ್ಯಮಟ್ಟದ ನಾಟಕ ಸ್ಪರ್ಧೆಗಳನ್ನು ಏರ್ಪಡಿಸುತ್ತಿದ್ದುದಾಗಿ ತಿಳಿದುಬರುತ್ತದೆ.

೧೯೬೦ರ ದಶಕದಲ್ಲಿ ಪೆರ್ಡೂರಿನಲ್ಲಿ ಡಾ. ಎಂ.ಆರ್. ಹೆಗ್ಡೆಯವರ ನೇತೃತ್ವದಲ್ಲಿ 'ಕಲಾಸೇವಾ ಮಂಡಳಿ' ಹವ್ಯಾಸಿ ತಂಡವು ಅನೇಕ ನಾಟಕಗಳನ್ನು ಪ್ರದರ್ಶಿಸಿದ್ದಿತು. ಕೆ. ಗೋಪಾಲಕೃಷ್ಣ ಉಪಾಧ್ಯ, ಶ್ರೀನಿವಾಸ ರಾವ್, ಅನಂತಪದ್ಮನಾಭ ಕಲ್ಯಾಣಿ ಮತ್ತು ಪಿ. ರಾಮಕೃಷ್ಣ ಕಲ್ಯಾಣಿ ಈ ತಂಡದ ಕಲಾವಿದರಾಗಿದ್ದರು. ಈ ತಂಡ ಉಳಿದಿಲ್ಲ. 'ರೂಪರಂಗ'ದಿಂದ ಪ್ರತ್ಯೇಕವಾದ ಬಾಲಕೃಷ್ಣ ಪೈ ಅವರಿಂದಲೇ 'ರೂಪಕಲಾ' ಎಂಬ ಮತ್ತೊಂದು ಸಂಸ್ಥೆಯು (೧೯೬೨) ಹುಟ್ಟಿಕೊಂಡಿತು.

ಈ ದಶಕದಲ್ಲಿ ಹುಟ್ಟಿದ ಹವ್ಯಾಸಿ ಸಂಸ್ಥೆಗಳು ಲಲಿತಕಲಾಪ್ರೇಮಿ ಮಂಡಳಿ, ಕೋಟೇಶ್ವರ (೧೯೬೯ರ ಅಂತ್ಯದಲ್ಲಿ), ತರುಣ ನಾಟ್ಯಕಲಾಪ್ರೇಮಿ ಮಂಡಳಿ, ಬಸರೂರು(೧೯೪೦), ಸರಸ್ವತಿ ಕಲಾಸಂಘ, ಕೋಟೇಶ್ವರ (೧೯೪೩), ಆರ್.ಡಿ. ಮಿತ್ರಮಂಡಳಿ, ಕಾರ್ಕಳ(೧೯೪೬) ಮೊದಲಾದವು.

ಒಟ್ಟಾರೆ ಜಿಲ್ಲೆಯಲ್ಲಿ ವೃತ್ತಿ ನಾಟಕ ಸಂಸ್ಥೆಗಳು ಶ್ರೀ ಥಿಯೇಟರ್ಸಿನಿಂದ ಕೊನೆಗೊಂಡಂತೆ ಕಂಡುಬರುತ್ತದೆ. "ಅರವತ್ತರ ದಶಕದ ತನಕ ವೃತ್ತಿ ಕಂಪನಿ ಮತ್ತು ವಿಲಾಸಿ ತಂಡಗಳ ಮೂಲಕ ಪೌರಾಣಿಕ ಹಾಗೂ ಐತಿಹಾಸಿಕ ನಾಟಕಗಳು ಪ್ರದರ್ಶನಗೊಳ್ಳುತ್ತಿದ್ದವು. ವೇಷಭೂಷಣ, ಮಾತಿನ ಚರ್ಯೆ, ರಂಗುರಂಗಿನ ಪರದೆಗಳು ಇಂಪಾದ ಸಂಗೀತ ಇತ್ಯಾದಿಗಳಲ್ಲಿ ಯಕ್ಷಗಾನ ಸಿಂಚನವನ್ನೂ ಸೇರಿಸಿಕೊಂಡು ನಾಟಕದ ಹೆಜ್ಜೆಗಳನ್ನಿಡುತ್ತ ನಡೆದುದರಿಂದಾಗಿ ವೃತ್ತಿ ಹಾಗೂ ಹವ್ಯಾಸಿ ರಂಗಭೂಮಿಗಳಲ್ಲಿ ಆಗ ಅಂಥ ವ್ಯತ್ಯಾಸವೇನೂ ಕಾಣಿಸುತ್ತಿರಲಿಲ್ಲ" ಎಂಬುದಾಗಿ ನಾ. ದಾಮೋದರ ಶೆಟ್ಟಿ ಅಭಿಪ್ರಾಯ ಪಡುತ್ತಾರೆ.

## ಹವ್ಯಾಸಿ ರಂಗಭೂಮಿ

ಅವಿಭಕ್ತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕರಾವಳಿ ರಂಗಭೂಮಿಗೆ ಸಾಂಸ್ಕೃತಿಕ ಮಹತ್ವ ಹಾಗೂ ಏಕರೂಪತೆ ಇದ್ದುದಾಗಿ ತಿಳಿದುಬರುತ್ತದೆ. ಕರ್ನಾಟಕದ ಆಧುನಿಕ ರಂಗಭೂಮಿಯ ಇತಿಹಾಸವು ಉಡುಪಿಯಲ್ಲಿ ಎಪ್ಪತ್ತರ ದಶಕದಲ್ಲಿ ಪ್ರಾರಂಭವಾಯಿತೆನ್ನಬಹುದು. ಇದು ಆ ದಶಕದಲ್ಲಿ ಉಡುಪಿಯ ಎಂ.ಜಿ.ಎಂ. ಕಾಲೇಜು ಆಯೋಜಿಸಿದ್ದ ರಂಗಚಳುವಳಿಯ ಆದ್ಯ ಪ್ರವರ್ತಕರೆನಿಸಿದ ಬಿ.ವಿ.ಕಾರಂತರಿಂದ ಹತ್ತು ದಿನಗಳ ಕಾಲ ನಡೆದ ರಂಗ ಕಾರ್ಯಾಗಾರದ ಮೂಲಕ ಎಂದು ಗುರುತಿಸಲಾಗಿದೆ. ಈ ಶಿಬಿರದಲ್ಲಿ ಭಾಗವಹಿಸಿದವರು ಆಧುನಿಕ ಶೈಲಿಯ ನಾಟಕಗಳ ಬಗ್ಗೆ ಆಸಕ್ತಿ ತಳೆದರು. ಈ ಶಿಬಿರದಲ್ಲಿ 'ಏವಂ ಇಂದ್ರಜಿತ್', 'ಸತ್ತವರ ನೆರಳು', 'ಹಯವದನ', ಮಾಲವಿಕಾಗ್ನಿಮಿತ್ರ' ಮುಂತಾದ ನಾಟಕಗಳು ಎಂ.ಜಿ.ಎಂ. ಕಾಲೇಜಿನ ಮುದ್ದಣ ಮಂಟಪದಲ್ಲಿ ಪ್ರದರ್ಶನಗೊಂಡವು. ಈ ಶಿಬಿರದ ಮೂಲಕ "ತುಘಲಕ್" ಹಾಗೂ ಕಡಿಯಾಳಿ ಶಾಲೆಯಲ್ಲಿ ಮಕ್ಕಳಿಗಾಗಿ ತಯಾರಿಸಿದ 'ಹೆಡ್ಡಾಯಣ' ಎರಡು ನಾಟಕಗಳು ಬೆಳಕಿಗೆ ಬಂದವು. ಇದರಿಂದ ಜಿಲ್ಲೆಯಲ್ಲಿ ಹೊಸ ಅಲೆಯ ನಾಟಕಗಳಿಗೆ ನಾಂದಿಯಾಯಿತೆಂಬುದಾಗಿ ತಿಳಿದುಬರುತ್ತದೆ. ಆಧುನಿಕ ಹವ್ಯಾಸಿ ರಂಗಭೂಮಿಗೆ ಮೊಳಕೆ ಹಾಕಿದ ಈ ಶಿಬಿರದೊಂದಿಗೆ ಉಡುಪಿಯ ರಂಗಾಸಕ್ತರ ಗಮನವು ಪೂರ್ಣವಾಗಿ ಹೊಸ ಅಲೆಯ ನಾಟಕಗಳತ್ತ ಹೊರಳಿತು.

ಯಕ್ಷಗಾನದ ತವರೂರಾದ ಕರಾವಳಿಯು ಅದರ ಐಸಿರಿಯನ್ನು ಐನೂರು ವರ್ಷಗಳಿಂದ ಉಣ್ಣುತ್ತ ಬಂದಿದೆ. ಇತ್ತ ಕಾಸರಗೋಡಿನಿಂದ ಮೊದಲುಗೊಂಡು ಅತ್ತ ಹೊನ್ನಾವರದ ತನಕ ತೆಂಕುತಿಟ್ಟು, ಬಡಗುತಿಟ್ಟು,

ಉತ್ತರ ಕನ್ನಡ ತಿಟ್ಟು ಹಾಗೂ ಶಿವರಾಮಕಾರಂತರ ಯಕ್ಷರಂಗ ಪ್ರಯೋಗಗಳಿಂದಾಗಿ ಯಕ್ಷಗಾನಕ್ಕೆ ಅನನ್ಯ ವೈವಿಧ್ಯ ಒದಗಿ ಬಂದಿತ್ತು. ತಾಳಮದ್ದಲೆಯ ವಾಕ್ ಚಾತುರ್ಯದ ಸರಸ–ವಿರಸಗಳ ಸಂಘರ್ಷಕ್ಕೆ ಹಿಮ್ಮೇಳದ, ಭಾಗವತರ ಒಗ್ಗರಣೆಯೂ ಸೇರಿ ಆಶುಪಟುತ್ವದ ಆರಾಧಕರಿಗೆ ಅವಿಸ್ಮರಣೀಯ ಅನುಭವ ನೀಡುತ್ತದೆ.

ವೃತ್ತಿ ನಾಟಕ ಕಂಪನಿಗಳ ಪ್ರದರ್ಶನಕ್ಕೆ ಪ್ರಯತ್ನಗಳು ನಡೆಯುತ್ತಲಿದ್ದರೂ ಅಂಥ ಯಶಸ್ಸೇನೂ ಕಾಣುವುದಕ್ಕೆ ಸಾಧ್ಯವಾಗಲಿಲ್ಲ. ಒಂದು ಅಭಿಜಾತ ಕಲೆಯ ಹುಟ್ಟುದಾಣದಲ್ಲಿ ಇನ್ನೊಂದು ರಂಗಮಾಧ್ಯಮವು ಬೇರು ಬಿಡುವುದು ಪ್ರಯಾಸದ ವಿಷಯ. ಅರವತ್ತರ ದಶಕದ ತನಕವೂ ವೃತ್ತಿ ಕಂಪೆನಿಯ ಮೂಲಕ ಅಥವಾ ವಿಲಾಸಿಗಳ ಮೂಲಕ ಪೌರಾಣಿಕ, ಐತಿಹಾಸಿಕ ನಾಟಕಗಳೂ ಪ್ರದರ್ಶನ ಕಾಣುತ್ತಲಿದ್ದವು. ವೇಷಭೂಷಣ, ಮಾತಿನ ಚರ್ಯೆ, ರಂಗುರಂಗಿನ ಪರದೆಗಳು, ಇಂಪಾದ ಸಂಗೀತ ಇತ್ಯಾದಿಗಳಲ್ಲಿ ಯಕ್ಷಗಾನದ ಸಿಂಚನವನ್ನು ಸೇರಿಸಿಕೊಂಡು ನಾಟಕದ ಹೆಜ್ಜೆಗಳನ್ನಿಡುತ್ತಾ ಅವು ನಡೆಯುತ್ತಿದ್ದವು. ವೃತ್ತಿ ಹಾಗೂ ಹವ್ಯಾಸಿ ರಂಗಭೂಮಿಗಳಲ್ಲಿ ಆಗ ಅಂಥ ವ್ಯತ್ಯಾಸವೇನೂ ಕಾಣಿಸುತ್ತಿರಲಿಲ್ಲ.

೧೯೬೫ರಲ್ಲಿ ಅಸ್ತಿತ್ವಕ್ಕೆ ಬಂದ ಉಡುಪಿಯ 'ರಂಗಭೂಮಿ' ತಂಡವು ಅದು ತನಕ ಪೌರಾಣಿಕ, ಐತಿಹಾಸಿಕ ನಾಟಕಗಳನ್ನಾಡುತ್ತಿದ್ದರೂ, ಕಾರಂತರು ಬೀಸಿದ ಬದಲಾವಣೆಯ ಅಲೆಯನ್ನು ಒಪ್ಪಿಕೊಂಡಿತು. ೧೯೭೬–೭೭ರ ಕಾಲಕ್ಕೆ ಇನ್ನೊಬ್ಬ ಪ್ರಮುಖ ನಿರ್ದೇಶಕ ಪ್ರಸನ್ನ, ಮಂಗಳೂರಿಗೆ ಬಂದು ಸಮುದಾಯ ತಂಡ ಕಟ್ಟಿ 'ಮಾರೀಚನ ಬಂಧುಗಳು' ನಾಟಕವಾಡಿದರು. ಅದರಲ್ಲಿ ಬರುವ ವಾಲ್ಮೀಕಿ ಮಹರ್ಷಿಯು ಇಂಗ್ಲಿಷ್ ಮಾತನಾಡುತ್ತಾ ಸಿಗರೇಟು ಸೇದುತ್ತಾ ವೇದಿಕೆಯಲ್ಲಿ ನಡೆದಾಡಿದ್ದು ಪ್ರೇಕ್ಷಕರ ಕೋಪಕ್ಕೆ ಕಾರಣವಾಯಿತು. ನಾಟಕವನ್ನು ಬಹಿಷ್ಕರಿಸುವುದಾಗಿ ನಿರ್ದೇಶಕರಿಗೆ ನಟರು ಸವಾಲೆಸೆದರು. ಕೊನೆಯ ನಿಮಿಷದ ಮುಷ್ಕರಕ್ಕೆ ನಿರ್ದೇಶಕರು ತಲೆಬಾಗಿದ್ದಷ್ಟೇ ಅಲ್ಲದೆ ಉಡುಪಿಯಲ್ಲಿ ನಡೆದ ಪ್ರಯೋಗದಲ್ಲಿ ವಾಲ್ಮೀಕಿಯನ್ನು ಪ್ರೋ. ವಾಲ್ಮೀಕಿಯನ್ನಾಗಿಸಿ ವೇದಿಕೆಗೆ ತಂದರು.

ಎಂಭತ್ತರ ದಶಕದಲ್ಲಿ ಹೊಸ ಅಲೆಯ ನಾಟಕಗಳನ್ನು ಪ್ರೇಕ್ಷಕರು, ನಟರು ಒಪ್ಪಿಕೊಳ್ಳತೊಡಗಿದರು. ಆದರೆ ಮಂಗಳೂರಿನಲ್ಲಿ 'ಸಮುದಾಯ' ತಂಡ ಅಷ್ಟು ಶಕ್ತವಾಗಿ ಮೂಡಿ ಬರಲಿಲ್ಲ. ಆ ಬಳಿಕ ಕುಂದಾಪುರ, ಸುಳ್ಯ, ಪುತ್ತೂರುಗಳಲ್ಲಿ ಸಮುದಾಯ ಶಾಖೆಗಳು ಹುಟ್ಟಿಕೊಂಡು ಇತಿಮಿತಿಗಳೊಳಗೆ ಕಾರ್ಯನಿರ್ವಹಿಸ ತೊಡಗಿದವು.

'ಸಂಕೇತ್ ಕಲಾವಿದರು', ಶ್ರೀ ಜಗನ್ ಪವಾರ್ ಬೇಕರ್ ನಾಯಕತ್ವದ ತಂಡ. ಇದು ಸದಾನಂದ ಸುವರ್ಣರ ನಿರ್ದೇಶನದಲ್ಲಿ 'ಉರುಳು' (೧೯೭೭) ಎಂಬ ಉತ್ತಮ ನಾಟಕವೊಂದನ್ನು ರಂಗಕ್ಕೆ ನೀಡಿದರು. ಶ್ರೀ ಚಂದ್ರಹಾಸ್ ಉಳ್ಳಾಲ್ ಅಸಾಮಾನ್ಯ ನಟನೆಯನ್ನು ಮೆರೆದು ಹಿಂದಕ್ಕೆ ಸರಿದ ರಂಗನಟ ಸತ್ಯಸಂಧರನ್ನು ನೆನಪಿಗೆ ತಂದರು. ಇದರಿಂದಾಗಿ ಉಡುಪಿಯ 'ರಂಗಭೂಮಿ'ಗೆ ರಾಜ್ಯಮಟ್ಟದ ನಾಟಕ ಸ್ಪರ್ಧೆಯ ಪ್ರಥಮ ಬಹುಮಾನ (ಅರ್ಹವಾಗಿಯೇ) ಸಂದಿತು.

೧೯೭೭ರಿಂದ ೮೧ರ ತನಕ ಜಿಲ್ಲೆಯಲ್ಲಿ ನಾಟಕ ತಂಡಗಳ ಸುಗ್ಗಿಯೇ ಆಯಿತು. ಉಡುಪಿಯಲ್ಲಿ 'ಸಮೂಹ', 'ರಥಬೀದಿ ಗೆಳೆಯರು', 'ಪೂರ್ಣಪ್ರಜ್ಞ ಕಲಾವಿದರು', 'ಕುಂದಾಪುರದ ಜನರಂಗ' ನಾಟಕ ತಂಡಗಳು ಹುಟ್ಟಿಕೊಂಡವು. ಹೆಚ್ಚಿನ ತಂಡಗಳು ಒಂದು ದಶಕದ ಕಾಲ ತಮ್ಮ ಅಸ್ತಿತ್ವಕ್ಕೆ ವಿಶೇಷ ಪೆಟ್ಟು ಬೀಳದಂತೆ ನೋಡಿಕೊಂಡವು. ಉಡುಪಿಯ 'ರಥಬೀದಿ ಗೆಳೆಯರು' ತಂಡ ನಾಲ್ಕು ದಶಕಗಳನ್ನೂ ಮೀರಿ ಮುಂದುವರಿಯುತ್ತಿರುವುದೊಂದು ದಾಖಲೆಯೇ ಸರಿ. (ಸ್ಥಾ: ೧೯೫೬). ಹವ್ಯಾಸಿ ರಂಗಭೂಮಿಗೆ ಸಂಬಂಧಪಟ್ಟ ಹಾಗೆ ಉಡುಪಿಯ 'ರಂಗಭೂಮಿ' ತಂಡದ ಸಾಧನೆ ಅಂದಿನಿಂದ ಇಂದಿನ ತನಕ ಏಕಪ್ರಕಾರವಾಗಿ ಇದೆ. ಕೆಲವೊಮ್ಮೆ ತಂಡದ ಸ್ವತಂತ್ರ ಪ್ರಯೋಗಗಳಿಗೆ ಚ್ಯುತಿ ಬಂದಿರಬಹುದು. ಆದರೆ ೧೯೮೦ರಿಂದ ಆರಂಭಗೊಂಡ ರಾಜ್ಯಮಟ್ಟದ ನಾಟಕ ಸ್ಪರ್ಧೆಗೆ ಚ್ಯುತಿ ಬಂದಿಲ್ಲ. ರಾಜ್ಯದ ವಿವಿಧ

ಮೂಲೆಗಳಿಂದ ಪ್ರತಿವರ್ಷವೂ ಹದಿನೈದಕ್ಕಿಂತ ಹೆಚ್ಚು ಆಯ್ದ ತಂಡಗಳು ಈ ಸ್ಪರ್ಧೆಯಲ್ಲಿ ಭಾಗವಹಿಸುತ್ತವೆ. ಕರ್ನಾಟಕದ ರಂಗಭೂಮಿಯ ಒಟ್ಟು ಬೆಳವಣಿಗೆಯನ್ನು ಗಮನಿಸುವ ನಿಟ್ಟಿನಲ್ಲಿ 'ರಂಗಭೂಮಿ' ನಡೆಸುವ ಈ ಸ್ಪರ್ಧೆ ಅತಿಮುಖ್ಯವೆನಿಸುತ್ತದೆ. 'ಜೋಕುಮಾರ ಸ್ವಾಮಿ', 'ನಾಯಿಕತೆ', 'ಸಂಕ್ರಾಂತಿ', 'ಸೂರ್ಯಶಿಕಾರಿ'ಯಂಥ ನಾಟಕಗಳನ್ನಾಡುತ್ತಾ ನಿರಂತರ ರಾಜ್ಯ ಸ್ಪರ್ಧೆಗಳನ್ನು ಮಾಡಿಸುತ್ತಾ ಉಡುಪಿಯ 'ರಂಗಭೂಮಿ ತಂಡ'ವು ಮುಂದುವರಿಯುತ್ತಾ ಬಂದಿದೆ. ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗಳಾದ ಆನಂದ ಗಾಣಿಗರು, ಕರ್ನಾಟಕ ನಾಟಕ ಅಕಾಡೆಮಿಯ ಪ್ರಶಸ್ತಿ ವಿಜೇತರು, ಒಂದು ರಂಗತಂಡವನ್ನು ಅದರ ಹುಟ್ಟಿನಿಂದ ಮೊದಲ್ಗೊಂಡು ಇಷ್ಟೊಂದು ಸುದೀರ್ಘ ಕಾಲ ನಡೆಸುತ್ತಾ ಬಂದಿದ್ದಾರೆ.

೭೦ನೆಯ ದಶಕದ ಕೊನೆಯಲ್ಲಿ ಉಡುಪಿಯಲ್ಲಿ ಹುಟ್ಟಿಕೊಂಡ 'ರಥಬೀದಿ ಗೆಳೆಯರು' ತಂಡವು ಮಂದರ್ತಿ, ತಾಮ್ರಪತ್ರ, ಸದ್ದು ವಿಚಾರಣೆ ನಡೆಯುತ್ತಿದೆ, ಮೀಡಿಯಾ, ಯಯಾತಿಗಳಂತಹ ನಾಟಕಗಳನ್ನು ಪ್ರದರ್ಶಿಸಿ, ಜಿಲ್ಲೆಯ ಪ್ರಮುಖ ತಂಡಗಳಲ್ಲೊಂದಾಗಿ ಮೆರೆಯಿತು. ರಂಗಭೂಮಿ ವಿಚಾರಗೋಷ್ಠಿಗಳನ್ನು ಪ್ರಭಾವಶಾಲಿಯಾಗಿ ನಡೆಸುತ್ತಾ ಬಂದಿರುವ 'ರಥಬೀದಿಗೆಳೆಯ'ರಲ್ಲಿ ಇತ್ತೀಚೆಗೆ ನಾಟಕ ನಿರ್ಮಾಣ ಕಸುವು ಕುಂದಿದ್ದು ಕಂಡುಬರುತ್ತದೆ. ಆದರೆ ವಿಚಾರಸಂಕಿರಣಗಳ ನಿರಂತರತೆಗೆ ಮಾತ್ರ ಯಾವ ಚ್ಯುತಿಯೂ ಬಂದಿಲ್ಲ. ಇತ್ತೀಚೆಗೆ ವರ್ಷದುದ್ದಕ್ಕೆ ಅನೇಕ ಕಾರ್ಯಕ್ರಮಗಳನ್ನು ರಂಗಕ್ಕೆ ತರುವ ಪ್ರಯತ್ನದಲ್ಲಿದ್ದು ಗಿರೀಶ್ ಕಾರ್ನಾಡರ 'ಅಗ್ನಿ ಮತ್ತು ಮಳೆ' ಯನ್ನು ಅದರ ಮೊದಲ ಕೊಡುಗೆಯಾಗಿ ಪ್ರಯೋಗಿಸಿದ ಕೀರ್ತಿ ಈ ಸಂಸ್ಥೆಯದ್ದಾಗಿದೆ.

'ಸಮೂಹ' ತಂಡವು ಉಡುಪಿಯಲ್ಲಿ ಉದ್ಯಾವರ ಮಾಧವ ಆಚಾರ್ಯರನ್ನು ಮುಂದಿಟ್ಟುಕೊಂಡು ಪರಂಪರೆಯ ಯಕ್ಷಗಾನಕ್ಕೆ ಆಧುನಿಕ ರಂಗಭೂಮಿಯ ಮೆರಗನ್ನು ನೀಡುತ್ತಾ ಭರತನಾಟ್ಯದ ಕಸುವನ್ನು ತುಂಬುತ್ತಾ ರೂಪಕ ರೂಪದ ಪ್ರಯೋಗಗಳನ್ನು ಮಾಡಿತು. ಬಿ.ಎಂ. ಶ್ರೀಯವರ 'ಅಶ್ವತ್ಥಾಮ' ಗೋವಿಂದ ಪೈಯವರ 'ಹೆಬ್ಬೆರಳು', ಧರ್ಮವೀರ ಭಾರತೀ ಅವರ 'ಅಂಧಯುಗ', ಪು.ತಿ.ನ. ಅವರ 'ಸತ್ಯಾಯನ ಹರಿಶ್ಚಂದ್ರ' ಮೊದಲಾದ ಕೃತಿಗಳನ್ನು ಅಂತಹ ಪ್ರಯೋಗಗಳಿಗೆ ಅಳವಡಿಸಿಕೊಂಡಿತು. ನಾಟಕರಂಗ, ಯಕ್ಷರಂಗದ ಹದವರಿತ ಪಾಕಕ್ಕೆ ಅಲ್ಲಲ್ಲಿ ಭರತನಾಟ್ಯದ ಲೇಪವನ್ನು ಕೊಟ್ಟು ಉದ್ಯಾವರ ಮಾಧವ ಆಚಾರ್ಯರು ವಿಶಿಷ್ಟ ಶೈಲಿಯೊಂದನ್ನು ಹುಟ್ಟುಹಾಕಿದರು.

ಮಣಿಪಾಲದ ಸಿಂಡಿಕೇಟ್ ಬ್ಯಾಂಕ್‌ನ 'ಸಿರಂತನ ಕಲಾವಿದರು', ಬೋಳುವಾರು ಮಹಮ್ಮದ್ ಕುಂಞ ಅವರ ನೇತೃತ್ವದಲ್ಲಿ 'ದಂಗೆಯ ಮುಂಚಿನ ದಿನಗಳು', 'ಮುದುಕ ಹೇಳಿದ ಕಥೆ', 'ರಾವಿನದಿ ದಂಡೆ' ನಾಟಕ ಲಹರಿ ಹಿಡಿಸುವ ಶಕ್ತಿ ಪಡೆದಿತ್ತು. ಬ್ಯಾಂಕ್ ಉದ್ಯೋಗಿಗಳು ರಂಗತಂಡ ಕಟ್ಟಿ ಬೈಂದೂರಿನ 'ಲಾವಣ್ಯ' ತಂಡ ಕೂಡ ಕಳೆದೆರಡು ದಶಕಗಳಿಂದ ಸಾಂಪ್ರದಾಯಿಕ ಬಗೆಯ ನಾಟಕಗಳನ್ನಾಡುತ್ತಾ ಬೆಳೆದುಬಂದ ತಂಡ. ಇತ್ತೀಚೆಗೆ ತಮ್ಮ ಚರ್ಯೆಯನ್ನು ತುಸು ಬದಲಾಯಿಸಿಕೊಂಡು ಸುರೇಶ ಅನಗಳ್ಳಿಯಂತಹ ನಿರ್ದೇಶಕರನ್ನು ಕರೆಸಿಕೊಂಡು ನಾಟಕವಾಡುತ್ತಾ, ನಾಟಕೋತ್ಸವ ಮಾಡಿಸುತ್ತಾ ಹೊಸ ಬಗೆಯ ರಂಗವೇದಿಕೆಯನ್ನು ನಿರ್ಮಾಣಗೊಳಿಸಿದೆ. 'ನಾಯಿಕತೆ'ಯ ಮೂಲಕ ರಾಜ್ಯಮಟ್ಟದ ಪ್ರಶಸ್ತಿಯನ್ನು (೧೯೯೯) ಪಡೆದಿದೆ.

**ರಂಗಪತ್ರಿಕೆಗಳು :** ಉದ್ಯಾವರ ಮಾಧವ ಆಚಾರ್ಯರು ಉಡುಪಿಯಿಂದ ಪ್ರಕಟಿಸುತ್ತಿದ್ದ ಅನಿಯತಕಾಲಿಕ 'ರಜತರಂಗ' ಹೆಚ್ಚುಕಾಲ ಬಾಳಲಿಲ್ಲ. ಸಂಕೇತ ಕಲಾವಿದರು 'ಸಂಕೇತ' ಎಂಬ ಕಿರುಹೊತ್ತಿಗೆಯೊಂದನ್ನು ೧೯೯೭ರಿಂದ ೧೯೯೯ರ ತನಕ ಪ್ರಕಟಿಸಿದರು.

**ಕಾಲೇಜು ರಂಗಭೂಮಿ:** ಜಿಲ್ಲೆಯ ಕಾಲೇಜು ರಂಗಭೂಮಿಯನ್ನು ಇಂದಿನ ಪರಿಸ್ಥಿತಿಗೆ ತುಲನೆ ಮಾಡಿ ನೋಡಿದರೆ ಎಪ್ಪತ್ತರ ದಶಕದಲ್ಲಿ ಸಾಕಷ್ಟು ಕೆಲಸ ಮಾಡಿದೆಯೆನ್ನಬೇಕು. ಮಣಿಪಾಲದ ಕೆ.ಎಂ.ಸಿ.ಯ 'ಕೊಪ್ಪಿಕರ್ ಮೆಮೋರಿಯಲ್ ನಾಟಕ ಸ್ಪರ್ಧೆ' ಎಂಭತ್ತರ ದಶಕದಲ್ಲಿ ನಿಂತುಹೋದುದು ಕಾಲೇಜು ರಂಗಭೂಮಿಗೆ ತುಂಬಲಾರದ ನಷ್ಟವೆನಿಸಿತು. ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನ ಪ್ರಾಧ್ಯಾಪಕರಲ್ಲಿ

ಬಿ.ಆರ್. ನಾಗೇಶ್, ರಾಮದಾಸ್, ಉದ್ಯಾವರ ಮಾಧವ ಆಚಾರ್ಯ, ಡಿ.ಜಿ.ಹೆಗಡೆ, ನಟರಾಜ ದೀಕ್ಷಿತ್, ಆರ್. ಎಲ್.ಭಟ್, ಮೊದಲಾದ ಸಮರ್ಥ ರಂಗಕರ್ಮಿಗಳಿದ್ದರು. 'ಪೂರ್ಣಪ್ರಜ್ಞ ಕಲಾವಿದರು' ಎಂಬ ತಂಡ ನಿರ್ಮಿಸುವಲ್ಲಿ ಅವರೆಲ್ಲ ಸಹಕರಿಸಿದರು. ಅದರ ಪರಿಣಾಮವಾಗಿ ಕುಮಾರಿ ಸುಜಾತ ಯಾದವಾಡ, ವಿನಯಾ ಭಟ್ (ವಿನಯಾ ಪ್ರಸಾದ್), ವೀಣಾ ಬನ್ನಂಜೆ ಮೊದಲಾದ ನಟಿಯರು ರೂಪುಗೊಂಡರು.

೧೯೭೮ರಲ್ಲಿ ಕುಂದಾಪುರದಲ್ಲಿ ಶ್ರೀ ಜಯಪ್ರಕಾಶ್ ಮಾವಿನಕುಳಿ, ಶ್ರೀ ವಸಂತ ಬನ್ನಾಡಿ ಮುಂತಾದ ರಂಗಕರ್ಮಿಗಳ ನಾಯಕತ್ವದಲ್ಲಿ ಭಂಡಾರ್‌ಕಾರ್ಸ್ ಕಾಲೇಜನ್ನು ಕೇಂದ್ರವಾಗಿಟ್ಟುಕೊಂಡು 'ಅಸಂಗತ' ತಂಡ ಹುಟ್ಟಿಕೊಂಡಿತು. 'ಕೊಡೆಗಳು', 'ಬದುಕ ಮನ್ನಿಸು ಪ್ರಭುವೆ', 'ಗಿಳಿಯು ಪಂಜರದೊಳಿಲ್ಲ' ಮುಂತಾದ ನಾಟಕಗಳು ಆ ತಂಡಕ್ಕೆ ಒಂದು ಭದ್ರ ನೆಲೆ ಒದಗಿಸಿತು. ೧೯೮೨ರಲ್ಲಿ 'ಅಸಂಗತ' ತಂಡವು ಗಮನಾರ್ಹ ವಿಚಾರಸಂಕಿರಣವೊಂದನ್ನು ನಡೆಸಿತು. ಒಂದು ರಾಜ್ಯಮಟ್ಟದ ನಾಟಕೋತ್ಸವವು ಅದೇ ಕಾಲಘಟ್ಟದಲ್ಲಿ ನಡೆಯಿತು. 'ಅಸಂಗತ' ೧೯೮೨ರ ನಂತರ ಕ್ಷಯಿಸುತ್ತಾ ಬಂದು ಮರೆಯಾಯಿತು.

೧೯೮೦ರಲ್ಲಿ ಕುಂದಾಪುರದಲ್ಲಿ 'ಜನರಂಗ' ಎಂಬ ತಂಡ ವಸಂತ ಬನ್ನಾಡಿಯವರ ನಾಯಕತ್ವದಲ್ಲಿ ಪ್ರಾರಂಭಗೊಂಡು 'ಕತ್ತಲೆ ದಾರಿದೂರ', 'ಕುರಿ', 'ಚಾಕ್ ಸರ್ಕಲ್' ನಂತಹ ನಾಟಕಗಳನ್ನಾಡಿ ಮೆಚ್ಚುಗೆ ಗಳಿಸಿತು. 'ಚಾಕ್ ಸರ್ಕಲ್' ಮೂಲಕ ಶ್ರೀ ವಸಂತ ಬನ್ನಾಡಿ ಸಮರ್ಥ ನಿರ್ದೇಶಕರಾಗಿ ಸ್ಥಾಪನೆಗೊಂಡರು. ಅವರ ನೇತೃತ್ವದ 'ಬಹುರೂಪಿ ಟ್ರಸ್ಟ್', 'ಜನಶತ್ರು' ನಾಟಕಗಳು ಜನಮನ್ನಣೆ ಪಡೆಯಿತು. ಬಹುರೂಪಿ ಟ್ರಸ್ಟ್ ಸಿನಿಮಾ, ನಾಟಕ ಮುಂತಾದ ಮಾಧ್ಯಮಗಳಲ್ಲಿ ದುಡಿಯುವ ಸಾರ್ವಜನಿಕ ಸಂಸ್ಥೆ.

ಕುಂದಾಪುರದಲ್ಲಿ ೧೯೯೭ರಲ್ಲಿ ಪ್ರಾರಂಭವಾದ 'ರಂಗ ಅಧ್ಯಯನ ಕೇಂದ್ರ' ಶ್ರೀ ವಸಂತ ಬನ್ನಾಡಿಯವರ ಕನಸಿನ ಕೂಸು. ನಾಡಿನ ಮುಖ್ಯ ರಂಗಕರ್ಮಿಗಳಿಂದ ಶಿಬಿರಾರ್ಥಿಗಳಿಗೆ ತರಬೇತಿ ಕೊಡಿಸುತ್ತಾ ದೇಶವಿದೇಶಗಳ ರಂಗಭೂಮಿಯ ಮಾಹಿತಿ ನೀಡುತ್ತಾ, ನಾಟಕಗಳನ್ನಾಡಿಸುತ್ತಾ, ನಿಖರವಾದ ಗುರಿಯತ್ತ ಅವರನ್ನು ಕೊಂಡೊಯ್ಯಲು 'ರಂಗ ಅಧ್ಯಯನ ಕೇಂದ್ರ' ಬದ್ಧವಾಗಿದೆ. ಕರಾವಳಿ ಜಿಲ್ಲೆಯಲ್ಲಿ ಈ ರೀತಿಯ ರಂಗ ಅಧ್ಯಯನ ಕೇಂದ್ರ ಇನ್ನೊಂದಿಲ್ಲ. ಆಗೀಗ ನಡೆಸುವ ರಂಗ ತರಬೇತಿ ಶಿಬಿರ, ಸುಬ್ರಹ್ಮಣ್ಯ ಕಾಲೇಜಿನಲ್ಲಿ ಪರಿಣಿತ ನಿರ್ದೇಶಕರ ಸಹಾಯದಿಂದ 'ಕುಸುಮ ಸಾರಂಗ ತಂಡ' ಪ್ರತಿವರ್ಷ ಸಿದ್ಧಪಡಿಸುವ ಗುಣಮಟ್ಟವುಳ್ಳ ನಾಟಕಗಳೂ ಹಾಗೂ ಕುಂದಾಪುರದ 'ರಂಗ ಅಧ್ಯಯನ ಕೇಂದ್ರ'ಗಳೇ ಸದ್ಯದ ಕಾಲೇಜು ರಂಗಭೂಮಿಯ ರಂಗತಂಡಗಳು.

**ಮಕ್ಕಳ ರಂಗಭೂಮಿ :** ಈಗ ಐ.ಕೆ. ಬೊಳುವಾರು, ಗೋಪಾಡ್ಕರ್, ಮೂರ್ತಿ ದೇರಾಜೆ, ಜೀವನ್ ರಾಮ್, ಎಂ.ಸಿ. ರಾಮು ಮೊದಲಾದ ಕೆಲವರಷ್ಟೇ ಅವಿಭಜಿತ ದ.ಕ.ಜಿಲ್ಲೆಯಲ್ಲಿ ಮಕ್ಕಳ ರಂಗಭೂಮಿಯಲ್ಲಿ ಸಕ್ರಿಯ ನಿರ್ದೇಶಕರಾಗಿ ಉಳಿದುಕೊಂಡಿದ್ದಾರೆ.

**ನಾಟಕ ಕೃತಿಗಳು:** ಎಂಭತ್ತರ ದಶಕದಲ್ಲಿ ರಾಮದಾಸರು 'ತಲೆದಂಡ', 'ಸಾಕ್ಷಾತ್ಕಾರ' ಮುಂತಾದ ಉತ್ತಮ ಮಟ್ಟದ ನಾಟಕ ರಚಿಸಿದ್ದಾರೆ. ಹಾಸ್ಯಪ್ರಧಾನವಾದ ನಾಟಕಗಳನ್ನು ಬರೆದು ಹೆಸರು ಗಳಿಸಿದ ಕವಿ, ನಾಟಕಕಾರ ಎಚ್. ಡುಂಡಿರಾಜರು 'ಓಡುವವರು', 'ಹುಡುಕಾಟ', ' ಆಧ್ವಾನಪುರ', ' ಅಜ್ಜಿಕತೆ' ನಾಟಕಗಳನ್ನು ರಚಿಸಿದ್ದಾರೆ. ಆಕಾಶವಾಣಿಯ ರಾಷ್ಟ್ರಮಟ್ಟದ ಹಾಸ್ಯನಾಟಕ ಸ್ಪರ್ಧೆಯಲ್ಲಿ 'ನಾಳೆಬನ್ನಿ' ನಾಟಕಕ್ಕೆ ಪ್ರಥಮ ಬಹುಮಾನ ಪಡೆದರು.

ಮಹಿಳೆಯರಲ್ಲಿ ನಾಟಕ ಬರೆದು ಹೆಸರುಗಳಿಸಿದವರ ಸಂಖ್ಯೆ ಅತಿ ಕಡಿಮೆಯಾದರೂ ವೈದೇಹಿಯವರು ಮಕ್ಕಳಿಗೂ ಬರೆದ ನಾಟಕಗಳು ರಾಜ್ಯಾದ್ಯಂತ ಬೇಡಿಕೆ ಪಡೆದಿವೆ. ಸೂರ್ಯಬಂದ, ಝುಂಝುಂ ಆನೆ, ಧಾಮ್‌ಧೂಮ್, ಸುಂಟರಗಾಳಿ, ಮೂಕನ ಮಕ್ಕಳು, ನಾಯಿಮರಿ, ಹಕ್ಕಿಹಾಡು ಮುಂತಾದವು ನಾಡಿನ ಪ್ರಮುಖ ರಂಗತಂಡಗಳ ಮೂಲಕ ಪ್ರದರ್ಶನ ಕಂಡಿವೆ.

ಉಡುಪಿಯ ರಂಗಭೂಮಿ ಹಾಗೂ ಉದಯವಾಣಿ ಪತ್ರಿಕೆಯವರು ಜಂಟಿಯಾಗಿ ಕೊಂಕಣಿ ನಾಟಕ ಸ್ಪರ್ಧೆ ನಡೆಸುತ್ತಾ ಬಂದಿದ್ದಾರೆ. ಕುಂದಾಪುರದ ಕೋಟೇಶ್ವರದಲ್ಲಿ 'ಚೇತನ ಕಲಾರಂಗ'ವು ಕಳೆದ ೨೫ ವರ್ಷಗಳಿಂದ ರಂಗ ಕಾಯಕದಲ್ಲಿ ತೊಡಗಿದೆ. ಹವ್ಯಾಸಿ ರಂಗಭೂಮಿಯನ್ನೇ ಉದ್ದೇಶಿಸಿ ರಾಜ್ಯಮಟ್ಟದ ನಾಟಕಸ್ಪರ್ಧೆ ಪ್ರತಿವರ್ಷವೂ ಏರ್ಪಡಿಸುತ್ತಿದೆ. ನಾಟಕ ಸ್ಪರ್ಧೆಯಲ್ಲಿ ಸಾಮೂಹಿಕ ನಾಟಕಗಳಿರುವುದಿಲ್ಲ. ಐತಿಹಾಸಿಕ, ಪೌರಾಣಿಕ ಹಾಗೂ ಜನಪದ ನಾಟಕಗಳಿಗೆ ಅವಕಾಶ.

**ರಂಗಭೂಮಿ ಕಲಾವಿದರು :** ಬಸರೂರಿನ ಆನಂದರು (೧೯೨೭) ರಂಗ ರತ್ನಾಕರ ಎಂಬ ಬಿರುದನ್ನು ಪಡೆದ ರಂಗ ಕಲಾವಿದರು. ವಿಶ್ವಾಮಿತ್ರ, ವಿದ್ಯಾರಣ್ಯ, ದಿಲೇರ್ ಖಾನ್ ಅವರಿಗೆ ಕೀರ್ತಿ ತಂದ ಪಾತ್ರಗಳು. ಅವರು ಚಿತ್ರರಂಗದಲ್ಲೂ ಅಭಿನಯಿಸಿದ್ದಾರೆ. ಗಣಪತಿ ಭಟ್ಟರದು ರಂಗಭೂಮಿಯಲ್ಲಿ ಅವಿಸ್ಮರಣೀಯವಾದ ಹೆಸರು. ನಾರಾಯಣ ಶ್ಯಾನುಭೋಗರು (೧೯೩೪–೧೯೯೨) ರಂಗಭೂಮಿಯಲ್ಲಿ ನಾಲ್ಕು ದಶಕಗಳಿಗೂ ಹೆಚ್ಚು ಕಾಲ ಸೇವೆ ಸಲ್ಲಿಸಿದ್ದಾರೆ. ನಾಣ್ಣ ಎಂದೇ ಜನಪ್ರಿಯವಾಗಿದ್ದ ಅವರು ಹರಿಶ್ಚಂದ್ರ, ಟಿಪ್ಪುಸುಲ್ತಾನ್ ಪಾತ್ರಗಳನ್ನು ಅದ್ಭುತವಾಗಿ ಅಭಿನಯಿಸುತ್ತಿದ್ದರು. ನಾಣ್ಣ ಮಗನ ಮರಣದ ದಿನವೂ ನಾಟಕ ಪ್ರದರ್ಶಿಸುವ ಮೂಲಕ ರಂಗನಿಷ್ಠೆಯನ್ನು ಮೆರೆದವರು. ಬದುಕಿನ ಕೊನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡರು. ಕೋಟೇಶ್ವರದ ಸೀತಾರಾಮ ಐತಾಳರು ಹತ್ತನೆಯ ವಯಸ್ಸಿನಲ್ಲಿಯೇ ರಂಗಭೂಮಿ ಪ್ರವೇಶಿಸಿದರು. ಅವರದು ಸ್ತ್ರೀ ಪಾತ್ರಗಳಲ್ಲಿ ಅದ್ಭುತವಾಗಿ ಅಭಿನಯಿಸಬಲ್ಲ ಅಭಿಜಾತ ಪ್ರತಿಭೆ. ಅದಕ್ಕೆ ಹೊಂದುವ ಕಂಠಶ್ರೀ ಅವರಿಗಿತ್ತು. ಮದರಾಸು ಕನ್ನಡ ಸಂಘದಿಂದ ನಿರಂತರವಾಗಿ ನಾಟಕಗಳನ್ನಾಡಿದ ಕೀರ್ತಿ ಅವರದು. ಅವರು ಸಮಾಜ ಸೇವಕರೂ ಆಗಿದ್ದರು. ಕೋಟೇಶ್ವರದವರೇ ಆದ ಕೆ.ಎಸ್.ಸುಬ್ಬಣ್ಣ ಉಡುಪರು ರಂಗಭಯಂಕರ, ನಟನಕಲಾಕೇಸರಿ ಮೊದಲಾದ ಬಿರುದುಗಳನ್ನು ಪಡೆದು ಐದು ದಶಕಗಳ ಕಾಲ ರಂಗಭೂಮಿಯಲ್ಲಿ ಸೇವೆ ಸಲ್ಲಿಸಿದ ಅಗ್ಗಳಿಕೆಗೆ ಪಾತ್ರರು. ಬೈಂದೂರು ಕ್ಷೇತ್ರದ ಶಾಸಕ ಜಿ.ಎಸ್. ಆಚಾರ್ (೧೯೩೨–೧೯೯೩: ಜಿ. ಸುಬ್ರಾಯಾಚಾರ್) ವೃತ್ತಿ ರಂಗಭೂಮಿಯ ನಟರಿಗೆ ಕಡಿಮೆಯಿಲ್ಲದಂತೆ ಅಭಿನಯಿಸಬಲ್ಲ ಪ್ರತಿಭಾವಂತರು. ಎಲ್ಲ ಕಲಾವಿದರ ಮೆಚ್ಚುಗೆ ಗಳಿಸಿ ರೂಪರಂಗದ ಹಿರಿಯಣ್ಣ ಎನಿಸಿದ್ದರು. ಸಮರ್ಥ ಲೇಖಕರು ಆಗಿದ್ದರು. ಮಂಗಳೂರಿನ ಹೋಟೆಲ್ ಉದ್ಯಮಿ ಕೆ.ಸುರೇಂದ್ರ ಪೈ ಉತ್ತಮ ಕಲಾವಿದರು. ಲಕ್ಷ್ಮೀ ವೆಂಕಟೇಶ ಕೊಂಕಣಿ ನಾಟಕ ಸಭಾ, ರೂಪರಂಗ, ರೂಪಕಲಾ, ಗೆಳೆಯರ ಬಳಗ ಮೊದಲಾದ ವಿವಿಧ ಸಂಸ್ಥೆಗಳ ನಾಟಕಗಳಲ್ಲಿ ಅಭಿನಯಿಸಿದ ಕೀರ್ತಿ ಅವರದು. ಕುಂದಾಪುರದ ರಾಜೇಂದ್ರ ಕಾರಂತರು ಬೆಂಗಳೂರಿನ ಸಂದನ, ನಟರಂಗ, ಚಿತ್ತಾರ ಮುಂತಾದ ತಂಡಗಳೊಂದಿಗೆ ಕೂಡಿಕೊಂಡು ನಟರಂಗದಲ್ಲಿ ಅಭಿನಯಿಸಿದ್ದಾರೆ. ನಾಟಕಗಳ ಲೇಖಕರು, ಅನುವಾದಕರು ಆಗಿದ್ದಾರೆ.

**ಆನಂದಗಾಣಿಗ ಕೆ.:** ನಟರಾಗಿ–ನಿರ್ದೇಶಕರಾಗಿ–ಸಂಘಟಕರಾಗಿ ಉಡುಪಿಯಲ್ಲಿ ತುಂಬ ಜನಪ್ರಿಯರಾಗಿರುವ ಹೆಸರೆಂದರೆ ಕೆ. ಆನಂದಗಾಣಿಗರದ್ದು. ಮೊದಲು ರಂಗಭೂಮಿಗೆ ಪದಾರ್ಪಣೆ ಮಾಡಿದ್ದು ಪ್ರೈಮರಿ ಶಾಲೆಯಲ್ಲಿದ್ದಾಗಲೇ, ೧೯೫೭ರಲ್ಲಿ ಉಡುಪಿಯ ಜೀವವಿಮಾ ನಿಗಮದ ವಿಭಾಗ ಕಾರ್ಯಾಲಯದಲ್ಲಿ ನಾಟಕ ತಂಡವೊಂದನ್ನು ಕಟ್ಟಿದರು. ಅಂಬಲಪಾಡಿಯ ಹವ್ಯಾಸಿ ಯಕ್ಷಗಾನ ಸಂಘ, ಕಡೇಕಾರಿನ ನಿಡಂಬೂರು ಯುವಕ ಮಂಡಳಿ ಮುಂತಾದ ಸಂಸ್ಥೆಗಳ ಜನಕರಾದ ಆನಂದಗಾಣಿಗರು ೧೯೬೫ರಲ್ಲಿ ಉಡುಪಿಯಲ್ಲಿ 'ರಂಗಭೂಮಿ' ಎಂಬ ಹವ್ಯಾಸಿ ನಾಟಕ ತಂಡ ಕಟ್ಟಿದವರ ಜೊತೆ ದುಡಿದರು. ತುಳು ಚಿತ್ರಗಳಲ್ಲೂ ಅಭಿನಯಿಸಿದರು. ಬಹಳಷ್ಟು ನಾಟಕ ಸ್ಪರ್ಧೆಗಳಲ್ಲಿ ಶ್ರೇಷ್ಠ ನಟ ಪ್ರಶಸ್ತಿಯನ್ನು ಗಳಿಸಿರುವ ಗಾಣಿಗರು 'ರಂಗಭೂಮಿ' ತಂಡಕ್ಕೆ ಹೊಸ ಉಸಿರು ಮೂಡಿಸುವಲ್ಲಿ, ಆ ತಂಡದ 'ಬ್ಯಾನರ್' ಭದ್ರಬುನಾದಿಯ ಮೇಲೆ ನಿಲ್ಲಲು ಸಾಕಷ್ಟು ಕಾರಣರಾಗಿದ್ದಾರೆ. ಗಾಣಿಗರು ರಂಗಭೂಮಿಯ ಮೇಲೆ ನಟ–ನಿರ್ದೇಶಕ, ಅಂಬಲಪಾಡಿಯ ಲಕ್ಷ್ಮೀಜನಾರ್ಧನ ಯಕ್ಷಗಾನ ಕಲಾಮಂಡಳಿಯ ಅಧ್ಯಕ್ಷ. ಕಡೆಕಾರು ನಿಡಂಬೂರು ಯುವಕ ಮಂಡಲದ ಮುಖ್ಯ ಆಧಾರಸ್ತಂಭ ಆನಂದರು. ಹೀಗೆ ಬಹಳಷ್ಟು ಸಂಘ ಸಂಸ್ಥೆಗಳ ಜೀವನಾಡಿಯೂ ಆಗಿರುವ ಆನಂದಗಾಣಿಗರು ಆಕಾಶವಾಣಿಯ ನಾಟಕಗಳಲ್ಲಿಯೂ ಅಭಿನಯಿಸಿದ್ದಾರೆ. ೧೯೮೪ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಸದಸ್ಯರು. ಕರ್ನಾಟಕ ನಾಟಕ ರಂಗಾಯಣದ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದಾರೆ.

**ರಾಮದಾಸ್:** ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲೂಕು ಉಚ್ಚಿಲ ಗ್ರಾಮದಲ್ಲಿ ಹುಟ್ಟಿದ ರಾಮದಾಸ್ ಚಿಕ್ಕಂದಿನಿಂದ ನಾಟಕದಲ್ಲಿ ಆಸಕ್ತಿ ೧೯೬೬ರ ಹೊತ್ತಿಗೆ ತನ್ನ ಅಭಿನಯದಿಂದ ನಾಟಕ ರಚನಾ ಸಾಮರ್ಥ್ಯದಿಂದ ರಾಮದಾಸ್ ಪ್ರಖ್ಯಾತಿ ಪಡೆದರು. ನಟ–ನಾಟಕಕಾರ–ನಿರ್ದೇಶಕ ಹೀಗೆ ರಾಮದಾಸ್ ಎಲ್ಲ ರಂಗದಲ್ಲೂ ಪರಿಣಿತಿ ಪಡೆದರು. ದ.ರಾ.ಬೇಂದ್ರೆಯವರ ಸಾಯೋ ಆಟ, ಕಾರ್ನಾಡರ ಯಯಾತಿ. ಲಂಕೇಶರ ಸಂಕ್ರಾಂತಿ, ಕಂಬಾರರ ಜೋಕುಮಾರಸ್ವಾಮಿ (ತುಳು ಅನುವಾದ), ನಾಯಿಕತೆ, ರಾ.ಕ.ನಾಯಕರ ಒಡಿಸ್ಸೀ; ತಲೆದಂಡ, ಹೇಡಿಗಳು , ಮನಸ್ಸಾಕ್ಷಿ ಇವರು ನಿರ್ದೇಶಿಸಿದ ನಾಟಕಗಳು. ಇವರ ಬದುಕಿನಲ್ಲಿ ನಟನೆ ಆರಂಭವಾದುದು 'ದ ಬಿಷಪ್ ಕ್ಯಾಂಡ್ಲ್ ಸ್ಟಿಕ್ಸ್' ನ ಇಂಗ್ಲೀಷ್ ನಾಟಕದಿಂದ ಈವರೆಗೆ ಇಪ್ಪತ್ತೈದಕ್ಕೂ ಹೆಚ್ಚು ನಾಟಕಗಳಲ್ಲೂ ಅಭಿನಯಿಸಿದ್ದಾರೆ. ತುಘಲಕ್, ಈಡಿಪಸ್, ಸಂಕ್ರಾಂತಿ, ಹೆಬ್ಬೆರಳು, ಹರಕೆಯ ಕುರಿ, ಅಂಧಯುಗ ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಇವರ 'ಇದು ಭಾರತ' ನಾಟಕಕ್ಕೆ ೧೯೬೬ರ ಕರ್ನಾಟಕ ಸಾಹಿತ್ಯ ಅಕಾಡೆಮಿ ಬಹುಮಾನ ಬಂದಿದೆ. ಈವರೆಗೆ ಏಳೆಂಟು ನಾಟಕ ಬರೆದಿದ್ದಾರೆ. ಉಡುಪಿಯ 'ರಂಗಭೂಮಿ'ಯ ಸಕ್ರಿಯ ಸದಸ್ಯರಾಗಿ ದುಡಿಯುತ್ತಿದ್ದಾರೆ. ಉಡುಪಿಯ ಪೂರ್ಣಪ್ರಜ್ಞ ಕಾಲೇಜಿನಲ್ಲಿ ಕನ್ನಡ ವಿಭಾಗದ ರೀಡರ್ ಆಗಿದ್ದರು. ಬಹಳಷ್ಟು ರಂಗಶಿಬಿರಗಳಲ್ಲಿ ವಿಚಾರ ಸಂಕಿರಣಗಳಲ್ಲಿ ಭಾಗವಹಿಸಿ ಪ್ರಬಂಧ ಮಂಡಿಸಿದ್ದಾರೆ. ಉಪನ್ಯಾಸಗಳನ್ನು ನೀಡಿದ್ದಾರೆ.

**ಉದ್ಯಾವರ ಮಾಧವಾಚಾರ್ಯ:** ಕತೆಗಾರ, ಕವಿ ಮತ್ತು ರಂಗತಜ್ಞರಾದ ಉದ್ಯಾವರ ಮಾಧವ ಆಚಾರ್ಯ ಉಡುಪಿ ಜಿಲ್ಲೆಯ ಉದ್ಯಾವರದವರು. ಬೆಂಗಳೂರು ವಿಶ್ವವಿದ್ಯಾಲಯದಿಂದ ೧೯೬೫ರಲ್ಲಿ ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿ ಪಡೆದು ಕುಂದಾಪುರ ಮತ್ತು ಉಡುಪಿಯಲ್ಲಿ ಉಪನ್ಯಾಸಕರಾಗಿ ಮತ್ತು ಪ್ರಾಚಾರ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಹವ್ಯಾಸಿ ಯಕ್ಷಗಾನ ಕಲಾವಿದರು ಮತ್ತು ರಂಗಭೂಮಿಯ ಬಗ್ಗೆ ವಿಶೇಷ ಒಲವುಳ್ಳ ಮಾಧವಾಚಾರ್ಯರು ಕಲ್ಕತ್ತ, ದೆಹಲಿ, ತ್ರಿಚೂರುಗಳಲ್ಲಿ ನಡೆದ ರಂಗಕಮ್ಮಟಗಳಲ್ಲಿ ಭಾಗವಹಿಸಿದ್ದಾರೆ. ಉಡುಪಿ ರಂಗಭೂಮಿಗೆ 'ಸೂರ್ಯಾಸ್ತದಿಂದ ಸೂರ್ಯೋದಯದವರೆಗೆ', 'ಸಾಕ್ಷಾತ್ಕಾರ' ಎಂಬ ನಾಟಕಗಳನ್ನು ನಿರ್ದೇಶಿಸಿದ್ದಾರೆ. ಗೋವಿಂದ ಪೈ ಅವರ 'ಹೆಬ್ಬೆರಳು', ಶ್ರೀ ಅವರ 'ಅಶ್ವತ್ಥಾಮನ್', ಠಾಕೂರರ 'ಚಿತ್ರಾಂಗದೆ' ಪುತಿನ ಅವರ 'ಸತ್ಯಾಯನ ಹರಿಶ್ಚಂದ್ರ' ಮುಂತಾದ ನಾಟಕಗಳನ್ನು ಪ್ರಯೋಗಿಸಿದ್ದು, 'ಬ್ರಹ್ಮ ಕಪಾಲ', 'ಹಂಸದಮಯಂತಿ' ಮುಂತಾದ ಯಕ್ಷರೂಪಕಗಳನ್ನು ಸಂಯೋಜಿಸಿದ್ದಾರೆ.

ಸಾಂಪ್ರದಾಯಿಕ ಯಕ್ಷಗಾನಕ್ಕೆ ಆಧುನಿಕ ರಂಗಸ್ಪರ್ಶ ನೀಡಿ, ನೃತ್ಯ ರೂಪಕಗಳಲ್ಲಿ 'ಸಮೂಹ ನೃತ್ಯ' ಎಂಬ ಪರಿಕಲ್ಪನೆಯನ್ನು ಅವಿಷ್ಕರಿಸಿದ್ದಾರೆ. ಕಡೆಂಗೋಡ್ಲು ಶಂಕರಭಟ್ಟರ 'ಸೀತಾಪಹರಣ' ಎಂಬ ರಂಗಕೃತಿಯನ್ನು ಯಕ್ಷಗಾನ ತಾಳಮದ್ದಲೆ ತಂತ್ರಕ್ಕೊಳಪಡಿಸಿ ಸಂಯೋಜಿಸಿದ್ದಾರೆ. ದೂರದರ್ಶನದಲ್ಲಿ ಪ್ರಸಾರವಾದ 'ಗುಡ್ಡದ ಭೂತ' ಧಾರವಾಹಿಯಲ್ಲಿ ನಟಿಸಿದ್ದಾರೆ. 'ರಜತರಂಗ' ಎಂಬ ರಂಗಭೂಮಿ ಪತ್ರಿಕೆಯನ್ನು ಪ್ರಕಟಿಸಿದ್ದಾರೆ. ಮಾಧವಚಾರ್ಯರಿಗೆ ಉಡುಪಿ 'ರಂಗಭೂಮಿ' ಸಂಸ್ಥೆಯು 'ರಂಗವಿಶಾರದ' ಎಂಬ ಬಿರುದನ್ನಿತ್ತು ಗೌರವಿಸಿದೆ. ಉಡುಪಿ ತಾಲೂಕಿನ ನಾಲ್ಕನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ೧೯೯೭ರ ಸಾಲಿನ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಇವರಿಗೆ ಸಂದಿದೆ.

**ಪೆರ್ಡೂರು ರಾಮಕೃಷ್ಣ ಕಲ್ಯಾಣಿ:** ಉಡುಪಿ ಜಿಲ್ಲೆಯ ಪೆರ್ಡೂರು ಗ್ರಾಮದ ರಾಮಕೃಷ್ಣ ಕಲ್ಯಾಣಿ ಜನಿಸಿದ್ದು ೧೯೩೦ರಲ್ಲಿ. ಸುಮಾರು ೫೦ ಕ್ಕೂ ಹೆಚ್ಚು ವರ್ಷಗಳಿಂದ ರಂಗಚಟುವಟಿಕೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ನಾಟಕಗಳಲ್ಲಿ ಅಭಿನಯಿಸುವುದು ಅವರ ಪ್ರವೃತ್ತಿಯಾಗಿದೆ. ನಾಟಕ ನಿರ್ದೇಶನವೂ ಪ್ರಮುಖವಾದ ಹವ್ಯಾಸವಾಗಿದೆ. ಇವರ ಅಣ್ಣ ಅನಂತಪದ್ಮನಾಭ ಕಲ್ಯಾಣಿ ಸಹ ರಂಗ ಕಲಾವಿದರು. ಮಂಗಳೂರು ಆಕಾಶವಾಣಿಯಲ್ಲಿ ನಾಟಕ–ಯಕ್ಷಗಾನ ಕಲಾವಿದರಾಗಿ ಹಲವಾರು ನಾಟಕ–ತಾಳಮದ್ದಳೆಗಳಲ್ಲಿ ಭಾಗಿಯಾಗಿದ್ದಾರೆ. 'ಚೋಮನ ದುಡಿ', 'ಅಖಂಡ ಬ್ರಹ್ಮಚಾರಿಗಳು' , 'ಜನುಮದಾತ' ಮುಂತಾದ ಕನ್ನಡ ಸಿನಿಮಾಗಳಲ್ಲೂ 'ಕೋಟಿ ಚೆನ್ನಯ್ಯ', 'ಕರಿಯಣಿ ಕಟ್ಟಂದಿ ಕಂಡನಿ' ಇತ್ಯಾದಿ ತುಳು ಸಿನಿಮಾಗಳಲ್ಲೂ ಪಾತ್ರನಿರ್ವಹಿಸಿದ್ದಾರೆ. ೧೯೫೦ರಲ್ಲಿ 'ಕಲಾಸೇವಾ ಮಂಡಳಿ' ಎಂಬ ನಾಟಕ ಸಂಸ್ಥೆಯೊಂದನ್ನು ಸ್ಥಾಪಿಸಿ, ಬೆಳೆಸಿ ಅನೇಕ ಜಿಲ್ಲೆಗಳ ನಾಟಕ ಸ್ಪರ್ಧೆಗಳಲ್ಲಿ ಭಾಗವಹಿಸಿ ತಮ್ಮ ಹಾಸ್ಯ ಗಂಭೀರ, ಏಕ ಪಾತ್ರಾಭಿನಯಕ್ಕೆ

ಅಲ್ಲದೆ ನಾಟಕ ನಿರ್ದೇಶನಕ್ಕೂ ಪ್ರಶಸ್ತಿ ಪುರಸ್ಕಾರ ಪಡೆದಿದ್ದಾರೆ. ರಂಗಭೂಮಿಗೆ ಸಲ್ಲಿಸಿದ ಸೇವೆಗಾಗಿ ಉಡುಪಿಯ 'ರಂಗಭೂಮಿ' ಕಲಾಸಂಸ್ಥೆ ೧೯೯೬ರಲ್ಲಿ 'ವಿನೋದ ರತ್ನಾಕರ' ಎಂಬ ಬಿರುದನ್ನಿತ್ತು ಸನ್ಮಾನಿಸಿದೆ. ಕರ್ನಾಟಕ ನಾಟಕ ಅಕಾಡೆಮಿ ೧೯೯೮ರ ಸಾಲಿನ 'ಕರ್ನಾಟಕ ನಾಟಕ ಅಕಾಡೆಮಿ' ಪ್ರಶಸ್ತಿ ನೀಡಿ ಗೌರವಿಸಿದೆ.

**ಕೂರಾಡಿ ಸೀತಾರಾಮ ಶೆಟ್ಟಿ:** ಉಡುಪಿ ತಾಲೂಕಿನ ಕೂರಾಡಿ ಗ್ರಾಮದವರಾದ ಜಿ.ಸೀತಾರಾಮ ಶೆಟ್ಟಿ ಮೂಲತಃ ಅಧ್ಯಾಪಕರು. ೧೯೭೪ರಲ್ಲಿ ಹಾರಾಡಿ ಪ್ರಾಥಮಿಕ ಶಾಲೆಯಲ್ಲಿ ತಮ್ಮ ಅಧ್ಯಾಪಕ ವೃತ್ತಿಯನ್ನು ಆರಂಭಿಸಿ, ಪ್ರಸ್ತುತ ಕೂರಾಡಿ ಪ್ರೌಢಶಾಲೆಯಲ್ಲಿ ಮುಖ್ಯೋಪಾಧ್ಯಾಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ನಾಟಕ ರಚನೆ, ಅಭಿನಯ ಮತ್ತು ನಾಟಕ ನಿರ್ದೇಶನವನ್ನು ವಿಶೇಷ ಹವ್ಯಾಸವಾಗಿ ರೂಪಿಸಿಕೊಂಡವರು. ಅವರ ಅಭಿನಯದ ಪ್ರಮುಖ ನಾಟಕಗಳು – 'ತಾಯಿ', 'ಉದ್ಭವ', 'ನಾಯಿಕಥೆ', 'ಹಯವದನ', 'ಕಕೇಷಿಯನ್ ಚಾಕ್ ಸರ್ಕಲ್' ಇತ್ಯಾದಿ. ಇವರು ನಿರ್ದೇಶಿಸಿದ ಕೆಲವು ಆಧುನಿಕ ನಾಟಕಗಳು. 'ಹಯವದನ', 'ಬೇಲಿ ಮತ್ತು ಹೊಲ' , 'ಉದ್ಭವ', 'ಮುಖ್ಯಮಂತ್ರಿ', 'ಕೆರೆಗೆ ಹಾರ', 'ಕಿಂದರಜೋಗಿ', 'ಪುಣ್ಯಕೋಟಿ,' 'ಕತ್ತೆ ಮತ್ತು ಧರ್ಮ' ಮುಂತಾದವು. ಇವರ ನಾಟಕ ರಚನೆಯ ಒಂದು ವಿಶೇಷತೆಯೇನೆಂದರೆ ಮಕ್ಕಳಿಗಾಗಿಯೇ 'ಕಿಂದರಜೋಗಿ', 'ಪುಣ್ಯಕೋಟಿ', 'ಕತ್ತೆ ಮತ್ತು ಧರ್ಮ' ಮುಂತಾದ ನಾಟಕಗಳನ್ನು ಬರೆದಿದ್ದು ಹೆಚ್ಚಿನ ಕ್ರಿಯಾತ್ಮಕತೆಗಾಗಿ ಮಕ್ಕಳ ರಂಗ ತಂಡ 'ಸವಿತಾ'ವನ್ನು ಸ್ಥಾಪಿಸಿದರು. ಈಗ ಅದು 'ಸರ್ವೋದಯ ವಿದ್ಯಾರ್ಥಿ ತಂಡ' ಆಗಿ ಕಾರ್ಯನಿರ್ವಹಿಸುತ್ತಿದೆ. 'ಶಿವಭೂತಿ' 'ನಾಯಿಕಥೆ' ನಾಟಕಗಳಿಗೆ ಜೋಗದಲ್ಲಿ ಪ್ರಥಮ ಬಹುಮಾನ 'ಉದ್ಭವ' ನಾಟಕಕ್ಕೆ ದ್ವಿತೀಯ ಬಹುಮಾನ ದೊರೆತಿದೆ. 'ಕೆರೆಗೆ ಹಾರ' ನಾಟಕಕ್ಕೆ ಮಂಗಳೂರು ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ, 'ಹಯವದನ' ನಾಟಕಕ್ಕೆ ಕುಂದಾಪುರದಲ್ಲಿ ಪ್ರಥಮ ಬಹುಮಾನ ಹೀಗೆ ಬಹುಮಾನಗಳ ಸರಣಿ ಇವರ ನಿರ್ದೇಶನದ ನಾಟಕಗಳ ಪಾಲಾಗಿವೆ. ಇವರೇ ರಚಿಸಿ, ನಿರ್ದೇಶಿಸಿದ ಮಕ್ಕಳ ನಾಟಕ 'ಶಿವಭೂತಿ'ಗೆ ತುಮಕೂರಿನ ರಾಜ್ಯಮಟ್ಟದ ಮಕ್ಕಳ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನಗಳಿಸಿದೆ. ಶಿಕ್ಷಣ ಇಲಾಖೆಯ ನಾಟಕ ಸ್ಪರ್ಧೆಯಲ್ಲೂ ಪ್ರಥಮ ಸ್ಥಾನ ಪಡೆದಿರುವುದಲ್ಲದೆ ಸಂಖ್ಯೆಯಲ್ಲಿ ೩೦೦ ದಾಟಿ ಪ್ರಯೋಗಗೊಳ್ಳುತ್ತಿರುವ ಯಶಸ್ಸು ಈ ನಾಟಕದ್ದಾಗಿದೆ.

**ಸುರೇಶ್ ಆನಗಳ್ಳಿ:** ಸುರೇಶ್ ಆನಗಳ್ಳಿಯವರು ಕನ್ನಡದ ಪ್ರಮುಖ ರಂಗ ನಿರ್ದೇಶಕರಲ್ಲಿ ಒಬ್ಬರು. ಪ್ರಮುಖ ರಂಗ ವಿನ್ಯಾಸಕಾರರು. ಕುಂದಾಪುರದ ಆನಗಳ್ಳಿಯಲ್ಲಿ ೧೯೬೧ರಲ್ಲಿ ಜನಿಸಿದ ಸುರೇಶ್‌ರವರು ಭಂಡಾರ್‌ಕರ್ಸ್ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮುಗಿಸಿದರು. ಹೆಗ್ಗೋಡಿನ ನೀನಾಸಂ ರಂಗ ಶಿಕ್ಷಣ ಕೇಂದ್ರ ಹಾಗೂ ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯಲ್ಲಿ ರಂಗಕಲೆಯ ಶಾಸ್ತ್ರೀಯ ಅಭ್ಯಾಸ ನಡೆಸಿದರು. ರಂಗವಿನ್ಯಾಸದ ಹೆಚ್ಚಿನ ಅಧ್ಯಯನಕ್ಕಾಗಿ ಸುರೇಶ್ ಆನಗಳ್ಳಿಯವರು ಎನ್.ಎಸ್.ಡಿ.ಯಿಂದ ಒಂದು ವರ್ಷದ ಫೆಲೋಶಿಪ್ ಪಡೆದರಲ್ಲದೆ ರಾಷ್ಟ್ರದ ಪ್ರಸಿದ್ಧ ರಂಗ ಸಂಸ್ಥೆ ಭೋಪಾಲ್‌ನ ರಂಗಮಂಡಲಿ ರೆಪಿರ್ಟರಿ ಕಂಪನಿಯಲ್ಲಿ ತಾಂತ್ರಿಕ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದರು. ಪ್ರಸ್ತುತ ಬೆಂಗಳೂರಿನಲ್ಲಿರುವ ರಾಷ್ಟ್ರೀಯ ನಾಟಕ ಶಾಲೆಯ ಪ್ರಾದೇಶಿಕ ಸಂಪನ್ಮೂಲ ಕೇಂದ್ರದಲ್ಲಿ ಮುಖ್ಯಸ್ಥರಾಗಿದ್ದಾರೆ.

ಸಮುದಾಯದ ರಂಗ ಚಳವಳಿಯ ಮೂಲಕ ರಂಗಭೂಮಿ ಪ್ರವೇಶಿಸಿದ ಸುರೇಶ್ ಆನಗಳ್ಳಿಯವರು ಮುಂದೆ ರಂಗಭೂಮಿಯನ್ನೇ ತಮ್ಮ ವೃತ್ತಿಯನ್ನಾಗಿ ಸಂವಹನ ಮಾಧ್ಯಮವನ್ನಾಗಿ ಸ್ವೀಕರಿಸಿದರು. ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ರಂಗ ಪ್ರಮುಖರೊಂದಿಗೆ ಕೆಲಸ ಮಾಡಿದ ಅನುಭವ ಇರುವ ಸುರೇಶ್ ಆನಗಳ್ಳಿಯವರು ಕರ್ನಾಟಕದ ಹಾಗೂ ಗಡಿಯಾಚೆಗಿನ ಅನೇಕ ರಂಗತಂಡಗಳಿಗೆ ನಾಟಕಗಳನ್ನು ನಿರ್ದೇಶಿಸಿದ್ದಾರೆ, ವಿನ್ಯಾಸಗೊಳಿಸಿದ್ದಾರೆ, ರಂಗ ತರಬೇತಿ ನೀಡಿದ್ದಾರೆ. ಸುರೇಶ್ ಆನಗಳ್ಳಿಯವರು ನಿರ್ದೇಶಿಸಿರುವ ಪ್ರಮುಖ ನಾಟಕಗಳೆಂದರೆ – ಪೋಸ್ಟರ್, ಹೀಗೂ ಒಬ್ಬ ರಾಜ, ಸಂಕ್ರಾಂತಿ, ಅಂತಿಗೊನೆ, ತಾಯಿ, ಅಲಾಮನ ಅದ್ಭುತ ನ್ಯಾಯ, ಸಿರಿಸಂಪಿಗೆ, ಮಧುರೆ ಕಾಂಡ, ಕೆರೆಗೆ ಹಾರ, ಮತ್ತೊಬ್ಬ ದ್ರೋಣ, ಚೋರ ಚರಣದಾಸ, ಏಕಲವ್ಯ, ಬೇಲಿ ಮತ್ತು ಹೊಲ, ಕಬೀರ, ಮಂಟೇಸ್ವಾಮಿ ಕಥಾ ಪ್ರಸಂಗ, ಜಗದೇಕವೀರನ ಕಥೆ, ಹಾಗೂ ತುಳು ನಾಟಕ ಪಿಲಿ ಪತ್ತಿಗಡಸ್ ಇತ್ಯಾದಿ ನಾಟಕಗಳು.

ಅನ್ಯ ಭಾಷಾ ನಾಟಕಗಳನ್ನು ಕನ್ನಡಕ್ಕೆ ಅಳವಡಿಸಿ ಯಶಸ್ವಿಯಾಗಿರುವ ಸುರೇಶ್ ಆನಗಳ್ಳಿಯವರು, ಸೂರ್ಯನ ಮಕ್ಕಳು, ಕಿಂದರಜೋಗಿ, ಗುಂಡನ ಸಾಹಸಯಾತ್ರೆ ನಾಟಕಗಳನ್ನು ರಚಿಸಿದ್ದಾರೆ. ಚಿತ್ರರಂಗದಲ್ಲೂ ಆಸಕ್ತರಾದ ಶ್ರೀಯುತರು ಪ್ರಸ್ತುತ ಕರ್ನಾಟಕ ಚಲನಚಿತ್ರ ತಾಂತ್ರಿಕ ತರಬೇತಿ ಕೇಂದ್ರದಲ್ಲಿ ಗೌರವ ಪ್ರಾಂಶುಪಾಲರಾಗಿದ್ದಾರೆ. ಅನೇಕ ಪ್ರಶಸ್ತಿ ವಿಜೇತ ಚಿತ್ರಗಳಿಗೆ ಕಲಾ ನಿರ್ದೇಶಕರಾಗಿದ್ದಾರೆ. 'ನಮ್ಮ ಭಾರತ ಮಹಾನ್' ರೂಪಕವನ್ನು ದೂರದರ್ಶನಕ್ಕಾಗಿ ನಿರ್ಮಿಸಿದ್ದಾರೆ.

**ಕೆ.ಬಾಲಕೃಷ್ಣ ಪೈ:** ಕುಂದಾಪುರದ, ರಾಮಕೃಷ್ಣ ಪೈ ಅವರ ಪುತ್ರ ಬಾಲಕೃಷ್ಣ ಪೈ (ಅಪ್ಪುಮಾಮ್) ಇವರು ಐದನೇ ತರಗತಿಯಲ್ಲಿದ್ದಾಗಲೇ ಶಾಲೆಯಲ್ಲಿ ನೃತ್ಯ, ಅನುಕರಣೆ, ತಾಳಮದ್ದಳೆ, ಯಕ್ಷಗಾನದಲ್ಲಿ ಆಸಕ್ತಿ, ಮುಂದೆ ನಾಟಕಾಸಕ್ತಿಯಾಗಿ ಪರಿವರ್ತನೆ ಹೊಂದಿತು. ೧೯೪೬ರಲ್ಲಿ ಕುಂದಾಪುರಕ್ಕೆ ಜಯ ಕರ್ನಾಟಕ ನಾಟಕ ಮಂಡಳಿ ಬಂದಾಗ ಆ ತಂಡದಲ್ಲಿ ಸ್ಟೇಜ್ ಕಟ್ಟುವುದು, ಪರದೆ ಕಟ್ಟುವುದು, ರಂಗಸಜ್ಜಿಕೆ ಆಸನದ ವ್ಯವಸ್ಥೆ ಎಲ್ಲವನ್ನು ಕಲಿತರು. ೧೯೫೧ರಲ್ಲಿ ಸ್ನೇಹಿತರೊಡಗೂಡಿ 'ರೂಪರಂಗ' ಎಂಬ ಸಂಸ್ಥೆಯನ್ನು ಕಟ್ಟಿದರು. ೧೯೬೮ರಿಂದ ೧೯೭೨ರವರೆಗೆ ಮಂಗಳೂರಿನ ಕಲಾಭವನದ ನಾಟಕ ಸ್ಪರ್ಧೆಗಳಲ್ಲಿ ಉತ್ತಮ ಪಾತ್ರ ನಿರ್ವಹಣೆಗಾಗಿ, ಸಂಚಾಲಕರಾಗಿ ಮೆಚ್ಚುಗೆ ಗಳಿಸಿದರು. ೧೯೭೮ರಲ್ಲಿ 'ಶ್ರೀ ಲಕ್ಷ್ಮೀ ವೆಂಕಟೇಶ' ಕೊಂಕಣಿ ನಾಟಕ ಸಂಸ್ಥೆಯನ್ನು ಪ್ರಾರಂಭಿಸಿದರು. ರೂಪಕಲಾ ನಾಟಕ ಸಂಘವನ್ನು ಕಟ್ಟಿದರು. ಈ ಎಲ್ಲ ಸಂಸ್ಥೆಗಳ ಮೂಲಕ ಇದುವರೆಗೂ ಕರ್ನಾಟಕದಾದ್ಯಂತ ನೂರಾರು ಪ್ರದರ್ಶನ ನೀಡಿದ್ದಾರೆ. ೮ ಕನ್ನಡ ನಾಟಕಗಳನ್ನು, ೨೪ ಕೊಂಕಣಿ ನಾಟಕಗಳನ್ನು ರಚಿಸಿ, ನೂರಾರು ನಾಟಕಗಳನ್ನು ನಿರ್ದೇಶಿಸಿದ್ದಾರೆ ಮತ್ತು ಅಭಿನಯಿಸಿದ್ದಾರೆ. ಇವರ ಕೆಲವು ಪ್ರಮುಖ ಕೊಂಕಣಿ ನಾಟಕಗಳು 'ಮನ ಏಕಮಂಕಡ', 'ಹಾಸ್ಚೆಕೋರೊಡ್ಚೆ', 'ಹೋನಯಿ ತೋ'– ಮೊದಲಾದವು. ಡಾ॥ ಎಂ.ಎ. ಪೈ ಪ್ರತಿಷ್ಠಾನ, ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ, ಕುಂದಾಪುರದ ಭಂಡಾರ್‌ಕರ್ಸ್ ಕಾಲೇಜಿನ ನಾಟಕ ವೇದಿಕೆ ಮೊದಲಾದ ಸಂಸ್ಥೆಗಳಿಂದ ಪ್ರಶಸ್ತಿ ಸನ್ಮಾನಗಳಿಗೆ ಪಾತ್ರರಾಗಿದ್ದಾರೆ.

## ಪತ್ರಿಕೋದ್ಯಮ

ಪತ್ರಿಕೆಗಳು ಜನಸಮಾನ್ಯರ ಮೇಲೆ ಬೀರಬಹುದಾದ ಪರಿಣಾಮದ ಬಗೆಗೆ ವಿದೇಶಿಯರಿಗೆ ಮೊದಲು ಅರಿವಾಯಿತು. ವಿದೇಶೀ ಮೂಲದ ಮತ ಪ್ರಸಾರಕರು ತಮ್ಮ ನೀತಿ ಧ್ಯೇಯಗಳ ಪ್ರಸಾರಕ್ಕಾಗಿ ಪತ್ರಿಕಾ ಮಾಧ್ಯಮವನ್ನು ಆರಿಸಿಕೊಂಡರು. ಇದೇ ಕೆಲವೊಂದು ದೇಶೀಯ ಭಾಷಾ ಪತ್ರಿಕೆಗಳ ಆರಂಭಕ್ಕೆ ನಾಂದಿಯಾಯಿತೆನ್ನಬಹುದು. ಕನ್ನಡ ಪತ್ರಿಕೋದ್ಯಮದ ಇತಿಹಾಸವು ಆರಂಭಗೊಳ್ಳುವುದು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಿಂದಲೇ ಎಂಬುದು ಗಮನಾರ್ಹ ಸಂಗತಿಯಾಗಿದೆ. ೧೯೪೩ನೆಯ ಇಸವಿಯ ಜುಲೈ ೧ರಂದು ಬಾಸೆಲ್ ಮಿಶನ್ ವತಿಯಿಂದ ಪ್ರಕಟವಾದ 'ಮಂಗಳೂರು ಸಮಾಚಾರ' ಕನ್ನಡದ ಮೊದಲ ಪತ್ರಿಕೆಯಾಗಿದೆ. ಈ ಪತ್ರಿಕೆಯ ಸಂಪಾದಕ ರೆವರೆಂಡ್ ಹರ್ಮನ್ ಮೊಗ್ಲಿಂಗ್. ಕ್ರೈಸ್ತಮತ ಪ್ರಸಾರಕ್ಕೆ ಅನುಕೂಲವಾಗುವ ಹಲವು ಮಹತ್ವಪೂರ್ಣ ಗ್ರಂಥಗಳನ್ನು ರಚಿಸುತ್ತಿರುವಾಗಲೇ 'ಇಲ್ಲಿಯ ಜನಕ್ಕೆ ಪ್ರಪಂಚ ಪರಿಚಯವನ್ನು ಮಾಡಿಕೊಡುವ ಸ್ಪಷ್ಟ ಉದ್ದೇಶದಿಂದ 'ಮಂಗಳೂರು ಸಮಾಚಾರ' ಪಾಕ್ಷಿಕ ಪತ್ರಿಕೆಯನ್ನು (ಇಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಎಂದರೆ ೧೮೬೨ರ ನಂತರ ಎಂದು ಪರಿಗಣಿಸಬೇಕು) ಪ್ರಾರಂಭಿಸಿದನು. ಈ ಪತ್ರಿಕೆಯು ತನ್ನ ಮೊದಲ ಸಂಚಿಕೆಯ ನಾಲ್ಕು ಪುಟಗಳನ್ನು ಕಲ್ಲಚ್ಚಿನಲ್ಲಿ ಮುದ್ರಿಸಿದುದಾಗಿ ತಿಳಿದುಬರುತ್ತದೆ. ಹೀಗೆ ಪತ್ರಿಕೋದ್ಯಮದಲ್ಲಿ ಚಾರಿತ್ರಿಕ ಹೆಜ್ಜೆಯನ್ನಿಟ್ಟ ಜುಲೈ ೧ ರಂದು ಕರ್ನಾಟಕಾದ್ಯಂತ ಪ್ರತಿವರ್ಷ 'ಪತ್ರಿಕಾದಿನ'ವೆಂದು ಆಚರಿಸಲಾಗುತ್ತಿದೆ. ಈ ಪತ್ರಿಕೆಯ ಬಗ್ಗೆ ತಿಳಿಸುತ್ತ ಡಾ. ಶ್ರೀನಿವಾಸ ಹಾವನೂರರು 'ಈ ಚೊಚ್ಚಲ ಪತ್ರಿಕೆಯು ಹಸಿಬಿಸಿಯಾದ ಎತ್ತುಗಡೆಯಾಗಿರದೆ, ಆಧುನಿಕ ಪತ್ರಿಕೋದ್ಯಮದ ಹೆಚ್ಚಿನ ಲಕ್ಷಣಗಳನ್ನು ಒಳಗೊಂಡಿತ್ತೆಂದು' ಅಭಿಪ್ರಾಯಪಡುತ್ತಾರೆ. ಈ ದೃಷ್ಟಿಯಿಂದ ಮಂಗಳೂರು ಸಮಾಚಾರ ಆ ನಂತರದ ಪತ್ರಿಕೆಗಳಿಗೆ ಮಾರ್ಗದರ್ಶಿಯಾಯಿತೆನ್ನಬಹುದು.

ಕನ್ನಡದ ಮೊದಲ ಪತ್ರಿಕೆಯನ್ನು ಹೊರಡಿಸಿದ್ದಲ್ಲದೆ, ಕನ್ನಡದ ಮೊದಲ ಸಚಿತ್ರ ಸಾಪ್ತಾಹಿಕ ಕನ್ನಡ–ಇಂಗ್ಲಿಷ್ ಉಭಯ ಭಾಷೆಗಳಲ್ಲಿ ಬಂದ 'ವಿಚಿತ್ರ ವರ್ತಮಾನ ಸಂಗ್ರಹ', ಮೊತ್ತ ಮೊದಲ ಕಾನೂನು ಪತ್ರಿಕೆಯಾದ 'ನ್ಯಾಯಸಂಗ್ರಹ', ಮೊದಲ ವಾರ್ತಾಪತ್ರಿಕೆಯಾದ 'ಸಂಬೋಧಿನಿ'ಯನ್ನು ಹೊರತಂದುದು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಸಾಧನೆಗಳಾಗಿವೆ. ೧೬೩ ವರ್ಷಗಳಷ್ಟು ಇತಿಹಾಸ ಹೊಂದಿರುವ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯು ಪತ್ರಿಕೋದ್ಯಮ ಇತಿಹಾಸದಲ್ಲಿ ಮಹತ್ವದ ಸ್ಥಾನವನ್ನು ಪಡೆದಿದೆ. ೧೮೪೭ರ ಹೊತ್ತಿಗೆ ಮಂಗಳೂರಿನಲ್ಲಿ ಬಾಸೆಲ್ ಮಿಶನ್ ವತಿಯಿಂದ ಆಧುನಿಕ ಮುದ್ರಣಾಲಯವೂ ಸ್ಥಾಪನೆಯಾಗಿತ್ತು. ಹೀಗೆ ಕನ್ನಡ ಭಾಷೆ, ಪತ್ರಿಕೊದ್ಯಮದ ಬೆಳವಣಿಗೆಗೆ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಮಹತ್ವ ಪೂರ್ಣ ಕೊಡುಗೆ ನೀಡಿದೆ. ಅಲ್ಲದೆ ಇವು ಜಿಲ್ಲೆಯ ಪತ್ರಿಕೋದ್ಯಮಕ್ಕೆ ಉಡುಪಿ ಜಿಲ್ಲೆಯ ಪತ್ರಿಕೋದ್ಯಮ ಒಂದು ಭದ್ರ ನೆಲಗಟ್ಟನ್ನು ಒದಗಿಸಿದೆಯೆಂದು ಹೇಳಬಹುದು.

ಮಾಹಿತಿ ಸಂವಹನಕ್ಕೆ ಪತ್ರಿಕಾಮಾಧ್ಯಮ ಪರಿಣಾಮಕಾರಿಯಾದುದರಿಂದ, ವಿದೇಶಿ ಮತ ಪ್ರಸಾರಕರು ಈ ಉದ್ದೇಶಕ್ಕಾಗಿ ಪತ್ರಿಕಾ ಮಾಧ್ಯಮವನ್ನು ಯಶಸ್ವಿಯಾಗಿ ಬಳಸಿಕೊಂಡರೆಂಬುದು ಸ್ಥಳೀಯರಿಗೆ ಅರಿವಾಯಿತು. ಪತ್ರಿಕಾರಂಗದ ಬಗ್ಗೆ ಸಾಕಷ್ಟು ಅರಿತ, ಶಿಕ್ಷಣ ಮತ್ತು ಸಾಹಿತ್ಯ ರಂಗದಲ್ಲಿ ತಮ್ಮನ್ನು ತೊಡಗಿಸಿಕೊಂಡ ಕೆಲವು ಪ್ರತಿಭಾಶಾಲಿಗಳನ್ನು ಪತ್ರಿಕಾರಂಗ ಆಕರ್ಷಿಸಿತಾದರೂ ಕೂಡಲೇ ಅವರು ಪತ್ರಿಕಾರಂಗಕ್ಕೆ ಪ್ರವೇಶಿಸಲಿಲ್ಲವೆಂದು ತಿಳಿದುಬರುತ್ತದೆ.

ಸ್ಥಳೀಯರ ಪ್ರವೇಶಕ್ಕೆ ತಮ್ಮ ಧಾರ್ಮಿಕ ವಿಚಾರಗಳ ಜಿಜ್ಞಾಸೆಗೆ ಮಾಧ್ಯಮ ಕಂಡುಕೊಳ್ಳುವ ಉತ್ಕಟ ಇಚ್ಛೆ ಹಾಗೂ ಅದೇ ಕಾಲಕ್ಕೆ ಅವಿಷ್ಕಾರಗೊಂಡ ಕನ್ನಡ ಅಚ್ಚುಮೊಳೆಗಳು ಮುಖ್ಯ ಕಾರಣವಾಯಿತೆನ್ನಬಹುದು. ದಕ್ಷಿಣ ಕನ್ನಡದವರೇ ಆದ ಅತ್ತಾವರದ ಅನಂತಚಾರಿಯವರ ಪ್ರಯತ್ನದಿಂದ, ಕಲ್ಲಚ್ಚಿನ ಮುದ್ರಣಕ್ಕಷ್ಟೇ ತೃಪ್ತಿ ಹೊಂದಬೇಕಿದ್ದ ಕನ್ನಡ ಪತ್ರಿಕೆಗಳಿಗೆ ಅಚ್ಚುಮೊಳೆ ದೊರಕಿದವು. ಅಚ್ಚುಮೊಳೆಗಳನ್ನು ಅವುಗಳಿಗೆ ಹೊಂದುವ ಮುದ್ರಣ ಯಂತ್ರಗಳನ್ನು ಒದಗಿಸಿಕೊಂಡು, ಕೆಲವು ಸ್ಥಳೀಯರ ಮುದ್ರಣಾಲಯಗಳು ಒಂದೆರಡು ಪಟ್ಟಣಗಳಲ್ಲಿ ಅಸ್ತಿತ್ವಕ್ಕೆ ಬಂದವು. ಕ್ರಿ.ಶ. ೧೮೦೦ರ ದಶಕದಲ್ಲಿ ಉಡುಪಿಯಲ್ಲಿ ಹಿಂದೂ ಮುದ್ರಣಾಲಯವು ಆರಂಭವಾಯಿತು. ಆಮೇಲೆ ಬೇರೆ ಬೇರೆ ಊರುಗಳಲ್ಲಿ ಮುದ್ರಣಾಲಯಗಳು ತಲೆ ಎತ್ತಿದವು. ಉಡುಪಿ ಜಿಲ್ಲೆಯ ಜನರು ಆ ನಂತರ ಪತ್ರಿಕೋದ್ಯಮದ ಬಗ್ಗೆ ಆಸಕ್ತಿ ತಳೆದುದಾಗಿ ತಿಳಿದುಬರುತ್ತದೆ. ಆ ಪರಿಣಾಮವಾಗಿ ೧೮೮೭ರಲ್ಲಿ ಬೈಲೂರು ರಾಮರಾಯರ ಸಂಪಾದಕತ್ವದಲ್ಲಿ 'ಸುದರ್ಶನ' ಮಾಸಪತ್ರಿಕೆಯು ಪ್ರಕಟವಾಯಿತು. ಉಡುಪಿ ಜಿಲ್ಲೆಯ ಮೊದಲ ಪತ್ರಿಕೆ ಹಾಗೂ ಕ್ರೈಸ್ತೇತರ (ಸ್ಥಳೀಯರಿಂದ ಪ್ರಾರಂಭವಾದ) ಎರಡನೆಯ ಪತ್ರಿಕೆಯೆಂಬ ಹೆಗ್ಗಳಿಕೆಯನ್ನು ಪಡೆದಿದೆ.

ಸುದರ್ಶನ ಮಾಸ ಪತ್ರಿಕೆಯು ಡೆಮಿ ೧/೮ ಗಾತ್ರದಲ್ಲಿ ಸುಮಾರು ಒಂಭತ್ತು ವರ್ಷಗಳ ಕಾಲ ಉಡುಪಿಯಿಂದ ಪ್ರಕಟವಾಗುತ್ತಿತ್ತು. ಇದರಲ್ಲಿ ಆಧ್ಯಾತ್ಮಿಕ ಲೇಖನಗಳೊಂದಿಗೆ ವೈಚಾರಿಕ ಬರಹಗಳನ್ನು ಪ್ರಕಟಿಸಲಾಗುತ್ತಿತ್ತೆಂದು ತಿಳಿದುಬರುತ್ತದೆ. ಈ ಪತ್ರಿಕೆಯು ಸ್ವಂತ ಮುದ್ರಣಾಲಯ ಹೊಂದಿತ್ತೆ ಎಂಬುದರ ಬಗ್ಗೆ ಮಾಹಿತಿ ದೊರಕುವುದಿಲ್ಲ. ಪೋಷಕ ದಾನಿಗಳ ಕೊಡುಗೆ ಮತ್ತು ಚಂದಾ ಹಣವನ್ನೇ ಅವಲಂಬಿಸಿದ್ದ ಪತ್ರಿಕೆಯು ಆರ್ಥಿಕ ಸಮಸ್ಯೆಯಿಂದ ಪ್ರಕಟಣೆಯನ್ನು ನಿಲ್ಲಿಸಿತಾದರೂ ಜಿಲ್ಲೆಯ ಹಲವಾರು ಲೇಖಕರನ್ನು ಬೆಳಕಿಗೆ ತಂದ ಕೀರ್ತಿ ಈ ಪತ್ರಿಕೆಗೆ ಸಲ್ಲುತ್ತದೆ.

೧೯೦೬ರ ಜನವರಿಯಲ್ಲಿ 'ಶ್ರೀ ಕೃಷ್ಣಸೂಕ್ತಿ' ಎಂಬ ಮಾಸಪತ್ರಿಕೆಯು ಕೆರೋಡೆ ಸುಬ್ಬರಾಯರಿಂದ ಪ್ರಾರಂಭವಾಯಿತು. ಇದು ಕರ್ನಾಟಕ ಪತ್ರಿಕೋದ್ಯಮ ಇತಿಹಾಸದಲ್ಲಿ ಅಚ್ಚಳಿಯದ ನೆನಪನ್ನು ಉಳಿಸಿ, ಹತ್ತು ವರ್ಷ ನಡೆದು ಉಡುಪಿಗೆ ಕೀರ್ತಿಯನ್ನು ತಂದುಕೊಟ್ಟ ಪತ್ರಿಕೆಯಾಗಿದೆ. ೧/೮ ಡೆಮಿ ಆಕಾರದ ೨೪ ಪುಟಗಳ ಪತ್ರಿಕೆಯ ಬಿಡಿ ಸಂಚಿಕೆಗೆ ಬೆಲೆ ಮೂರು ಆಣೆಗಳಾಗಿತ್ತು. ವಾರ್ಷಿಕ ಚಂದಾ ಹಣ ಒಂದೂವರೆ ರೂಪಾಯಿಗಳಾಗಿದ್ದವು. ಆರ್ಥಿಕ ಸ್ಥಿತಿಯಿಂದಾಗಿ ಒಂದು ವರ್ಷಕ್ಕೆ ಪತ್ರಿಕೆ ನಿಲ್ಲಿಸಲು ಚಿಂತಿಸಲಾಯಿತಾದರೂ ೧೯೦೭ರಲ್ಲಿ ಪತ್ರಿಕೆ ಮುಂದುವರೆಯಿತು.

೧೯೦೭ರ ಏಪ್ರಿಲ್‌ನಲ್ಲಿ ಕಡೇಕಾರು ರಾಜಗೋಪಾಲಕೃಷ್ಣ ರಾಯರು "ಕೃಷ್ಣಸೂಕ್ತಿ" ಸಂಪಾದಕರಲ್ಲೊಬ್ಬರಾಗಿ ಸೇರಿಕೊಂಡ ನಂತರ ಪತ್ರಿಕೆಯ ಸ್ವರೂಪದಲ್ಲಿ ಸಾಕಷ್ಟು ಮಾರ್ಪಾಡುಗಳಾದವು. ಕೆರೋಡಿ ಸುಬ್ಬರಾಯರು, ಅನಂತರ ಕಡೆಕಾರು ರಾಜಗೋಪಾಲಕೃಷ್ಣರಾಯರಂಥ ಸಾಹಿತಿಗಳು ಪತ್ರಿಕೆಯ ಸಂಪಾದಕರಾಗಿ ಅದನ್ನೊಂದು ಸಾಹಿತ್ಯ ಪತ್ರಿಕೆಯಾಗಿ ರೂಪಿಸಿದರು ಹಾಗೂ ಈ ಪತ್ರಿಕೆಯು ಅಖಿಲ ಕರ್ನಾಟಕ ವ್ಯಾಪ್ತಿ ಪಡೆದ ಮೊದಲ ಪತ್ರಿಕೆಯೆಂಬುದಾಗಿ ತಿಳಿದುಬರುತ್ತದೆ. ಪತ್ರಿಕೆಯಲ್ಲಿ ಗ್ರಂಥ ವಿಮರ್ಶೆ, ವಿವಿಧ ವಿಷಯಾವಳಿ, ಪತ್ರಾಂತರಭಿಪ್ರಾಯ ಮುಂತಾದ ಹೊಸ ಅಂಕಣಗಳು ಸೇರಿಕೊಂಡಿದ್ದವು. ಅದುವರೆಗೆ ಉಡುಪಿಯ ಹಿಂದೂ ಮುದ್ರಣಾಲಯದಲ್ಲಿ ಪ್ರಕಟಗೊಳ್ಳುತ್ತಿದ್ದ ಪತ್ರಿಕೆಯು ಮಂಗಳೂರಿನ ಧರ್ಮಪ್ರಕಾಶ ಮುದ್ರಣಾಲಯದಲ್ಲಿ ಅಚ್ಚಾಗತೊಡಗಿದ್ದುದಾಗಿ ತಿಳಿದುಬರುತ್ತದೆ. ಪತ್ರಿಕೆಯು ಮೂರನೇ ವರ್ಷಕ್ಕೆ ಕಾಲಿಟ್ಟಾಗ ಉತ್ತರ ಕನ್ನಡದಿಂದ ಪ್ರಕಟವಾಗುತ್ತಿದ್ದ 'ವಿನೋದಿನಿ' (ಸಂಪಾದಕರು: ಕೆ. ವಿನಾಯಕ ಶಾಸ್ತ್ರಿ) ಪತ್ರಿಕೆಯು ಶ್ರೀ ಕೃಷ್ಣ ಸೂಕ್ತಿಯಲ್ಲಿ ವಿಲೀನವಾಗಿ 'ಸವಿನೋದವಾದ ಶ್ರೀ ಕೃಷ್ಣಸೂಕ್ತಿ' ಎಂಬ ಹೊಸ ಹೆಸರನ್ನು ಪಡೆಯಿತು. 'ಸವಿನೋದ ಕೃಷ್ಣಸೂಕ್ತಿ' ಇದ್ದಕ್ಕಿದ್ದಂತೆ ೧೯೧೦ರ ಡಿಸೆಂಬರ್‌ನಲ್ಲಿ ನಿಂತಿತಾದರೂ ಮೂರು ವರ್ಷಗಳ ನಂತರ ೧೯೧೩ರ ಜುಲೈನಲ್ಲಿ ಮತ್ತೆ ಪ್ರಕಟಣೆ ಆರಂಭಿಸಿತು. ಪುಟಗಳ ಸಂಖ್ಯೆಯನ್ನು ೩೨ರಿಂದ ೪೮ಕ್ಕೆ ಏರಿಸಿತು. ಪತ್ರಿಕೆಯ ಮುದ್ರಣವು ಉಡುಪಿಯ ಸದಾನಂದ ಕೋ–ಆಪರೇಟಿವ್ ಪ್ರಿಂಟಿಂಗ್ ವರ್ಕ್ಸ್ ಕಂಪನಿಗೆ ವರ್ಗಾವಣೆಗೊಂಡಿತು. ಮೊದಲನೆಯ ಮಹಾಯುದ್ಧದಿಂದಾಗಿ ಕಾಗದದ ಅಭಾವ, ಮುದ್ರಣ ವೆಚ್ಚದ ಏರಿಕೆಯಿಂದಾಗಿ ೧೯೧೫ರ ಜೂನ್ ತಿಂಗಳಿಂದ 'ಕೃಷ್ಣಸೂಕ್ತಿ' ಮತ್ತೆ ನಿಂತಿತು. ೧೯೧೬ರ ಅಕ್ಟೋಬರ್‌ನಲ್ಲಿ ಮತ್ತೆ ನಿಂತಿತು. ೧೯೧೭ರ ಜೂನ್‌ನಿಂದ ಮತ್ತೆ ಪ್ರಕಟಣೆ ಪ್ರಾರಂಭಿಸಿದ ಪತ್ರಿಕೆಯು ಎರಡೇ ತಿಂಗಳು ನಡೆದು ೧೯೧೭ರ ಜುಲೈ ತಿಂಗಳಲ್ಲಿ ಆ ವರ್ಷದ ಕಂತಿನಲ್ಲಿ ಉಳಿದಿದ್ದ ಮೂರು ಸಂಚಿಕೆಗಳನ್ನು ಒಟ್ಟಿಗೆ ಪ್ರಕಟಿಸಿ ನಿಂತಿತು.

ಕನ್ನಡ ಪತ್ರಿಕಾಲೋಕದಲ್ಲಿ ಮೂವತ್ತು ವರ್ಷಗಳ ನಂತರ 'ಶ್ರೀ ಕೃಷ್ಣಸೂಕ್ತಿ' ಮತ್ತೆ ಆರಂಭಗೊಂಡಿತು. ಕಡೆಕಾರು ರಾಜಗೋಪಾಲಕೃಷ್ಣರಾಯರೇ ಸಂಪಾದಕರಾಗಿ ಮುಂದುವರೆದು, 'ಸಾಹಿತ್ಯ ಪ್ರಕಾಶನ ಸಮಿತಿ' ಉಡುಪಿಯಿಂದ ಪ್ರಕಟಗೊಳ್ಳತೊಡಗಿತು. ಶ್ರೀ ಕೃಷ್ಣಸೂಕ್ತಿಯ ಪುಟಗಳ ಸಂಖ್ಯೆ ಅರವತ್ತಕ್ಕೇರಿ ವಿಷಯ ವೈವಿಧ್ಯದಿಂದ ಕಂಗೊಳಿಸಿತು. ೧೯೪೮ರ ಆಗಸ್ಟ್‌ನಲ್ಲಿ ಶ್ರೀ ಜಯಂತಿ ವಿಶೇಷಾಂಕ ತರುವುದರೊಂದಿಗೆ ಈ ಪತ್ರಿಕೆಯು ನಿಂತು ಹೋದುದಾಗಿ ತಿಳಿದುಬರುತ್ತದೆ. ಶ್ರೀ ಕೃಷ್ಣಸೂಕ್ತಿ ಆರಂಭದಲ್ಲಿ ಧಾರ್ಮಿಕ ಪತ್ರಿಕೆಯಾಗಿದ್ದುದು ಅನಂತರ ಸಾಹಿತ್ಯ ಪತ್ರಿಕೆಯಾಗಿ ಸುಧಾರಣೆಗೊಂಡಿತು. ಆ ಕಾಲದ ಪ್ರಸಿದ್ಧ ಲೇಖಕರು ಇದರಲ್ಲಿ ಬರೆಯುತ್ತಿದ್ದುದಾಗಿ ಹಾಗೂ ಅಂದು ರಾಜಕೀಯವಾಗಿ ಹರಿದುಹೋಗಿದ್ದ ಕರ್ನಾಟಕವನ್ನು ಸಾಹಿತ್ಯಕವಾಗಿ ಒಗ್ಗೂಡಿಸುವಲ್ಲಿ ಈ ಪತ್ರಿಕೆಯ ಪಾತ್ರ ಹಿರಿಯದಾಗಿತ್ತೆಂದು ತಿಳಿದುಬರುತ್ತದೆ. "ಶ್ರೀ ಕೃಷ್ಣಸೂಕ್ತಿಯಲ್ಲಿ ಹೊಸಗನ್ನಡ ಸಾಹಿತ್ಯದ ಎಲ್ಲ ಪ್ರಕಾರಗಳು ಪ್ರಕಟವಾಗಿದೆ. ಇದರಲ್ಲಿ ಸ್ವತಂತ್ರ ಹಾಗೂ ಅನುವಾದಿತ ಸಾಹಿತ್ಯಗಳೆರಡೂ ಇದ್ದು, ಅನುವಾದಗಳಲ್ಲಿ ಬಂಗಾಳಿಯಿಂದ ಕನ್ನಡಕ್ಕೆ ಹೆಚ್ಚಿನ ಕೃತಿಗಳು ಬಂದಿದೆ. ಅನೇಕ ಇಂಗ್ಲಿಷ್ ಕವನಗಳ ಅನುವಾದಗಳು, ಮೂಲದೊಂದಿಗೆ ಪ್ರಕಟವಾಗಿವೆ" ಎಂದು ಟಿ.ಕೆ. ಇಂದೂಬಾಯಿಯವರು ಅಭಿಪ್ರಾಯಪಡುತ್ತಾರೆ. ಶ್ರೀ ಕೃಷ್ಣಸೂಕ್ತಿಯು ಹೊಸಗನ್ನಡ ಸಾಹಿತ್ಯ ಬೆಳವಣಿಗೆಯ ಹಂತದಲ್ಲಿ ಮಹತ್ವದ ಕೊಡುಗೆ ನೀಡಿದ್ದುದಾಗಿ ಹಾಗೂ ಕನ್ನಡಿಗರಲ್ಲಿ ಸದಭಿರುಚಿ ಬೆಳೆಸುವಲ್ಲಿ ನೆರವಾದುದಾಗಿ ತಿಳಿದುಬರುತ್ತದೆ. ೧೯೧೦ರಲ್ಲಿ ಸೂರಾಲ ನಾಭಿರಾಜಯ್ಯನವರು 'ಜೈನಬಂಧು' ಎಂಬ ಧಾರ್ಮಿಕ ಪತ್ರಿಕೆಯನ್ನು ತಂದರು. ಮಳಿಯ ಗೋವರ್ಧನರಾಯರು ೧೯೨೬ರಲ್ಲಿ ಕಾರ್ಕಳದಿಂದ 'ಶಕ್ತಿ' ಎಂಬ ಮಾಸಿಕ ಪತ್ರಿಕೆಯನ್ನು ಪ್ರಕಟಿಸಿ ಮೂರು ವರ್ಷಕಾಲ ಉತ್ತಮ ಸಾಹಿತ್ಯ ಜಿಲ್ಲೆಯ ಜನರಿಗೆ ನೀಡಿದರು.

ಕರ್ನಾಟಕದ ಪ್ರಸಿದ್ಧ ಸಾಹಿತಿಯಾದ ಶಿವರಾಮ ಕಾರಂತರು ಪುತ್ತೂರಿನಲ್ಲಿದ್ದಾಗ ೧೯೨೩ರ ಡಿಸೆಂಬರ್ ತಿಂಗಳಿನಲ್ಲಿ 'ವಸಂತ' ಎಂಬ ಪತ್ರಿಕೆಯನ್ನು ಹೊರತಂದರು. ಪತ್ರಿಕೆಯು ಇಪ್ಪತ್ತು ಪುಟಗಳಲ್ಲಿ

ಸಚಿತ್ರವೂ ರಂಜನೀಯವಾಗಿ ಬರುತ್ತಿದ್ದುದಾಗಿ, ವಾರ್ಷಿಕ ಚಂದಾಹಣ ಮೂರು ರೂಪಾಯಿಗಳಿದ್ದುದಾಗಿ ತಿಳಿದುಬರುತ್ತದೆ. ಶಿಲ್ಪಕಲೆ, ಚಿತ್ರಕಲೆ, ಸಾಹಿತ್ಯ ಚರಿತ್ರೆಯ ಬಗ್ಗೆ ಸಚಿತ್ರ ಲೇಖನಗಳು ಪ್ರಕಟವಾಗುತ್ತಿದ್ದವು. ಹಾಗೂ ಕಥೆ, ಕಾದಂಬರಿ, ಕವನಗಳಿಗೆ ಪತ್ರಿಕೆಯಲ್ಲಿ ಆದ್ಯತೆ ನೀಡಲಾಗುತ್ತಿತ್ತು. ಶಿವರಾಮ ಕಾರಂತರ ಕೆಲವು ಕಾದಂಬರಿಗಳು ಮೊದಲ ಬಾರಿಗೆ ವಸಂತದಲ್ಲಿ ಧಾರವಾಹಿಯಾಗಿ ಪ್ರಕಟಗೊಂಡಿದ್ದಾಗಿ ತಿಳಿದುಬರುತ್ತದೆ. ವಸಂತ ಪತ್ರಿಕೆ ೧೯೨೩ರ ಹೊತ್ತಿಗೆ ಪಕ್ಷ ಪತ್ರಿಕೆಯಾಗಿ ಎರಡು ವರ್ಷ ನಡೆದು ೧೯೨೬ರ ಜುಲೈನಿಂದ ಮತ್ತೆ ಮಾಸಪತ್ರಿಕೆಯಾಗಿ ಕುಂದಾಪುರದಿಂದ ಕೆಲವು ಕಾಲ ಪ್ರಕಟವಾದುದಾಗಿ ತಿಳಿದುಬರುತ್ತದೆ.

೧೯೩೦ರ ದಶಕದವರೆಗೆ ಉಲ್ಲೇಖಿಸಬಹುದಾದಂಥ ಪತ್ರಿಕೆಗಳು ಕಂಡುಬರುವುದಿಲ್ಲ. ಅಸಹಕಾರ ಆಂದೋಲನದ ಕಾಲದಲ್ಲಿ ರಾಜಕೀಯವನ್ನು ಪ್ರವೇಶಿಸಿದ ಹಿರಿಯಡ್ಕ ರಾಮರಾಯ, ಶಾಂತರಾಮರಾವ್, ವಿ.ಎಸ್. ಕುಡ್ವ ಅವರ ಸಹಕಾರದಿಂದ ಪ್ರಾರಂಭಿಸಿದ 'ಸತ್ಯಾಗ್ರಹಿ' ಪತ್ರಿಕೆ ಇದಕ್ಕೆ ಅಪವಾದವಾಗಿದ್ದುದಾಗಿ ತಿಳಿದುಬರುತ್ತದೆ. ರಾಜಕೀಯ, ವ್ಯಾಪಾರ, ಆರ್ಥಿಕ, ಧಾರ್ಮಿಕ, ಶುದ್ಧ ಸಾಹಿತ್ಯಿಕ ಪತ್ರಿಕೋದ್ಯಮದ ಹೊಸ ಸಾಹಸಗಳಿಂದಾಗಿ ೧೯೩೦ರ ದಶಕವನ್ನು ಉಡುಪಿಯ ಪತ್ರಿಕೋದ್ಯಮದ ಉತ್ಥಾನಯುಗವೆಂಬುದಾಗಿ ಪಾ.ವೆಂ. ಆಚಾರ್ಯರು ಅಭಿಪ್ರಾಯಪಡುತ್ತಾರೆ.

ಹಿಂದೂ ಜನಾಂಗದ ಪುನರುತ್ಥಾನದ ಪ್ರತಿಪಾದಕರಾದ ಅಲೆವೂರು ಶೇಷಪ್ಪಯ್ಯನವರು ೧೯೩೧ರಲ್ಲಿ (ಹಸ್ತಲಿಖಿತ) 'ಉದಯಭಾರತ' ಮಾಸಪತ್ರಿಕೆಯನ್ನು ಹೊರತಂದರು. ಆನಂತರ ಧರ್ಮಕಾರಣಕ್ಕಾಗಿ ಪತ್ರಿಕೆಯನ್ನು ದುಡಿಸಿಕೊಳ್ಳುವುದರೊಂದಿಗೆ ವಿಷಯನಿಷ್ಠ ಪ್ರಕಟಣೆಗಳನ್ನು ಹುಟ್ಟುಹಾಕುವ ಸಂಸ್ಕೃತಿ ಬೆಳೆದುಬಂದಿತು. ಅಂಥ ಪ್ರಥಮ ಪ್ರಯತ್ನ ೧೯೩೫ರಲ್ಲಿ ರಾಮಚಂದ್ರಶೆಣೈ ಅವರಿಂದ ಆರಂಭಗೊಂಡಿತೆನ್ನಬಹುದು. ಅವರು ವ್ಯಾಪಾರೋದ್ಯಮಗಳಿಗೆ ಮೀಸಲಾದ ವರ್ತಕ ಧುರೀಣ ಎಂಬ ಮಾಸಪತ್ರಿಕೆಯನ್ನು ಪ್ರಾರಂಭಿಸಿದರು. ಈ ಪತ್ರಿಕೆಯು ಸಾಕಷ್ಟು ಕಾಲ ನಡೆದುದಾಗಿ ತಿಳಿದುಬರುತ್ತದೆ. ಇದೇ ದಶಕದ ಉತ್ತರಾರ್ಧದಲ್ಲಿ ಎಸ್.ಯು. ಪಣಿಯಾಡಿಯವರ *Financial Exporter* ಪ್ರಕಟವಾಗತೊಡಗಿತು. ಇದು ಆರ್ಥಿಕ ವಿಷಯಗಳ ಪ್ರಬುದ್ಧ ಚರ್ಚೆಗೆ ಮೀಸಲಾಗಿತ್ತು. ಬಿ. ನಾರಾಯಣರಾಯರು ಅದರ ಸಂಪಾದಕರಾಗಿದ್ದರು. ಇದಕ್ಕಾಗಿ ನಾರಾಯಣರಾಯರು ದೇಶದ ಪ್ರಮುಖ ಅರ್ಥಶಾಸ್ತ್ರಜ್ಞರ ನೆರವನ್ನು ಪಡೆದಿದ್ದರು. ಇದು ಪಣಿಯಾಡಿ ಅವರದೇ ಆದ ತುಳುನಾಡ ಪ್ರೆಸ್‌ನಿಂದ ಪ್ರಕಟವಾಗುತ್ತಿತ್ತು. ಸಂಪಾದಕರಾಗಿದ್ದ ನಾರಾಯಣರಾಯರು ಪತ್ರಿಕೆಗೆ ಹಿರಿಮೆಗೆ ದೊರಕಿಸಿಕೊಟ್ಟಿದಾಗಿಯೂ, ಅವರು ಬಿಟ್ಟುಹೋದ ನಂತರ ಪತ್ರಿಕೆ ನಿಂತಿತೆಂದೂ ತಿಳಿದುಬರುತ್ತದೆ.

ಆರ್.ಜಿ.ಶೆಣೈಯವರ ಸಂಪಾದಕತ್ವದಲ್ಲಿ 'ಕಾಲಚಂದ್ರ' ಎಂಬ ವಾರಪತ್ರಿಕೆ ಕಾರ್ಕಳದಿಂದ ೧೯೩೩ರಲ್ಲಿ ಪ್ರಕಟಗೊಂಡು ೧೯೩೫ರ ವರೆಗೆ ನಡೆದುದಾಗಿ ತಿಳಿದುಬರುತ್ತದೆ. ಇದು ಕಲೆಗೆ ಮೀಸಲಾದ ಪತ್ರಿಕೆಯೇ ಎಂಬುದರ ಬಗ್ಗೆ ಸ್ಪಷ್ಟ ಮಾಹಿತಿ ದೊರಕುವುದಿಲ್ಲ. ಇದರಲ್ಲಿ ಎಂ. ಎನ್. ಕಾಮತ್, ಕಟಪಾಡ ಶ್ರೀನಿವಾಸ ಶೆಣೈ ಮುಂತಾದ ಹಿರಿಯ ಲೇಖಕರು ಬರೆಯುತ್ತಿದ್ದರು.

ಉಡುಪಿಯ ಪ್ರಮುಖ ಪತ್ರಿಕೆ 'ನವಯುಗ' ಪತ್ರಿಕೆಯು ೧೯೨೧ರಲ್ಲಿ ವಾರಪತ್ರಿಕೆಯಾಗಿ ಮಂಗಳೂರಿನಿಂದ ಆರಂಭಗೊಂಡಿತು. ಅದನ್ನು ಆರಂಭಿಸಿದವರು ಎ.ಬಿ. ಶೆಟ್ಟರು ಪತ್ರಿಕೆಯ ಪ್ರಥಮ ಸಂಪಾದಕರು ಕೆಮ್ತೂರು ಕಾಂತಪ್ಪ ಶೆಟ್ಟರು. ನಂತರ ಅದು ಹೊನ್ನಯ್ಯ ಶೆಟ್ಟರಿಗೆ ವರ್ಗಾವಣೆಗೊಂಡಿತು. ಈ ಪತ್ರಿಕೆಯು ೧೯೩೬ರಿಂದ ಉಡುಪಿಯಲ್ಲಿ ಪ್ರಕಟಣೆಯನ್ನು ಆರಂಭಿಸಿತು. 'ನವಯುಗ' ಪತ್ರಿಕೆ ಹಿಂದುಳಿದವರ ಪರವಾಗಿ ಹೋರಾಡಲೆಂದೇ ಜನ್ಮತಾಳಿತ್ತು. ಭಾರತ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಜನಾಭಿಪ್ರಾಯ ರೂಪಿಸುವ ಉದ್ದೇಶದಿಂದ ಪ್ರಾರಂಭವಾಗಿದ್ದರಿಂದ ಈ ಪತ್ರಿಕೆ ಪ್ರಧಾನವಾಗಿ ರಾಜಕೀಯ ಪತ್ರಿಕೆಯಾಗಿತ್ತು. ಒಳ್ಳೆಯ ಆಡಳಿತ, ಪತ್ರಿಕಾ ನೀತಿ, ಸ್ಪಷ್ಟೋಕ್ತಿಯ ಅಗ್ರಲೇಖನಗಳಿಂದಾಗಿ 'ನವಯುಗ' ಪತ್ರಿಕೆ ಜನಪ್ರಿಯವಾಗಿದ್ದುದಾಗಿ ತಿಳಿದುಬರುತ್ತದೆ. ಉಡುಪಿಗೆ ವರ್ಗಾವಣೆಯಾದ ನಂತರ, ತಿಂಗಳಿಗೊಂದು ತುಳು ಸಂಚಿಕೆ ಹೊರಡಿಸುತ್ತಿದ್ದುದು ವಿಶೇಷ. ತುಳು ಚಳವಳಿಯ ಮುಂಚೂಣಿಯಲ್ಲಿದ್ದ ಸತ್ಯಮಿತ್ರ ಬಂಗೇರ,

ಬಡಕಬೈಲು ಪರಮೇಶ್ವರಯ್ಯ, ಶೀನಪ್ಪ ಹೆಗಡೆ, ಕಿಲ್ಲೆ ನಾರಾಯಣಶೆಟ್ಟಿ ಮೊದಲಾದವರ ಬರಹಗಳಿಂದ ಈ ಸಂಚಿಕೆಗಳು ಜನಪ್ರಿಯವಾಗಿತ್ತೆಂದು ತಿಳಿದುಬರುತ್ತದೆ.

ಪತ್ರಿಕೆಯು ಪ್ರತಿ ಗುರುವಾರ ಹೊರಡುತ್ತಿತ್ತು. ಪ್ರಾರಂಭದಲ್ಲಿ ೨೦-೨೪ ಪುಟಗಳಿದ್ದು, ಕೊನೆಯ ಕೆಲವು ಸಂಚಿಕೆಗಳು ೧೨ ಪುಟಗಳಿರುತ್ತಿದ್ದುದಾಗಿ ಹಾಗೂ ಬಿಡಿ ಪ್ರತಿಯ ಬೆಲೆ ೧೯೬೮ರಲ್ಲಿ ೨೦ ಪೈಸೆ ಇತ್ತೆಂದು ತಿಳಿದುಬರುತ್ತದೆ. ಪಣಿಯಾಡಿಯ ತುಳುನಾಡು ಪ್ರೆಸ್‌ನಲ್ಲಿ ಪ್ರಕಟವಾಗುತ್ತಿದ್ದ ಪತ್ರಿಕೆಯು ಮುಂದೆ ಸ್ವಂತ ಪ್ರೆಸ್ ಹೊಂದಿ ೧೯೭೪ರ ವರೆಗೆ ನಡೆಯಿತು. ೧೯೭೨ರಲ್ಲಿ ಪತ್ರಿಕೆ ಸುವರ್ಣ ಮಹೋತ್ಸವ ಆಚರಿಸುವ ಮೂಲಕ ಜಿಲ್ಲೆಯಲ್ಲಿ ದಾಖಲೆ ಮಾಡಿತು. ಹೊನ್ನಯ್ಯ ಶೆಟ್ಟರು ೪೫ ವರ್ಷಗಳ ಕಾಲ ಪತ್ರಿಕಾ ಪ್ರಪಂಚದಲ್ಲಿ ಸಲ್ಲಿಸಿದ ಸೇವೆ ಅಮೂಲ್ಯವಾದುದು. ನಂತರ ಅವರ ಮಗ ಸಾದನ್ ಕುಮಾರ್ 'ನವಯುಗ' ಪತ್ರಿಕೆ ನಡೆಸಿಕೊಂಡು ಬಂದರೂ ಅದು ಹೆಚ್ಚು ಕಾಲ ಮುಂದುವರಿಯಲಿಲ್ಲ. ಸ್ವಾತಂತ್ರ್ಯ ಹೋರಾಟಕ್ಕೆ ಚಾಲನೆ ನೀಡಿ, ನವಭಾರತ ನಿರ್ಮಾಣಕ್ಕೆ ಅಡಿಗಲ್ಲಾದ ಹೆಗ್ಗಳಿಕೆ 'ನವಯುಗ' ಪತ್ರಿಕೆಯದ್ದಾಗಿದೆ.

ಬನ್ನಂಜೆ ರಾಮಚಾರ್ಯರ ಸಂಪಾದಕತ್ವದಲ್ಲಿ ೧೯೩೮ರಲ್ಲಿ ಆರಂಭವಾಗಿ ಮೂರು ತಿಂಗಳೂ ಮಾತ್ರ ನಡೆದ 'ನವಶಕ್ತಿ' ಮಾಸಪತ್ರಿಕೆಯಲ್ಲಿ ನಾಡಿನ ಹಿರಿಯ ಲೇಖಕರ ಲೇಖನಗಳು ಹಾಗೂ ಶ್ರೇಷ್ಠ ಮಟ್ಟದ ಕತೆ, ಕವಿತೆಗಳು ಪ್ರಕಟವಾದುದಾಗಿ ತಿಳಿದುಬರುತ್ತದೆ. ಆದ್ದರಿಂದ ಈ ಪತ್ರಿಕೆಯು ಉಲ್ಲೇಖನೀಯವಾದುದು. ಈ ದಶಕದ ಪತ್ರಿಕೋದ್ಯಮದಲ್ಲಿ ಮತ್ತೊಂದು ಉಲ್ಲೇಖನೀಯ ಪತ್ರಿಕೆ 'ಅಂತರಂಗ' ಜಿಲ್ಲೆಯ ಉದ್ಯಮಿ ಹಾಗೂ ವಿದ್ವಾಂಸರಾದ ಯು.ಎಸ್. ಪಣಿಯಾಡಿ ಅವರು ಸ್ವತಃ ಮುದ್ರಣಾಲಯವನ್ನು ಸ್ಥಾಪಿಸಿ, ತುಳುನಾಡು ನುಡಿಗೆ ಸೇವೆ ಸಲ್ಲಿಸಿದಲ್ಲದೆ, ಕನ್ನಡದಲ್ಲಿ 'ಅಂತರಂಗ' ಎಂಬ ಆಕರ್ಷಕ ವಾರಪತ್ರಿಕೆಯನ್ನು ಉಡುಪಿಯಲ್ಲಿ ಪ್ರಕಟಿಸಿ ಜನಪ್ರಿಯಗೊಳಿಸಿದರು. ೧೯೩೮ರಲ್ಲಿ ಪ್ರಾರಂಭವಾದ ಈ ಅಪರೂಪದ ಪತ್ರಿಕೆಯು ಎಸ್.ಯು. ಪಣಿಯಾಡಿ, ಹೊನ್ನಯ್ಯಶೆಟ್ಟಿ, ಎಂ.ವಿ.ಹೆಗಡೆ ಅವರುಗಳಿಂದಾಗಿ ಸಾಹಿತ್ಯ ಪತ್ರಿಕೆಯಾಗಿ ಪೋಷಣೆ ಪಡೆಯಿತು. ಬಹುಶಃ ಇದು ಕನ್ನಡದ ಏಕೈಕ ಮ್ಯಾಗಜಿನ್. ಅದರ ಸಂಪಾದಕರು ಕೆ. ಹೈದರ್ ಅವರ ನೆರವಿಗೆ ವಿಠಲ ಹೆಗಡೆ ಇದ್ದುದಾಗಿ ತಿಳಿದುಬರುತ್ತದೆ. ಈ ವಾರಪತ್ರಿಕೆಯು ಬಹುವರ್ಣದ ಮುಖಪುಟ, ಸುಂದರ ವಿನ್ಯಾಸ, ಜನಪ್ರಿಯ ಬರಹಗಳು, ಕಥೆಗಳು ಇವುಗಳಿಂದ ಕೂಡಿದ ವೈವಿಧ್ಯಪೂರ್ಣ ಪತ್ರಿಕೆಯಾಗಿದ್ದು, ಕರ್ನಾಟಕಾದ್ಯಂತ ಪ್ರಚುರವಾಗಿತ್ತೆಂದು ತಿಳಿದುಬರುತ್ತಿದೆ. ಇದರಲ್ಲಿ ಕು.ಶಿ.ಹರಿದಾಭಟ್ಟ ಪಾ.ವೈ. ಆಚಾರ್ಯರು ಮೊದಲಾದವರು ಬರೆಯುತ್ತಿದ್ದರು. ಅಂತರಂಗದಿಂದಲೇ ಪತ್ರಿಕೋದ್ಯಮದ ಮೊದಲ ಪಾಠ ತಮಗೆ ದೊರಕಿದುದಾಗಿ ಪಾ.ವೆಂ. ಆಚಾರ್ಯರು ತಿಳಿಸುತ್ತಾರೆ. ಮುದ್ರಾಡಿ ಜನಾರ್ಧನಾಚಾರ್ಯರೆಂಬ ವಿದ್ವಾಂಸರು ೧೯೩೮ರಲ್ಲಿ 'ಕೃಷ್ಣ ಸಂದೇಶ' ಎಂಬ ಧಾರ್ಮಿಕ ಪತ್ರಿಕೆಯೊಂದನ್ನು ಪ್ರಾರಂಭಿಸಿದ್ದರು. ಅದು ತುಳುನಾಡು ಪ್ರೆಸ್ಸಿನಲ್ಲಿ ಮುದ್ರಣವಾಗುತ್ತಿತ್ತು. ಈ ಪತ್ರಿಕೆಯು ಧಾರ್ಮಿಕ ವಿಷಯಗಳಲ್ಲದೆ ಕಥೆ, ಕಾದಂಬರಿಗಳನ್ನು ಪ್ರಕಟಿಸುತ್ತಿದ್ದುದಾಗಿ ಹಾಗೂ ಅದರ ಉಗ್ರ ಸನಾತನೀ ದೃಷ್ಟಿಕೋನದಿಂದಾಗಿ ಅದು ಕೊನೆಗೊಂಡುದಾಗಿ ತಿಳಿದುಬರುತ್ತದೆ.

೧೯೪೦ರಿಂದ ೧೯೭೦ರ ವರೆಗಿನ ಅವಧಿಯಲ್ಲಿ ಉಡುಪಿಯ ಪತ್ರಿಕಾರಂಗವು ಸಾಕಷ್ಟು ಕ್ರಿಯಾಶೀಲವಾಗಿತ್ತು. ೧೯೪೦ರಲ್ಲಿ ಹೈದರ್ ಸಂಪಾದಕತ್ವದಲ್ಲಿ ನಂತರ ಪರ್ಕಳರ ಸಂಪಾದಕತ್ವದಲ್ಲಿ 'ಹ್ಯೂಮನ್ ಎಫೇರ್' ಎಂಬ ಪತ್ರಿಕೆ ಮಣಿಪಾಲದಿಂದ ಪ್ರಕಟವಾಗುತ್ತಿತ್ತು. ಕೃಷ್ಣಾಪುರದ ಮಠಾಧೀಶರ ಪ್ರೋತ್ಸಾಹದಿಂದ ಪ್ರಾರಂಭದಲ್ಲಿ 'ಪ್ರಕಾಶಿನೀ' ನಂತರ 'ಪರ್ಯಾಯ ಪ್ರಕಾಶನ' ಎಂಬ ಪತ್ರಿಕೆಯು ಪ್ರಕಟವಾಗುತ್ತಿತ್ತು. ೧೯೪೨ರ ಉಡುಪಿಯ ಪರ್ಯಾಯ ಕಾಲದಲ್ಲಿ ಪ್ರಾರಂಭವಾದ ಈ ಪತ್ರಿಕೆಯ ಸಂಪಾದಕರೂ ಪ್ರಕಾಶಕರೂ ಟಿ. ಶ್ರೀಪತಿರಾವ್ ಹಾಗೂ ಕೆ. ರಾಘವೇಂದ್ರರಾವ್ ಮುದ್ರಕರಾಗಿದ್ದರು. ಮೊದಲ ಮೂರು ವರ್ಷ ಉಡುಪಿ ಪ್ರಭಾಕರ ಪ್ರೆಸ್, ಮತ್ತೆ ಕೆಲವು ವರ್ಷ ಉಡುಪಿ ಕಲ್ಯಾಣ ಪ್ರೆಸ್, ನಂತರ ಉಡುಪಿಯ ಮೆಜೆಸ್ಟಿಕ್ ಪ್ರೆಸ್‌ನಲ್ಲಿ ಮುದ್ರಣ ಕಾರ್ಯ ನಡೆಯುತ್ತಿದ್ದುದಾಗಿ ತಿಳಿದುಬರುತ್ತದೆ. ಪತ್ರಿಕೆ ಪ್ರಾರಂಭವಾದ ಕೆಲವೇ ವರ್ಷಗಳಲ್ಲಿ ನಿಂತುಹೋಯಿತು. ೧೯೫೨ರಲ್ಲಿ 'ಪ್ರಕಾಶಿನಿ' ಹೆಸರಿನಿಂದ

ಪುನರ್ ಪ್ರಕಟಣೆ ಆರಂಭಿಸಿ ೨೦ ವರ್ಷ ನಿರಂತರವಾಗಿ ನಡೆಯಿತು. ಅನಗಳ್ಳಿಯ ರಘುರಾಮ ಶೆಟ್ಟರು 'ಕನ್ನಡ ಕೇಸರಿ' ಎಂಬ ಮಾಸ ಪತ್ರಿಕೆಯ ಒಂದು ಸಂಚಿಕೆಯನ್ನು ಮಾತ್ರ ಹೊರತಂದರು. ಕುಂದಾಪುರದ ಕನ್ನಡ ಸಂಘವು ಭವನಾ ಎಂಬ ಅನಿಯತಕಾಲಿಕ ಪ್ರತಿಯನ್ನು ಪ್ರಕಟಿಸಿತು. ಐರೋಡಿ ಗಣಪಯ್ಯ ಅಲ್ಸೆಯವರ 'ರಶ್ಮಿ' ಮತ್ತು 'ಪ್ರಕಾಶ'ಗಳು ಪತ್ರಿಕೆಗಳು ಯಶಸ್ವಿ ಪ್ರಯತ್ನವಾಗಿದ್ದವು. (ಕೈಬರಹದ) ಸಾಹಿತ್ಯ ಪತ್ರಿಕೆಗಳಾದ ಅರುಣೋದಯ (೧೯೪೦ ಕೋಟ ಕಸ್ತೂರಿ, ಕುಂದಾಪುರ), ಕದಳಿ (೧೯೪೨ ಕೆ.ಆರ್. ಕೊತ್ವಾಲ್ ಕುಂದಾಪುರ), ಬಾವುಟ (ಸಂಜೀವ, ಬಸ್ರೂರಿ), ಬಾಲರವಿ, ಕತ್ತು (ಜಿ.ಎಸ್.ಆಚಾರ್), ಶಂಕರನಾರಾಯಣ ಸಹವಾಸಿ, ವಿಶ್ವನಾಥ ಐತಾಳ್, ಗುಜ್ಜಾಡಿ ಅನುರಾ, ಕಲಾಮಾಲಾ (ಕೇಶವ ಶ್ಯಾನುಭೋಗ ಎಲ್ಲಂಗಳ) ಗಮನಾರ್ಹವಾದುವು. ಅಲ್ಲದೆ ಶಾಲಾಕಾಲೇಜುಗಳು ವಾರ್ಷಿಕ ಸಂಚಿಕೆ ಪ್ರಕಟಿಸುತ್ತಿವೆ. ಕುಂದಾಪುರದ ಭಂಡಾರ್ಕಾರ್ಸ್ ಕಾಲೇಜಿನ 'ದರ್ಶನ', ಬಸ್ರೂರು ಶ್ರೀ ಶಾರದಾ ಕಾಲೇಜಿನ 'ಶಾರದಾಮಣಿ', ಬೈಂದೂರು ಜನತಾ ಪ್ರೌಢಶಾಲೆಯ ವಾರ್ಷಿಕ ಸಂಚಿಕೆಗಳು ಪ್ರಮುಖವಾದುವು. ೧೯೨೧ರಲ್ಲಿ ಈ ಮಾಸಿಕವು ನಿಂತು ಹೋದುದಾಗಿ ತಿಳಿದುಬರುತ್ತದೆ. ಪರ್ಯಾಯ ಪ್ರಕಾಶಿನಿ ಪ್ರಮುಖವಾಗಿ ಸಾಂಸ್ಕೃತಿಕ, ಧಾರ್ಮಿಕ ವಿಷಯಗಳ ಪ್ರಸಾರಕ್ಕಾಗಿ ಪ್ರಾರಂಭವಾಯಿತು. ೧/೮ ಡೆಮಿ ಗಾತ್ರದ ಪತ್ರಿಕೆ ೫೨ಪುಟಗಳನ್ನು ಪಡೆದಿರುತ್ತಿತ್ತು. ಸುಮಾರು ೪೦೦ ಚಂದಾದಾರರನ್ನು ಹೊಂದಿದ್ದು, ವಾರ್ಷಿಕ ಚಂದಾ ಮೂರು ರೂಪಾಯಿಯಾಗಿತ್ತು. ಪರ್ಯಾಯ ಕಾಲದಲ್ಲಿ ಮಾತ್ರ ಪ್ರಕಾಶಿಸಿ ವಿಶೇಷ ಸಂಚಿಕೆಗಳನ್ನು (ಸಂ) ಪ್ರಕಟಿಸಿದುದಾಗಿ ತಿಳಿದುಬರುತ್ತದೆ.

ಉಡುಪಿಯ ಕಲಾವೃಂದದ ಪ್ರೇರಣೆಯಿಂದ 'ಯುಗಪುರುಷ' ಪ್ರಾರಂಭವಾದುದಾಗಿ ತಿಳಿದು ಬರುತ್ತದೆ. ಕೋ.ಅ. ಉಡಪರ ಉತ್ಸಾಹದಿಂದಾಗಿ ೧೯೪೨ರ ಅಕ್ಟೋಬರ್ ೧೫ರಂದು 'ಯುಗಪುರುಷ' ಮಾಸಪತ್ರಿಕೆಯು ಪ್ರಾರಂಭಗೊಂಡಿತು. ಕೋ.ಅ. ಉಡುಪ, ಬನ್ನಂಜೆ ರಾಮಾಚಾರ್ಯ, ಎಸ್.ಎಲ್. ನಾರಾಯಣಭಟ್ ಈ ಮೂವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿತ್ತು. ಒಂದೂವರೆ ವರ್ಷಕಾಲ ಉಡುಪಿಯಲ್ಲಿ ಪ್ರಕಟಗೊಳ್ಳುತ್ತಿದ್ದ ಈ ಪತ್ರಿಕೆ ೧೯೪೯ರಿಂದ ಕಿನ್ನಿಗೋಳಿಗೆ ವಲಸೆ ಹೋದುದಾಗಿ ಹಾಗೂ ರಜತ ಜಯಂತಿ ಆಚರಿಸಿದುದಾಗಿ ತಿಳಿದುಬರುತ್ತದೆ. ರಾಜಕೀಯ, ಸಾಮಾಜಿಕ ವಿಷಯಗಳ ಮುಖವಾಣಿಯಾಗಿ ೧೯೫೨ರಲ್ಲಿ ಪ್ರಾರಂಭವಾದ 'ರಾಯಭಾರಿ' ವಾರಪತ್ರಿಕೆ ದೀರ್ಘಕಾಲ ನಡೆಯಿತು. ಅದರ ಸ್ಥಾಪಕರು ಪಾಂಗಳ ಉಪೇಂದ್ರ ಶ್ರೀನಿವಾಸ ನಾಯಕರು. ಅವರ ಮಗ ಪಿ.ರವೀಂದ್ರನಾಯಕ್ ಪ್ರಧಾನ ಸಂಪಾದಕರಾಗಿಯೂ ಎಸ್.ಎಲ್.ಎನ್. ಭಟ್ಟರು ಸಂಪಾದಕರಾಗಿಯೂ ಕಾರ್ಯನಿರ್ವಹಿಸುತ್ತಿದ್ದರು. ಮುಂದೆ ಎಸ್.ಎಲ್. ಎನ್. ಭಟ್ಟರೇ ಪತ್ರಿಕೆಯನ್ನು ವಹಿಸಿಕೊಂಡು ನಡೆಸಿಕೊಂಡು ಬಂದರು ವಿಸ್ತಾರವಾದ ಸಂಪರ್ಕ, ಸ್ಥಾನಿಕ ಸಮಸ್ಯೆಗಳ ಅರಿವಿದ್ದ ಭಟ್ಟರು ಪತ್ರಿಕೆಗೆಂದು ಸ್ವಂತಿಕೆ ನೀಡಿದ್ದರು. ಸುಮಾರು ೧೨ ಪುಟಗಳನ್ನುಳ್ಳ ಕ್ರೌನ್ ೧/೨ ಗಾತ್ರದ ರಾಯಭಾರಿ ವರ್ಷಕ್ಕೊಂದು ವಿಶೇಷ ಸಂಚಿಕೆಯನ್ನು ಪ್ರಕಟಿಸುತ್ತಿತ್ತು. 'ರಾಯಭಾರಿ'ಯ ವಾರ್ಷಿಕ ವಿಶೇಷಾಂಕಗಳು ಎರಡು ವರ್ಷಗಳಿಗೊಮ್ಮೆ ಪರ್ಯಾಯ ವಿಶೇಷಾಂಕಗಳಾಗಿ ಬರುತ್ತಿದ್ದವು. ಉಳಿದಂತೆ ವಾರ್ಷಿಕ ವಿಶೇಷಾಂಕ ಮಾತ್ರ ಬರುತ್ತಿದ್ದವು. ಕ್ರೌನ್ ೧/೪ ಗಾತ್ರದ ಈ ವಿಶೇಷಾಂಕಗಳು ಸುಮಾರು ೧೦೦ರಿಂದ ೧೨೪ ಪುಟಗಳಿರುತ್ತಿದ್ದವು. ಹಾಗೂ ಸಾಹಿತ್ಯ ದೃಷ್ಟಿಯಿಂದ ಈ ಸಾಪ್ತಾಹಿಕಕ್ಕೆ ಕು.ಶಿ. ಹರಿದಾಸ್‌ಭಟ್, ಎಸ್. ವೆಂಕಟರಾಜ ಎಂ.ಆರ್. ಭಟ್ ಮೊದಲಾದವರು ಸಹಕಾರ ನೀಡುತ್ತಿದ್ದುದಾಗಿ ತಿಳಿದುಬರುತ್ತದೆ. ಸುದ್ದಿ ಮತ್ತು ರಾಜಕೀಯ ಸಮಸ್ಯೆಗಳನ್ನು ಪ್ರಧಾನವಾಗಿಟ್ಟುಕೊಂಡಿದ್ದ ನವಯುಗ, ರಾಯಭಾರಿಗಳಲ್ಲದೆ, ಉಡುಪಿಯಲ್ಲಿ ಸಾಹಿತ್ಯ, ವಿಮರ್ಶೆ ಮೊದಲಾದವುಗಳಿಗೆ ಮೀಸಲಾದ ಮಾಸಪತ್ರಿಕೆಗಳು ಬೆಳೆದುಬಂದುದಾಗಿ ತಿಳಿದುಬರುತ್ತದೆ. ಅದಲ್ಲದೆ ಪ್ರಕಾಶ (೧೯೪೪) ಎ.ಜೆ. ಅಲ್ಸೆ ಪುಷ್ಪ (೧೯೪೨ (ಸಂ), ಕೆ.ಪ್ರಭಾಕರರಾವ್) ಆಯುರ್ವೇದ ೧೯೪೮ ಸಂಪಾದಕರು: ಕೆ. ಆರ್. ಪುರಾಣಿಕ್), ಕಿರಣ (೧೯೫೦ ಸಂ.ವಿ.ಆರ್.ಆರ್. ರಾವ್) ವಿಮರ್ಶಕ (೧೯೫೦ ಆರ್.ಎಸ್. ಮಲ್ಯ ಮತ್ತು ಡಿ. ಆರ್. ನಾಥ್) ಮುಂತಾದವು ಉದಯಿಸಿ ಉಡುಪಿಯ ಪತ್ರಿಕಾರಂಗವನ್ನು ವಿಸ್ತರಿಸಿದವು. ಸುಪ್ರಭಾತ (೧೯೫೨) ವೀರಭೂಮಿ (೧೯೬೩) ಭವ್ಯವಾಣಿ, ಕಲಾ,

ದೇಶರಂಜನ, ಸ್ವರಾಜ್ಯ ಮೊದಲಾದವು ಹೊಸ ಸಾಹಿತ್ಯ ಕಲಾಪ್ರಜ್ಞೆಗೆ ಧ್ವನಿ ನೀಡಿದುದಾಗಿ ತಿಳಿದುಬರುತ್ತದೆ.

೧೯೩೨ರಲ್ಲಿ ಮಹಿಳೆಯರಿಗಾಗಿಯೇ ಆರಂಭವಾದ ಮಾಸಪತ್ರಿಕೆ 'ಸುಪ್ರಭಾತ'. ಇದನ್ನು 'ಗಿರಿಮಾಲೆ' (ಸರಸ್ವತಿಬಾಯಿ ರಾಜವಾಡೆ) ಯವರು ಆರಂಭಿಸಿದರು. ಸುಪ್ರಭಾತ ಪತ್ರಿಕೆಯು ೧/೪ ಕ್ರೌನ್ ಆಕಾರದಲ್ಲಿದ್ದು, ೨೪ ಪುಟಗಳನ್ನೊಳಗೊಂಡಿತ್ತು. ಸಂಪುಟಕ್ಕೆ 'ಕಮಲ' ಎಂದು ಸಂಚಿಕೆಗೆ 'ದಳ' ಎಂದು ಮುದ್ರಿಸಲಾಗುತ್ತಿತ್ತು. ಇದರ ಬಿಡಿ ಸಂಚಿಕೆಯ ಬೆಲೆ ನಾಲ್ಕಾಣೆ, ವಾರ್ಷಿಕ ಚಂದಾ ಮೂರು ರೂಪಾಯಿಗಳಾಗಿತ್ತು. ಒಂದು ವರ್ಷ ಅಚ್ಚುಕಟ್ಟಾಗಿ ನಡೆದ 'ಸುಪ್ರಭಾತ' ಆರ್ಥಿಕ ಮುಗ್ಗಟ್ಟಿನಿಂದ ನಿಂತುಹೋದುದಾಗಿ ಕಂಡುಬರುತ್ತದೆ.

'ವೀರಭೂಮಿ' ಮಾಸಪತ್ರಿಕೆಯನ್ನು ಸಂಸ್ಕೃತ ಹಾಗೂ ಕನ್ನಡದ ಹಿರಿಯ ಸಾಹಿತಿಗಳಾದ ಎಸ್. ವೆಂಕಟರಾಜರು ಸ್ವಂತವಾಗಿ ಅನೇಕ ವರ್ಷ ನಡೆಸಿದರು. ಕೆ.ಎಲ್. ಭಟ್ಟರ 'ಭವ್ಯವಾಣಿ' ಸಾಹಿತ್ಯ ಪತ್ರಿಕೆಯಾಗಿ ಜನಪ್ರಿಯತೆ ಪಡೆದುಕೊಂಡಿತು. ಪ್ರಬುದ್ಧ ಬರಹಗಳೊಡನೆ ಹಲವು ವರ್ಷ ನಡೆದು ಬಂದಂತೆ ತಿಳಿದುಬರುತ್ತದೆ. ಅಲ್ಲದೆ ೧೯೬೯ರಲ್ಲಿ ವಿ. ಎಸ್. ಅಚಾರ್ಯರ 'ಜನಸಂದೇಶ' ಪಾಕ್ಷಿಕವಾಗಿ ಉಡುಪಿಯ ಪತ್ರಿಕಾರಂಗವನ್ನು ಬೆಳಗಿತು. ಉಡುಪಿಯ ರಂಗಾಸಕ್ತರ ಸಾಹಸವಾದ 'ಕಲಾ' ಆ ಸುಮಾರಿನಲ್ಲಿಯೇ ಪದ್ಮನಾಭ ನಾಯಕರ 'ಪರಾಗ' (೧೯೩೮) ಯು. ವ್ಯಾಸರಾವ್ ಅವರ ವಿಕಾಸ (೧೯೬೧) ಹಂಡೆ ಗುರುದೇವ ವ್ಯಾಸಾಚಾರ್ಯರ 'ವಾಣಿ' (೧೯೬೮) ಮಾಸಪತ್ರಿಕೆಗಳಾಗಿಯೂ, ಎಸ್. ಪದ್ಮನಾಭ ನಾಯಕರ ವಿಶ್ವಾಮಿತ್ರ (೧೯೬೭) ಮಕ್ಕಳ ಮಾಸಪತ್ರಿಕೆಯಾಗಿಯೂ ಬೆಳಗಿತು.

ಸ್ವಾತಂತ್ರ್ಯ ಪೂರ್ವದಲ್ಲಿ ಬಾಸೆಲ್ ಮಿಶನ್ ದಕ್ಷಿಣ ಕನ್ನಡ ಪತ್ರಿಕೋದ್ಯಮಕ್ಕೆ ಭದ್ರ ತಳಪಾಯ ಹಾಕಿದ ರೀತಿಯಲ್ಲೇ ಪತ್ರಿಕೋದ್ಯಮ ಬೆಳವಣಿಗೆಗೆ ಭಾರಿ ಕೊಡುಗೆ ನೀಡಿದ ಮತ್ತೊಂದು ಪ್ರಕಟಣ ಸಂಸ್ಥೆಯೆಂದರೆ ಮಣಿಪಾಲ ಪ್ರಕಾಶನ. ಮಣಿಪಾಲ್ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಸಂಸ್ಥೆಯನ್ನು ೧೯೪೧ರಲ್ಲಿ ಮಾಧವ ಪೈಗಳು ಪ್ರಾರಂಭಿಸಿದರು.

೧೯೭೦ರಲ್ಲಿ ಆಧುನಿಕ ತಂತ್ರಜ್ಞಾನದೊಂದಿಗೆ ಪ್ರಕಟಿಸಿದ ಉದಯವಾಣಿ ದಿನಪತ್ರಿಕೆಯು ಕರಾವಳಿ ಕರ್ನಾಟಕದ ಹೆಮ್ಮೆಯ ಪ್ರಕಟಣೆ. ಸುಂದರ ಮುದ್ರಣ, ವಿನ್ಯಾಸಕ್ಕಾಗಿ ೧೯೭೦ರಿಂದ ಹಲವು ಬಾರಿ ರಾಷ್ಟ್ರೀಯ ಪ್ರಶಸ್ತಿಗೆ ಪಾತ್ರವಾಗಿದೆ. ಅಭ್ಯುದಯ ಪತ್ರಿಕೋದ್ಯಮದ ತತ್ವಗಳನ್ನು ಅಳವಡಿಸಿಕೊಂಡು, ಸಂಸ್ಕೃತಿ, ಕಲೆ, ಸಾಹಿತ್ಯ, ವಿಚಾರಸಾಹಿತ್ಯ ವಿಷಯಗಳನ್ನೊಳಗೊಂಡ ಉದಯವಾಣಿ ಬಳಗಕ್ಕೆ ಸೇರಿದ 'ತುಷಾರ' (೧೯೭೩) ಎಂಬ ಸಾಹಿತ್ಯಿಕ ಮಾಸಪತ್ರಿಕೆ, ರೂಪತಾರಾ (೧೯೭೬) ಚಲನಚಿತ್ರ ಮಾಸಪತ್ರಿಕೆ 'ತರಂಗ' (೧೯೮೩) ಸಮಗ್ರ ಸಾಪ್ತಾಹಿಕವು ಜಿಲ್ಲಾ ಪತ್ರಿಕೋದ್ಯಮಕ್ಕೆ ಹಿರಿಮೆ ಹಾಗೂ ಗರಿಮೆಯನ್ನು ತಂದಿದೆ. ಅದೇ ರೀತಿ ಏಪ್ರಿಲ್ ೮,೧೯೯೭ರಿಂದ ಮಣಿಪಾಲ್ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್ ಸಂಸ್ಥೆಯು ತೋನ್ಸೆ ಸತೀಶ್ ಪೈ ಸಂಪಾದಕತ್ವದ 'ಉದಯವಾಣಿ ಇಂಟರ್‌ನೆಟ್ ಆವೃತ್ತಿ' ಪ್ರಾರಂಭಿಸಿದ್ದು, ಕನ್ನಡ ಮುನ್ನಡೆ ವೆಬ್ ಆಫ್ ಸೆಟ್ ಮುದ್ರಣವನ್ನು ಕಂಡ ಕನ್ನಡದ ಮೊತ್ತ ಮೊದಲ ಭಾರತದ ಎರಡನೆಯ ಪತ್ರಿಕೆ ಎಂಬ ಕೀರ್ತಿ ಉದಯವಾಣಿಗೆ ಸಂದಿದೆ.

ಸಿಂಡಿಕೇಟ್ ಬ್ಯಾಂಕ್‌ನ ಆಶ್ರಯದಲ್ಲಿ ೧೯೩೪ರಲ್ಲಿ ಆರಂಭವಾದ ಡಾ. ಎನ್. ಕೆ. ತಿಂಗಳಾಯ ಸಂಪಾದಕತ್ವದಲ್ಲಿ *'Pigmy'* ಎಂಬ ಇಂಗ್ಲಿಷ್ ಸಾಪ್ತಾಹಿಕ ಉಚಿತವಾಗಿತ್ತು. ಉಳಿತಾಯ ಯೋಜನೆಯ ಪ್ರಚಾರ ಉದ್ದೇಶ ಹೊಂದಿದ್ದು, ದಶಕಗಳ ಬ್ಯಾಂಕ್‌ನ ಮುಖವಾಣಿಯಾಗಿದೆ. ಇದರಲ್ಲಿ ಸಾರ್ವಜನಿಕ ಆರ್ಥಿಕ ಲೇಖನಗಳ ಮಾಲಿಕೆಯನ್ನು ಪ್ರಕಟಿಸುತ್ತಾ ಹೆಸರು ಮಾಡಿರುವ ಪತ್ರಿಕೆ ಇದಾಗಿದೆ.

೧೯೬೬ರಲ್ಲಿ ಮಣಿಪಾಲದಲ್ಲಿ 'ಮಣಿಪಾಲ್ ರೆಕಾರ್ಡ್' ಸಾಪ್ತಾಹಿಕವು ಎಂಬ ಉತ್ತಮ 'ಕ್ಯಾಂಪಾಸ್ ನ್ಯೂಸ್' ಪತ್ರಿಕೆಯಾಗಿದ್ದಿತು. ಕೆ. ಎಂ. ಕಾರಂತ ಅದನ್ನು ೧೭ ವರ್ಷಗಳ ಕಾಲ ಜನಪ್ರಿಯ ಸ್ಥಳೀಯ ಸುದ್ದಿ ಪತ್ರಿಕೆಯಾಗಿ ಗುರುತಿಸುವಂತೆ ಬೆಳೆಸಿದರು. ಆ ನಂತರ ಅದು ಮಾಸಿಕವಾಗಿ ಪುನರ್ ಪ್ರಕಟಣೆಗೊಂಡು ಮಣಿಪಾಲ ವಿದ್ಯಾರ್ಥಿ ಸಂಸ್ಥೆಗಳೊಂದಿಗೆ ಅಲ್ಲಿನ ಹಳೆ ಹೊಸ ವಿದ್ಯಾರ್ಥಿಗಳನ್ನು ಬೆಸೆಯುವ ಕೊಂಡಿಯಾಗಿ

ಬೆಳೆದಿದೆ. ೧೯೯೬ರ ಕನ್ನಡ ರಾಜ್ಯೋತ್ಸವದಂದು ಉದಯವಾಣಿ ಸಮೂಹದಿಂದ ಹೊರಬರತೊಡಗಿದ ಮಣಿಪಾಲದ 'ಉದಯವಾಣಿ ಮಾರ್ನಿಂಗ್ ನ್ಯೂಸ್' ಇಂಗ್ಲಿಷ್ ಪತ್ರಿಕೋದ್ಯಮಕ್ಕೊಂದು ಖಚಿತ ರೂಪು ನೀಡುವ ಪ್ರಯತ್ನವಾಗಿದೆ. ೧೯೯೬ರಲ್ಲಿ ಮಣಿಪಾಲ ಪತ್ರಿಕಾ ಸಮೂಹದ 'ಸ್ಟ್ಯಾಂಡರ್ಡ್ ಡೈರಿ' ಎಂಟು ಪುಟಗಳಿದ್ದು, ಉನ್ನತ ಮಟ್ಟದ್ದಾಗಿದೆ.

ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಭಾಗ–ಮೂರು (೧೯೮೬)ರಲ್ಲಿ ರಾಜ್ಯದ ಪತ್ರಿಕೆಗಳ ಪಟ್ಟಿಯಿದ್ದು, ಅದರಲ್ಲಿ ನಮೂದಾಗಿರುವ ಉಡುಪಿ ಜಿಲ್ಲೆಗೆ ಸಂಬಂಧಪಟ್ಟ ಪತ್ರಿಕೆಗಳನ್ನು ಆಕಾರಾದಿಯಾಗಿ ನೀಡಿದೆ.

| ಕ್ರ.ಸಂ. | ಹೆಸರು | ಅವಧಿ | ಸ್ಥಳ | ವರ್ಷ | ಸಂಪಾದಕ/ಪ್ರಕಾಶಕ |
|---|---|---|---|---|---|
| ೧ | ಅಂತರಂಗ | ವಾ | ಉಡುಪಿ | ೧೯೩೮ | ಯು.ಎಸ್.ಪಣಿಯಾಡಿ<br>ಆರ್. ಹೊನ್ನಯ್ಯ ಶೆಟ್ಟಿ |
| ೨ | ಆಯುರ್ವೇದ | ಮಾ | ಹಿರಿಯಡ್ಕ | ೧೯೪೮–೬೦ | ಕೆ.ಆರ್.ಪುರಾಣಿಕ |
| ೩ | ಉದಯಭಾರತ | ತ್ರೈ.ಮಾ.ಪಾ. | ಉಡುಪಿ/ಮಂಗಳೂರು | ೧೯೨೭ | ಅಲೆವೂರು ಶೇಷಪ್ಪಯ್ಯ |
| ೪ | ಕಂದ | ಮಾ | ಉಡುಪಿ | ೧೯೫೧–೫೭ | ಆರ್.ಎಸ್.ಮೈಲಾಯ<br>ಡಿ.ಆರ್.ನಾಥ್ |
| ೫ | ಕಲಾಚಂದ್ರ | ವಾ | ಕಾರ್ಕಳ | ೧೯೩೩–೩೫ | ಆರ್.ಜೆ.ಶೆಣೈ |
| ೬ | ಜನಯುಗ | ಪಾ/ವಾ | ಕಟಪಾಡಿ | ೧೯೫೨–೫೩ | ಎಂ.ವಿ. ಹೆಗಡೆ |
| ೭ | ಜೈನಬಂಧು | ಮಾ | ಕೊಕ್ಕರ್ಣೆ | ೧೯೧೧–೧೪ | ಎಸ್.ಎ.ನಾಭಿರಾಜಯ್ಯ |
| ೮ | ಧರ್ಮಬೋಧ | ಮಾ | ಉಡುಪಿ | ೧೯೪೮–೬೭ | ವೆಂಕಟರಮಣಾಚಾರ್ಯ<br>ಕೆ. ರಾಜಗೋಪಾಲ |
| ೯ | ಧುರೀಣ | ಮಾ | ಉಡುಪಿ | ೧೯೩೪ | ಜೆ.ಎಸ್. ಶೆಣೈ<br>ಆರ್.ಎಸ್. ಶೆಣೈ |
| ೧೦ | ನವಯುಗ | ವಾ | ಉಡುಪಿ | ೧೯೨೧–೭೬ | ಕೆ. ಹೊನ್ನಯ್ಯಶೆಟ್ಟಿ<br>ಎಂ.ವಿ. ಹೆಗಡೆ |
| ೧೧ | ನವಶಕ್ತಿ | ಮಾ | ಉಡುಪಿ/ಮಂಗಳೂರು | ೧೯೩೮ | ಪಿ.ಎನ್.ಬಿ. ರಾಮಾಚಾರ್ |
| ೧೨ | ಪರ್ಯಾಯ ಪ್ರಕಾಶಿನಿ | ಮಾ | ಉಡುಪಿ | ೧೯೪೨ | ಬಿ.ರಾಮಕೃಷ್ಣಾಚಾರ್ |
| ೧೩ | ಪ್ರಕಾಶ | ವಾ/ಪಾ | ಉಡುಪಿ | ೧೯೪೮ | ಅ.ಗ.ಅಲ್ಸೆ, ಬಿ.ರಾಮಾಚಾರ್ |
| ೧೪ | ಪುಷ್ಪಾ | ಮಾ | ಉಡುಪಿ | ೧೯೪೯ | ಕೆ.ಪ್ರಭಾಕರರಾವ್<br>ನಂದಶೆಟ್ಟಿ ಕಿದಿಯೂರು |
| ೧೫ | ಬಾಲಚಂದ್ರ | ಪಾ/ಮಾ | ಮಂಗಳೂರು/ಉಡುಪಿ | ೧೯೨೯–೪೨ | ಕೆ.ಸುಬ್ರಹ್ಮಣ್ಯ |
| ೧೬ | ಭೋಧಿನಿ | ಮಾ | ಉಡುಪಿ | ೧೯೧೫–೪೭ | ಟಿ.ಮಂಗೇಶರಾವ್ |
| ೧೭ | ಮಹಾವೀರ | ತ್ರೈ/ಮಾ | ಕಾಪು | ೧೯೩೯ | ಬಿ.ಎಸ್. ಪಡುಬಿದ್ರಿ<br>ಡಿ.ಬಿ.ಕೋಟ್ಯಾನ್ |
| ೧೮ | ಮಾನವಧರ್ಮ ವಿಚಾರ | ವಾ | ಉಡುಪಿ | – | – |
| ೧೯ | ಯುಗಪುರುಷ | ಮಾ | ಉಡುಪಿ/ಕಿನ್ನಗೋಳಿ | ೧೯೪೭ | ಕೆ.ಅನಂತಪದ್ಮನಾಭ ಉಡುಪ<br>ಬಿ.ರಾಮಚಾರ್ಯ |

| ಕ್ರ.ಸಂ. | ಹೆಸರು | ಅವಧಿ | ಸ್ಥಳ | ವರ್ಷ | ಸಂಪಾದಕ/ಪ್ರಕಾಶಕ |
|---|---|---|---|---|---|
| ೨೦ | ರಾಯಭಾರಿ | ವಾ | ಉಡುಪಿ | ೧೯೫೧ | ಎಸ್.ಎಲ್.ಎನ್.ಭಟ್ |
| ೨೧ | ವರ್ತಕ ಧುರೀಣ | ಮಾ | ಉಡುಪಿ | ೧೯೩೫–೩೮ | ರಾಮಚಂದ್ರ ಎಸ್. ಶೆಣೈ |
| ೨೨ | ವಸಂತ | ಮಾ/ಪಾ | ಕುಂದಾಪುರ | ೧೯೨೩–೩೦ | ಶಿವರಾಮ ಕಾರಂತ |
| ೨೩ | ವಿಜಯ | ಮಾ | ಕಾರ್ಕಳ | ೧೯೫೧ | ಧರ್ಮಪಾಲ |
| ೨೪ | ವಿಮರ್ಶಕ | ಮಾ/ಪಾ | ಉಡುಪಿ | ೧೯೫೦–೫೧ | ನಂದಳಿಕೆ ವಿಠಲದಾಸ |
| ೨೫ | ವೀಣಾ | ಮಾ | ಶಿರ್ವ | ೧೯೫೦–೫೮ | ಶಂಕರನಾರಾಯಣರಾವ್ |
| ೨೬ | ಶಕ್ತಿ | ಮಾ | ಕಾರ್ಕಳ | ೧೯೨೬–೨೭ | ಕೆ.ಪಿ. ಕಾಮತ್<br>ಎಂ.ಗೋವರ್ಧನರಾವ್ |
| ೨೭ | ಶ್ರೀ ಕೃಷ್ಣಸಂದೇಶ | ಪಾ | ಉಡುಪಿ | ೧೯೩೨–೩೫ | ವ ʼ ು ದ ಾ ್ ಡಿ<br>ಜನಾರ್ಧನಾಚಾರ್ಯ |
| ೨೮ | ಶ್ರೀ ಕೃಷ್ಣಸೂಕ್ತಿ | ಪಾ | ಉಡುಪಿ | ೧೯೦೬–೩೮ | ಕರೋಡಿ ಸುಬ್ಬರಾವ್ |
| ೨೯ | ಸತ್ಯಾಗ್ರಹಿ | ಮಾ/ವಾ | ಉಡುಪಿ | ೧೯೨೧–೨೭ | ಎಚ್. ರಾಮರಾಯ ಮಲ್ಯ |
| ೩೦ | ಸದ್ಗುರು ಪಾದಸೇವೆ | ಮಾ | ಉಡುಪಿ | ೧೯೧೩–೪೭ | ಕೆ. ವೆಂಕಟಶರ್ಮ |
| ೩೧ | ಸ್ವತಂತ್ರ ಭಾರತ | ವಾ/ದಿ | ಉಡುಪಿ/ಮಂಗಳೂರು | ೧೯೩೭–೪೭ | ಎಚ್.ಆರ್. ಮಲ್ಯ<br>ಕೆ.ಹೈದರ್ |
| ೩೨ | ಸ್ವರಾಜ್ಯ | ಮಾ | ಉಡುಪಿ | ೧೯೪೯ | ಅಂತಯ್ಯ ಶೆಟ್ಟಿ |
| ೩೩ | ಸುದರ್ಶನ | ಮಾ | ಉಡುಪಿ | ೧೮೮೪–೯೬ | ಕೆ. ಕೃಷ್ಣರಾವ್<br>ಬಿ.ರಾಮರಾವ್ |
| ೩೪ | ಸುದರ್ಶನ | ಮಾ | ಉಡುಪಿ | ೧೯೫೧–೫೯ | ಬಿ.ರಾಮಾಚಾರ್ಯ |
| ೩೫ | ಸುಪ್ರಭಾತ | ಮಾ | ಉಡುಪಿ | ೧೯೫೨ | ಸರಸ್ವತಿಬಾಯಿ ರಾಜವಾಡೆ |

ಮಾ: ಮಾಸಿಕ, ವಾ: ವಾರ್ಷಿಕ, ಪಾ: ಪಾಕ್ಷಿಕ, ತ್ರೈಮಾ: ತ್ರೈಮಾಸಿಕ

ಸದರಿ ರಾಜ್ಯ ಗ್ಯಾಸೆಟಿಯರ್‌ನಲ್ಲಿ ಪ್ರಕಟವಾಗಿರುವ ಪಟ್ಟಿಯಲ್ಲದೆ, ಕರ್ನಾಟಕ ಪತ್ರಿಕಾ (ಮಾಧ್ಯಮ) ಅಕಾಡೆಮಿ ಪ್ರಕಟಿಸಿರುವ 'ಕರ್ನಾಟಕ ಪತ್ರಿಕಾ ಇತಿಹಾಸ ಸಂಪುಟ–೧'ರಲ್ಲಿ ಪಿ.ಗೋಪಾಲಕೃಷ್ಣ ಅವರು ಸ್ವತಃ ಹುಡುಕಿದ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಪತ್ರಿಕೋದ್ಯಮದ ಬಗ್ಗೆ ಅಧ್ಯಯನ ಮಾಡಿದ ಪಿ.ಎಸ್.ಈಶ್ವರಭಟ್ (ಈಶ್ವರ ದೈತೋಟ) ಅವರ ಲೇಖನ ಆಧರಿಸಿ ೨೦೬ ಪತ್ರಿಕೆಗಳ ಪಟ್ಟಿಯನ್ನು ನೀಡಿರುತ್ತಾರೆ. ಅದರಲ್ಲಿ ಉಲ್ಲಿಖಿತವಾದ ಉಡುಪಿ ಜಿಲ್ಲೆಯ ಪತ್ರಿಕೆಗಳು ಹಾಗೂ ವಿವಿಧ ಮೂಲಗಳಿಂದ ಸಂಗ್ರಹಿಸಿದ ಪತ್ರಿಕೆಗಳ ವಿವರವು ಈ ಮುಂದಿನಂತಿದೆ.

೧. ಕಿರಣ–(ಮಾಸಿಕ) ವಿ.ಆರ್.ಆರ್. ರಾವ್ –೧೯೫೦–ಉಡುಪಿ

೨. ಪಿಗ್ಮಿ–(ಇಂಗ್ಲಿಷ್–ಸಾಪ್ತಾಹಿಕ)– ಕೆ.ಎಸ್. ಹರಿದಾಸ್ ಭಟ್, ಎನ್.ಕೆ. ತಿಂಗಳಾಯ ೧೯೫೪– ಮಣಿಪಾಲ

೩. ಭವ್ಯವಾಣಿ–(ಮಾಸಿಕ)– ಕೆ.ಎಲ್.ಭಟ್– ೧೯೫೮–ಉಡುಪಿ

೪. ಪರಾಗ–(ಮಾಸಿಕ)– ಪದ್ಮನಾಭ ನಾಯಕ್– ೧೯೫೮– ಉಡುಪಿ

೫. ವಿಕಾಸ– (ಮಾಸಿಕ)– ಯು. ವ್ಯಾಸರಾವ್–೧೯೬೧– ಉಡುಪಿ

೬. ವೀರಭೂಮಿ–(ಮಾಸಿಕ) ಎಸ್. ವೆಂಕಟರಾಜ–೧೯೬೩– ಉಡುಪಿ

೭. ಕೃಷಿಲೋಕ–(ಮಾಸಿಕ)– ಕೆ.ಕೆ.ಪೈ(ಸಿಂಡಿಕೇಟ್ ಕೃಷಿ ಪ್ರತಿಷ್ಠಾನ) ೧೯೬೭– ಮಣಿಪಾಲ

೮. ಮಣಿಪಾಲ್ ರೆಕಾರ್ಡ್– (ಇಂಗ್ಲಿಷ್– ಸಾಪ್ತಾಹಿಕ) –ಕೆ.ಎಂ. ಕಾರಂತ–೧೯೬೭– ಮಣಿಪಾಲ

೯. ವಿಶ್ವಮಿತ್ರ–(ಮಕ್ಕಳ ಮಾಸಿಕ)– ಎಸ್. ಪದ್ಮನಾಭ ನಾಯಕ್–೧೯೬೭– ಉಡುಪಿ

೧೦. ವಾಣಿ–(ಮಾಸಿಕ)– ಹಂದೆ ಗುರುದೇವವ್ಯಾಸ–೧೯೬೮– ಉಡುಪಿ

೧೧. ಜನಸಂದೇಶ–(ತ್ರೈಮಾಸಿಕ)– ಡಾ. ವಿ.ಎಸ್. ಆಚಾರ್– ೧೯೬೯– ಉಡುಪಿ

೧೨. ಕೃಷಿಕರ ಸಂಘಟನೆ–(ಸಾಪ್ತಾಹಿಕ) –ಬೋಳ ರಘುರಾಮ ಶೆಟ್ಟಿ– ೧೯೬೯– ಕಾರ್ಕಳ

೧೩. ಉದಯವಾಣಿ–(ದೈನಿಕ) –ಟಿ.ಸತೀಶ್ ಯು. ಪೈ– ೧೯೭೦

೧೪. ರಶ್ಮಿ–(ಮಾಸಿಕ)– ಎ. ಗಣಪಯ್ಯ ಅಲ್ಸೆ– ೧೯೭೧– ಕೋಟ

೧೫. ತುಷಾರ–(ಮಾಸಿಕ) –ಟಿ.ಸತೀಶ್ ಯು. ಪೈ– ೧೯೭೩– ಮಣಿಪಾಲ

ಇಲ್ಲಿಂದ ಮುಂದೆ ಉಲ್ಲೇಖಿಸಿರುವ ಪತ್ರಿಕೆಗಳ ಆರಂಭದ ವರ್ಷ ಹಾಗೂ ಕೆಲವು ಪತ್ರಿಕೆಗಳ ಸಂಪಾದಕರ ಹೆಸರು ಲಭ್ಯವಿರುವುದಿಲ್ಲ.

೧೬. ಕಲಾ–(ಪಾಕ್ಷಿಕ) ಕೆ. ಪ್ರಭಾಕರ ರಾವ್– ಉಡುಪಿ

೧೭. ಕಾಲಚಕ್ರ– ಉಡುಪಿ

೧೮. ಪ್ರಗತಿ(ಪಾಕ್ಷಿಕ) –ಬಿ.ವಿ.ಬೆಳ್ತಂಗಡಿ– ಕಾರ್ಕಳ

೧೯. ರೈತವಾಣಿ– ಉಡುಪಿ

೨೦. ಹ್ಯೂಮನ್ ಅಫೇರ್ಸ್–(ಇಂಗ್ಲಿಷ್)– ಉಡುಪಿ

೨೧. ಶಿಕ್ಷಕ ವಾಣಿ –(ಮಾಸಿಕ) – ಕೆ. ಭೋಜರಾಜ ಶೆಟ್ಟಿ–೧೯೭೦– ಕಾಪು

೨೨. ನವನೀತ– (ಮಾಸಿಕ) ಮೊಹಸೀನ್ ಹಾಜಿ ಕಾಸಿಮ್– ಕಾಪು

೨೩. ಫೈನಾನ್ಷಿಯಲ್ ಎಕ್ಸ್‌ಪೋರ್ಟರ್ (Financial Exporter)–ಎಸ್.ಯು. ಪಣಿಯಾಡಿ

೨೪. ಚರಖಾ ಸಂದೇಶ– ಎಚ್. ರಾಮರಾಯ ಮಲ್ಯ

೨೫. ಇಂದ್ರಧನುಸ್– ರಘು

೨೬. ಚಂದ್ರಕಾಂತಿ– ಉಡುಪಿ

೨೭. ಚಿಂತಾಮಣಿ– ಉಡುಪಿ

೨೮. ಚಿತ್ರ– ಉಡುಪಿ

೨೯. ದೇಶರಂಜನ– ಉಡುಪಿ

೩೦. ಧರ್ಮವೀರ – ಉಡುಪಿ

೩೧. ಗ್ರಾಮಹಿತ– ಎಸ್. ಮುಕುಂದರಾವ್

೩೨. ಉದಯಭಾರತಿ– ತೋನ್ಸೆ ದೇವದಾಸ್ ಪೈ

೩೩. ಬಯಲು– ಸುಧಾಕರ ಬನ್ನಂಜೆ

೩೪. ರೂರಲ್ ಬುಲೆಟಿನ್– ಶಾರದಾ ಆರ್. ರಾವ್

೩೫. ಬಳಕೆದಾರರ ವೇದಿಕೆ

೩೬. ಅನಂತ ಚೈತನ್ಯ – (ಮಾಸಿಕ) –೧೯೬೩– ಸಂ. ಅಶ್ವತ್ಥ ರಾಮ ಭಟ್ಟ– ಪ್ರಕಾಶಕರು: ದೇಶಸ್ಥ ಬ್ರಾಹ್ಮಣ ಪರಿಷತ್ತು– ಕಾರ್ಕಳ

೩೭. ಕಲಿಯುಗ – ಎಂ.ಗೋಪಾಲಕೃಷ್ಣರಾಯರು– ಕಾರ್ಕಳ

೩೮. ದೀರ್ಘಾಯು– ಎಂ. ಗೋಪಾಲಕೃಷ್ಣರಾಯರು– ಕಾರ್ಕಳ

೩೯. ಗುರುದೇವ–(ಮಾಸಿಕ) – ೧೯೩೩– ನೆಲ್ಲಿಕಾರು ಧರ್ಮರಾಜ ಯಾದವ– ಕಾರ್ಕಳ (ಎನ್.ಡಿ. ಯಾದವ)

೪೦. ಸಮವಸರಣ– ಅನಿಯತಕಾಲಿಕೆ

೪೧. ಅಪಂಗಾ–(ಮಾಸಿಕ)– ಕೆ. ಯುಗಾನಂದ ಶೆಟ್ಟಿ– ಕೊಲ್ಲೂರು

೪೨. ಮೂಕಾಂಬಿಕಾ–(ಮಾಸಿಕ) – ಮಲೆಯಾಳಂ– ಆದಿಶಂಕರ ಮುದ್ರಣಾಲಯ – ಕೊಲ್ಲೂರು

೪೩. ಬಿಂದುನಾಡು–(ವಾರಪತ್ರಿಕೆ) – ಜಗದೀಶ್ ಆಚಾರ್– ಬೈಂದೂರು

೪೪. ಅನುರಾಗ–(ವಾರ್ಷಿಕ) – ಹಸ್ತಲಿಖಿತ ಪತ್ರಿಕೆ– ಕೇಶವ ಎಲ್ಲಂಗಳ

೪೫. ಕುಂದಶ್ರೀ– (ಗೃಹಪತ್ರಿಕೆ) ರೋಟರಿ ಸಂಸ್ಥೆ, ಕುಂದಾಪುರ

೪೬. ಬಳಕೆದಾರರ ಶಿಕ್ಷಣ– ಬಸರೂರು ಕೃಷ್ಣ ಬಳೆಗಾರ್– ಕುಂದಾಪುರ

೪೭. ಕುಂದಪ್ರಭ– (ವಾರಪತ್ರಿಕೆ)– ಯು.ಎಸ್.ಶೆಣೈ– ಗಂಗೊಳ್ಳಿ

## ಉಡುಪಿ ಜಿಲ್ಲೆಯ ಕನ್ನಡ ಸಂಘಗಳು

**ಉಡುಪಿ ಕರ್ನಾಟಕ ಸಂಘ** : ಪ್ರಕೃತ ಸ್ಥಗಿತವಾಗಿದ್ದರೂ ಸುಮಾರು ಮೂರು ದಶಕಗಳ ಕಾಲ ಉಡುಪಿಯಲ್ಲಿ ಅತ್ಯಂತ ಕ್ರಿಯಾಶೀಲವಾಗಿದ್ದ ಸಂಸ್ಥೆ ಕರ್ನಾಟಕ ಸಂಘ (ರಿ), ಉಡುಪಿ. ಉಡುಪಿಯಲ್ಲಿ ತಮ್ಮ ಹಿರಿತನದಿಂದ ಹೆಸರಾಗಿದ್ದ, ಸಾಹಿತ್ಯ ಪ್ರೇಮಿಯೂ ಆಗಿದ್ದ ಕಡೇಕಾರ್ (ಅಥವಾ ನಿಡಂಬೂರು) ರಾಜ ಗೋಪಾಲಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ೧೯೪೪ರಲ್ಲಿ ಸಂಘದ ಸ್ಥಾಪನೆಯಾಯಿತು. ಕನ್ನಡ ಭಾಷೆ, ಸಾಹಿತ್ಯಗಳನ್ನು ಕುರಿತು ಜನರಲ್ಲಿ ಜಾಗೃತಿ, ಪ್ರೀತಿಗಳನ್ನು ಉಂಟು ಮಾಡುವುದು ಅದಕ್ಕಾಗಿ ನಾಡಹಬ್ಬ, ವಸಂತೋತ್ಸವ, ಸಾಹಿತ್ಯ ಮತ್ತು ಯಕ್ಷಗಾನ ಗೋಷ್ಠಿ, ಕವಿಸಮ್ಮೇಳನಗಳನ್ನು, ಪ್ರಸಿದ್ಧ ಸಾಹಿತಿಗಳಿಂದ ಉಪನ್ಯಾಸಗಳನ್ನು ಏರ್ಪಡಿಸುವುದು, ಹರಿದು ಹಂಚಿ ಹೋಗಿದ್ದ ಕನ್ನಡ ನಾಡನ್ನು ಒಗ್ಗೂಡಿಸುವ ನಿಟ್ಟಿನಲ್ಲಿ ಪ್ರಯತ್ನಿಸುವುದು – ಇವೆಲ್ಲ ಸಂಘದ ಉದ್ದೇಶ ಸೂಚಿಯಲ್ಲಿ ಸೇರಿದ್ದವು. ಕಾರಂತ, ವಿ.ಸೀ., ಅ.ನ.ಕೃ., ಸಿ.ಕೆ. ವೆಂಕಟರಾಮಯ್ಯ, ನಾ. ಕಸ್ತೂರಿ, ಸೇಡಿಯಾಪು, ಕಡೆಂಗೋಡ್ಲು, ಸಿದ್ಧವನಹಳ್ಳಿ ಕೃಷ್ಣಶರ್ಮ ಮೊದಲಾದ ಆ ಕಾಲದ ಗಣ್ಯ ಸಾಹಿತಿಗಳೂ, ವಿದ್ವಾಂಸರೂ ಸಂಘದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು.

ಉಡುಪಿಯವರಾಗಿದ್ದು, ರಾಷ್ಟ್ರ ರಾಜಕೀಯದಲ್ಲೂ ಮಿಂಚಿದ ಮುತ್ಸದ್ದಿ ಟಿ.ಎ.ಪೈಯವರು ಸಂಘದ ಸಮೀಪವರ್ತಿಯಾಗಿದ್ದರು. ಕು.ಶಿ. ಹರಿದಾಸ ಭಟ್ಟರೇ ಆದಿಯಾಗಿ ಉಡುಪಿಯ ಅನೇಕ ಗಣ್ಯರಿಗೆ ಸಂಘದ ನಿಕಟ ಸಂಪರ್ಕವಿತ್ತು. ಸಂಘದ ಕಾರ್ಯಕ್ರಮಗಳಲ್ಲಿ ಬನ್ನಂಜೆ ರಾಮಾಚಾರ್ಯ ('ಉದಯವಾಣಿ'ಯ ನಿವೃತ್ತ ಸಂಪಾದಕ) ಮತ್ತು ಕೆ. ಹರಿದಾಸ ಉಪಾಧ್ಯಾಯ (ಸಂಸ್ಕೃತ ಕಾಲೇಜಿನ ನಿವೃತ್ತ ಪ್ರಾಚಾರ್ಯ)ರನ್ನು ಉಳಿದು ಮಿಕ್ಕವರೆಲ್ಲ ಈಗ ಕಾಲಾಧೀನರಾಗಿದ್ದಾರೆ.

**ಅಜಪುರ ಕರ್ನಾಟಕ ಸಂಘ** : ಬ್ರಹ್ಮಾವರದಲ್ಲಿ ೧೯೫೬ರಲ್ಲಿ ಶಿವರಾಮ ಕಾರಂತರಿಂದ ಉದ್ಘಾಟಿತವಾದ ಈ ಸಂಸ್ಥೆ ೨೦೦೬ರಲ್ಲಿ ತನ್ನ ಅಸ್ತಿತ್ವದ ಚಿನ್ನದ ಹಬ್ಬವನ್ನು ನೆರವೇರಿಸಿದೆ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ (ಬೆಂಗಳೂರು) ಹತ್ತಾರು ವರ್ಷ ಸೇವೆ ಸಲ್ಲಿಸಿದ ಬೈಕಾಡಿ ವೆಂಕಟಕೃಷ್ಣರಾಯರು ಈ ಸಂಘ ಸ್ಥಾಪನೆಯ ಜೊತೆಗೆ ಅದರ ಕಾರ್ಯಚಟುವಟಿಕೆಗಳ ಜೀವನಾಡಿಯಾಗಿದ್ದರು. ಆಗ ಸಂಘದ ಕಾರ್ಯಕರ್ತರಾಗಿದ್ದ ಕೆ. ಆರ್. ಹಂದೆ, ಎಚ್. ಸುಬ್ಬಯ್ಯ ಭಟ್ಟ, ಸುಗಮ ಸಂಗೀತಕಾರ ಎಚ್. ಚಂದ್ರಶೇಖರ ಮೊದಲಾದವರು ಈಗಲೂ ಅದಕ್ಕೆ

ಹತ್ತಿರವಾಗಿಯೇ ಇದ್ದಾರೆ. ಬಿ.ವಿ. ಆಚಾರ್ಯರು ಸಂಘಕ್ಕೆ ಬೆಂಗಾವಲಾಗಿ ನಿಂತವರಲ್ಲಿ ಒಬ್ಬರು. ಸಂಘವು ನಾಡ ಹಬ್ಬವನ್ನು ತಪ್ಪದೆ ನೆರವೇರಿಸಿಕೊಂಡು ಬಂದಿದೆ. ಸಾಹಿತಿ, ಕಲಾಕಾರರ ಸಮ್ಮಾನ, ಸಾಹಿತ್ಯೋಪನ್ಯಾಸ, ವಿಚಾರ ಗೋಷ್ಠಿಗಳನ್ನು ಮಾಡುತ್ತಿದೆ. ಕಾರಂತರಂತೂ ಸರಿಯೆ, ಮಾಸ್ತಿ, ಬೇಂದ್ರೆ, ವಿ.ಸೀ., ಕೆ.ಎಸ್.ನ., ಭೈರಪ್ಪ, ಕು.ಶಿ. ಹರಿದಾಸಭಟ್ಟರೇ ಆದಿಯಾಗಿ ಅನೇಕರು ಸಂಘದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದಾರೆ. ಶಿಲ್ಪಕಲಾ ಪರಮೇಷ್ಠಿ ರಂಜಾಳ ಗೋಪಾಲ ಶೆಣೈ, ಸೇಡಿಯಾಪು ಕೃಷ್ಣಭಟ್ಟರೇ ಮೊದಲಾಗಿ ವಿವಿಧ ಕ್ಷೇತ್ರಗಳ ಅನೇಕ ಗಣ್ಯರನ್ನು ಸಂಘವು ನಾಡಹಬ್ಬದ ಸಂದರ್ಭಗಳಲ್ಲಿ ಸಮ್ಮಾನಿಸಿದೆ.

**ಕರ್ನಾಟಕ ಸಂಘ, ಕುಂದಾಪುರ** : ಈ ಸಂಘವು ೧೯೬೩ರಲ್ಲಿ ಆರಂಭವಾದಾಗ ಕಾಳಿಂಗ ಹೆಬ್ಬಾರರು ಅದರ ಅಧ್ಯಕ್ಷರಾಗಿದ್ದರು. ಆ ಮುಂದಿನ ವರ್ಷಗಳಲ್ಲಿ ಕುಂದಾಪುರದ ಹಿರಿಯ ನ್ಯಾಯವಾದಿ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಹೆಸರಾಗಿರುವ ಎ.ಎಸ್.ಎನ್. ಹೆಬ್ಬಾರರು ಸಂಘದ ಪ್ರಧಾನ ಸೂತ್ರಧಾರಿಯಾಗಿದ್ದಾರೆ. ರಾಜ್ಯೋತ್ಸವ, ಸಾಹಿತ್ಯೋತ್ಸವ, ಮನೆಮನೆಗೆ ಸರಸ್ವತಿ– ಪುಸ್ತಕ ಮಾರಾಟಗಳ ಜತೆಗೆ ತನ್ನ ದಶಮಾನೋತ್ಸವ ಸಂದರ್ಭದಲ್ಲಿ ಸಂಘವು ಒಂದು ಕಥಾ ಸಂಗ್ರಹವನ್ನು ಪ್ರಕಟಿಸಿದೆ. ಹಾಗೆಯೇ ಕುಂದಾಪುರದ ಬರಹಗಾರರ ಬಳಗವೆಂಬ ಮಾಹಿತಿ ಪುಸ್ತಕವನ್ನು ಹೊರತಂದಿದೆ. 'ಭಾವನಾ' ಎಂಬ ಅನಿಯತಕಾಲಿಕದ ಪ್ರಕಟಣೆಯೂ ಸಂಘದ ಕಾರ್ಯ ಯೋಜನೆಯಲ್ಲಿ ಸೇರಿದೆ.

**ಕಾಂತಾವರ ಕನ್ನಡ ಸಂಘ :** ಕಾರ್ಕಳಕ್ಕೆ ಹತ್ತಿರದ ಕಾಂತಾವರವೆಂಬ ಗ್ರಾಮೀಣ ಪ್ರದೇಶದಲ್ಲಿ ಸುತ್ತಲಿನ ಬೆಳುವಾಯಿ, ಬೋಳ, ಕೆದಿಂಜೆ ಮತ್ತು ನಂದಳಿಕೆ ಎಂಬ ನಾಲ್ಕು ಗ್ರಾಮಗಳನ್ನು ತನ್ನ ಕಾರ್ಯವ್ಯಾಪ್ತಿಯಲ್ಲಿ ಸೇರಿಸಿ, ೧೯೭೬ರಲ್ಲಿ ಹುಟ್ಟಿಕೊಂಡಿದ್ದು ಕಾಂತಾವರ ಕನ್ನಡ ಸಂಘ. ಎಸ್. ವಿ. ಪರಮೇಶ್ವರ ಭಟ್ಟರು ಸಂಘವನ್ನು ಉದ್ಘಾಟಿಸಿದರು. ಕಾಂತಾವರ ಮತ್ತು ಒತ್ತಿನ ಬೇಲಾಡಿಯ ಸಾಹಿತ್ಯ ಪ್ರೇಮಿಗಳಾದ ಮಾರಣ್ಣ ಮಾಸ, ವಿಠಲ ಬೇಲಾಡಿ, ದಿವಾಕರರಾವ್ ಮೊದಲಾದ ಸಾಹಿತ್ಯ ಪ್ರೇಮಿಗಳನ್ನು ಹಾಗೆಯೇ ಕಾಂತಾವಾರ ಬಾರಾಡಿ ಬೀಡಿನ ಜೀವಂಧರ ಬಲ್ಲಾಳ್ ಮೊದಲಾದ ಉದಾರಿಗಳನ್ನು ಸೇರಿಸಿಕೊಂಡು, ಸಂಘದ ಚೈತನ್ಯ ಶಕ್ತಿಯಾಗಿರುವ ಪ್ರಸಿದ್ಧ ಸಾಹಿತಿ ನಾ.ಮೊಗಸಾಲೆಯವರು ಸಂಘವನ್ನು ಗೆಲುವಿನಿಂದ ಮುನ್ನಡೆಸುತ್ತಿದ್ದಾರೆ. ಸಂಘವು ೨೦೦೧ರಲ್ಲಿ ತನ್ನ 'ಬೆಳ್ಳಿ ಹಬ್ಬ'ವನ್ನು ಆಚರಿಸಿದೆ.

ಕಳೆದ ಮೂವತ್ತು ವರ್ಷಗಳಲ್ಲಿ ಸುಮಾರು ಮೂವತ್ತರಷ್ಟು ಸಾಹಿತ್ಯ ಗೋಷ್ಠಿಗಳನ್ನು ನೆರವೇರಿಸಿದೆ. ಅವುಗಳಲ್ಲಿ ಗೋವಿಂದ ಪೈ, ಸೇಡಿಯಾಪು, ಕಡೆಂಗೋಡ್ಲು, ಕಯ್ಯಾರ, ಚಿತ್ತಾಲ ಮೊದಲಾದವರ ವಾಙ್ಮಯವನ್ನು ಕುರಿತಾದ ವಿಚಾರಗಳೂ ಸೇರಿವೆ. ೧೯೭೬ರಲ್ಲಿ 'ದಕ್ಷಿಣ ಕನ್ನಡ ಕಾವ್ಯ ೧೯೦೧–೧೯೭೬' ಎಂಬ ಕಾವ್ಯಸಮುಚ್ಚಯ ಪ್ರಕಟಿಸಿದ ಸಂಘವು ೨೦೦೦ರಲ್ಲಿ ದಕ್ಷಿಣ ಕನ್ನಡದ ಶತಮಾನದ ಕಾವ್ಯ ಎಂಬ ಮತ್ತೊಂದು ಬೃಹತ್ ಸಂಪುಟವನ್ನು ಪ್ರಕಾಶಿಸಿದೆ. ಈ ಎರಡು ಸಂಪುಟಗಳಲ್ಲದೆ ಬನ್ನಂಜೆಯವರ 'ಹೇಳದೇ ಉಳಿದದ್ದು' ಎಂಬ ಸಂಗ್ರಹವೂ ಸೇರಿದಂತೆ ಪ್ರತ್ಯೇಕ ಕವನ ಸಂಗ್ರಹಗಳನ್ನು ಪ್ರಕಟಿಸಿದೆ. ಇದೀಗ ರಾಜ್ಯದಲ್ಲೇ ಮಾನ್ಯವಾಗಿರುವ "ವರ್ಧಮಾನ ಪ್ರಶಸ್ತಿ ಪೀಠ"ದ ಸ್ಥಾಪನೆಗೂ, ಮುದ್ದಣ ಕಾವ್ಯ ಪ್ರಶಸ್ತಿ ಯೋಜನೆಗೂ ಮೂಲ ಸ್ಫೂರ್ತಿ ಮತ್ತು ಪ್ರೇರಣೆಗಳು ಕಾಂತಾವರ ಕನ್ನಡ ಸಂಘವೆಂದೇ ಹೇಳಬಹುದಾಗಿದೆ. ಸಂಘದ ಕಾರ್ಯಕರ್ತರ ಉತ್ಸಾಹ, ಕ್ರಿಯಾಶೀಲತೆಗಳು ಕರ್ನಾಟಕ ಏಕೀಕರಣದ ನೇತಾರ ಕೆ.ಬಿ.ಜಿನರಾಜ ಹೆಗ್ಡೆ ಸ್ಮಾರಕ ಕನ್ನಡ ಭವನದ ನಿರ್ಮಾಣಕ್ಕೂ ಕಾರಣವಾದುದನ್ನು ಎತ್ತಿಹೇಳಬಹುದಾಗಿದೆ. ಹಾ.ಮಾ.ನಾಯಕರಂತಹ ಗುಣಗ್ರಾಹಿಗಳು ಸಂಘದ ಕಾರ್ಯ ವೈಖರಿಯನ್ನು ಮೆಚ್ಚಿ, ಪತ್ರಿಕೆಗಳಲ್ಲಿ ಅಂಕಣಗಳನ್ನು ಬರೆದುದನ್ನು ಸ್ಮರಿಸಬಹುದಾಗಿದೆ.

**ಕವಿ ಮುದ್ದಣ ಸ್ಮಾರಕ ಮಿತ್ರಮಂಡಳಿ, ನಂದಳಿಕೆ:** ನಂದಳಿಕೆ ಲಕ್ಷ್ಮೀನಾರಾಯಣಯ್ಯ ಅಥವಾ ಮುದ್ದಣನ ಹುಟ್ಟೂರಾದ ನಂದಳಿಕೆಯಲ್ಲಿ ಅವನದೇ ಹೆಸರಲ್ಲಿ ೧೯೭೮ರಲ್ಲಿ ಸ್ಥಾಪಿತವಾಗಿರುವ ಮಿತ್ರಮಂಡಳಿ ಇದೀಗ ಇಪ್ಪತ್ತೈದು ವರ್ಷಗಳನ್ನು ಪೂರೈಸಿದೆ. ಮುದ್ದಣನ ಗ್ರಂಥಗಳ ಪ್ರಚಾರ, ಪುನರ್ಮುದ್ರಣ, ಅವನನ್ನು

ಕುರಿತ ವಿಚಾರಗೋಷ್ಠಿ, ಉಪನ್ಯಾಸಗಳೊಂದಿಗೆ ಕನ್ನಡದ ಇತರ ಸಾಹಿತಿ ಶ್ರೇಷ್ಠರ ಶತಮಾನೋತ್ಸವಾದಿ ಕಾರ್ಯಕ್ರಮಗಳನ್ನು ಮಿತ್ರಮಂಡಳಿ ನೆರವೇರಿಸುತ್ತಿದೆ. ಈ ಮಿತ್ರಮಂಡಳಿಯ ಜೀವತಂತು ಎನ್ನಬಹುದಾದ ನಂದಳಿಕೆ ಬಾಲಚಂದ್ರರಾವ್ ಮತ್ತು ಇತರ ಸಮಾನ ಮನಸ್ಕರ ಪ್ರಯತ್ನದಿಂದ ನಂದಳಿಕೆಯಲ್ಲಿ ಮುದ್ದಣ ಸ್ಮಾರಕ ಭವನವೂ ತಲೆಯೆತ್ತಿ ನಿಂತಿದೆ.

೬.**ಹೆಬ್ರಿ ಕರ್ನಾಟಕಸಂಘ:** ಪಿಂಗಳೆ ರವೀಂದ್ರ ಹೆಗ್ಗಡೆ ಅವರ ಪ್ರಯತ್ನದ ಫಲವಾಗಿ ೧೯೭೬ರಲ್ಲಿ ಸ್ಥಾಪಿತವಾದದ್ದು ಹೆಬ್ರಿ ಕರ್ನಾಟಕ ಸಂಘ. ಈ ಸಂಘದ ವ್ಯಾಪ್ತಿಯಲ್ಲಿ ಸುತ್ತಲಿನ ನಾಡ್ಪಾಲು, ಮುದ್ರಾಡಿ, ಕಬ್ಬಿನಾಲೆ ಗ್ರಾಮಗಳೂ ಸೇರಿವೆ. ಶಿವರಾಮ ಕಾರಂತರಿಂದ ೧೯೭೬ ರಲ್ಲಿ ಉದ್ಘಾಟಿತವಾದ ಈ ಸಂಘ ತನ್ನ ದಶಮಾನೋತ್ಸವವನ್ನು ಒಂದು ಸಾಹಿತ್ಯ ಸಮ್ಮೇಳನದಂತೆ ಸಂಭ್ರಮದಿಂದ ಆಚರಿಸಿತ್ತು. ನಾಡಿನ ಹಿರಿಯ ಸಾಹಿತಿಗಳಾದ ಕಾರಂತ, ಕಯ್ಯಾರ, ಕು.ಶಿ. ಹರಿದಾಸಭಟ್ಟ, ಹಂಪನಾ, ಅಮೃತ ಸೋಮೇಶ್ವರರೇ ಮೊದಲಾದವರು ಸಂಘದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾರೆ. ಯಕ್ಷಗಾನಕಲಾವಿದರನ್ನು ಸಂಘವು ಆಮಂತ್ರಿಸಿದೆ. ಅಂಬಾತನಯ ಮುದ್ರಾಡಿ ಮೊದಲಾದವರ ಪುಸ್ತಕಗಳನ್ನು ಸಂಘವು ಪ್ರಕಟಿಸಿದೆ.

೭.**ರಥಬೀದಿ ಗೆಳೆಯರು, ಉಡುಪಿ;** ಸಾಹಿತ್ಯ, ಸಂಸ್ಕೃತಿಗಳಲ್ಲಿ ಆಸಕ್ತರಾದ ಕೆಲ ಮಂದಿ ಉತ್ಸಾಹಿಗಳು ಸೇರಿ ಉಡುಪಿಯಲ್ಲಿ ೧೯೮೧ರಲ್ಲಿ ಕಟ್ಟಿದ ಕೂಟವೇ ರಥಬೀದಿ ಗೆಳೆಯರು. ಶ್ರೀಪತಿ, ಮುರಾರಿ ಬಲ್ಲಾಳ್, ಮುರಲೀಧರ ಉಪಾಧ್ಯ, ಸುಬ್ರಹ್ಮಣ್ಯ ಶೆಟ್ಟಿ ಮೊದಲಾದವರು ಈ ಕೂಟದಲ್ಲಿ ಕಾರ್ಯಕರ್ತರಾಗಿ ದುಡಿದಿದ್ದಾರೆ. ಸಾಹಿತ್ಯ, ಸಂಸ್ಕೃತಿ ಹಾಗೂ ಸಮಸಾಮಯಿಕವಾದ ವಿಷಯಗಳನ್ನು ಕುರಿತಂತೆ ರಾಜ್ಯ, ರಾಷ್ಟ್ರಮಟ್ಟದ ವಿಚಾರ ಸತ್ರ, ಸಮಾರೋಹಗಳನ್ನು ಈ ಬಳಗವು ಆಯೋಜಿಸಿ, ರಾಷ್ಟ್ರ, ಅಂತಾರಾಷ್ಟ್ರ ಖ್ಯಾತಿಯ ಸಾಹಿತಿ, ಚಿಂತಕರನ್ನು ಆಮಂತ್ರಿಸಿದೆ. ***(ಲೇಖಕರು: ಪ್ರೊ.ಎಂ. ರಾಮಚಂದ್ರ)***

* * * * *